|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶ್ರೀವೀರೇಶಷಡ್ಲೀಲಾದರ್ಶನ

SRI VEERESHA SHADLEELADARSHANA

ಲೇಖಕ ಮತ್ತು ಪ್ರಕಾಶಕ :
ಧರ್ಮಸಾಹಿತ್ಯಭೂಷಣ
ವೇ|| ಎಂ. ಚಂದ್ರಶೇಖರ ಆರಾಧ್ಯ
ಬೆಂಗಳೂರು

1980

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥



ಶ್ರೀಚಂದ್ರಶೇಖರಗ್ರಂಥಮಾಲೆ—ಕುಸುಮ-೭

ಶ್ರೀವೀರೇಶಷಡ್‌ಲೀಲಾದರ್ಶನ

SRI VEERESHA SHADLEELADARSHANA

ಲೇಖಕ ಮತ್ತು ಪ್ರಕಾಶಕ :

ಧರ್ಮಸಾಹಿತ್ಯಭೂಷಣ

ವೇ॥ ಎಂ. ಚಂದ್ರಶೇಖರ ಆರಾಧ್ಯ

ಬೆಂಗಳೂರು

1980

ಶ್ರೀ ಚಂದ್ರಶೇಖರಗ್ರಂಥಮಾಲೆ—ಕುಸುಮ–೭

" ಶ್ರೀವೀರೇಶಷಡ್‌ಲೀಲಾದರ್ಶನ "

ಲೇಖಕ ಮತ್ತು ಪ್ರಕಾಶಕ

ಎಂ. ಚಂದ್ರಶೇಖರ ಆರಾಧ್ಯ, ಬೆಂಗಳೂರು-20

1980 ಜನವರಿ

ಮೊದಲನೆಯ ಮುದ್ರಣ 2000 ಪ್ರತಿಗಳು—1980

ಪುಸ್ತಕ ದೊರೆಯುವ ಸ್ಥಳ:—

ಎಂ. ಚಂದ್ರಶೇಖರ ಆರಾಧ್ಯ
'ಗುರುಕೃಪ' ನಂ. 6, ನಾಲ್ಕನೇ ಕ್ರಾಸ್, ಅಣ್ಣಾಯ್ಯಪ್ಪ ಬ್ಲಾಕ್
ಕುಮಾರ ಪಾರ್ಕ್ ಪಶ್ಚಿಮ ಬಡಾವಣೆ
ಬೆಂಗಳೂರು–20

ಬೆಲೆ 10 ರೂಪಾಯಿ

ಮುದ್ರಕರು: ಡಿ. ರಾಜರತ್ನಂ
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೊದಲ ನುಡಿ

ಜಗದೀಶನಾದ ಪರಬ್ರಹ್ಮ-ಶಿವನು ಸರ್ವತ್ರ ವ್ಯಾಪ್ತನಾಗಿ, ಸರ್ವಾಂತರ್ಯಾಮಿಯೂ, ಸರ್ವತಂತ್ರಸ್ವತಂತ್ರನೂ ಆಗಿರುವನು. ಈ ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ, ಲಯಗಳನ್ನು ಇಚ್ಛಾಮಾತ್ರದಿಂದ ನಡೆಯಿಸುತ್ತಿರುವ ಪ್ರಭುವೇ ಅವನು. "ಅಣೋರಣೀಯಾನ್ ಮಹತೋಮಹೀಯಾನ್" ಆಗಿರುವ ಪರಮಾತ್ಮನು, ನಿರ್ಗುಣನೂ ಹೌದು, ಸಗುಣನೂ ಹೌದು. ಆದರೆ ಅವನು ದುಷ್ಟನಿಗ್ರಹಕ್ಕಾಗಿಯೂ, ಸಜ್ಜನ ರಕ್ಷಣಾರ್ಥವಾಗಿಯೂ, ವಿವಿಧ ನಾಮ-ರೂಪಗಳಿಂದ ಧರ್ಮಕ್ಕೆ ಚ್ಯುತಿಯುಂಟಾದಾಗ ಅವತರಿಸುವನು. ಅವನ ಅವತಾರಗಳು ಅಸಂಖ್ಯವಾದವುಗಳು. ಅವತಾರದ ಲೀಲಾವಿಲಾಸಗಳು ಯುಗಧರ್ಮಗಳಿಗನುಗುಣವಾಗಿ ಲೋಕಕಲ್ಯಾಣಾರ್ಥವಾಗಿ ನಡೆಯುತ್ತಿರುವವು. ಈ ಪವಿತ್ರ ಭಗವದವತಾರ ಲೀಲಾವಿಲಾಸಗಳು, ಈ ಪುಣ್ಯಭೂಮಿ ಭಾರತದ ಸನಾತನವೂ, ಸತ್ಯವೂ ಆದ ಸಂಸ್ಕೃತಿಗೆ ಪೋಷಕವೂ, ಪೂರಕವೂ ಆಗಿರುತ್ತವೆ. ಈ ಲೀಲಾ ವಿಲಾಸಗಳು ವೇದವ್ಯಾಸ ಮಹರ್ಷಿಗಳಿಂದ ರಚಿಸಲ್ಪಟ್ಟ ಅಷ್ಟಾದಶ (18) ಪುರಾಣಗಳಲ್ಲಿ ವರ್ಣಿಸಲ್ಪಟ್ಟಿವೆ. "ಪುರಾಣಮಖಿಲಾರ್ಥಾನಾಂ ಬೋಧಕಂ ಶ್ರುತಿಸಂಮತಮ್" ಎಂಬಂತೆ, ಈ ಪುರಾಣಗಳು ವೇದಗಳ ಸಾರಸಂಗ್ರಹ (ವೇದಸಮ್ಮತ) ರೂಪಗಳೆಂದು ಪ್ರಖ್ಯಾತಿ ಪಡೆದಿವೆ. ಈ ಪುರಾಣಗಳೆಲ್ಲವೂ ಭಗವಂತನ ದಿವ್ಯ ಲೀಲೆಗಳಿಂದಲೇ ಕೂಡಿವೆ. ಈ ಲೀಲೆಗಳು ಭಗವಂತನ ಸಾತ್ತ್ವಿಕ ರಾಜಸ ತಾಮಸ ಗುಣಪ್ರಧಾನವಾಗಿರುವುದರಿಂದ ಕೆಲ ಪುರಾಣಗಳು, ಪ್ರಿಯವೂ, ಕೆಲವು ಅಪ್ರಿಯವೂ ಆಗಿರಬಹುದು

ಈ ಜಿಜ್ಞಾಸೆಯನ್ನು ಬದಿಗೊತ್ತಿ. ಈ 'ಶ್ರೀವೀರೇಶಪಡ್ಲೀಲಾ ಹರ್ಶನ' ಗ್ರಂಥವನ್ನು ರಚಿಸಿ ಆಸ್ತಿಕಬಾಂಧವರ ಮುಂದಿಡಲಾಗಿದೆ. ಶಿವನ ಹಣೆಗಣ್ಣಿನಿಂದ ಆವಿರ್ಭವಿಸಿ, ರುದ್ರನಿಗೆ ಸಮಾನವಾದ ತೇಜಸ್ಸು, ಧೈರ್ಯ, ವೀರಶ್ರೀಗಳಿಂದ, ಅನೇಕ ಪವಿತ್ರ ಲೀಲಾವಿಲಾಸಗಳನ್ನು ತೋರಿದ ಶ್ರೀವಿರೇಶ-ವೀರಭದ್ರನ ಮಹಿಮೆಗಳನ್ನು ವ್ಯಾಸರಚಿತ ಸ್ಕಾಂದ, ಶಿವ, ಲಿಂಗ, ಪದ್ಮ ಮೊದಲಾದ ಪುರಾಣ, ಮಹಾಭಾರತ, ವಾಯವೀಯ ಸಂಹಿತೆ, ವಾಯು ಪುರಾಣ, ಶ್ರೀ ವೀರಭದ್ರೇಶ್ವರ ಪುರಾಣ, ಇತ್ಯಾದಿ ಗ್ರಂಥಗಳಿಂದ ಸಂಗ್ರಹಿಸಲಾಗಿದೆ. ಅಲ್ಲದೆ ವೀರಶೈವ ಕವಿಗಳಲ್ಲಿ ಹೆಸರಾಂತ, ಹರಿಹರ-ರಾಘವಾಂಕರ

ಕೃತಿಗಳಿಂದಲೂ, ವಿಷಯಗಳನ್ನು ಸಂಗ್ರಹಿಸಲಾಗಿದೆ. ಆದರೆ ಶ್ರೀವೀರೇಶನ ಸಮಗ್ರ ಲೀಲಾವಿಲಾಸಗಳನ್ನೊಳಗೊಂಡ ಸ್ವತಂತ್ರ ಗ್ರಂಥವು ಇದ್ದಂತೆ ಕಾಣು ವುದಿಲ್ಲ. ಈ ಕೊರತೆಯನ್ನು ಹೋಗಲಾಡಿಸಲು, ಕೆಲಕಾಲದಿಂದಲೂ, ಪ್ರೇರೇಪಿಸುತ್ತಿದ್ದ ಕೆಲ ಆಪ್ತಮಿತ್ರರ ಸಲಹೆಯಂತೆ, ಈ ಸಾಹಸಕಾರ್ಯಕ್ಕೆ ಕೈಹಾಕಿದೆನು. ಮೇಲೆ ಹೆಸರಿಸಿರುವ ಗ್ರಂಥಗಳಲ್ಲಿ, ದಕ್ಷಯಜ್ಞ, ಶರಭಲೀಲೆ ಈ ಎರಡು ಲೀಲೆಗಳ ವಿನಾ ಇತರೇ ನಾಲ್ಕು ಲೀಲೆಗಳ ಬಗ್ಗೆ ಪೂರ್ಣಾಂಶಗಳು ಉಲ್ಲೇಖಿಸಲ್ಪಟ್ಟಿಲ್ಲ. ತುಂಡುತುಂಡಾದ ಕೆಲಭಾಗಗಳುಮಾತ್ರ ಸಂಕ್ಷಿಪ್ತ ರೀತಿಯಲ್ಲಿ ವಿವರಿಸಲ್ಪಟ್ಟಿವೆ. ಸಪ್ರಮಾಣ ವಿಷಯ ಸಂಗ್ರಹಣೆಯಿಲ್ಲದೆ ಇಂಥಾ ಪವಿತ್ರ ಲೀಲೆಗಳನ್ನೊಳಗೊಂಡ ಗ್ರಂಥವನ್ನು ರಚಿಸುವುದು ಅತಿ ಕಷ್ಟದ ಕೆಲಸವಾಗಿ ಕಂಡಿತು. ಆದರೂ ಮಿತ್ರರ ಕರೆಗೆ ಓಗೊಟ್ಟು, ಶ್ರೀವೀರೇಶನ ಕೃಪಾವಿಶೇಷದ ಮೇಲೆ ಭರವಸೆಯಿಟ್ಟು ಆದರಿಂದಲೇ ಸ್ಫೂರ್ತಿಹೊಂದಿ, ಅನೇಕ ಅನುಭಾವೀ ಮಿತ್ರರನ್ನೂ, ಪಂಡಿತರನ್ನೂ ಸಂದರ್ಶಿಸಿ, ಅವರಿಂದಲೂ ಹಾಗೆಯೇ ನಗರದ ಮುಖ್ಯ ವಾಚನಾಲಯಗಳಲ್ಲಿಯೂ ಕೆಲ ವಿಷಯಗಳನ್ನು ಸಂಗ್ರಹಿಸಿದೆನು. ಈ ಎಲ್ಲಾ ಸಂಗೃಹೀತ ವಿಷಯಗಳನ್ನೂ ಸಂಸ್ಕರಿಸಿ ನನ್ನ ಅಲ್ಪಮತಿಗೆ ಭಾಸವಾದ ರೀತಿಯಲ್ಲಿ, ಈ "ಶ್ರೀ ವೀರೇಶ ಷಡ್‌ಲೀಲಾ ದರ್ಶನ"ವೆಂಬ ಗ್ರಂಥವನ್ನು ರಚಿಸಿ, ಶ್ರೀ ಚಂದ್ರಶೇಖರ ಗ್ರಂಥಮಾಲೆಯ ಸಪ್ತಮ ಕುಸುಮವನ್ನಾಗಿ ಧರ್ಮಾಭಿಮಾನಿಗಳಿಗೆ ಅರ್ಪಿಸಿರುವೆನು. ಈ ಲೀಲೆಗಳೆಲ್ಲವೂ, ಬಹುಮಟ್ಟಿಗೆ, ಪೌರಾಣಿಕ, ಐತಿಹಾಸಿಕ, ಚಾರಿತ್ರಿಕ ಆಧಾರವುಳ್ಳವುಗಳಲ್ಲದೆ, ಅನ್ಯಥಾ ಅಲ್ಲ.

ಈ ಗ್ರಂಥಾವಲೋಕನದಿಂದ ಓದುಗ ಮಹಾಶಯರ ಮನಸ್ಸಿನಲ್ಲಿ, ಶ್ರೀ ವೀರೇಶನ ಬಗ್ಗೆ ಹೆಚ್ಚು ಶ್ರದ್ಧಾಭಕ್ತಿಗಳು ಮೂಡುವಂತಾದರೆ, ಗ್ರಂಥ ರಚನೆಯ ಶ್ರಮ ಸಫಲತೆಯನ್ನೈದುವುದು. ಎಲ್ಲ ಆಸ್ತಿಕಬಾಂಧವರೂ, ಶ್ರೀವೀರೇಶನ ಪಾವನ ಲೀಲಾಮಹಿಮಾತಿಶಯಗಳನ್ನೂ, ಅವನ ಪವಿತ್ರ ವ್ಯಕ್ತಿತ್ವವನ್ನೂ, ಅರಿತು, ಅವನನ್ನು ಭಕ್ತಿಯಿಂದ ಆರಾಧಿಸಿ, ಅವನ ಮಹತ್ಕೃಪೆಗೆ ಪಾತ್ರರಾಗಲೆಂದು ಹಾರೈಸಲಾಗಿದೆ.

ಸಾಹಿತ್ಯವಿಶಾರದ, ಧರ್ಮಸಾಹಿತ್ಯಭೂಷಣ,

ಎಂ. ಚಂದ್ರಶೇಖರ ಆರಾಧ್ಯ.

ಆತ್ಮ ನಿವೇದನೆ

ಭಾರತೀಯ ಸಂಸ್ಕೃತಿ :

ನಮ್ಮ ಪುಣ್ಯ ಭೂಮಿ ಭಾರತವು, ಆಧ್ಯಾತ್ಮದತವರು, ಹಾಗೂ ಶೈವ ದರ್ಶನದ ಆಗರ. ಇದು ಭುಕ್ತಿಮುಕ್ತಿಗಳನ್ನು ಬಯಸುವ ಮುಮುಕ್ಷುಗಳಿಗೆ ಕರ್ಮಭೂಮಿಯಾಗಿದೆ. ಮಾನವನ ಇಹ-ಪರ ಸಾಧನೆಯ ಮಾರ್ಗದಲ್ಲಿ ರೂಪುಗೊಂಡದ್ದು ನಮ್ಮ ಈ ಭಾರತೀಯ ಸಂಸ್ಕೃತಿ. ಈ ಪುಣ್ಯ ಭೂಮಿಯು ಸಕಲ ಆಸ್ತಿಕ ಮತಗಳ ಉಗಮಸ್ಥಾನವಾಗಿ, ಅನೇಕ ಮತಾಚಾರ್ಯರ, ವಿಭೂತಿ ಪುರುಷರ, ಮುನಿಪುಂಗವರ, ಜನ್ಮಭೂಮಿ ಎಂದೆನಿಸಿರುವುದು ಗಮನಾರ್ಹ. ಭಾರತವು ಅನಾದಿಯಿಂದಲೂ ಸನಾತನವೂ, ಪವಿತ್ರವೂ, ಆಕರ್ಷಣೀಯವೂ, ಆದ ತನ್ನ ಮಹೋನ್ನತವಾದ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿಕೊಂಡು ಬಂದಿದೆ. ಅಲ್ಲದೆ ವಿಶ್ವದ ಸಕಲ ಮಾನವರಿಗೂ ಮಾರ್ಗದರ್ಶನ ನೀಡುತ್ತಾ, ಬಂದಿರುವುದು ಹೆಮ್ಮೆಯ ವಿಷಯ.

ಹಿಂದೂ ಧರ್ಮ :

ಇಲ್ಲಿನ ಮತ್ತೊಂದು ವೈಶಿಷ್ಟ್ಯವೆಂದರೆ, ವೇದಕಾಲದಿಂದೀಚೆಗೆ, ಭಾರತದಲ್ಲಿ, ಕೆಲ ಅವೈದಿಕ ಧರ್ಮಗಳು ಜನ್ಮ ತಾಳಿ ಪ್ರಚಲಿತವಾದರೂ, ಅಂತ್ಯದಲ್ಲಿ, ಸನಾತನವಾದ ಹಿಂದೂ ಧರ್ಮದ ಪ್ರತಿಭೆಪ್ರಭಾವಗಳನ್ನೆದುರಿಸ ಲಾರದೆ, ಆನೆ ನುಂಗಿದ ಬೇಲದಂತೆ ನಿಸ್ಸಾರವಾಗಿ, ಕ್ರಮೇಣ ತಮ್ಮ ಸ್ವರೂಪ ವನ್ನೇ ಕಳೆದುಕೊಂಡು, ಸನಾತನ ಹಿಂದೂಧರ್ಮದಲ್ಲಿಯೇ ವಿಲೀನವಾಗಿ ರುವುವು. ಈ ಹಿಂದೂಧರ್ಮವು ಅನಾದಿಯಾದುದು. ಇದರ ಉಗಮವು ಯಾರಿಂದ, ಯಾವ ಕಾಲದಲ್ಲಿ ಹೇಗೆ ಆಯಿತೆಂಬುದು ಇತಿಹಾಸಕ್ಕೂ ತಿಳಿಯದ ವಿಷಯ.

ಯಾವ ಚರಿತ್ರಕಾರರೂ, ಇತಿಹಾಸಜ್ಞರೂ, ವಿಮರ್ಶಕರೂ, ಈ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಿರುವಂತೆ ಕಾಣುವುದಿಲ್ಲ. ಅಂದ ಮೇಲೆ, ಇದು ಯುಗ ದಾದಿಯಿಂದಲೇ ಪ್ರಚಾರದಲ್ಲಿರುವುದೆಂದು ಊಹಿಸಬೇಕಾಗುವುದು. ಕೆಲ ಪಂಡಿತರು ಇದು ಎಂಟು ಸಹಸ್ರವರ್ಷಗಳ ಹಿಂದಿನದೆಂದೂ, ಮತ್ತೆ ಕೆಲವರು ಇಪ್ಪತ್ತೈದು ಸಹಸ್ರ ವರ್ಷಗಳ ಹಿಂದಿನದೆಂದೂ ಊಹಿಸಿರುವರು. ಸರ್ ಜಾನ್ ಮಾರ್ಷಲ್‌ರವರು ಇತ್ತೀಚೆಗೆ ಮೊಹಂಜದಾರೋ–ಹರಪ್ಪಾ ನಗರಗಳಲ್ಲಿ

ನಡೆಸಿದ ಭೂ ಸಂಶೋಧನೆಯ ವರದಿಯು ಮೇಲಿನ ಊಹೆಯನ್ನು ಸಮರ್ಥಿಸುತ್ತದೆ.

ಭಾರತದ ಮೂಲ ನಿವಾಸಿಗಳು :

ಭಾರತದ ಪುರಾತನೇತಿಹಾಸವನ್ನೂ ಮತ್ತು ಅನಾದಿಕಾಲದಿಂದ ಅವ್ಯಾಹತವಾಗಿ ಅಸ್ತಿತ್ವದಲ್ಲಿರುವ ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ, ಪರಂಪರೆಗಳನ್ನೂ ಸೂಕ್ಷ್ಮರೀತಿಯಿಂದ, ನಿರ್ವ್ಯಾಜ, ನಿಷ್ಪಕ್ಷ, ನಿರಭಿಮಾನ ಭಾವನೆಯಿಂದ ವಿಮರ್ಶಿಸಿದಾಗ, ಆರ್ಯಜನಾಂಗದವರು, ಆರ್ಯಾವರ್ತವೆಂದೆನಿಸಿದ ಈ ಭಾರತಕ್ಕೆ ಬರುವುದಕ್ಕಿಂತ ಬಹುಪೂರ್ವದಲ್ಲಿಯೇ ಅಂದರೆ ಸಹಸ್ರಾರು ವರ್ಷಗಳಿಂದಲೂ, ಭಾರತದಲ್ಲಿ ದ್ರಾವಿಡಜನಾಂಗದವರು ವಾಸವಾಗಿದ್ದರೆಂಬುದು ಸ್ಪಷ್ಟವಾಗುವುದು.

ಆರ್ಯೇತರ ಮೂಲ ನಿವಾಸಿಗಳಾದ ದ್ರಾವಿಡರನ್ನೂ ಮತ್ತು ಇತರ ಮೂಲನಿವಾಸಿಗಳನ್ನೂ, ಆರ್ಯರು ಸಂಕುಚಿತ ಹಾಗೂ, ಅಸಹನಾ ಮನೋಭಾವದಿಂದ, ತಮ್ಮ ಋಗ್ವೇದದಲ್ಲಿ, ದಾಸ, ದಸ್ಯು ವ್ರಾತ್ಯ ಮುಂತಾದ ಅನಾಗರಿಕ ಶಬ್ದಗಳಿಂದ ಕರೆದಿರುವುದು ಸರಿಯಲ್ಲ.

ಅಲ್ಲದೆ ಅನೇಕ ಗ್ರಂಥಪ್ರಾಮಾಣ್ಯದಿಂದಲೂ, ಭೂಗರ್ಭಶೋಧಕರ ವರದಿಯಿಂದಲೂ, ಭಾರತವು, ಆರ್ಯರು ಮಧ್ಯ ಏಷ್ಯಾದಿಂದ ಭಾರತಕ್ಕೆ ಸಿಂಧೂ ನದಿಯ ಬಯಲಿಗೆ ಆಗಮಿಸುವ ಕಾಲಕ್ಕೆ ಮುನ್ನ ವಿಜನವಾಗಿರಲಿಲ್ಲವೆಂದೂ, ಅಂದಿನ ಮೂಲನಿವಾಸಿಗಳಾದ ದ್ರಾವಿಡರು, ಬಲಾಢ್ಯರೂ, ಬುದ್ಧಿವಂತರೂ, ವೀರಾಧಿವೀರರೂ, ಪ್ರಕಾಂಡಪಂಡಿತರೂ, ಅಧ್ಯಾತ್ಮವಿದ್ಯಾಪಾರಗರೂ, ಧಾರ್ಮಿಕ, ನೈತಿಕ, ಆರ್ಥಿಕ, ಸಾಮಾಜಿಕ, ರಾಜಕೀಯ, ಕಲಾತ್ಮಕ ಇತ್ಯಾದಿ ಸಮಸ್ತ ಕ್ಷೇತ್ರಗಳಲ್ಲಿಯೂ ಅಸಾಧಾರಣವಾದ ಪ್ರತಿಭೆ ಗಳಿಸಿದವರೆಂದೂ, ಇದರಿಂದಾಗಿ ಅವರ ಕೀರ್ತಿಶ್ರೀಯು ಅತ್ಯುನ್ನತ ಶಿಖರಕ್ಕೇರಿ ರಾಜಾಸಿಸುತ್ತಿತ್ತೆಂದೂ, ಹಾಗೂ, ಅವರು ಯುದ್ಧ ಕುಶಲರೂ, ಧೀರರೂ ಆಗಿ ಅಜೇಯ ದುರ್ಗಗಳನ್ನು, ಮನಸೆಳೆಯುವ ಉದ್ಯಾನ–ವಿಹಾರಗಳನ್ನು, ರಮ್ಯ ಹಾಗೂ ಭವ್ಯಭವನಗಳನ್ನೂ, ದೇವಾಲಯಗಳನ್ನೂ, ನಿರ್ಮಿಸಿಕೊಂಡು ನವನಾಗರಿಕ ಜನಾಂಗವೆಂದೆನಿಸಿ ಕೀರ್ತಿಪಡೆದಿದ್ದರೆಂದೂ, ಆರ್ಯರೇ, ತಾವು ಇಂದ್ರನನ್ನು ಕುರಿತು ಪ್ರಾರ್ಥಿಸುತ್ತಿದ್ದ ಋಗ್ವೇದದಿಂದ ತಿಳಿದು ಬರುತ್ತದೆ.

ದ್ರಾವಿಡ ಸಂಸ್ಕೃತಿ :

ದ್ರಾವಿಡರು ಬಹುತೇಕ ಶಿವಾರಾಧಕರಾಗಿದ್ದರು (ಶೈವರು). ಅವರಲ್ಲಿ ಅನೇಕರು ಅಂಗದ ಮೇಲೆ ಲಿಂಗವನ್ನು ಧರಿಸಿ ಪೂಜಿಸುತ್ತಿದ್ದರೆ ಮತ್ತೆ ಕೆಲವರು ಸ್ಥಾವರಲಿಂಗವನ್ನು ಪೂಜಿಸುತ್ತಿದ್ದರು. ಇವರು ಲಿಂಗವನ್ನೇ ಶಿವ-ರುದ್ರನೆಂದು ಭಾವಿಸಿದ್ದರು. ಶಿವ ಎಂದರೆ ರುದ್ರನೆಂದು ತತ್ವಶಃ ತಿಳಿದು ರುದ್ರದೇವನನ್ನೇ ಆರಾಧಿಸುತ್ತಿದ್ದರು. ಇವರು ಕರ್ಮ ಪ್ರಧಾನವಾದ ವೇದದ ಪೂರ್ವಾರ್ಧವನ್ನು ನಿಷೇಧಿಸಿ, ಜ್ಞಾನ ಪ್ರಧಾನವಾದ ವೇದಾಂತ ಅಂದರೆ ಉಪನಿಷದ್ಭಾಗವನ್ನು ಮನ್ನಿಸಿ ಆಚರಿಸುತ್ತಿದ್ದರು. ಅಲ್ಲದೆ ವೇದೋಕ್ತವಾದ ಯಜ್ಞಯಾಗಾದಿ ಹಿಂಸಾಕರ್ಮಗಳನ್ನು, ಪಶು ಇತ್ಯಾದಿ ಪ್ರಾಣಿಗಳ ಬಲಿಯನ್ನೂ ವಿರೋಧಿಸುತ್ತಿದ್ದರು. ಅವರು ಏಕೇಶ್ವರ ವಾದಿಗಳಾಗಿದ್ದರು. ಮಹಾಲಿಂಗನೇ ಅರ್ಥಾತ್ ಮಹಾದೇವನೇ ವಿಶ್ವಕರ್ತನೆಂದು ನಂಬಿದ್ದರು. ಇವರಲ್ಲಿ ಕುಲಗೋತ್ರಗಳ ಭೇದವಿರಲಿಲ್ಲ. ಕೇವಲ ಮಾನವ ಕುಲವನ್ನು ಮಾನ್ಯ ಮಾಡಿದ್ದರು. ಅಲ್ಲದೆ ವಿಶ್ವಕುಟುಂಬಿಗಳಾಗಿ ಅತ್ಯಾಶ್ರಮಿಗಳಾಗಿದ್ದರು. ಇದರಿಂದ ಶೈವ-ವೀರಶೈವ ಧರ್ಮವು ಹಿಂದೂ ಧರ್ಮದ, ಅತ್ಯಂತ ಮುಖ್ಯ ಹಾಗೂ ಸನಾತನ ಶಾಖೆ ಯೆಂಬುದು ಗಮನಾರ್ಹ.

ಆರ್ಯ ಸಂಸ್ಕೃತಿ :

ಆರ್ಯರು ವಸತಿ ಹಾಗೂ ಜೀವನ ಸೌಕರ್ಯಗಳನ್ನು ಹುಡುಕುತ್ತಾ ನಾನಾಭಾಗಗಳನ್ನು ಸುತ್ತಿ ಇಲ್ಲಿಗೆ ಬಂದಿದ್ದರು. ಅವರಿಗೆ ನಿರ್ದಿಷ್ಟವಾದ ಯಾವ ತತ್ವಗಳೂ ಇರಲಿಲ್ಲ. ಆದರೆ ಸಮಯಸಾಧಕರೂ ಮತ್ತು ಸ್ವಾರ್ಥಪರರೂ ಆಗಿದ್ದರು. ಅವರು ಕರ್ಮಪ್ರಾಧಾನ್ಯವಾದ ವೇದಗಳಿಗೆ ಹೆಚ್ಚು ಮಾನ್ಯತೆ ನೀಡುತ್ತಿದ್ದರು. ಯಜ್ಞಯಾಗಾದಿಗಳನ್ನು ಆಚರಿಸುತ್ತಾ ಯಜ್ಞಕ್ಕಾಗಿ ಪಶುಗಳ ಬಲಿ, ಸುರಾಪಾನ ಇತ್ಯಾದಿ ಹಿಂಸಾಕಾರ್ಯಗಳಲ್ಲಿ ತೊಡಗಿದ್ದರು. ಇವರ ಆಚಾರವಿಚಾರಗಳೂ ಮೂಲನಿವಾಸಿಗಳಾದ ದ್ರಾವಿಡರ ಆಚಾರ ವಿಚಾರಗಳೂ ಪರಸ್ಪರ ವಿರುದ್ಧವಾಗಿದ್ದವು. ಸ್ವಾರ್ಥಪರರಾದ ಆರ್ಯರು ಯಜ್ಞದ ನೆಪದಲ್ಲಿ ಪಶುವಧೆ, ಮಾಂಸಭಕ್ಷಣ, ಸುರಾಪಾನ ಇತ್ಯಾದಿ ಹಿಂಸಾ ಕರ್ಮಗಳು ವೇದಸಮ್ಮತವೆಂದೂ, ಹಿಂಸಾತ್ಮಕವಾದ ಯಜ್ಞಯಾಗಾದಿಗಳು ಪಾಪಹೇತುವಲ್ಲವೆಂದೂ ಬೋಧಿಸತೊಡಗಿದರು. ಅಲ್ಲದೆ ಧರ್ಮಪರರಾಯ

ಣರೂ, ಪಾಪಭೀರುಗಳೂ, ನೀತಿವಂತರೂ, ಶೈವರೂ ಆದ ದ್ರಾವಿಡರನ್ನು ಹೀಯಾಳಿಸುತ್ತಾ, ಹಿಂಸಿಸುತ್ತಾ, ಅವರ ದನ-ಕರು-ಕಾಳು ಇತ್ಯಾದಿಗಳನ್ನು ಅಪಹರಿಸುತ್ತಾ ಅವರನ್ನು ನಾನಾ ವಿಧವಾಗಿ ಹಿಂಸಿಸತೊಡಗಿದರು.

ಅಸತ್ಯ ಸಾಹಿತ್ಯ ಸೃಷ್ಟಿ :

ಅಲ್ಲದೆ ಅಗ್ನಿಯೆಂದರೆ ಬ್ರಾಹ್ಮಣ ಎಂದು ಅರ್ಥವಿಸಿದರು. ಬ್ರಾಹ್ಮಣರ ತೃಪ್ತಿಯೇ ಅಗ್ನಿದೇವನ ತೃಪ್ತಿಯೆಂದು ಬೋಧಿಸಿದರು. ಆರ್ಯರು, ಅಸಹಿಷ್ಣುಗಳೂ, ಮುಂಗೋಪಿಗಳೂ, ವಂಚಕರೂ, ನೀಚಕಾರ್ಯಪ್ರವರ್ತಕರೂ, ಸ್ವಾರ್ಥಸಾಧಕರೂ, ಆಗಿದ್ದರು. ಲಿಂಗೋಪಾಸಕರಾದ ದ್ರಾವಿಡರನ್ನು ಶಿಶ್ನ (ಸ್ನ) ದೇವಾಃ ಇತ್ಯಾದಿ ಹೇಯವಾದ ವಚನಗಳಿಂದ ಸಂಬೋಧಿಸುತ್ತಿದ್ದರು. ಅವರ ಆರಾಧ್ಯ ದೇವತೆಯಾದ ಲಿಂಗವನ್ನು ತುಚ್ಛೀಕರಿಸಿ, ಅದಕ್ಕೆ ಅಪಾರ್ಥವನ್ನು ಕಲ್ಪಿಸತೊಡಗಿದರು. ಅಷ್ಟಕ್ಕೇ ತೃಪ್ತರಾಗದೆ ಶಿವಾರಾಧನ ಪದ್ಧತಿಯನ್ನೇ ತೊಡೆದುಹಾಕಬೇಕೆಂದು ಯೋಚಿಸಿ, ಸ್ವಾರ್ಥಧರ್ಮೋನ್ಮತ್ತರಾಗಿ ಶಿವನ ವಿರುದ್ಧ ವಿಷ್ಣು, ಅಗ್ನಿ, ಇಂದ್ರಾದಿದೇವತೆಗಳನ್ನು ಸೃಷ್ಟಿಸಿ, ರುದ್ರನಿಗೆ ಬದಲಾಗಿ ಪೂಜಿಸತೊಡಗಿದರು. ನಂತರ ಅವರೇ ಯಜ್ಞಾಧಿಕಾರಿಗಳೆಂದು ಪ್ರಚಾರಮಾಡಿ, ಅವರು ಪ್ರೀತರಾದರೆ ಎಲ್ಲರ ಇಷ್ಟಾರ್ಥಗಳೂ ಸಿದ್ಧಿಸುವುವೆಂದೂ ಸಾರಿದರು. ಯಜ್ಞಯಾಗಾದಿಗಳಲ್ಲಿ ಶಿವ–ರುದ್ರನಿಗೆ ಬದಲು, ವಿಷ್ಣುವಿಗೇ ಯಜ್ಞಭಾಗವನ್ನು (ಹವಿಸ್ಸು) ಕೊಡಬೇಕೆಂದೂ, ರುದ್ರನು ಅದಕ್ಕೆ ಅರ್ಹನಲ್ಲವೆಂದೂ ಬೋಧಿಸಿದರು. ಈ ಹೇಯ ಕೃತ್ಯಗಳ ಸಮರ್ಥನೆಗಾಗಿ ಅನೇಕ ವೇದಮಂತ್ರಗಳನ್ನು ನೂತನವಾಗಿ ರಚಿಸಿ ಪ್ರಚಾರ ಮಾಡಿದರು. ತಮ್ಮ ತಮ್ಮ ಪಂಗಡಗಳನ್ನು ಬಲಪಡಿಸಿದರು.

ವರ್ಣಾಶ್ರಮ ಧರ್ಮಗಳು :

ಇತರರ ಮೇಲೆ ತಮ್ಮ ಸ್ವಾಮ್ಯವನ್ನು ಸ್ಥಾಪಿಸುವ ದುರುದ್ದೇಶದಿಂದ, ಚತುರ್ವರ್ಣಾಶ್ರಮಗಳ ಕಾಲ್ಪನಿಕಕೋಟೆಯನ್ನೂ ರಚಿಸಿ, ಅವನ್ನು ದೇವನೇ ನಿರ್ಮಿಸಿರುವನೆಂದು ಸುಳ್ಳು ಹೇಳಿ ಸಮಾಜಕ್ಕೆ ದ್ರೋಹ ಬಗೆದರು. ಈ ದುಷ್ಟ ಪದ್ಧತಿಯು ಜಗತ್ತಿನ ನಾನಾ ಬಗೆಯ ಧಾರ್ಮಿಕ ತತ್ವಜ್ಞಾನಿಗಳಿಗೆ ಬಿಡಿಸಲಾಗದ ಒಗಟಾಗಿ ಇಂದಿಗೂ ಉಳಿದಿದೆ. ಈ ವಜ್ರಪ್ರಾಯವಾದ ಭದ್ರ ಕೋಟೆಯನ್ನು ಒಡೆದು, ಸಮಾಜಕ್ಕೆ ಇದರಿಂದಾಗುತ್ತಿರುವ ಅನಿಷ್ಟ

ಪರಿಣಾಮಗಳನ್ನು ತಪ್ಪಿಸಲು ಸತತವಾಗಿ ಪ್ರಯತ್ನಪಟ್ಟ ಕೀರ್ತಿ ಭಾರತೀಯ ಮಹರ್ಷಿ ಅವತಾರ ಪುರುಷರೆಂದು ಪರಿಗಣಿಸಲ್ಪಟ್ಟಿರುವ, ಮಹಾವೀರ, ಗೌತಮಬುದ್ಧ, ಬಸವೇಶ್ವರ, ಮಹಾತ್ಮಾಗಾಂಧಿ, ಸ್ವಾಮಿ ವಿವೇಕಾನಂದ ಇವರಿಗೆ ಸಲ್ಲಬೇಕು. ಆದರೂ ಸಹಸ್ರಾರು ವರ್ಷಗಳಿಂದಲೂ ಬೇರೂರಿರುವ ಈ ದುಷ್ಟಭೇದಗಳನ್ನು ಸಂಪೂರ್ಣವಾಗಿ ತೊಡೆದು ಹಾಕಲು ಅವರಿಗೂ ಸಾಧ್ಯವಾಗಲಿಲ್ಲವೆನ್ನಬಹುದು.

ಧರ್ಮ ಕ್ಷೋಭೆ :

ಆರ್ಯರ ಮತ್ತು ದ್ರಾವಿಡರ ಮಧ್ಯೆ ಸಾಮಾಜಿಕ, ಆರ್ಥಿಕ, ಧಾರ್ಮಿಕ ಇತ್ಯಾದಿ ಕ್ಷೇತ್ರಗಳಲ್ಲಿ ಹೆಚ್ಚು ಅಸಮಾನತೆ ಇದ್ದಿತು. ಬಡತನ-ಸಿರಿತನ, ಪಂಡಿತ-ಪಾಮರ, ಉತ್ತಮ-ಅಧಮ ಇತ್ಯಾದಿ ಭೇದಗಳಿಂದಾಗಿ, ಸಮಾಜವು ಒಡೆದು, ಪರಸ್ಪರರಲ್ಲಿ ದ್ವೇಷಾಸೂಯೆಗಳು ಅತಿರೇಕಕ್ಕೇರಿದವು. ಎಲ್ಲ ಕ್ಷೇತ್ರಗಳಲ್ಲಿಯೂ, ಆರ್ಯರದೇ ಮೇಲುಗೈ ಆಗಿತ್ತು. ಅವರು ಎಲ್ಲ ವಿಧದಲ್ಲಿಯೂ, ದ್ರಾವಿಡರ ಮೇಲೆ ದೌರ್ಜನ್ಯ, ಹಿಂಸಾಕೃತ್ಯ ಇತ್ಯಾದಿ ನೀಚ ಕಾರ್ಯಗಳನ್ನು ಎಸಗ ತೊಡಗಿದರು.

ಹೀಗಾಗಿ ದ್ರಾವಿಡರಿಗೆ, ತಮ್ಮ ಸಂಸ್ಕೃತಿ, ತಮ್ಮ ಆಚಾರ, ವಿಚಾರ, ತಮ್ಮ ಆಸ್ತಿಪಾಸ್ತಿ, ಆಡಳಿತ ಸ್ವಾತಂತ್ರ್ಯ, ಭಾಷಾ ಸ್ವಾತಂತ್ರ್ಯ ಇವುಗಳನ್ನು ಉಳಿಸಿಕೊಂಡು ಸುಖಶಾಂತಿಗಳಿಂದ ಬಾಳುವುದೇ ಕಷ್ಟವಾಯಿತು. ಆರ್ಯರು ಇತರರ ಏಳಿಗೆ, ಸುಖ, ಶಾಂತಿ, ಸಹಬಾಳ್ವೆಗಳನ್ನು ಸಹಿಸುತ್ತಿರಲಿಲ್ಲ. ಏನಾದರೂ ಕುಹಕ ಹೂಡಿ ಒಳಜಗಳಗಳ ಮುಖಾಂತರ ಸಮಾಜದಲ್ಲಿ ಒಡಕನ್ನುಂಟು ಮಾಡಿ, ಅದರಿಂದ ತಾವು ಪ್ರತಿಫಲ ಪಡೆಯುತ್ತಿದ್ದರು. ದೇವರುಗಳಲ್ಲಿ ಮೇಲು-ಕೀಳು ಭಾವನೆಗಳನ್ನು ಹುಟ್ಟಿಸಿ ಸಮಾಜ ಘಾತುಕರಾದರು. ತಮ್ಮಂತೆ ನಡೆಯದವರ ಮೇಲೆ ಸೇಡಿನ ಕಿಡಿ ಕಾರಿ ಅವರನ್ನು ನಾನಾ ರೀತಿಯಿಂದ ಕಾಡಿಸುತ್ತಿದ್ದರು.

ದೈವಗಳಲ್ಲಿ ಮೇಲು ಕೀಳು ಭಾವನೆ :

ಹೀಗಾಗಿ, ವೈದಿಕ ಕರ್ಮಕಾಂಡವನ್ನು ಪ್ರತಿಭಟಿಸುವ ಸಾಮರ್ಥ್ಯ ಯಾರಿಗೂ ಇಲ್ಲವಾಯಿತು. ಇಂಥಾ ಸ್ಥಿತಿಯಲ್ಲಿ ಶಿವಾರಾಧಕರಾದ (ಶೈವ)

ದ್ರಾವಿಡರು ರುದ್ರನನ್ನು ಮರೆಹೊಕ್ಕು ರಕ್ಷಣೆಗಾಗಿ ಪ್ರಾರ್ಥಿಸಿದರು. ಋಗ್ವೇದ ಪೂರ್ವದಲ್ಲಿ ರುದ್ರದೇವನಿಗೇ ಯಜ್ಞಾಧಿಪತ್ಯವೂ, ಯಜ್ಞಭಾಗವೂ ಮೀಸಲಾಗಿದ್ದವು.

ಆರ್ಯರು ಅದನ್ನು ತಪ್ಪಿಸಿದರು. ದೈವದ್ರೋಹ, ಸಮಾಜದ್ರೋಹ, ಪರಸ್ಪರ ದ್ವೇಷಾಸೂಯೆ, ಇತ್ಯಾದಿ ದುಷ್ಟಾಚರಣೆಗಳು ಅತಿಯಾದವು. ಧರ್ಮಗ್ಲಾನಿಯುಂಟಾಯಿತು. ಆರ್ಯರ ಪ್ರೇರಣೆಯಿಂದ ಶಿವ-ರುದ್ರನ ಉತ್ಕರ್ಷವನ್ನು ಸಹಿಸದಾದ ಕೆಲವರು ಶಿವನಿಗೆ, ಅಪಮಾನ ಮಾಡಬೇಕೆಂದು ಸನ್ನಾಹ ಮಾಡ ಹತ್ತಿದರು. ತದಂಗವಾಗಿ, ಯಜ್ಞಯಾಗಾದಿಗಳಿಗೆ, ಶಿವನನ್ನು ಆಹ್ವಾನಿಸದೆ. ಅವನಿಗೆ ಬದಲಾಗಿ, ವಿಷ್ಣುವನ್ನೂ ಇಂದ್ರನನ್ನೂ ಆಹ್ವಾನಿಸುವಂತೆಬೋಧಿಸ ತೊಡಗಿದರು.

ದಕ್ಷಯಜ್ಞ :

ಇಂಥಾ ಪರಿಸ್ಥಿತಿಯಲ್ಲಿ ದಕ್ಷನು ಶಿವನೊಡನೆ ದ್ವೇಷ ಬೆಳೆಸಿ, ಅವನನ್ನು ಅಪಮಾನ ಗೊಳಿಸಿ, ಅವನ ಸರ್ವೇಶತ್ವವನ್ನು ತಾನೇ ಪಡೆಯ ಬೇಕೆಂಬ ದುರುದ್ದೇಶದಿಂದ ಅಶ್ವಮೇಧ ಯಾಗವನ್ನು ಮಾಡಲು ನಿರ್ಧರಿಸಿದನು. ನಂತರ ಶಿವನನ್ನು ಆಹ್ವಾನಿಸದೆ, ವಿಷ್ಣುವೇ ಮೊದಲಾದ ದೇವತೆಗಳನ್ನು ಕರೆಸುವನು. ತಂದೆಯ ಯಜ್ಞಸನ್ನಾಹವನ್ನು ತಿಳಿದ ದಾಕ್ಷಾಯಣಿಯು ಆಹ್ವಾನವಿಲ್ಲದೆಯೇ ಯಜ್ಞಕ್ಕೆ ಬರುವಳು. ದಕ್ಷನು ಸತಿಯನ್ನು ಅಪಮಾನ ಗೊಳಿಸಿ, ಶಿವನಿಂದೆ ಮಾಡುವನು. ದುಃಖಿತಳಾದ ಗಿರಿಜೆಯು ಯೋಗಾಗ್ನಿಯಿಂದ ತನ್ನ ದೇಹವನ್ನು ತ್ಯಜಿಸುವಳು. ಇದನ್ನು ತಿಳಿದ ಶಂಕರನು ತನ್ನ ಕಿಡಿಗಣ್ಣಿನಿಂದ ವೀರಭದ್ರನನ್ನು ಸೃಜಿಸಿ, ದಕ್ಷನ ಯಜ್ಞಭಂಗ ಮಾಡಲು ಕಳುಹಿಸುವನು. ವೀರಭದ್ರನು ತನ್ನ ಅಪಾರ ಪರಾಕ್ರಮದಿಂದ ಹರಿವಿಧಿಗಳನ್ನೆಲ್ಲಾ ಜಯಿಸಿ, ದಕ್ಷನ ಶಿರಸ್ಸನ್ನು ಕತ್ತರಿಸಿ ಹಿಂದಿರುಗುವನು.

ಹೀಗೆ ಆರ್ಯ-ದ್ರಾವಿಡರ ಮಧ್ಯೆ ಉಂಟಾದ ಘರ್ಷಣೆ ಧಾರ್ಮಿಕಾದಿ ಕ್ರಾಂತಿಗಳನ್ನೇ ಉಂಟು ಮಾಡಿತು. ಇಂದು ಈ ಎರಡೂ ಸಂಸ್ಕೃತಿಗಳನ್ನೂ ಪ್ರತ್ಯೇಕಿಸಿ ಗುರುತಿಸಲು ಸಾಧ್ಯವಾಗದು. ಒಟ್ಟಾರೆ ವೀರಭದ್ರನೇ ಮೊಟ್ಟ ಮೊದಲಿಗೆ ಆರ್ಯರ ಹಿಂಸೆಯ ಯಾಗಾದಿಗಳನ್ನು ಧಿಕ್ಕರಿಸಿದ ಆದ್ಯ ವೀರಶೈವ. ಇವನ ಇತರ ಲೀಲೆಗಳನ್ನೂ ಹೀಗೆ ಕಾಣಬಹುದು.

ಶರಭ ಲೀಲೆ :

ಹಿರಣ್ಯಕಶಪುವನ್ನು ಕೊಂದ ನೃಸಿಂಹನು ಮದೋನ್ಮತ್ತನಾಗಿ ಲೋಕವನ್ನೆಲ್ಲಾ ಸಂಹರಿಸುತ್ತಿರಲು, ಅವನನ್ನು ನಿಗ್ರಹಿಸಲು ಶಿವನು ವೀರಭದ್ರನನ್ನು ಕಳುಹುವನು. ವೀರಭದ್ರನು ನೃಸಿಂಹನನ್ನು ಶರಭಾವತಾರದಿಂದ ನಿಗ್ರಹಿಸಿ ಮರಳುವನು.

ಹನುಮಂತನಿಗೆ ಲಿಂಗಾಧಾರಣೆ :

ರಾವಣನ ಸಂಹಾರವಾದ ಮೇಲೆ ಶ್ರೀರಾಮನು ಅಯೋಧ್ಯೆಗೆ ಹನುಮಂತಾದಿ ವೀರರೊಡನೆ ಹಿಂತಿರುಗಿದನು. ಹನುಮಂತನಿಂದ ತನಗಾದ ಉಪಕಾರಸ್ಮರಣಾರ್ಥವಾಗಿ, ಅವನಿಗೆ ಶ್ರೇಷ್ಠವಾದ ರತ್ನಹಾರವನ್ನು ಪಾರಿತೋಷಕವಾಗಿ ಕೊಡುವನು. ಹನುಮಂತನು ಅದನ್ನು ನಿರಾಕರಿಸಿ, ಕೈಲಾಸಕ್ಕೆ ತೆರಳುವನು. ನಂದಿಯು ಭವಿಯೂ, ಬ್ರಹ್ಮಹತ್ಯಾದೋಷಿಯೂ ಆದ ಹನುಮಂತನನ್ನು ತಡೆಯುವನು. ನಂದಿಯ ಸಲಹೆಯಂತೆ ಹನುಮಂತನು ಶಿವನನ್ನು ತಪಸ್ಸಿನಿಂದ ಮೆಚ್ಚಿಸಿ, ಹತ್ಯಾದೋಷದಿಂದ ಮುಕ್ತನಾಗಿ, ನಾರದರ ಸಹಾಯದಿಂದ, ವೀರಭದ್ರನನ್ನಾಶ್ರಯಿಸಿ, ಶಿವದೀಕ್ಷೆಯನ್ನು ಪಡೆಯುವನು. ನಂತರ ಗೌತಮರ ಆಶ್ರಮದಲ್ಲಿ ಶಿವನ ಮುಂದೆ ಗಾನಮಾಡಿ, ಶಿವನ ಆಹ್ವಾನದ ಮೇರೆಗೆ ಶಿವ-ಶಿವೆಯರನ್ನು ತನ್ನ ಭುಜದ ಮೇಲೆ ಹೊತ್ತು ಕೈಲಾಸಕ್ಕೆ ಕರೆದೊಯ್ದು ಗಾನಮಾಡುತ್ತಿರುವಾಗ, ಲಿಂಗಪೂಜಾ ವೇಳೆಯಾಗಲು, ಅಲ್ಲಿಂದ ಶಿವನ ಅಣತಿಯನ್ನು ಲೆಕ್ಕಿಸದೆ ಹೊರಡುವನು. ಆಗ ಕುಪಿತನಾದ ಶಂಕರನು, ಹನುಮಂತನ ಲಿಂಗವನ್ನು ಮಾಯ ಮಾಡುವನು ಲಿಂಗರಹಿತವಾದ ಶರೀರವನ್ನು ತ್ಯಜಿಸಬೇಕೆಂಬ ಶಿವಸಿದ್ಧಾಂತದಂತೆ ಹನುಮಂತನು ಪ್ರಾಣತ್ಯಾಗ ಮಾಡಲು ಸಿದ್ಧನಾಗುವನು. ಆಗ ವೀರಭದ್ರನು ದರ್ಶನ ನೀಡಿ ಅವನನ್ನು ತಡೆದು, ಅವನ ಲಿಂಗವನ್ನು ಶೋಧಿಸಿ ತರಲು ತನ್ನ ಕಿಡಿಗಣ್ಣನ್ನು ಕಳುಹುವನು ಆಗ ಶಿವನು ಪ್ರಸನ್ನನಾಗಿ ಹನುಮಂತನಿಗೆ ಲಿಂಗವನ್ನು ಕೊಟ್ಟು, ಅವನ ರೋಮಗಳೆಲ್ಲವೂ ಲಿಂಗಮಯವಾಗುವಂತೆ ಅನುಗ್ರಹಿಸಿ, ಅವನಿಗೆ ಗಣಪದವಿಯನ್ನೂ ಕರುಣಿಸುವನು.

ಕದಂಬಾಸುರ ಸಂಹಾರ :—

ಕದಂಬಾಸುರನೆಂಬ ರಾಕ್ಷಸನು ಬ್ರಹ್ಮನ ವರ ಬಲದಿಂದ ಮದೋನ್ಮತ್ತನಾಗಿ, ದೇವತೆಗಳನ್ನೆಲ್ಲಾ ಜಯಿಸಿ ಹಿಂಸಿಸುತ್ತಿದ್ದನು. ಆಗ ಶಂಕರನು.

ವೀರಭದ್ರನನ್ನು ಕಳುಹಲು, ವೀರಭದ್ರನು ಕದಂಬನನ್ನು ನಿಗ್ರಹಿಸಿ ಹಿಂದಿರುಗುವನು.

ಜ್ವಾಲವ್ಯಾಳಾಸುರ– ಕಾಕೋದರಾಸುರ ಸಂಹಾರ :

ಒಮ್ಮೆ 'ಕರುಣೆ' ಎಂಬ ಮುನಿ ಕುಮಾರನು ಓರ್ವ ಮುನಿಯ ಶಾಪದಿಂದ ನೋಣದ ಜನ್ಮ ಪಡೆದು, ನಂತರ ದಧೀಚಿಗಳ ದರ್ಶನದಿಂದ ಶಾಪವಿಮೋಚನೆ ಪಡೆಯುವನು. ಅವನ ಪ್ರಾರ್ಥನೆಯಂತೆ ದಧೀಚಿಗಳು ಅವನಿಗೆ ವೀರೇಶನ ಮಹಿಮೆಗಳನ್ನು ವಿವರಿಸುತ್ತಾ, ಒಮ್ಮೆ ತಾವು ದೇವತೆಗಳೊಡನೆ ಕೈಲಾಸಕ್ಕೆ ಹೋಗುವಾಗ ಜ್ವಾಲವ್ಯಾಳಾಸುರನು ತಮ್ಮನ್ನು ನುಂಗಿದುದಾಗಿಯೂ, ಆಗ ಅವರ ಪ್ರಾರ್ಥನೆಗೆ ಪ್ರಸನ್ನನಾದ ವೀರೇಶನು, ಆ ರಾಕ್ಷಸನನ್ನು ಸಂಹರಿಸಿ ಪ್ರಾಣ ದಾನ ಮಾಡಿದನೆಂದೂ, ಅವರು ಮುಂದೆ ಪರ್ವತವನ್ನು ಹತ್ತುತ್ತಿದ್ದಾಗ ಕಾಕೊದರಾಸುರನು ತಮ್ಮನ್ನೆಲ್ಲಾ ನುಂಗಿ ಬಿಡಲು ಮತ್ತೆ ಅವರು ವೀರೇಶನನ್ನು ಧ್ಯಾನ ಮಾಡಲು, ವೀರೇಶನು ಆ ಕಾಕಾ ಸುರನೊಡನೆ ಘೋರಯುದ್ಧ ಮಾಡಿ ಅವನನ್ನು ಸಂಹರಿಸಿ, ತಮಗೆಲ್ಲಾ ಪ್ರಾಣದಾನ ಮಾಡಿದುದಾಗಿ ತಿಳಿಸಿದರು.

ಪಂಚಮೇಢಾಸುರ ಸಂಹಾರ :

ಮುಂದುವರಿದು ದಧೀಚಿಗಳು, ವಾಮನದ ಅರಸನ ಪುತ್ರನಾದ ಪಂಚಮೇಢ್ರಾಸುರನೆಂಬುವನು, ವರದಿಂದ ಗರ್ವಿತನಾಗಿ, ದೇವತೆಗಳನ್ನೆಲ್ಲಾ ಸೆರೆಹಿಡಿದು ಹಿಂಸಿಸುತ್ತಿರಲು, ದೇವತೆಗಳು ಪರಮೇಶ್ವರನನ್ನು ಮರೆಹೊಗುವರು. ಆಗ ಶಂಕರನು ವೀರೇಶನಿಗೆ ಆದೇಶ ನೀಡಲು, ವೀರೇಶನು, ಮದಾಂಧನಾದ ಪಂಚಮೇಢ್ರಾಸುರನೊಡನೆ, ನಾಲ್ಕು ವರ್ಷಗಳ ಪರ್ಯಂತ, ಅನೇಕ ಭಯಂಕರಾಕಾರಗಳನ್ನು ಧರಿಸಿ, ಘನ ಘೋರ ಯುದ್ಧ ಮಾಡಿ, ಅಂತ್ಯದಲ್ಲಿ ಆ ಭಯಂಕರ ರಾಕ್ಷಸನನ್ನು ಸಂಹರಿಸಿ, ದೇವಮಾನವರಿಗೆ ಉಂಟಾಗಿದ್ದ ಕಂಟಕವನ್ನು ಪರಿಹರಿಸಿ, ಲೋಕವನ್ನು ಉದ್ಧರಿಸುವನು.

ಹೀಗೆ ಈ 'ಶ್ರೀವೀರೇಶಷಡ್‌ಲೀಲಾದರ್ಶನ' ಗ್ರಂಥದಲ್ಲಿ ನಿರೂಪಿಸಲಾಗಿರುವ ಕಥಾಭಾಗಗಳಲ್ಲಿ, ವೇದ, ಆಗಮ, ಉಪನಿಷತ್ತು, ಶ್ರುತಿ, ಪುರಾಣೇತಿಹಾಸಗಳಲ್ಲಿ ಪ್ರತಿಪಾದಿಸಿರುವ ವೇದಾಂತ ತತ್ವಗಳು, ನೀತಿ ಧರ್ಮಗಳು, ದೇವ, ದೈತ್ಯ, ಮಾನವರಾದಿಯಾಗಿ ಸಕಲರೂ, ನಿಷ್ಠೆಯಿಂದ

ಅನುಸರಿಸಬೇಕಾದ ಸತ್ಕರ್ಮಾಚರಣೆಗಳು, ಅಧರ್ಮಾಚರಣೆಯಿಂದ ಸಂಭವಿಸುವ ಅನರ್ಥಗಳು, ಹರಿ–ಬ್ರಹ್ಮಾದಿ ದೇವತೆಗಳಿಂದ ಶಿವ ಪಾರಮ್ಯ, ತ್ರಿಮೂರ್ತಿಗಳೂ ಮಾಯಾಪರವಶರಾಗಿ, ಅಧರ್ಮಕಾರ್ಯಗಳನ್ನೆಸಗಿದಾಗ, ಅಪರ ಬ್ರಹ್ಮ ಸದಾಶಿವನು ಧರ್ಮಸಂಸ್ಥಾಪನಾರ್ಥವಾಗಿ, ಅವರನ್ನು ಶಿಕ್ಷಿಸುವುದರ ಮೂಲಕ, ಅವರ ಮಾಯೆಯನ್ನು ನಿಗ್ರಹಿಸಿ, ಅವರನ್ನು ಅನುಗ್ರಹಿಸಿ ಧರ್ಮವನ್ನು ಮತ್ತೆ ಸ್ಥಾಪಿಸುವನೆಂಬ ತತ್ವವನ್ನು ಧೃಡಪಡಿಸಲಾಗಿದೆ.

ಹೀಗೆ ಮಾಡುವುದರಿಂದ, 'ತ್ರಿಮೂರ್ತಿಗಳ, ಸ್ಥಾನ,' ವ್ಯಕ್ತಿತ್ವ, ಭಕ್ತಾನುಗ್ರಹಸಾಮರ್ಥ್ಯ, ಪೂಜತೆ ಇತ್ಯಾದಿಗಳಿಗೆ ಯಾವ ಚ್ಯುತಿಯೂ ಉಂಟಾಗುವುದಿಲ್ಲವೆಂಬ ಅಂಶವೂ ಗಮನಾರ್ಹ. ಅಲ್ಲದೆ, ತ್ರಿಮೂರ್ತಿಗಳಲ್ಲಿ ಭೇದಭಾವವು ನಿಷಿದ್ಧ ಮತ್ತು ಹಾನಿಕರವಾದುದೆಂದೂ ಉಲ್ಲೇಖಿಸಲಾಗಿದೆ.

ಶಿವಭಕ್ತಿ ಹಾಗೂ ಶಿವಾನುಗ್ರಹಗಳು ಲಭಿಸಲೇಕಾದರೆ ತ್ರಿಮೂರ್ತಿಗಳಲ್ಲಿ ಅಭೇದಭಾವನೆಯು ಅತ್ಯಾವಶ್ಯಕವೆಂಬ ಸಿದ್ಧಾಂತವೂ ಗಮನಾರ್ಹ.

ವೀರೇಶನು ಕೇವಲ ರೌದ್ರನಾಗಿರದೆ, ಭದ್ರ (ಮಂಗಳಕರನೂ) ನೂ ಹೌದು. ಇವನು ಆದಿ ಶೈವಸಂಸ್ಕೃತಿಯ ಮೂಲಪುರುಷನೂ, ವಿಭೂತಿ ಪುರುಷನೂ, ಗುರು ಸಾರ್ವಭೌಮನೂ ಹೌದು. ವೀರೇಶನ ಲೀಲೆಗಳೆಲ್ಲಾ ದುಷ್ಟನಿಗ್ರಹ, ಧರ್ಮಸಂಸ್ಥಾಪನೆ, ಹಿಂಸಾರೂಪದ ಯಜ್ಞ–ಯಾಗಾದಿಗಳ ನಿರೋಧ, ದೇವತೆಗಳಲ್ಲಿ ಸಮನ್ವಯ ಭಾವ, ಇತ್ಯಾದಿ ಶ್ರೇಷ್ಠ ದೈವೀಗುಣಗಳನ್ನು ಭೋದಿಸುವ ಕಥಾರೂಪದಲ್ಲಿವೆ.

ಈ ಪವಿತ್ರಗ್ರಂಥವನ್ನು ಶ್ರದ್ಧಾ-ಭಕ್ತಿಗಳಿಂದ ಓದುವುದರಿಂದ ಓದುಗರಲ್ಲಿ ನೀತಿ-ಧರ್ಮಗಳು ಜಾಗ್ರತಿಹೊಂದಿ, ಅವರ ಶ್ರೇಯೋಭಿವೃದ್ಧಿಯಾಗುವುದಲ್ಲದೆ, ಅಂತಹ ವ್ಯಾಪಕವಾದ ಧಾರ್ಮಿಕ ಜಾಗ್ರತಿಯು ಸಮಾಜವನ್ನು ಸುಧಾರಿಸಿ ಜಗತ್ಕಲ್ಯಾಣಕ್ಕೆ ಸ್ಫೂರ್ತಿನೀಡುವುದರಲ್ಲಿ ಯಾವ ಸಂಶಯವೂ ಇಲ್ಲ. ಇಂಥಾ ಗ್ರಂಥಾವಲೋಕನದಿಂದ ಜಗತ್ಕಲ್ಯಾಣವು ಸಿದ್ಧಿಸಲೆಂದು ಹಾರೈಸಲಾಗಿದೆ.

ಗ್ರಂಥಕರ್ತರು.

ಅಭಿಪ್ರಾಯ

ಭಾರತೀಯ ಕತೆ ಪುರಾಣಗಳಲ್ಲಿ ಬರುವ ವಿಷ್ಣುವಿನ ದಶಾವತಾರಗಳು, ಶಿವನ ಪಂಚವಿಂಶತಿ ಲೀಲೆಗಳು, ಜೈನರ ಜನ್ಮಾಂತರ ಕತೆಗಳು, ಬೌದ್ಧ ಜಾತಕ ಕತೆಗಳು ಮುಂತಾದುವನ್ನು ಕುರಿತು ಐತಿಹಾಸಿಕ ಹಾಗೂ ವೈಜ್ಞಾನಿಕ ದೃಷ್ಟಿಯಿಂದ ಹಲವಾರು ಪ್ರಬಂಧಗಳನ್ನು ಬರೆದು ಡಾಕ್ಟರೇಟ್ ಪದವಿ ಪಡೆಯುವಷ್ಟು ವಿಪುಲ ಸಾಮಗ್ರಿಯಿದೆ. ವಿಷ್ಣುವಿನ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಶ್ರೀಕೃಷ್ಣ, ಬುದ್ಧ, ಮತ್ತು ಕಲ್ಕಿ ಎಂಬ ದಶಾವತಾರಗಳಲ್ಲಿ ಜೀವಕೋಟಿಯ ಕ್ರಮ ವಿಕಾಸವನ್ನು ಕಾಣುತ್ತೇವೆ. ಹಾಗೆಯೇ ಶಿವನ ಪಂಚವಿಂಶತಿ ಲೀಲೆಗಳೆನಿಸಿದ ಚಂದ್ರ ಕಲಾಧರ, ಉಮಾಮಹೇಶ್ವರ, ವೃಷಭಾರೂಢ, ನೃತ್ಯ, ಪಾರ್ವತೀ ಪಾಣಿ ಗ್ರಹಣ, ಭಿಕ್ಷಾಟನ, ಕಾಮಾರಿ, ಕಾಲಾರಿ, ತ್ರಿಪುರಾರಿ, ಮುಂತಾದವುಗಳು ಐತಿಹಾಸಿಕದೃಷ್ಟಿಯಿಂದ ಅವಲೋಕನೀಯಗಳಾಗಿವೆ. ಈ ದಿಶೆಯಲ್ಲಿ ಪೂಜ್ಯ ಡಾ|| ಜ. ಚ. ನಿ., ಶ್ರೀ ಎಚ್. ಗಂಗಾಧರನ್ ಮುಂತಾದವರು ಪ್ರವೃತ್ತರಾಗಿರುವುದು ಒಂದು ಶುಭಸೂಚನೆ. ಧರ್ಮಸಾಹಿತ್ಯಭೂಷಣ ಶ್ರೀ ಎಂ. ಚಂದ್ರಶೇಖರಾರಾಧ್ಯರ "ಶ್ರೀವೀರೇಶಷಡ್‌ಲೀಲಾದರ್ಶನ"ವೂ ಇಂತಹ ಒಂದು ಗಮನಾರ್ಹವಾದ ಹೆಜ್ಜೆ.

ಆಸಕ್ತಿ ಉತ್ಸಾಹ ಮತ್ತು ಕಾರ್ಯತತ್ಪರತೆಗಳಿದ್ದರೆ ಮಾನವ ಯಾವುದೇ ವಯಸ್ಸಿನಲ್ಲಿದ್ದರೂ ಉದ್ಯಮಶೀಲನಾಗಬಹುದು ಎಂಬುದಕ್ಕೆ ಶ್ರೀಯುತ ಆರಾಧ್ಯರ ಈ ಪ್ರಯತ್ನ ಒಂದು ಉದಾಹರಣೆ. ಅವರು ತಮ್ಮಲ್ಲಿ ಸಹಜವಾಗಿ ಬಂದಿರುವ ಧರ್ಮಾಭಿಮಾನ, ಅದಮ್ಯ ಉತ್ಸಾಹ ಮತ್ತು ಕಾರ್ಯತತ್ಪರತೆಗಳಿಂದ ಆದರ್ಶರಾಗಿದ್ದಾರೆ.. ಅನೇಕ ಧರ್ಮಸಂಸ್ಥೆಗಳಿಗೆ ಶಕ್ತಿಮೀರಿ ದಾನಧರ್ಮಗಳನ್ನೂ ಮಾಡುತ್ತಿದ್ದಾರೆ. ತಮ್ಮ ವಿಶ್ರಾಂತಿ ಕಾಲವಲ್ಲಿಯೂ ಕೂಡ ಗ್ರಂಥಾವಲೋಕನ ಮತ್ತು ರಚನೆಗಳಲ್ಲಿ ತೊಡಗಿರುವರೆಂಬುದಕ್ಕೆ ಪ್ರಕಟಿಸುತ್ತಿರುವ ಸಣ್ಣ ಪುಟ್ಟ ಕೃತಿಗಳು ನಿದರ್ಶನ.

ಆಗಮ, ಪುರಾಣ, ಶ್ರೀಮದ್ಭಾಗವತ, ರಗಳೆಗಳು, ವೀರೇಶ ಚರಿತ್ರೆ, ಅಚ್ಚಣ್ಣಗಳು ವೀರಭದ್ರ, ನಾಟಕ, ವಚನಗಳು, ಹವಿಸ್ಮಾರಕಾವ್ಯ, ವೀರಭದ್ರನ

ವಡಪುಗಳು, ಶಿವರಹಸ್ಯ ಮುಂತಾದ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳನ್ನು ಆಧರಿಸಿ ರಚಿತವಾಗಿರುವ ಈ ಕೃತಿ ಓದುಗರ ಕುತೂಹಲವನ್ನು ಹೆಚ್ಚಿಸುತ್ತದೆ. ಸರಳವಾದ ಭಾಷೆ, ಶೈಲಿ ಮತ್ತು ವಿಷಯ ನಿರೂಪಣೆಗಳು ಸಹಜವಾಗಿ ಬಂದಿವೆ. ನಾನಂತೂ ಗ್ರಂಥವನ್ನು ಆಮೂಲಾಗ್ರವಾಗಿ ಕುತೂಹಲದಿಂದ ಓದಿದೆ.

ವೀರೇಶನು ಶಿವಾಜ್ಞೆಯಂತೆ ನೆರವೇರಿಸಿದ ದಕ್ಷಯಜ್ಞಧ್ವಂಸ, ಶರಭ ಲೀಲೆ, ಮಾರುತಿಗೆ ಲಿಂಗದೀಕ್ಷೆ, ಕದಂಬಾಸುರ, ಜ್ವಾಲಮಾಳಾಸುರ, ಪಂಚ ಮೇಢ್ರಾಸುರರ ಸಂಹಾರಗಳು ವೀರೇಶನ ಲೀಲೆಗಳ ಅಗತ್ಯವನ್ನು ಸಮರ್ಥಿಸಿವೆ. ಹನುಮಂತನಿಗೆಸಗಿದ ಶಿವದೀಕ್ಷೆಯ ಹಿನ್ನೆಲೆಯನ್ನು ಪುರಾಣಾದ್ಯುಕ್ತವಾಗಿ ಸೂಚಿಸಿ, ಲಿಂಗಧಾರಣದ ಉದ್ದೇಶ, ಮಾಡುವ ವಿಧಾನ, ವೀರಶೈವದ ವೈಶಿಷ್ಟ್ಯಗಳನ್ನು ಬೆಳಗಿದ್ದಾರೆ. ಒಂದು ದೃಷ್ಟಿಯಿಂದ ದಾರ್ಶನಿಕವೂ ಪೌರಾಣಿಕವೂ ಆದ ವಿಷಯಗಳನ್ನು ಮನಂಬುಗುವಂತೆ ನಿರೂಪಿಲಾಗಿದೆ. ಹೀಗೆ ಒಂದು ವಿಷಯವನ್ನು ಕುರಿತು ಸಮಗ್ರವಾಗಿ ವಿಷಯಗಳನ್ನು ಸಂಗ್ರಹಿಸಿ ಎಸಗಿರುವ ಇವರ ಸೇವೆ ಮುಂದಿನವರಿಗೆ ಮಾರ್ಗದರ್ಶಕವಾಗುವುದರಲ್ಲಿ ಸಂದೇಹವಿಲ್ಲ. ನಾಡಿನ ವಿದ್ವಾಂಸರು ಈ ದಿಶೆಯಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳನ್ನು ನಡೆಯಿಸುವಲ್ಲಿ ಇದೊಂದು ದಿಗ್ದರ್ಶನವಾದೀತೆಂದು ನಾನು ಭಾವಿಸುತ್ತೇನೆ. ಸಂಸ್ಕೃತ ಮತ್ತು ಕನ್ನಡಗಳಲ್ಲಿ ಹಾಗೂ ಇತರ ಭಾಷೆ ಗಳಲ್ಲಿ ವೀರಭದ್ರ ಸಾಹಿತ್ಯ ವಿಪುಲವಾಗಿದೆ. ನಾಡಿನ ತುಂಬೆಲ್ಲ ದೊರೆಯುವ ವೀರೇಶನ ಮೂರ್ತಿ ಶಿಲ್ಪಗಳು ವೀರೇಶನ ಸಮಗ್ರ ಸಾಹಿತ್ಯ ರಚನೆಗೆ ಸಾಕಷ್ಟು ಹಿನ್ನೆಲೆಯನ್ನು ಒದಗಿಸುತ್ತವೆ. ಇಂಥದೊಂದು ಕೃತಿಯನ್ನು ಕನ್ನಡಿಗರಿಗೆ ನೀಡಿರುವ ಶ್ರೀಯುತ ಆರಾಧ್ಯರ ಪ್ರಯತ್ನವು ಮುಂದುವರಿದು ಜನೋಪಕಾರಿ ಯಾಗಲೆಂದು ಹಾರೈಸುತ್ತೇನೆ.

೧೫—೧—೧೯೮೦
ಮೈಸೂರು

ಎಂ. ಜಿ. ನಂಜುಂಡಾರಾಧ್ಯ.

ಅಭಿಪ್ರಾಯ

ಗ್ರಂಥಕರ್ತರು ತಮ್ಮ ಈ ಧರ್ಮಗ್ರಂಥದಲ್ಲಿ ಅನೇಕ ವಿಚಾರಗಳನ್ನು ಶ್ರುತಿ, ಸ್ಮೃತಿ, ಆಗಮ, ಪುರಾಣ ಹಾಗೂ ಇತರ ಧಾರ್ಮಿಕ ಗ್ರಂಥಗಳ ಆಧಾರದಿಂದ ಪ್ರತಿಪಾದಿಸಿರುತ್ತಾರೆ. ಒಂದು ಗ್ರಂಥರಚನೆಯಲ್ಲಿ ಅನೇಕ ಎಡರು ತೊಡರುಗಳು ಸಂಭವಿಸುವದು ಸಹಜವೆಂಬುದನ್ನು ಗ್ರಂಥಕರ್ತರೇ ಮನಗಂಡು ಅದಕ್ಕೆ ಪರಿಹಾರೋಪಾಯಗಳನ್ನು ಸೂಚಿಸಿರುತ್ತಾರೆ. ಯಾವೊಂದು ವಿಚಾರವೇ ಆಗಲಿ "ಇದಮಿತ್ಥಂ" ಎಂದು ಹೇಳುವುದಕ್ಕಾಗುವುದಿಲ್ಲವೆಂಬ ಸೌಜನ್ಯವೂ ಅವರಲ್ಲಿದೆ. ಜಾತಿಜಾತಿಗಳ ಮಧ್ಯೆ ಯಾವ ದೃಷ್ಟಿಯಿಂದಲೇ ಆಗಲಿ ವಿರಸವನ್ನುಂಟುಮಾಡದಂತೆ ಸಮನ್ವಯದೃಷ್ಟಿಯಿಂದ ವಿಷಯಗಳನ್ನು ಪ್ರತಿಪಾದಿಸಿರುವುದು ಅವರ ಒಂದು ವೈಶಿಷ್ಟ್ಯ. "ಪುರಾಣಮಿತ್ಯೇವ ನ ಸಾಧು ಸರ್ವಂ" ಎಂದು ಕಾಳಿದಾಸ ಮಹಾಕವಿಯು ತಿಳಿಸಿರುತ್ತಾನೆ. ಒಂದು ವಿಚಾರ ಪುರಾತನವಾದುದರಿಂದಲೇ ಎಲ್ಲವೂ ಸಾಧುವೆಂದಾಗಲಿ ನೂತನವಾದುದರಿಂದಲೇ ಎಲ್ಲವೂ ಅಗ್ರಾಹ್ಯವೆಂದಾಗಲಿ ಭಾವಿಸುವುದಕ್ಕಾಗುವುದಿಲ್ಲ. ಯಾವುದರಲ್ಲಿ ಯಾವುದನ್ನು ಎಷ್ಟರಮಟ್ಟಿಗೆ ಸ್ವೀಕರಿಸಬೇಕು ಅಥವಾ ಬಿಡಬೇಕು ಎಂಬುದನ್ನು ವಿವೇಕಿಗಳು ನಿರ್ಧರಿಸಬೇಕಾಗಿದೆ. ಆ ಕೆಲಸವನ್ನು ಗ್ರಂಥಕರ್ತರಾದ ಶ್ರೀ ಚಂದ್ರಶೇಖರಾರಾಧ್ಯರು ಯಶಸ್ವಿಯಾಗಿ ನಿರ್ವಹಿಸಿರುತ್ತಾರೆ.

"ಶ್ರೀವೀರೇಶಷಡ್‌ಲೀಲಾದರ್ಶನ" ಎಂಬ ಗ್ರಂಥದಲ್ಲಿ ಪ್ರತಿಪಾದಿಸಲ್ಪಟ್ಟಿರುವ ವಿಚಾರಗಳಿಗೆ ಶ್ರೀವೇದವ್ಯಾಸರ ಸ್ಕಾಂದಾದಿಪುರಾಣಗಳು, ಮಹಾಭಾರತ, ವಾಲ್ಮೀಕಿ ರಾಮಾಯಣ, ಅಧ್ಯಾತ್ಮರಾಮಾಯಣ, ತುಲಸೀರಾಮಾಯಣ, ಶಿವಾಗಮಗಳು—ಈ ಮುಂತಾದವುಗಳು ಆಧಾರವಾಗಿವೆ. ಶ್ರೀವೀರೇಶನ ಅಘಟಿತಘಟನಾಸಾಮರ್ಥ್ಯ, ದುಷ್ಟಶಿಕ್ಷಣ, ಶಿಷ್ಟಪರಿಪಾಲನಾಧರ್ಮ ಚೆನ್ನಾಗಿ ಚಿತ್ರಿತವಾಗಿದೆ. ಈತನ ಜೀವನ ಚರಿತ್ರೆಯನ್ನಾಗಲಿ ಹಾಗೂ ಗ್ರಂಥದಲ್ಲಿ ಬರುವ ಆಂಜನೇಯನ ಜೀವನಚರಿತ್ರೆಯನ್ನಾಗಲಿ ಇಷ್ಟು ಸಮಗ್ರರೀತಿಯಲ್ಲಿ ಯಾರೂ ಇದುವರೆಗೆ ಬರೆದಿಲ್ಲ. ಗ್ರಂಥಕರ್ತರು ಬಹಳ ಶ್ರಮವಹಿಸಿ ಅನೇಕ ಗ್ರಂಥಗಳ ಅವಲೋಕನದಿಂದ ಅವರ ಜೀವನಚರಿತ್ರೆಗೆ ಸಂಬಂಧಪಟ್ಟ ಅನೇಕ

ವಿಚಾರಗಳನ್ನು ಓದುಗರ ಮುಂದಿಟ್ಟಿದ್ದಾರೆ. ಇದಕ್ಕಾಗಿ ಅವರಿಗೆ ನಮ್ಮ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ಆಂಜನೇಯನ ಅವತಾರ ಹಾಗೂ ಶ್ರೀರಾಮನಿಗೂ ಅವನಿಗೂ ಉಂಟಾದ ಸಖ್ಯ, ಪರಮೇಶ್ವರನ ಸಂಕಲ್ಪದಂತೆ ಶ್ರೀರಾಮನ ಜೀವನಕ್ಕೆ ಸಂಬಂಧಪಟ್ಟ ಅನೇಕ ಮಹತ್ಕಾರ್ಯಗಳನ್ನು ಸಾಧಿಸು ವುದಕ್ಕೂ ಆಂಜನೇಯನು ಅಪ್ರತಿಹತ ಸಾಮರ್ಥ್ಯವನ್ನು ತೋರಿಸಿದ್ದಾನೆ. ಅವರಿಬ್ಬರ ಬಾಂಧವ್ಯವು ದೈವಿಕವಾದದ್ದು. ಇಲ್ಲಿ ಕ್ಷುಲ್ಲಕ ವಿಚಾರಗಳಿಗೆ ಎಡೆಯಿಲ್ಲ. ಜನರು ಸಾಮಾನ್ಯವಾಗಿ ತಿಳಿದಿರುವಂತೆ ಆಂಜನೇಯನು ಶ್ರೀರಾಮನ ಭಂಟನಲ್ಲ. ಅವನು ಶ್ರೀರಾಮನಿಂದ ಆಗದಿರುವ ಮಹತ್ಕಾರ್ಯ ಗಳನ್ನು ಸಾಧಿಸಿ ಶ್ರೀರಾಮನ ಕೀರ್ತಿಯನ್ನು ಹೆಚ್ಚಿಸಿದ ಮಹಾನುಭಾವ.

ಆಂಜನೇಯನು ವ್ಯಾಕರಣಶಾಸ್ತ್ರಜ್ಞ, ಉದ್ದಾಮಪಂಡಿತ. ಅವನ ಬಾಯಲ್ಲಿ ಬರತಕ್ಕ ಮಾತುಗಳನ್ನು ನೋಡಿದರೆ ಎಲ್ಲರಿಗೂ ಪರಮಾಶ್ಚರ್ಯ ವುಂಟಾಗುತ್ತದೆ. ಅವನು ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಶ್ರೀರಾಮ ನಿಗೆ ಸಹಾಯಕನಾಗಿ ಜಯಗಳಿಸಿಕೊಟ್ಟಿದ್ದಾನೆ. ದುಷ್ಟರಾದ ರಾಕ್ಷಸರನ್ನು ಸಂಹಾರಮಾಡಿ ಜನರ ಕ್ಲೇಶಗಳನ್ನು ನಿವಾರಣೆ ಮಾಡಿದ್ದಾನೆ. ಅವನ ಅಧ್ಯಾತ್ಮ ಜ್ಞಾನವಂತೂ ಕೇವಲ ಸ್ತುತ್ಯವಾದದ್ದು. ಅಗಸ್ತ್ಯಾದಿ ಮಹರ್ಷಿ ಗಳೂ, ಹರಿಬ್ರಹ್ಮಾದಿ ದೇವತೆಗಳೂ ಈ ವಿಚಾರವನ್ನು ಮುಕ್ತಕಂಠದಿಂದ ಹೊಗಳಿರುತ್ತಾರೆ. ಇವನ ಗುರುನಿಷ್ಠೆ ಹಾಗೂ ಲಿಂಗನಿಷ್ಠೆಗಳು ಮುಗಿಲು ಮುಟ್ಟಿವೆ. 'ನ ಗುರೋರಧಿಕಂ' ಎಂಬ ವಚನವನ್ನು ಸತ್ಯವಾಗಿಸಿದ್ದಾನೆ. ಪರಮೇಶ್ವರನ ಆಣತಿಯನ್ನು ಸಹ ಧಿಕ್ಕರಿಸಿ ಲಿಂಗಪೂಜೆಗೆ ಹೆಚ್ಚು ಮಹತ್ವ ಕೊಟ್ಟಿದ್ದಾನೆ. ಪರಮೇಶ್ವರನಿಗಿಂತ ಗುರುವು ದೊಡ್ಡವನು ಎಂಬುದನ್ನು ಎತ್ತಿಹಿಡಿದಿದ್ದಾನೆ. ಇವನ ಭಕ್ತಿಗೆ ಮೆಚ್ಚಿ ತ್ರಿಮೂರ್ತಿಗಳೂ ಇವನಿಗೆ ದರ್ಶನ ನೀಡಿ ಚಿರಂಜೀವಿತ್ವ ಮೊದಲಾದ ಅನೇಕ ಶ್ರೇಷ್ಠ ವರಗಳನ್ನು ಅನುಗ್ರಹಿಸಿ ಕಾರ್ಥನನ್ನಾಗಿ ಮಾಡಿದ್ದಾರೆ. ಶ್ರೀಮನ್ನಾರಾಯಣನೇ ಗೌತಮರ ಆಶ್ರಮದಲ್ಲಿ ಆಂಜನೇಯನನ್ನು ಮುಕ್ತಕಂಠದಿಂದ ಹೊಗಳಿದ್ದಾನೆ.

ಈ ಗ್ರಂಥದಲ್ಲಿ ಪ್ರಾಸಂಗಿಕವಾಗಿ ವೀರಶೈವ ಧರ್ಮದ ತತ್ತ್ವಗಳು ನಿರೂಪಿಸಲ್ಪಟ್ಟಿರುವುದು ಒಂದು ವಿಶೇಷ ಸಂಗತಿ. ಅಲ್ಲದೆ, ತ್ರಿಮೂರ್ತಿಗಳ ಅಭೇದತ್ವವನ್ನು ಗ್ರಂಥಕರ್ತರು ಎತ್ತಿಹಿಡಿದಿದ್ದಾರೆ. ಒಟ್ಟಿನಲ್ಲಿ ಈ ಗ್ರಂಥವು

ಸರ್ವಾಂಗ ಸುಂದರವಾಗಿ ಎಲ್ಲ ದೈವಭಕ್ತರೂ, ಅದರಲ್ಲಿಯೂ ವೀರಶೈವರು, ಓದಲು ಯೋಗ್ಯವಾದುದಾಗಿದೆ. ಮುಖ್ಯವಾಗಿ ನಾಸ್ತಿಕತೆಯು ಹೆಚ್ಚು ತ್ತಿರುವ ಈ ಕಾಲದಲ್ಲಿ ಇಂತಹ ಧರ್ಮಗ್ರಂಥಗಳ ಅವಲೋಕನದಿಂದ ಜನರು ಹೆಚ್ಚುಹೆಚ್ಚಾಗಿ ತಮ್ಮ ಮನಸ್ಸಿನ ಕಶ್ಮಲವನ್ನು ಕಳೆದುಕೊಂಡು ದೈವಭಕ್ತಿ ಯನ್ನು ಬೆಳಸಿಕೊಳ್ಳಲು ಈ ಗ್ರಂಥವು ಪ್ರೇರಕವಾಗಿದೆಯೆಂದು ಹೇಳಲು ಅಡ್ಡಿಯಿಲ್ಲ. ಧರ್ಮಾಭಿಮಾನಿಗಳು ಈ ಗ್ರಂಥವನ್ನು ಓದಿ ಅದರಲ್ಲಿತಕ್ಕ ಕೆಲವಾರು ವಿಚಾರಗಳನ್ನಾದರೂ ಗ್ರಹಿಸಿ ಮನಸ್ಸಿಗೆ ತಂದುಕೊಂಡರೆ ಗ್ರಂಥ ಕರ್ತರ ಶ್ರಮಕ್ಕೆ ಪರಿಹಾರವು ದೊರಕುವುದೆಂದು ಕಳಕಳಿಯಿಂದ ಬಿನ್ನೈಸು ತ್ತೇನೆ. ಇಂತಹ ಅನೇಕ ಗ್ರಂಥಗಳು ಗ್ರಂಥಕರ್ತರ ಕೈಯಿಂದ ಹೊರಬಂದು ಜನರ ಮನಸ್ಸಿನಮೇಲೆ ಉತ್ಕೃಷ್ಟ ಪರಿಣಾಮವನ್ನು ಬೀರಲೆಂದೂ ಅದಕ್ಕಾಗಿ ಪರಮೇಶ್ವರನು ಅವರಿಗೆ ಹೆಚ್ಚಿನ ಆರೋಗ್ಯಭಾಗ್ಯವನ್ನು ಕೊಟ್ಟು ಕಾಪಾಡ ಲೆಂದೂ ಹಾರೈಸುತ್ತೇನೆ.

ಬೆಂಗಳೂರು,
ತಾ॥ 15-1-1980

ಶಿವಾದ್ವೈತವಾರಿಧಿ, ಪಂಡಿತರತ್ನಂ,
ಡಿ. ರೇಣುಕಾಚಾರ್ಯ.

ಕೃತಜ್ಞತೆ

ಈ ಗ್ರಂಥಕ್ಕೆ ಶುಭಕೋರಿ ಆಶೀರ್ವಾದವನ್ನು ಅನುಗ್ರಹಿಸಿರುವ ಶ್ರೀ ಜಗದ್ಗುರುಗಳಾದ ಶ್ರೀ ಶ್ರೀ ಪ್ರಸನ್ನರೇಣುಕ ವೀರಗಂಗಾಧರಶಿವಾಚಾರ್ಯ ಮಹಾಸ್ವಾಮಿಗಳವರಿಗೂ, ಶ್ರೀ ಶ್ರೀ ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರಿಗೂ, ಸೂಕ್ತವಿಮರ್ಶೆ ನೀಡಿರುವ ವಿದ್ವನ್ಮಣಿಗಳಿಗೂ, ಗ್ರಂಥರಚನಾ ಕಾರ್ಯದಲ್ಲಿ ಸಲಹೆ ಸಹಕಾರಗಳನ್ನಿತ್ತ ವಿ|| ಶ್ರೀ ರಾಜಶೇಖರಯ್ಯ, ಎಂ.ಎ., ಅವರಿಗೂ ಹಾಗೂ ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ವೇ|| ಪಂ|| ಶ್ರೀ ಬಿ. ಮಹಾದೇವಯ್ಯನವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

‘ಗುರುಕೃಪ’ ಇತಿ
ಬೆಂಗಳೂರು–20. ಎಂ. ಚಂದ್ರಶೇಖರ ಆರಾಧ್ಯ.
15–1–1980

ಅರ್ಪಣೆ

ಗ್ರಂಥಕರ್ತನ 64 ನೆಯ ಜನ್ಮದಿನದ ಸವಿನೆನಪಿಗಾಗಿ ವೀರಗೋತ್ರ ಪುರುಷನಾದ ಶ್ರೀವೀರೇಶನ ಪಾದಾರವಿಂದಗಳಲ್ಲಿ, ಈ ಪವಿತ್ರಗ್ರಂಥವನ್ನು ಭಕ್ತಿಪೂರ್ವಕವಾಗಿ ಅರ್ಪಿಸಲಾಗಿದೆ.

'ಗುರುಕೃಪ'
ಬೆಂಗಳೂರು-20.

ಸಾಹಿತ್ಯ ವಿಶಾರದ, ಧರ್ಮಸಾಹಿತ್ಯಭೂಷಣ,
ಎಂ. ಚಂದ್ರಶೇಖರ ಆರಾಧ್ಯ.

॥ ಓಂ ॥

॥ ಶ್ರೀವಿಘ್ನರಾಜಾಯ ತೇ ನಮಃ ॥

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀವೀರೇಶಷಡ್ಲೀಲಾದರ್ಶನ

ಪ್ರಾರ್ಥನೆ

ಶ್ರೀ ವಿಘ್ನತಮಭಾಸ್ಕರನೆ ಶ್ರೀ ಗೌರೀತನಯನೆ ।
ಸಿದ್ಧಿಬುದ್ಧಿಗಳೊಡೆಯ ಶ್ರೀಗಣಾಧೀಶ್ವರನೆ ।
ಕೃತಿಯಿದಕೆ ವಿಘ್ನವಿಲ್ಲದ ತೆರದಿ ಹರಸೆಂದು ।
ಪದಕೆರಗಿ ಬೇಡುವನು ಚಂದ್ರಶೇಖರನು ॥ ೧ ॥

ನುತಿಪೆನತಿಭಕ್ತಿಯಿಂ ಸರ್ವೇಶ ಶಂಭುವಂ ।
ನುತಿಪೆನತಿಭಕ್ತಿಯಿಂ ಸರ್ವಮಂಗಳೆಯಂ ।
ನುತಿಪೆನತಿಭಕ್ತಿಯಿಂ ವರ ಕಾರ್ತಿಕೇಯನಂ ।
ನುತಿಪೆ ಗುರು ರೇಣುಕಾದಿ ಪಂಚಾಚಾರ್ಯರಂ ।
ನುತಿಪೆನತಿಭಕ್ತಿಯಿಂ ವೀರ ಶ್ರೀವಿರೇಶನಂ ॥ ೨ ॥

ಕೃತಿ ಇದು ಶ್ರೀವೀರೇಶಷಡ್ದರ್ಶನಂ ।
ಪರಶಿವನ ಫಾಲಾಕ್ಷದಿಂದುದಿಸಿದಾ ವೀರೇಶ ।
ಲೋಕಕಂಟಕರಂ ನಿಗ್ರಹಿಸಿ, ಧರೆಯಂ ಪೊರೆದ ।
ಪರಮಪಾವನಮಪ್ಪ ಷಡ್ವಿಧಲೀಲೆಗಳಂ ।
ಶಾಸ್ತ್ರಾಧಾರದಿಂದೊರೆದಿಪ್ಪ ಪುಣ್ಯಕಥನಂ ॥ ೩ ॥

ಶಿವದ್ರೋಹಿ ದಕ್ಷ ನೆಗಳ್ದ ಶಿವರಹಿತದ– ।
ಧ್ವರಕೆ ಪಿತೃವಾತ್ಸಲ್ಯದಿಂ ಸತಿ ಪೋಗೆ ।
ಪ್ರೀತಿಸದೆ ಗರ್ವದಿಂ ದಕ್ಷ ಶಿವನಿಂದೆಯಂ ಗಯ್ಯೆ ।
ಕಡು ನೊಂದ ಸತಿ ಯೋಗಾಗ್ನಿಯಿಂ ದೇಹ ನೀಗಲ್ ।
ಶಿವನ ಫಾಲಾಕ್ಷದಿಂ ವೀರೇಶನವತರಿಸಿದಂ ॥ ೪ ॥

ರುದ್ರತೇಜದಿಂ ವೀರೇಶ ಅಸಂಖ್ಯ ರುದ್ರಗಣರಂ ।
ಸೃಜಿಸಿ ಭದ್ರಕಾಳಿಯಿಂ ಯಜ್ಞಶಾಲೆಯಂ ಪೊಕ್ಕು ।
ದಕ್ಷ-ಹರಿ-ವಿಧಿ-ಇಂದ್ರಾದಿಗಳ್ಗೆ ಹಿತ ಪೇಳ್ದೊಡಂ ।
ಮನ್ನಿಸದವರ್ ವೀರ-ಶಿವರಂ ನಿಂದಿಸಲ್
ರೌದ್ರದಿಂದಾ ದೇವರ್ಕಳಂ ಮುತ್ತಿದಂ ವೀರೇಶ ॥ ೫ ॥

ವೀರರುದ್ರಗಣಸಮೂಹದಿಂ ಹರಿ-ಬ್ರಹ್ಮ-ಇಂದ್ರ ।
ರವಿ-ಶಶಿ-ಧರ್ಮಾದಿ-ಸಕಲ ದೇವರ್ಕಳಂ ।
ಪಿಡಿದು ಕ್ರೌರ್ಯದಿಂ ಶಿಕ್ಷಿಸುತೆಲ್ಲರಂ ಘಾತಿಸಿ ।
ಯಜ್ಞಶಾಲೆಯಂ ಕ್ಷಣಾರ್ಧದೊಳ್ ನಾಶಗೈದು ।
ದುರುಳ ದಕ್ಷನ ಶಿರವಂ ತರಿದ ವೀರೇಶನು ॥ ೬ ॥

ನಂತರದೊಳ್ ದುರುಳ ರಕ್ಕಸನ ರಕ್ತಪಾನದಿಂ ।
ಮದಿಸಿದಾ ನೃಸಿಂಹಂ ಲೋಕಮಂ ಪೀಡಿಸುತಿರಲ್ ।
ವೀರೇಶನೈತಂದೊರೆದ ಹಿತೋಕ್ತಿಯಂ ಗ್ರಹಿಸದಾ ।
ಗರ್ವಿ ನರಹರಿಯಂ ಶರಭರೂಪದಿಂ ನಿಗ್ರಹಿಸಿ ।
ಭಕ್ತಾಳಿಯು ಪೊರೆದ ನಾಶರಹಿತ ವಿರೇಶಂ ॥ ೭ ॥

ಶಿವತೇಜಸ್ಕ ವಾಯುಪುತ್ರಂಗೆ ರಾಮ ಮೋಕ್ಷಮಂ ।
ನೀಡಲಸಮರ್ಥನಾಗೆ ಕೈಲಾಸಕ್ಕೆ ಮರಳಿದಾ ।
ಹನುಮನಂ ನಂದಿ ಹತ್ಯಾಕಾರಿ, ಭವಿ, ಎಂದು ತಡೆಯೆ ।
ಕಡುನೊಂದ ಮಾರುತಿ ನಾರದರ ಸಲಹೆಯಿಂ ।
ವೀರೇಶಂಗೆ ಶರಣಾಗಿ ಶೈವದೀಕ್ಷೆಯಂ ಬೇಡಲ್ ॥ ೮ ॥

ಕರುಣೆಯಿಂ ವೀರೇಶ ಮಾರುತಿಗೆ ವಿಧ್ಯುಕ್ತ- ।
ರೀತಿಯಿಂ ಶೈವದೀಕ್ಷೆಯಂ ಕರುಣಿಸುತ ವೇದಾ- ।
ಮ ಪ್ರೋಕ್ತವಹ ಶೈವಸಿದ್ಧಾಂತದಗ್ಗಳಿಕೆಯಂ ।
ಮೇಣ್ ಲಿಂಗಾಂಗಸಾಮರಸ್ಯದುಪದೇಶಗೈದು ।
ಶಿವಾನಂದದಿಂ ಮೋಕ್ಷ ಪಡೆಯೆಂದು ಹರಸಿದಂ

ವಿಧಿಯು ವರಬಲದಿ ಗರ್ವಿಸಿಪ ಕದಂಬಾಸುರಂ ।
ದೇವಮಾನವರಂ ಹಿಂಸಿಸುವುದಂ ಅರಿದು ಆ ವೀರೇಶ- ।
ನತ್ಯುಗ್ರರೂಪದಿಂ ದುರುಳ ಕದಂಬಾಸುರನಂ ।
ಘೋರಯುದ್ಧದೊಳ್ ಸಂಹರಿಸಿ ಲೋಕಂಗಳಂ ।
ಪೊರೆದಂ ಭುವನೈಕಶೂರ ವೀರೇಶಂ ॥ ೧೦ ॥

ಕಶ್ಯಪಮುನಿವೃಂದಮಂ ಪೀಡಿಸಿ ಭಕ್ಷಿಸಿರ್ದ ।
ಜ್ವಾಲವ್ಯಾಳಾಸುರನಂ ಮೇಣ್ ಕಾಕೋದರಾಸುರನಂ ।
ಭಯಂಕರಾಕಾರಂಗಳಂ ತಾಳ್ದು ಕಲಿವೀರೇಶಂ ।
ಘೋರ ಯುದ್ಧದೊಳ್ ದೈತ್ಯೇಂದ್ರರಂ ಸಂಹರಿಸಿ ।
ಮುನಿಕುಲವ ಪೊರೆದು ಹರಸಿದನಾ ಕರುಣಾಳು ॥ ೧೧ ॥

ಜುಮ್ಮಾಯನ ಪುತ್ರ ಮೇಘಾಸುರನು ಗರ್ವದಿಂ ।
ದೇವಮಾನವರ್ಕಳಂ ಕ್ರೌರ್ಯದಿಂ ಪೀಡಿಸುತಿರಲ್ ।
ಶಿವನಾಣತಿಯಿಂ ಭಯಂಕರಾಕಾರಂಗಳಂ ತಾಳ್ದು ।
ಘೋರ ಕಾಳಗದೊಳ್ ದೈತ್ಯನಂ ನಿಗ್ರಹಿಸಿ ।
ದೇವಮುನಿವೃಂದಮಂ ಪೊರೆದ ವೀರೇಶ್ವರಂ ॥ ೧೨ ॥

ಈ ರೌದ್ರಭದ್ರಾವತಾರಿ ವೀರಭದ್ರೇಶ್ವರನ ।
ಪರಮಪಾವನಮಪ್ಪೀ ಷಡ್‌ಲೀಲೆಗಳಂ ।
ಕಡುಭಕ್ತಿಭಾವದಿಂದೋದಿ ಕೇಳ್ವ ಭಕ್ತಾವಳಿಯು ।
ಮನೋಭೀಷ್ಟಂಗಳಂ ನಿತ್ಯದೊಳ್ ಕರುಣಿಪನು ।
ಹರಿಬ್ರಹ್ಮೇಂದ್ರಾದಿವಿನುತ ಗುರು ವೀರೇಶನು ॥ ೧೩ ॥

॥ ಶಿವಂ ಭೂಯಾತ್ ॥

ಪರಿವಿಡಿ

ಪುಟ 64, ಸಾಲು 7 ತವಾಸ್ರ್ಯೈಃ ಎಂಬುದನ್ನು ತವಾಸ್ತ್ರೈಃ ಎಂದು ಓದಿಕೊಳ್ಳಬೇಕು.

ಶುದ್ಧಾಶುದ್ಧ

ಪುಟ	ಪಂಗ್ತಿ	ಅಶುದ್ಧ	ಶುದ್ಧ
25	24	ಹೊಗಳಸ	ಹೊಗಳಿಸ
36	27	ಶುದ್ಧಾಚಾಮನ	ಶುದ್ಧಾಚಮನ
38	21	ಸತಿಯ	ಸತಿಯು
54	13	ಸುತ್ತಿದ್ದರೂ	ಸುತ್ತಿರಲು
87	17	ವಿಷಕಂಠಲೀಲೆ	ವೃಷಭಲೀಲೆ
94	23	ವೃಷಭಲೀಲೆ	ವಿಷಕಂಠಲೀಲೆ
120	13	ಲಂಕೆಯನ್ನು	ಸಮುದ್ರವನ್ನು
126	25	ಯಿಲ್ಲಕದೆ–ೃ	ಯಿಲ್ಲದೆ ಕೃ
131	9	ಆಗು	ಆಗ
134	10	ಕೇಳಲು	ಕೀಳಲು
137	1	ಬಾರದಿರುದಷ್ಟೇ	ಬರುವುದಷ್ಟೇ
146	21	ವೇ	ಮೋ
153	13	ನನ್ನನಂತರ	ಬಿಡಬೇಕು.
160	7	ಬೋ–	ಬೋಧಿತ
160	8	ಷ್ಕಿಲ	ನಿಷ್ಕಲ
162	1	ನ್ನಲ್ಲದೆ	ವನ್ನಲ್ಲದೆ
170	2	ನಮ್ಮ	ನನ್ನ
180	21	ಭಾರದ	ಭಾರತದ
180	21	ಸ್ಮರಿಸಜಹು	ಸ್ಮರಿಸಬಹುದು
181	14	ಹರ	ಹರಿ
182	2	ಶಿವ	ಶಿವಾ
182	10	ಭದಿಂದ	ಭವದಿಂದ
184	12	ಆರ್ಥಮಾಡಿ	ಅರ್ಥಮಾಡಿ
185	18	ರಾಮಾಣ	ರಾಮಾಯಣ
185	25	ಕುಡಿದ	ಕೂಡಿದ
195	24	ವೈರಿ	ವೈರ
201	24	ನನಗೆ	ನಿನಗೆ
211	21	ಕಬಂಧಾಸುರ	ಕದಂಬಾಸುರ
xii	15	ಮೇಡಾಸುರ	ಮೇಧ್ರಾಸುರ

ಶ್ರೀವೀರೇಶ ಷಡ್‌ಲೀಲಾದರ್ಶನ

ಪ್ರಥಮತರಂಗ

ದಕ್ಷಯಜ್ಞ

ವೀರೇಶನಾರು ?

ರುದ್ರಸ್ಯ ತನಯೋ ರೌದ್ರಶ್ಶೂಲಾಸಕ್ತಮಹಾಕರಃ ।
ವೀರಭದ್ರೋ ಮಹಾತೇಜಾ ಹಿಮಕುಂದೇಂದುಸನ್ನಿಭಃ ॥ (ಲಿಂ. ಪು)

ವೀರಭದ್ರನು ರುದ್ರನ ಮಗನು ಮಹಾ ತೇಜಸ್ವಿಯು, ಚಂದ್ರಿಕೆಯಂತೆಯೂ ಹಿಮದಂತೆಯೂ ಶುಭ್ರನು, ಶೂಲಧರ ಮತ್ತು ರೌದ್ರನಾಯಕ. ರುದ್ರನೇ ವೀರಭದ್ರ ಹಾಗೂ ವೀರಶೈವದ ಮೂಲ ಪುರುಷನು, ರುದ್ರ-ಶಿವನ ಕಿಡಿಗಣ್ಣಿನಿಂದ ಆವಿರ್ಭವಿಸಿದವನು. ರುದ್ರನು ಅಗ್ನಿತತ್ವದವನಾದುದರಿಂದಲೇ (ಶಿವನ ಪುತ್ರ) ವೀರಭದ್ರನು ಮಹಾ ತೇಜಸ್ವಿಯು. ಶಿವನ ಪಂಚವಿಂಶತಿ ಲೀಲೆಗಳಲ್ಲಿ ಹನ್ನೆರಡನೆಯ ಲೀಲೆಯೇ ವೀರಭದ್ರಲೀಲೆ. ವೀರಭದ್ರನು ವೀರನೂ ಹೌದು, ಭದ್ರ (ಮಂಗಳಕರ)ನೂ ಹೌದು. ರೌದ್ರರೂಪದಿಂದ ದುಷ್ಟರನ್ನು ನಿಗ್ರಹಿಸಿ, ಮಂಗಳರೂಪದಿಂದ ಶಿಷ್ಟರನ್ನು ಅನುಗ್ರಹಿಸುವನು.

ವೀರಭದ್ರನು ಮನು ಯುಗಕ್ಕೆ ಸೇರಿದವನೆಂದು ಪಂಡಿತರು ಅಭಿಪ್ರಾಯ ಪಟ್ಟರೆ, ತ್ರೇತಾಯುಗದವನೆಂದು ಚನ್ನಬಸವಣ್ಣನು ತನ್ನ ವಚನದಲ್ಲಿ ಹೇಳಿರುವನು. ದಕ್ಷಯಜ್ಞದಿಂದೀಚೆಗೆ ವೀರಭದ್ರನ ಪ್ರಭಾವವು ಹೆಚ್ಚು ಜನ ಜನಿತವಾಗಿದೆ. ಶಿವನ ಗುಪ್ತ ಹಾಗೂ ಊರ್ಧ್ವತೇಜಸ್ಸಿನ ಪ್ರತೀಕವೇ ವೀರಭದ್ರನು. ವೀರಭದ್ರನು ಮಹಾ ಕ್ರಾಂತಿಪುರುಷನೂ ವಿಭೂತಿ ಪುರುಷನೂ ಹೌದು. ಇವನು ಆದಿಶೈವ ಸಂಸ್ಕೃತಿಯ ಮೂಲಪುರುಷ ಮತ್ತು ಶಿವನ ನೆಚ್ಚಿನ ಮೆಚ್ಚಿನ ಭಂಟ.

ವಿಶ್ವಕ್ಕೆ ಹೆಚ್ಚಿನ ಸಂಕಟ ಪ್ರಾಪ್ತವಾಗಿ, ಹರಿಬ್ರಹ್ಮಾದಿಗಳೂ ಅದನ್ನು ಪರಿಹರಿಸಲು ಅಸಮರ್ಥರಾದಾಗ ಶಿವನು ವೀರಭದ್ರನನ್ನು ಲೋಕರಕ್ಷಣ,

ದುಷ್ಟನಿಗ್ರಹ ಕಾರ್ಯಕ್ಕೆ ನಿಯಮಿಸುವನು. ವೀರಭದ್ರನಿಗೆ ತನ್ನದೇ ಆದ ಶ್ರೇಷ್ಠಪರಂಪರೆ ಹಾಗೂ ಉಜ್ಜ್ವಲ ಇತಿಹಾಸಗಳಿವೆ.

ವೀರಭದ್ರನು, ರುದ್ರನಿಗೆ ಸಮನಾದ ಮಹಿಮಾತಿಶಯಗಳನ್ನೂ, ಕೀರ್ತಿಯನ್ನೂ ಹೊಂದಿರುವನು. ದೇವ, ದೈತ್ಯ, ಮಾನವರಲ್ಲಿ, ವೀರಭದ್ರನ ಶೌರ್ಯಕ್ಕೆ ಸರಿಸಮಾನರು ಯಾರೂ ಇಲ್ಲ. ಹರಿಬ್ರಹ್ಮಾದಿ ದೇವತೆಗಳೇ ವೀರ ಭದ್ರನ ಶೌರ್ಯದ ಮುಂದೆ ನಿಲ್ಲದಾದರು. ಶಿವನು ಒಮ್ಮೊಮ್ಮೆ ವೀರಭದ್ರನ ಶೌರ್ಯಪ್ರತಾಪಗಳನ್ನು ಕಂಡು ಅಚ್ಚರಿಪಟ್ಟು ಅವನನ್ನು ಪ್ರಶಂಸಿಸಿದ ಪ್ರಸಂಗ ಗಳೂ ಇಲ್ಲದಿಲ್ಲ.

ವೀರಭದ್ರನು ಶಿವನ ಫಾಲನೇತ್ರದಿಂದ ಉದ್ಭವಿಸಿದಾಗ ಸಾವಿರ ತಲೆ, ಮೂರುಸಾವಿರಕಣ್ಣು, ಎರಡುಸಾವಿರ ಕೈ ಮುಂತಾದ ಅವಯವಗಳಿಂದ ಪ್ರಕಾಶಿಸುತ್ತಿದ್ದನೆಂದು ಲಿಂಗಪುರಾಣ, ಸ್ಕಾಂದಪುರಾಣ ಶಿವಪುರಾಣ, ಶಂಕರಸಂಹಿತೆ ಮುಂತಾದ ಸನಾತನ ಧರ್ಮಗ್ರಂಥಗಳು ವರ್ಣಿಸಿವೆ. ಇದು ಅವನ ಸಹಜ ರೂಪವಲ್ಲ. ಈ ವಿವರಣೆಗಳು ಕೇವಲ ಅವನ ಶಕ್ತಿಸೂಚಕವಾದವುಗಳೇ ಹೊರತು, ಆಕಾರಸೂಚಕವಾದವುಗಳಲ್ಲ. ವೀರಭದ್ರನು ಪ್ರಳಯಕಾರಕ ರುದ್ರನ ಅಂಶವೆಂದಮೇಲೆ, ಅವನ ಶೌರ್ಯ ಸಾಮರ್ಥ್ಯಗಳನ್ನು ವರ್ಣಿಸುವ ಸಾಮರ್ಥ್ಯ ಯಾರಿಗುಂಟು? ಮತ್ತು ಯಾವ ಭಾಷೆಗುಂಟು? ನಿರಾಕಾರನೂ, ನಿರ್ಲಿಪ್ತನೂ, ಸಚ್ಚಿದಾನಂದ ಸ್ವರೂಪನೂ, ಆದ ಶಿವನನ್ನು, ವೀರಭದ್ರನು ತನ್ನ ಜ್ಞಾನದೃಷ್ಟಿಯಿಂದ ಅರಿತಿದ್ದನು. ಆದುದರಿಂದಲೇ ಅವನು ಶಿವನ ನೆಚ್ಚಿನವನಾದ. ವೀರಭದ್ರನು ಸರ್ವಸಮರ್ಥ. ಅಪಜಯ, ಭಯ ಇವುಗಳನ್ನು ಅವನು ಕೇಳಿದವನೇ ಅಲ್ಲ. ಅವನು ವೀರರ ವೀರ, ಧೀರರ ಧೀರ. ಹೀಗೆ ಒಂದೇ ವ್ಯಕ್ತಿಯಲ್ಲಿ ವೀರತ್ವವೂ, ಶಿವತ್ವವೂ ಏಕೀಕರಿಸಿರುವುದು ಅಸಂಭವ ಹಾಗೂ ವಿರಳ. ಇಂತಹ ಅದ್ಭುತ ಶಕ್ತಿದ್ವಯಗಳು ಇನ್ನಾರಲ್ಲಿಯೂ ಕಂಡುಬರುವುದಿಲ್ಲ. ಈ ಎರಡು ಶಕ್ತಿಗಳೂ ಶಿವದತ್ತವಾದವುಗಳು. ವೀರಭದ್ರನು, ವೇದಾಗಮ ಪುರಾಣೇತಿಹಾಸಗಳು ಪ್ರತಿಪಾದಿಸಿರುವಂತೆ ವೀರಶೈವ ಧರ್ಮಸ್ಥಾಪಕನೂ ಹಾಗೂ ಪ್ರಚಾರಕನೂ ಹೌದು. ಆದುದರಿಂದಲೇ ಇವನು ವೀರಶೈವದ ಪ್ರತೀಕ. ಇವನು ಇತರೆ ಧರ್ಮಗಳಲ್ಲಿ ಎದ್ದು ಕಾಣುತ್ತಿದ್ದ ದ್ವೈತಾದ್ವೈತ ಭೇದ ಭಾವಗಳನ್ನು

ತೊಡೆದು ಹಾಕಿ, ಅವುಗಳನ್ನು ಸಮನ್ವಯಗೊಳಿಸಿ, ಆದಿವೀರಶೈವದ ಪ್ರವರ್ತಕನೆಂದೆನಿಸಿದನು. ಭಕ್ತಿ, ಜ್ಞಾನ, ವೈರಾಗ್ಯಗಳ ಸಾಧನೆಗೆ, ಜಾತಿ, ಮತ, ಲೈಂಗಿಕಭೇದವಿಲ್ಲದೆ ಎಲ್ಲರಿಗೂ ಸಮಾನ ಅರ್ಹತೆಯುಂಟೆಂದು ಪ್ರಚಾರ ಮಾಡಿದ್ದಲ್ಲದೆ, ಕೃತಿಯಲ್ಲಿಯೂ ತೋರಿಸಿದನು. ಯುಗಯುಗಗಳ ಆದಿಯಲ್ಲಿ ಶ್ರೀ ಪಂಚಾಚಾರ್ಯರು, ವೀರಶೈವವನ್ನು ಸ್ಥಾಪಿಸಿ ಪ್ರಚಾರಗೊಳಿಸಿ ಅನಾದಿವೀರಶೈವ ಸಂಸ್ಥಾಪಕರೆಂದು ಕೀರ್ತಿಪಡೆದರೆ, ವೀರಭದ್ರನು, ಆದಿ ವೀರಶೈವ ಸಂಸ್ಥಾಪಕನೆಂದು ಪ್ರಸಿದ್ಧಿ ಪಡೆದಿರುವನು.

ಪಂಚಾಚಾರ್ಯರ ಹಾಗೂ ಅವರ ಪರಂಪರೆಯವರ ಹೆಸರುಗಳಲ್ಲಿ, ವೀರಭದ್ರನ ಹೆಸರೂ ಸೇರಿಸಲ್ಪಟ್ಟಿದೆ. ಇದರಿಂದ ವೀರಭದ್ರನು, ಪ್ರಾಚೀನ ವೀರಶೈವಾಚಾರ್ಯರಲ್ಲಿ ಒಬ್ಬನೆಂದೂ, ವೀರಮಾಹೇಶ್ವರನೆಂದೂ, ಹೇಳಲಾಗಿದೆ. ಆದುದರಿಂದಲೇ ಶೈವಸಿದ್ಧಾಂತಕ್ಕೆ ವೀರಶೈವಸಿದ್ಧಾಂತವೆಂದು ಕ್ರಮೇಣ ಹೆಸರಾಗಿದೆಯೆಂದು ಕೆಲಪಂಡಿತರ ಅಭಿಪ್ರಾಯ. ಅಲ್ಲದೆ ವೀರಭದ್ರನು ರುದ್ರ ಗಣರಿಗೆ ಪ್ರಮುಖನೆಂಬುದೂ ಗಮನಾರ್ಹ. ಈ ರುದ್ರಗಣದ ಸಹಾಯದಿಂದ ವೀರಭದ್ರನು, ಶೈವ ಸಂಸ್ಕೃತಿಯನ್ನು, ಆದಿಕಾಲದಲ್ಲಿಯೇ ಭೂಲೋಕದಲ್ಲಿ ಸಂಸ್ಥಾಪಿಸಿ, ಪ್ರಚಾರಮಾಡಿದವನೆಂದು ಖ್ಯಾತಿ ಪಡೆದಿರುವನು. ಇವನು ಈ ಪಂಚಗುರುಪೀಠಗಳಿಗೂ ಮಾನ್ಯನು ಮತ್ತು ಪೂಜ್ಯನು. ಅಲ್ಲದೆ ಈ ಪಂಚ ಪೀಠಗಳಲ್ಲೊಂದಾದ ರಂಭಾಪುರೀ ಪೀಠಕ್ಕೆ ಗೋತ್ರಪುರುಷನಾದುದರಿಂದಲೇ ಆ ಗೋತ್ರಕ್ಕೆ ವೀರಗೋತ್ರವೆಂದು ಹೆಸರಾಗಿದೆ. ವೀರಭದ್ರನು ಸಾಮಾನ್ಯ ವಾಗಿ ಎಲ್ಲಾ ವೀರಶೈವರಿಗೂ ಗುರುವಾದರೆ, ವೀರಗೋತ್ರದ ವೀರಮಾಹೇಶ್ವ ರರಿಗೆ ವಿಶೇಷವಾಗಿ ಕುಲದೈವವಾಗಿರುವುದು ಗಮನಾರ್ಹ. "ವೀರಭದ್ರ ಇತಿ ಖ್ಯಾತಂ ದೇವದೇವಂ ಜಗದ್ಗುರುಂ" ಎಂಬ ಕೂರ್ಮಪುರಾಣೋಕ್ತಿಯು ಮೇಲಿನ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ವೀರಶೈವದಲ್ಲಿ ವೀರಭದ್ರನಿಗೆ ಮಹೋನ್ನತ ಸ್ಥಾನವಿದೆ ಮತ್ತು ಶ್ರೇಷ್ಠ ವ್ಯಕ್ತಿತ್ವವಿದೆ. ಸ್ಕಾಂದಪುರಾಣದಲ್ಲಿ ಉಲ್ಲೇಖಿಸಿರುವಂತೆ, ಶಿವ, ವೀರಭದ್ರ, ರುದ್ರ, ಸ್ಕಂದ, ನಂದಿ ಮುಂತಾದವರೇ ವೀರಶೈವದ ಆದಿ ಗುರುಗಳೆಂದೂ, ಸಂಸ್ಥಾಪಕರೆಂದೂ, ಸ್ಪಷ್ಟವಾಗುವುದು. ಅಲ್ಲದೆ, ರುದ್ರಬೀಜೋತ್ಪನ್ನನೂ, ಶಿವತೇಜೋರೂಪಿಯೂ ಆದ ಹನುಮಂತ ನಿಗೆ, ವೀರಭದ್ರನು ಶಿವದೀಕ್ಷೆ ನೀಡಿ, ಲಿಂಗಧಾರಣೆ ಮಾಡಿ, ವೀರಶೈವ

ಸಿದ್ಧಾಂತವನ್ನು ಉಪದೇಶಿಸಿದನೆಂದು ಸ್ಕಾಂದಪುರಾಣ, ಮಹಾಭಾರತ, ರಾಮಾಯಣ, ಮುಂತಾದ ಪವಿತ್ರ ಸನಾತನ ಗ್ರಂಥಗಳಿಂದ ದೃಢಪಡುವುದು. ಅಂದಮೇಲೆ, ಶಿವತೇಜಸ್ಕನಾದ ಹನುಮಂತನಿಗೆ ಲಿಂಗಧಾರಣ ಮಾಡುವ ಸಾಮರ್ಥ್ಯ, ವೀರಭದ್ರನಂಥಾ ರುದ್ರಾಂಶ ಸಂಭೂತನಿಗಲ್ಲದೆ ಬೇರೆಯವರಿಗೆ ಹೇಗೆ ಬರಬೇಕು?

ವೇದ ಪ್ರಾಚೀನವಾದ ವೀರಶೈವ ಧರ್ಮದಲ್ಲಿ ಈ ವೀರಭದ್ರನಿಗೆ ವಿಶೇಷ ಸ್ಥಾನವಿದೆ. ವೀರಭದ್ರನ ಲೀಲೆಯು ಭರತಖಂಡದ ವಿವಿಧ ಭಾಷೆಗಳಲ್ಲಿ ಪ್ರಚಾರವಾಗಿರುವುದು ಗಮನಾರ್ಹ. ಕರ್ನಾಟಕದಲ್ಲಂತೂ, ವೀರಭದ್ರನ ಪ್ರತಿಷ್ಠಾಪನೆ, ದೇಗುಲ ನಿರ್ಮಾಣ, ಆರಾಧನೆ, ಉತ್ಸವಗಳು ಶತಶತಮಾನಗಳಿಂದಲೂ, ವ್ಯಾಪಕವಾಗಿ ಆಚರಿಸಲ್ಪಡುತ್ತಿವೆ. ಸರ್ವೇಸಾಧಾರಣವಾಗಿ ಕರ್ನಾಟಕದ ಅನೇಕ ಊರುಗಳಲ್ಲಿ ವೀರಭದ್ರನ ದೇವಾಲಯಗಳಿರುವುದು ಗಮನಾರ್ಹ. ವೀರಭದ್ರ ದೇವಾಲಯಗಳಿರುವ ಕ್ಷೇತ್ರಗಳ ಸಂಕ್ಷಿಪ್ತ ಪಟ್ಟಿಯನ್ನು ಅನುಬಂಧದಲ್ಲಿ ಕೊಟ್ಟಿದೆ.

ಮತ್ತೊಂದು ವಿಶೇಷವೇನೆಂದರೆ, ವೀರಭದ್ರನ ದೇವಾಲಯವಿರುವ ಊರುಗಳಲ್ಲೆಲ್ಲಾ ವರ್ಷಕ್ಕೊಮ್ಮೆ ವೀರಭದ್ರನ ಉತ್ಸವವು ನಡೆಯುವುದು. ಈ ಉತ್ಸವಗಳಲ್ಲೆಲ್ಲಾ ಮುಖ್ಯವಾದುದು "ಅಗ್ನಿಕುಂಡೋತ್ಸವ". ಇದು ದಕ್ಷಯಜ್ಞದ ಪ್ರತೀಕವಾಗಿದೆ. ಅಗ್ನಿಕುಂಡವನ್ನು ವೇದೋಕ್ತವಾಗಿ ನಿರ್ಮಿಸಿ, ಪೂಜಿಸಿ, ಒಬ್ಬನು ವೀರಭದ್ರನ ಹಲಿಗೆಯನ್ನು ಹಿಡಿದು ವೀರಘಾಸಿಯನ್ನು ಧರಿಸಿ, ಕೈಯ್ಯಲ್ಲಿ ವೀರಖಡ್ಗವನ್ನು ಝಳಪಿಸುತ್ತಾ, ವೀರಾವೇಶದಿಂದ, ವೀರಭದ್ರನ ಪ್ರತಾಪಗಳನ್ನೊಳಗೊಂಡ "ವೀರಶ್ರೀಯನ್ನು" ಉದ್ಗರಿಸುತ್ತಾ ಆ ಅಗ್ನಿಕುಂಡದ ಬಳಿಗೆ ಬರುವನು. ಅಲ್ಲಿ ಯಜ್ಞಕರ್ತನಾದ ದಕ್ಷನ ಪಾತ್ರ ವಹಿಸಿರುವ ಮತ್ತೊಬ್ಬ ವ್ಯಕ್ತಿಯು ವೀರಭದ್ರನನ್ನು ವಿರೋಧಿಸುತ್ತಾ ಶಿವನಿಗೆ ಹವಿರ್ಭಾಗವನ್ನು ಕೊಡಲು ನಿರಾಕರಿಸುವನು. ಆಗ ವೀರಭದ್ರನು ವೀರಾವೇಶದಿಂದ ಅಗ್ನಿಕುಂಡಕ್ಕೆ ಧುಮ್ಮಿಕ್ಕಿ ಯಜ್ಞವನ್ನು ನಾಶಮಾಡಿ, ದಕ್ಷನನ್ನು ಸಂಹರಿಸಲು ಪ್ರಯತ್ನ ಪಡುವನು. ಆಗ ಜನರು ವೀರಭದ್ರನಿಗೆ ಪೂಜೆಮಾಡಿ ಸಮಾಧಾನ ಮಾಡುವರು. ಅಲ್ಲಿಗೆ ಅಗ್ನಿಕೊಂಡೋತ್ಸವವು ಸಮಾಪ್ತಿಯಾಗುವುದು.

ಇಂಥಾ ವೀರಶ್ರೀಯೂ, ವೀರಾಧಿವೀರನೂ ವೀರಶಿವನೂ, ವೀರಕ್ರಾಂತಿ ಪುರುಷನೂ, ವೀರಶಕ್ತಿಯೂ, ವೀರಗೋತ್ರ ಪುರುಷನೂ, ಆದ ವೀರಭದ್ರನ ಬಗ್ಗೆ ಸಾಕಷ್ಟು ಸಂಶೋಧನೆ ಮತ್ತು ಪ್ರಚಾರಗಳು ನಡೆಯಬೇಕಾಗಿದೆ. ಇದು ಅಗತ್ಯ ಮತ್ತು ಅನಿವಾರ್ಯವೆಂದು ಕಳಕಳಿಯಿಂದ ಮನವಿ ಮಾಡ ಬಯಸುತ್ತೇನೆ.

ಸತಿಯಾರು ?

ಬ್ರಹ್ಮನು, ಶಿವಾನುಗ್ರಹದಿಂದ, ನಿತ್ಯವೂ, ಉತ್ಕೃಷ್ಟವೂ ಆದ ಸೃಷ್ಟಿ ಮಾಡುವ ಶಕ್ತಿಯನ್ನು ಪಡೆದು, ನಂತರ ತನ್ನ ಶರೀರದಿಂದಲೇ 'ಶತರೂಪಾ' ಎಂಬ ಸ್ತ್ರೀಯನ್ನು ಸೃಷ್ಟಿಸಿದನು. ನಂತರ ತನ್ನ ಉಳಿದರ್ಧಭಾಗದಿಂದ 'ವಿರಾಜ' ನೆಂಬ ಪುರುಷನನ್ನು ಸೃಷ್ಟಿಸಿದನು. ಇವನೇ ಸ್ವಯಂಭುಮನುವು. ಶತರೂಪಾದೇವಿಯು ಘೋರ ತಪಸ್ಸನ್ನು ಮಾಡಿ, ಅತಿ ತೇಜೋ ಶಾಲಿ ಯಾದ ಮನುವನ್ನು ಗಂಡನನ್ನಾಗಿ ಪಡೆದಳು.

ಸಾ ದೇವೀ ಶತರೂಪಾ ತು ತಪಃ ಕೃತ್ವಾ ಸುದುಶ್ಚರಂ |
ಭರ್ತಾರಂ ದೀಪ್ತಯಶಸಂ ಮನುಮೇವಾನ್ವಪದ್ಯತ || (ಶಿ.ಪು. 17–4)

ಅವಳಿಗೆ ಇಬ್ಬರು ಪುತ್ರರೂ, ಇಬ್ಬರು ಪುತ್ರಿಯರೂ, (ಅಕುತಿ, ಪ್ರಸೂತಿ) ಜನಿಸಿದರು. ಬ್ರಹ್ಮನ ಮಾನಸ ಪುತ್ರನೂ, ನವಬ್ರಹ್ಮರಲ್ಲಿ ಒಬ್ಬನೂ, ಪ್ರಜಾಪತಿಯೂ ಆದ ದಕ್ಷಬ್ರಹ್ಮನಿಗೆ ಪ್ರಸೂತಿಯೊಡನೆ ವಿವಾಹ ವಾಯಿತು (ಆದಿತ್ಯ ಪುರಾಣ ಮಹಾಭಾರತ ಆದಿಪರ್ವ). ದಕ್ಷನಿಗೆ ಅರವತ್ತು ಜನ ಪುತ್ರಿಯರು ಜನಿಸಿದರು. ನಂತರ ದಕ್ಷನು ಶಿವನನ್ನು ಕುರಿತು ಪುತ್ರಾರ್ಥಿ ಯಾಗಿ ತಪಸ್ಸು ಮಾಡಿದನು. ಅವನ ತಪಸ್ಸಿಗೆ ಪ್ರಸನ್ನನಾದ ಶಿವನು ತನ್ನ ತ್ರಿಶೂಲದ ಶಕ್ತಿಯಲ್ಲಿ ಒಂದಂಶವನ್ನು ಅನುಗ್ರಹಿಸಿದನು. ಇದರ ಪ್ರಭಾವದಿಂದ ದಕ್ಷನಿಗೆ ಅರವತ್ತೊಂದನೆಯ ಮಗಳಾಗಿ ಜನಿಸಿದವಳೇ ಸತೀ ಅಥವಾ ದಾಕ್ಷಾಯಣೀ.

ದಕ್ಷನು ಪ್ರಜಾಪತಿಯಾದುದರಿಂದ ತನ್ನ ಅರವತ್ತು ಮಕ್ಕಳನ್ನು ಶ್ರೇಷ್ಠ ರಾದ ದೇವತೆಗಳಿಗೆ ಕೊಟ್ಟು ವಿವಾಹ ಮಾಡಿದನು. ನಂತರ ಸತ್ವಮಯಳೂ, ಸಾಕ್ಷಾತ್ ಪ್ರಕೃತಿ ಸ್ವರೂಪಳೂ, ತ್ರಿಶೂಲಾಂಶಳೂ ಆದ ಸತೀ ದೇವಿಯನ್ನು ರುದ್ರನಿಗೆ ಕೊಟ್ಟು ವಿವಾಹ ಮಾಡಿದನು.

"ಏವಂ ಶಿವಾ ಸತೀ ಭೂತ್ವಾ ಶಂಕರೇಣ ವಿವಾಹಿತಾ ।
ಪಿತುರ್ಯಜ್ಞೇ ತನುಂ ತ್ಯಕ್ತ್ವಾ .... ॥

ಸತಿಯು ಪ್ರಕೃತಿ ಸ್ವರೂಪಳಾದುದರಿಂದಲೂ, ಜಗತ್ತಿನ ಸೃಷ್ಟಿಸ್ಥಿ ಲಯಕರ್ತನಾದವನೂ, ಅವಿನಾಶಿಯೂ, ಆದ ಶಿವನ ಅರ್ಧಾಂಗಿಯಾದ್ದ ರಿಂದಲೂ, ಜಗನ್ಮಾತೆಯಾದುದರಿಂದಲೂ, ಪರಮ ಪೂಜ್ಯಳೂ, ಸತೀಶಿರೋ ಮಣಿಯೂ ಆಗಿ ಸಕಲದೇವತೆಗಳಿಂದಲೂ, ಋಷಿಶ್ರೇಷ್ಠರಿಂದಲೂ, ಪೂಜಿ ಲ್ಪಟ್ಟವಳಾಗಿದ್ದಳು. ಇಂಥಾ ಜಗನ್ಮಾತೆಯಾದ ಸತಿಯು, ತನ್ನ ಭಕ್ತ ಅಭೀಷ್ಟಗಳನ್ನು ಅನುಗ್ರಹಿಸುತ್ತಾ ವಿರಾಜಮಾನಳಾಗಿದ್ದಳು.

ವಚನಾದ್ವೋ ಮಹಾಭಾಗಾಃ ಪ್ರಣಮ್ಯೇನಾಂ ತಥಾಭವಾಂ ।
ಸಾ ಭಗಾಖ್ಯಾ ಜಗದ್ಧಾತ್ರೀ ಲಿಂಗಮೂರ್ತಿಸ್ತ್ರಿವೇದಿಕಾ ॥
ಲಿಂಗಂತು ಭಗವಾನ್ ದ್ವಾಭ್ಯಾಂ ಜಗತ್ಸೃಷ್ಟಿರ್ದ್ವಿಜೋತ್ತಮಾಃ
ಲಿಂಗಮೂರ್ತಿಃ ಶಿವೋ ಜ್ಯೋತಿಃ ತಮಸಶ್ಚೋಪರಿಸ್ಥಿತಂ ॥

(ಲಿಂ.ಪು. 99–6,7

ಭಗಾ ಎಂದು ಸಂಜ್ಞೆಯುಳ್ಳ, ಜಗತ್ಕಾರಣಳಾದ ಮಹಾದೇವಿಯು ಲಿಂಗರೂಪನಾದ ಶಿವನ ಪ್ರಕೃತಿಸ್ವರೂಪಳು, ಅಂದರೆ ಸತ್ವ, ರಜ, ತಮೋ ಗುಣಗಳಿಗೆ ಅಧಿಷ್ಠಾತ್ರಿಯಾದ ಮಾಯೆಯೆಂದು ಭಾವ. ಶಿವನು ಲಿಂ ಸ್ವರೂಪನು, ಅವನು ಯಾವಾಗಲೂ, ಸೃಷ್ಟಿಕಾರ್ಯದಲ್ಲಿ, ಭಗ ಎಂ ಹೆಸರುಳ್ಳ ಮಾಯೆಯೊಡನೆ, ಕೂಡಿರುವನು. ಶಕ್ತಿಇಲ್ಲದೆ ಶಿವನಿಲ್ಲ, ಶಿವನಿಲ್ಲದೆ ಶಕ್ತಿಯಿಲ್ಲ.

"ಆದಿತ್ಯವರ್ಣಂ ತಮಸಃ ಪರಸ್ತಾತ್" ಎಂಬ ವೇದವಾಕ್ಯವೂ, ಮೇಲಿನ ಅಭಿಪ್ರಾಯವನ್ನೇ ಸಮರ್ಥಿಸುವುದು.

ಶಿವಧರ್ಮವು ಶಿವ-ಶಕ್ತಿತತ್ತ್ವ ವಿಚಾರಗಳಿಂದ ಕೂಡಿರುವುದರಿಂದಲೇ ಈ ಸಿದ್ಧಾಂತವನ್ನು ಶಕ್ತಿವಿಶಿಷ್ಟಾದ್ವೈತವೆಂದು ಕರೆಯಲಾಗಿದೆ. "ತಸ್ಯೈವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಃ ಶ್ರದ್ಧಾ ಪತ್ನೀ" ಎಂಬ ವೇದೋಕ್ತಿ ಯಂತೆ ಶ್ರದ್ಧಾ ಎಂಬ ಶಿವಶಕ್ತಿಯೇ ಮುಂದೆ ದಕ್ಷನ ಮಗಳಾಗಿ, ಅವತರಿಸಿದಳು ಮತ್ತು ಶಿವನನ್ನು ವಿವಾಹವಾದಳು.

ದಕ್ಷನು ಮುಂದೆ, ನಾರದನ ಶಾಪದ ಫಲವಾಗಿ, ತಾನು ಆಚರಿಸಿದ ಯಜ್ಞದಲ್ಲಿ ಪರಮೇಶ್ವರನನ್ನು ಯಜ್ಞಕ್ಕೆ ಆಹ್ವಾನಿಸದೆ, ಮನಸಾ ನಿಂದಿಸು ವನು. ಸತಿಯು ಆಹ್ವಾನವಿಲ್ಲದೆಯೇ ಪಿತೃವಾತ್ಸಲ್ಯದಿಂದ ಯಜ್ಞಕ್ಕೆ ಹೋಗುವಳು. ಆದರೆ ದಕ್ಷನು ಸತಿಯನ್ನು ಮಾತನಾಡಿಸದೆ ಶಿವನನ್ನು ಹೀನಾವಮಾನವಾದ ವಾಕ್ಯಗಳಿಂದ ನಿಂದಿಸುವನು. ಸತಿಯು ಶಿವನಿಂದೆಯನ್ನು ಸೈರಿಸದೆ ದಕ್ಷನನ್ನು ಶಪಿಸಿ, ಯೋಗಾಗ್ನಿಯಲ್ಲಿ ತನ್ನ ದೇಹವನ್ನು ತ್ಯಜಿಸುವಳು. ನಂತರ ಪುತ್ರಾರ್ಥಿಯಾಗಿ ತಪಸ್ಸನ್ನಾಚರಿಸುತ್ತಿದ್ದ ಮಹಾಶಿವಭಕ್ತನಾದ ಪರ್ವತರಾಜನ ಮಗಳಾಗಿ ಅವತರಿಸುವಳು.

ಅನಾದೃತ್ಯ ಕೃತಿಂ ಜ್ಞಾತ್ವಾ ಸತೀ ದಕ್ಷೇಣ ತತ್ ಕ್ಷಣಾತ್ ।
ಭಸ್ಮೀಕೃತ್ವಾಽಽತ್ಮನೋ ದೇಹಂ ಯೋಗಮಾರ್ಗೇಣ ಸಾ ಪುನಃ ॥
(ಲಿಂ.ಪು. 99–16)
ಬಭೂವ ಪಾರ್ವತೀ ದೇವೀ ತಪಸಾ ಚ ಗಿರೇಃ ಪ್ರಭೋಃ ।
ಜ್ಞಾತ್ವೈತದ್ಭಗವಾನ್ಭರ್ಗೋ ದದಾಹ ರುಷಿತಃ ಪ್ರಭುಃ (99–17)

ಶಿವ–ದಕ್ಷರ ವಿರೋಧ :

ಕೈಲಾಸಪರ್ವತದಲ್ಲಿ ಸೃಷ್ಟಿ–ಸ್ಥಿತಿಲಯಗಳಿಗೆ ಕಾರಣನೂ, ತ್ರಿಮೂರ್ತಿ ಗಳಿಂದ ಭಿನ್ನನೂ, ಸಕಲ ಲೋಕಕ್ಕೂ ಆರಾಧ್ಯ ದೈವವೂ, ಆದ ಪರಮೇಶ್ವ ರನು ರತ್ನಖಚಿತವಾದ ಸಿಂಹಾಸನದಲ್ಲಿ ಜಗಜ್ಜನನಿದಾಕ್ಷಾಯಣೀ ದೇವಿ ಯೊಡನೆ ಒಡ್ಡೋಲಗ ನಡೆಸುತ್ತಿದ್ದನು. ಆ ಸಮಯದಲ್ಲಿ, ಹರಿವಿಧಿ ಮೊದ ಲಾದ ಸಕಲದೇವತೆಗಳೂ, ಬ್ರಹ್ಮರ್ಷಿಗಳೂ ಶಿವದರ್ಶನಕ್ಕಾಗಿ ಅಲ್ಲಿಗೆ ಬಂದು ಶಿವ–ಶಿವೆಯರಿಗೆ ಭಕ್ತಿಯಿಂದ ವಂದಿಸಿ, ಶಿವನಾಣತಿಯಂತೆ ಉಚಿತಾಸನಗಳಲ್ಲಿ ಕುಳಿತರು.

ಅದೇ ಸಮಯಕ್ಕೆ ದಕ್ಷಬ್ರಹ್ಮನು ಶಿವಸಭೆಗೆ ಬಂದು ತಾನು ಶಿವನ ಮಾವನೂ, ಪ್ರಜಾಪತಿಯೂ ಆಗಿರುವೆನೆಂಬ ಗರ್ವದಿಂದ, ಸಭಾಮರ್ಯಾ ದೆಯನ್ನೂ ಗಮನಿಸದೆ, ಶಿವ–ಶಿವೆಯರನ್ನೂ ವಂದಿಸದೆ, ತನ್ನ ಸ್ಥಾನದಲ್ಲಿ ಕುಳಿತನು. ದಕ್ಷನ ದುರಭಿಮಾನವನ್ನು ಗಮನಿಸಿದ ಶಂಕರನು ದಕ್ಷನನ್ನು ನೋಡಿಯೂ ನೋಡದವನಂತೆ ಉದಾಸೀನ ಭಾವದಿಂದಿದ್ದನು. ತನ್ನ

ತಂದೆಯ ಅವಿಧೇಯ ವರ್ತನೆಗೆ ನಾಚಿದ ಸತಿಯೂ ತನ್ನ ಸತೀ ಧರ್ಮಕ್ಕನು ಸಾರವಾಗಿ ತಂದೆಯನ್ನು ಗೌರವಿಸದೆ ಉದಾಸೀನ ಭಾವದಿಂದಿದ್ದಳು.

ಶಿವನ ಸಭೆಯಲ್ಲಿ ತನಗೆ ಸನ್ಮಾನದೊರೆಯದಿದ್ದರಿಂದ ಮೊದಲೇ ಕೃದ್ಧನಾದ ದಕ್ಷನು ತನ್ನ ಮಗಳೂ ತನ್ನನ್ನು ಗೌರವಿಸದಿದ್ದುದನ್ನು ನೋಡಿ, ಕೋಪೋದ್ರೇಕದಿಂದ ಕಂಪಿಸುವ ಕಂಠದಿಂದ ಸಭಿಕರನ್ನುದ್ದೇಶಿಸಿ, ಎಲೈ ದೇವತೆಗಳಿರಾ ! ಈ ಶಿವನು ನನ್ನ ಅಳಿಯನು ; ನನಗಿಂತಾ ಎಲ್ಲಾ ವಿಧಗಳಲ್ಲಿಯೂ ಅಲ್ಪನು. ಆದಾಗ್ಯೂ ನಾನು ಸಭೆಗೆ ಬಂದರೂ ಕಾಣದಂತೆ ದುರಹಂಕಾರದಿಂದ ನನ್ನನ್ನು ಗೌರವಿಸದೆ ಈ ಸಭೆಯಲ್ಲಿ ಅಪಮಾನ ಮಾಡಿರುವನು. ಇಂಥಾ ಗರ್ವಿಗೆ ನನ್ನ ಮಗಳನ್ನು ಕೊಡಬಾರದಾಗಿತ್ತು. ಇಂಥವನ ಸಹವಾಸದಿಂದ ನನ್ನ ಪ್ರೇಮದ ಪುತ್ರಿ ಸತಿಯೂ, ನನ್ನನ್ನು ಕಣ್ಣೆತ್ತಿ ಸಹಾ ನೋಡದೆ ಉಪೇಕ್ಷಿಸಿದಳು. ಇಂಥಹ ಸ್ಥಳಕ್ಕೆ ನಾನು ಬಂದಿದ್ದು ಅಪರಾಧವಾಯಿತು. ಇಂಥಾ ಸ್ಥಳಕ್ಕೆ ಆತ್ಮಗೌರವವಿಲ್ಲದ ಅಲ್ಪರು ಮಾತ್ರಾ ಬರತಕ್ಕದ್ದು. ಈ ಸ್ಮಶಾನ ವಾಸಿಯೂದ ಶಿವನು ದೇವಸಭೆಗಳಿಗೆ ಬರಲು ಅರ್ಹನಲ್ಲ. ಆದುದರಿಂದ ಇಂದು ಮೊದಲ್ಗೊಂಡು ದೇವಸಭೆಗಳಲ್ಲಿ ಈ ಶಿವನಿಗೆ ಅಗ್ರಸ್ಥಾನ ಕೊಡಲಾಗದು. ಅಲ್ಲದೆ ಇವನಿಗೆ ಯಜ್ಞಭಾಗವನ್ನೂ (ಹವಿಸ್ಸು) ಕೂಡಲಾಗದು, ಅದಕ್ಕೆ ಇವನು ಎಷ್ಟು ಮಾತ್ರವೂ ಅರ್ಹನಲ್ಲ ಎಂದು ನುಡಿದನು. ತನ್ನ ನಿಂದೆಯನ್ನೂ ದಕ್ಷನ ಗರ್ವವನ್ನೂ ಗಮನಿಸಿದ ಶಿವನು, ಸುಮ್ಮನೆ ಗಂಭೀರನಾಗಿದ್ದನು. ಶಿವನಿಂದೆಯನ್ನು ಕೇಳಿದ ನಂದಿಯು ಕೋಪದಿಂದ ಎಲೈ ! ಮದಾಂಧನಾದದಕ್ಷನೆ ! ನಿನಗೆ ಶಂಕರನು ಗೌರವಸಲ್ಲಿಸಲಿಲ್ಲವೆಂದು ಅಸಭ್ಯ ರೀತಿಯಿಂದ ನೀನು ವರ್ತಿಸಿದ್ದಲ್ಲದೆ, ತುಂಬಿದ ಸಭೆಯಲ್ಲಿ ಸರ್ವೇಶ್ವರನಾದ ಶಿವನನ್ನು ನಿಂದಿಸಿರುವೆ. ನಿನಗೆ ಅಧ್ಯಾತ್ಮ ಜ್ಞಾನವೇ ಇರುವುದಿಲ್ಲ. ನಿನ್ನ ಶರೀರವೇ ನೀನೆಂದು ಭ್ರಮಿಸಿರುವೆ. ಈ ಪಂಚಭೂತಾತ್ಮಕ ಶರೀರವು ತತ್ವಜ್ಞಾನ ಪಡೆಯಲು ಕೇವಲ ಕಾರಣ ಮಾತ್ರವಾದುದು. ಈ ಶರೀರದಲ್ಲಿ ಜೀವಾತ್ಮನಿರುವನು. ಆ ಜೀವಾತ್ಮನಲ್ಲಿ ಸರ್ವೇಶ್ವರನಾದ ಶಂಕರನು ಯಾರಿಗೂ ಅರಿಯದಂತೆ ನೆಲೆಸಿರುವನು. ಶಂಕರನು ನಿನ್ನ ಆತ್ಮಕ್ಕೆ ವಂದಿಸಿಯೇ ಇರುವನು.

ದುರಹಂಕಾರದಿಂದ ಮೈಮರೆತ ನಿನಗೆ ಈ ಸೂಕ್ಷ್ಮ ವಿಷಯಗಳೆಲ್ಲಾ ತಿಳಿಯಲಾರವು. ಪ್ರಕೃತಿ, ಪುರುಷ ಈಶ್ವರರ ವಿಷಯಕವಾದ ಅಧ್ಯಾತ್ಮ

ಜ್ಞಾನವಿಲ್ಲದೆ ನೀನು ಮಾಯಾ ಪರವಶನಾಗಿ ಮೂಢನಾಗಿರುವೆ. ಪ್ರಕೃತಿ ಬದ್ಧವಾದ ಈ ಕ್ಷಣಿಕ ಹಾಗೂ ಅನಿತ್ಯವಾದ ಶರೀರವನ್ನೇ ನಂಬಿ ಅಜ್ಞಾನಿಯಾಗಿರುವೆ. ಆದುದರಿಂದ ಸರ್ವೇಶ್ವರನನ್ನು ಹೀನಾವಮಾನವಾಗಿನಿಂದಿಸಿ ಶಿಕ್ಷಾರ್ಹನಾಗಿರುವೆ. ಎಲೈ ! ದುರುಳದಕ್ಷನೇ ! ನಿನ್ನಲ್ಲಿ ಪಶುಭಾವವೇ ತುಂಬಿರುವುದರಿಂದ ನೀನು ಪಶುಪ್ರಾಯನಾಗು. ಕರ್ಮಾರ್ಥವಾದ ಅವಿದ್ಯೆಯನ್ನೇ ನೀನು ಸದಾನಂಬಿ, ಪರಾವಿದ್ಯೆಯನ್ನು ಅರಿಯಲಾರದವನಾಗಿ ದುಃಖಕ್ಕೀಡಾಗು. ನಿನಗೆ ಶಿವನಿಂದ ಶೀಘ್ರದಲ್ಲಿಯೇ ಮರಣ ಪ್ರಾಪ್ತವಾಗಲಿ-ಎಂದು ಶಪಿಸಿದನು. ದಕ್ಷನ ಶಿವನಿಂದೆಯನ್ನೂ ನಂದಿಯ ಶಾಪವನ್ನೂ, ಕೇಳಿದ ದೇವತೆಗಳು ಮುಂದೆ ದಕ್ಷನಿಗೆ ಸಂಭವಿಸುವ ಕೇಡನ್ನು ಮನಗಂಡು, ಅವನನ್ನು ಮನಸಾ ನಿಂದಿಸುತ್ತಾ, ಶಿವ–ಶಿವೆಯರಿಗೆ ವಂದಿಸಿ ಸಭಾತ್ಯಾಗ ಮಾಡಿದರು. ದಕ್ಷನು ಅತಿಯಾದ ಕೋಪವುಳ್ಳವನಾಗಿ ಅಸಭ್ಯರೀತಿಯಿಂದ ಸಭೆಯನ್ನು ತ್ಯಜಿಸಿ ಹೊರಟು ಹೋದನು. ಹೀಗೆ ಅನಿರೀಕ್ಷಿತವಾಗಿ ಶಿವಸಭೆಯಲ್ಲಿ ನಡೆದ ಪ್ರಮಾದವನ್ನು ನೋಡಿದ ಸಕಲ ದೇವತೆಗಳೂ, ಋಷಿಪುಂಗವರೂ, ಚಿಂತಾಕ್ರಾಂತರಾಗಿ, ನಂದೀಶನ ಶಾಪದಂತೆ ದಕ್ಷನಿಗೆ ಕೇಡಾಗುವುದು ಸತ್ಯವೆಂದು ತಿಳಿದು, ದಕ್ಷನನ್ನು ನಿಂದಿಸುತ್ತಾ ಶಿವ–ಶಿವೆಯರಿಗೆ ವಂದಿಸಿ ಸ್ವಸ್ಥಾನಗಳಿಗೆ ತೆರಳಿದರು.

ದಕ್ಷನ ಯಜ್ಞ ಸಿದ್ಧತೆ

ಹೀಗೆ ದಕ್ಷನು ಅನೇಕ ಕಾಲ ರುದ್ರನೊಡನೆ ವಿರೋಧವನ್ನು ಸಾಧಿಸುತ್ತಾ, ಅವನಿಗೆ ಪ್ರತೀಕಾರ ಮಾಡಲು ಸಮಯವನ್ನು ಕಾಯುತ್ತಿದ್ದನು. ಅದೇ ಸಮಯದಲ್ಲಿ ಚತುರ್ಮುಖಬ್ರಹ್ಮನು, ದಕ್ಷನಿಗೆ ಪ್ರಜಾಪತಿ ಪಟ್ಟವನ್ನು ಕಟ್ಟಿದನು. ಮೊದಲೇ ಗರ್ವಿತನಾಗಿದ್ದ ದಕ್ಷನು ಮತ್ತಷ್ಟು ದರ್ಪವನ್ನು ಹೊಂದಿ, ಶಿವನಿಗೆ ಅಪಮಾನ ಮಾಡಲು ಇದೇ ಸುಸಮಯವೆಂದು ಯೋಚಿಸಿ ಒಂದು ಯಜ್ಞವನ್ನು ತಾನೇ ಆರಂಭಿಸಿ, ಅದಕ್ಕೆ ಶಿವನನ್ನು ಆಹ್ವಾನಿಸದೆ, ಅವನಿಗೆ ಕೊಡಬೇಕಾದ ಹವಿರ್ಭಾಗವನ್ನು ವಿಷ್ಣುವಿಗೇ ಕೊಟ್ಟು, ಆ ಯಜ್ಞದ ಫಲದಿಂದ, ಶಿವನಿಗಿರುವ ಸರ್ವೇಶ್ವರತ್ವವನ್ನು ತಾನೇ ಪಡೆದು ಶಿವನನ್ನು ಬಹಿಷ್ಕರಿಸಬೇಕೆಂದು ತೀರ್ಮಾನಿಸಿದನು. ನಂತರ ತನ್ನ ಮಂತ್ರಿಗಳ, ಆಪ್ತೇಷ್ಟರ, ಹಿರಿಯರ ಸಲಹೆಯನ್ನು ಕೇಳಿದನು. ಎಲ್ಲರೂ

ಶಿವನೇ ಸರ್ವೇಶ್ವರನು ; ತ್ರಿಮೂರ್ತಿಗಳಿಗೂ ಅವನೇ ಕರ್ತನು ; ಅವನಿಗಿಂ
ಮಿಗಿಲಾದ ದೈವವು ಬೇರೆಯಾವುದೂ ಇಲ್ಲ ; ಅಂಥ ಜಗತ್ಪಿತನೊಡನೆ ವಿರೋಧ
ಸಾಧಿಸುವುದು ವಿವೇಕಿಗಳ ಲಕ್ಷಣವಲ್ಲವೆಂದು ತಿಳಿಸಿದರು. ಆಗ ದಕ್ಷನು
ಅವರ ಮಾತನ್ನು ಗ್ರಹಿಸದೆ ಕೋಪದಿಂದ ಅವರನ್ನು ಗದರಿ ಹೀಯಾಳಿಸಿದನು.

ನಂತರ, ಪ್ರಸೂತಿಯು, ತನ್ನ ಪತಿಯನ್ನು ಕುರಿತು ಎಲೈ ನಾಥನೆ,
ನಿನ್ನ ತಪಸ್ಸಿಗೆ ಮೆಚ್ಚಿದ ಶಿವನ ಅನುಗ್ರಹದಿಂದ ಪ್ರಕೃತಿಸ್ವರೂಪಿಣಿಯೂ,
ಲಿಂಗಕ್ಕೆ ಪೀಠವಾದವಳೂ, ಜಗಜ್ಜನನಿಯೂ, ಸರ್ವಮಂಗಳೆಯೂ ಆದ
ಸತಿಯನ್ನು ಕೇವಲ ನಮ್ಮ ಮಗಳೆಂದು ಭಾವಿಸಬಹುದೆ ? ಹರಿವಿಧಿಗಳು
ಮೊದಲಾದ ದೇವತೆಗಳು ಸಹಸ್ರಾರು ವರ್ಷಗಳ ಕಾಲ ಪೂಜಿಸಿದರೂ
ಋಷಿಶ್ರೇಷ್ಠರೂ, ಯೋಗೀಶ್ವರರೂ ಕಾಣಲಾರದ ಆ ಸರ್ವೇಶ್ವರನನ್ನು
ವಿರೋಧಿಸಿ ಬದುಕುವುದುಂಟೆ ? ಅಲ್ಲದೆ ಆ ಪರಮೇಶ್ವರನೇ ಈ ವಿಶ್ವವನ್ನು
ಸೃಷ್ಟಿಸಿ, ಪರಿಪಾಲಿಸಿ, ಕೊನೆಯಲ್ಲಿ ನಾಶಮಾಡುವನು. ತ್ರಿಮೂರ್ತಿಗಳು
ಅವನ ಅಧೀನರು. ಆದುದರಿಂದ ಎಲೈ ಪ್ರಾಣೇಶ, ಯಾವ ಕಾರಣದಿಂದಲೂ
ಆ ಶಿವ-ಶಿವೆಯರೊಡನೆ ವೈರವು ಶ್ರೇಯಸ್ಕರವಲ್ಲ–ಎಂದು ಪ್ರಾರ್ಥಿಸಿದಳು
ದಕ್ಷನು ಗರ್ವದಿಂದ ತನ್ನ ಪತ್ನಿಯನ್ನು ಜರಿದು, ಅಲ್ಲಿಂದ ತನ್ನ ತಂದೆಯಾದ
ಬ್ರಹ್ಮನನ್ನು ಕಂಡು ದೈನ್ಯದಿಂದ, ಎಲೈ ಪೂಜ್ಯ ಪಿತನೆ, ನನ್ನ ಪ್ರೇಮದ
ಪುತ್ರಿಯನ್ನು ನೋಡಲು, ಆ ನನ್ನ ಅಳಿಯನಾದ ಶಿವನ ಸಭೆಗೆ ಹೋದರೆ
ಗರ್ವಿತನಾದ ಶಿವನು, ನನ್ನ ಕಡೆಗೂ ಸಹ ನೋಡದೆ ನನ್ನನ್ನು ಅಪಮಾನ
ಗೊಳಿಸಿದನು. ನಾನು ಪ್ರಜಾಪತಿಯಾಗಿ, ಸೃಷ್ಟಿಕರ್ತನಾದ ನಿನ್ನ ಮಗನಾಗಿ
ಆ ನನ್ನ ಅಳಿಯನಿಂದಾದ ಅಪಮಾನವನ್ನ ಎಂದಿಗೂ ಸೈರಿಸಲಾರೆ. ಅವನಿಗೆ
ಅಗೌರವ ಮಾಡುವವರೆವಿಗೂ ನನಗೆ ಸಮಾಧಾನವಿಲ್ಲ. ಆದುದರಿಂದ
ನಾನೊಂದು ಯಜ್ಞವನ್ನು ಮಾಡಿ, ಆ ಶಿವನನ್ನು ಆಹ್ವಾನಿಸದೆ, ಅವನಿಗೆ
ಸಲ್ಲಬೇಕಾದ ಯಜ್ಞ ಭಾಗವನ್ನೂ ಕೊಡದೆ, ಅಪಮಾನಿಸಬೇಕೆಂದು ತೀರ್ಮಾ
ನಿಸಿರುವೆನು. ಆದುದರಿಂದ ನೀನು ನನ್ನ ಯಜ್ಞವನ್ನು ನಡೆಸಿಕೊಡಬೇಕೆಂದು
ಪ್ರಾರ್ಥಿಸಿದನು. ಆಗ ಬ್ರಹ್ಮನು ಎಲೈ ಕುಮಾರಾ ! ಏನಿದು ನಿನ್ನ ವಿಚಿತ್ರ
ವರ್ತನೆ? ಆ ಶಿವನೇ ಯಜ್ಞಾಧೀಶನೆಂಬುದನ್ನು ನೀನು ಮರೆತೆಯಾ?
ಅವನನ್ನು ಬಿಟ್ಟು ಯಜ್ಞ ಮಾಡುವುದಾದರೂ ಸರಿಯೆ ? ಶಿವರಹಿತವಾದ

ಯಜ್ಞವು ಪೂರ್ಣವಾಗಲಾರದು ಎಂದು ವಿವೇಕ ಹೇಳಿದನು. ಅದನ್ನು ಸಹಿಸದ ದಕ್ಷನು ಎಲೈ ತಂದೆಯೇ ನಾನು ಕಾಡಿಗೆ ಹೋಗಿ ತಪಸ್ಸನ್ನಾಚರಿಸು ವೆನೆಂದು ದುಃಖದಿಂದ ತಿಳಿಸಲು, ಅದಕ್ಕೆ ಬ್ರಹ್ಮನು ಯಜ್ಞದಲ್ಲಿ ಭಾಗವಹಿಸು ವುದಾಗಿ ತಿಳಿಸಿದನು. ಅಲ್ಲಿಂದ ವೈಕುಂಠಕ್ಕೆ ತೆರಳಿ, ವಿಷ್ಣುವಿಗೆ ನಮಸ್ಕರಿಸಿ, ತನ್ನ ಸಂಕಲ್ಪವನ್ನು ತಿಳಿಸಿ, ಯಜ್ಞದ ಅಧಿಪತಿಯಾಗಿ, ಯಜ್ಞವನ್ನು ನಡೆಸಿ ಕೊಡಬೇಕೆಂದು ಪ್ರಾರ್ಥಿಸಿದನು. ಆಗ ದಕ್ಷನ ಮಾತನ್ನು ಕೇಳುತ್ತಿದ್ದಂತೆಯೇ ಹರಿಯು ಬೆಚ್ಚಿದನು. ನಂತರ ಎಲೈ ದಕ್ಷ ಪ್ರಜಾಪತಿಯೆ ನಿನಗೆ ಬುದ್ಧಿ ಕೆಟ್ಟಂತೆ ಕಾಣುತ್ತದೆ. ಇಲ್ಲದಿದ್ದರೆ ನೀನು ಇಂಥಾ ಅನರ್ಥ ಕಾರ್ಯಕ್ಕೆ ಕೈಹಾಕುತ್ತಿರಲಿಲ್ಲ. ವಿಶ್ವೇಶ್ವರನಾದ ಶಂಕರನೆಲ್ಲಿ? ನಾವೆಲ್ಲಿ? ಅವನನ್ನು ದ್ವೇಷಿಸಿ ಬದುಕುವ ಸಾಮರ್ಥ್ಯ ಈ ಮೂರು ಲೋಕಗಳಲ್ಲಿ ಯಾರಿಗೂ ಇಲ್ಲ. ಶಿವನೇ ಯಜ್ಞೇಶ್ವರನು, ಅವನೇ ವೇದ, ಅವನೇ ಮಂತ್ರ. ಹೀಗಿರುವಲ್ಲಿ ಅವನನ್ನು ಬಿಟ್ಟು ಆಚರಿಸುವ ನಿನ್ನ ಯಜ್ಞಕ್ಕೆ ಅಧಿಪತಿ ಯಾರು? ಯಜ್ಞ ಭಾಗವನ್ನು ತೆಗೆದುಕೊಳ್ಳುವವರಾರು? ಆ ಶಿವನು ಕುಪಿತನಾದರೆ ಕ್ಷಣಾರ್ಧ ದಲ್ಲಿ ಈಹದಿನಾಲ್ಕು ಲೋಕಗಳನ್ನೂ ಭಸ್ಮಮಾಡುವನು. ಆಗ ನಿನ್ನನ್ನೂ ನಿನ್ನ ಯಜ್ಞವನ್ನೂ ರಕ್ಷಿಸುವ ಧೀರರು ಈ ಹದಿನಾಲ್ಕು ಲೋಕಗಳಲ್ಲಿ ಯಾರೂ ಇಲ್ಲ. ಆದುದರಿಂದ, ಎಲೈ ದಕ್ಷನೇ! ಶಿವನೊಡನೆ ದ್ವೇಷವನ್ನು ಬಿಡು ಎಂದು ನಾನಾಬಗೆಯಾಗಿ ವಿವೇಕ ಹೇಳಿದನು. ಮೊದಲೇ ಕೋಪದಿಂದಲೂ, ನಿರಾಶೆ ಯಿಂದಲೂ ಖಿನ್ನನಾಗಿದ್ದ ದಕ್ಷನು, ಭಕ್ತಿಯಿಂದ ಎಲೈ ಪಿತಾಮಹನೆ! ಬ್ರಹ್ಮನ ಪುತ್ರನಾಗಿ ನಿನ್ನ ಪೌತ್ರನಾಗಿ, ದಕ್ಷಪ್ರಜಾಪತಿಯಾಗಿ, ಒಂದು ಯಾಗವನ್ನು ಮಾಡಲೂ ನನಗೆ ಸಾಮರ್ಥ್ಯವಿಲ್ಲವೇ? ನೀವೆಲ್ಲರೂ, ಮತ್ತು ಇಂದ್ರಾದಿ ದೇವತೆಗಳೂ ಇರುವಾಗ ಆ ಶಿವನೇನು ಮಾಡುವನು? ಅವನಿಗೆ ಹೆದರಿ ಯಾಗವನ್ನು ನಿಲ್ಲಿಸಲಾರೆನು. ಅಲ್ಲದೆ ಹೀಗೆ ಶಿವನಿಗೆ ಅಂಜಿ ಯಜ್ಞ ವನ್ನು ನಿಲ್ಲಿಸುವುದರಿಂದ ನಮ್ಮ ಗೌರವಕ್ಕೇ ಕುಂದಲ್ಲವೇ. ಲೋಕ ನಮ್ಮನ್ನು ಹೇಡಿಗಳೆಂದು ಕರೆಯುವುದಿಲ್ಲವೇ? ಆದುದರಿಂದ ಹೇ ದೇವ! ಬೇಗ ಯಜ್ಞದ ಅಗ್ರ ಪೂಜೆ ಸ್ವೀಕರಿಸುವುದಾಗಿ ನಿನ್ನ ಪೌತ್ರನಿಗೆ ವಾಗ್ದಾನ ಮಾಡಿ ಸಲಹು. ಇಲ್ಲದಿದ್ದರೆ ನಾನು ಈ ಅವಮಾನವನ್ನು ಸಹಿಸಿಕೊಂಡು ಜೀವಿಸಿರುವುದಕ್ಕೆ ಬದಲು ಪ್ರಾಣತ್ಯಾಗ ಮಾಡಿಕೊಳ್ಳುವೆನೆಂದು, ದುಃಖದಿಂದ ನುಡಿದನು.

ಆಗ ಪೇಚಿಗೆ ಸಿಕ್ಕಿದ ಹರಿಯು ಮನದಲ್ಲಿಯೇ ಹೇ ಸರ್ವೇಶ್ವರನಾದ ಶಂಕರನೆ, ಇದೆಲ್ಲಾ ನಿನ್ನ ಲೀಲೆಯಲ್ಲದೆ ಬೇರೆಯಲ್ಲ. ವಿಧಿಯಿಲ್ಲದೆ, ಧರ್ಮ ಸಂಕಟಕ್ಕೆ ಸಿಕ್ಕಿಬಿದ್ದು ಈ ದಕ್ಷನ ಪ್ರಾಣವನ್ನು ಉಳಿಸಲೋಸುಗ ಅವನ ಪ್ರಾರ್ಥನೆಯನ್ನು ಮನ್ನಿಸುವೆನು. ಇದರಿಂದ ಆಗುವ ಅನರ್ಥವು ತಿಳಿದೇಇದೆ. ನಿನ್ನೊಡನೆ ಕಾದಿ ಪರಾಭವ ಹೊಂದಿದರೂ, ಅದು ನಿನ್ನಿಂದ ನನಗಾದ ಅನುಗ್ರಹವೆಂದೇ ಭಾವಿಸಿರುವೆನು. ನನ್ನನ್ನು ಮನ್ನಿಸು ಎಂದು ಪ್ರಾರ್ಥಿಸಿ, ದಕ್ಷನನ್ನು ಕುರಿತು ಎಲೈ ಪೌತ್ರನೇ! ವಿಧಿ ವಿಲಾಸದಂತಾಗಲಿ. ಶಿವನು ತನ್ನ ದ್ವೇಷಿಗಳನ್ನು ನಿಗ್ರಹಿಸದೆ ಬಿಡುವನೇ? ಅವಿವೇಕಿಯಾದ ನಿನಗೆ, ಇನ್ನು ವಿವೇಕ ಹೇಳಿ ಫಲವಿಲ್ಲ. ಹೋಗು ನಿನ್ನ ಇಷ್ಟದಂತೆ ಮಾಡುವೆನು. ಅಧ್ವರವನ್ನು ನಡೆಸು, ನಾನು ಬರುವೆನು ಎಂದು ಹೇಳಿದನು. ಇದರಿಂದ ಅತ್ಯಾನಂದ ಹೊಂದಿದ ದಕ್ಷನು, ಅತ್ಯಂತ ಗರ್ವಿತನಾಗಿ, ಶಿವನನ್ನು ನಿರ್ಲಕ್ಷಿಸಿ ಯಜ್ಞಕ್ಕೆ ಅವನನ್ನು ಕರೆಸದೆ, ಯಜ್ಞಭಾಗವನ್ನು ದೇವತೆಗಳಿಗೆ ಕೊಡುವುದಾಗಿ ತೀರ್ಮಾನಿಸಿ, ಅವನಮೇಲಿನ ತನ್ನ ಸೇಡನ್ನು ತೀರಿಸಿಕೊಂಡು ಅವನ ಗರ್ವವನ್ನು ಮುರಿಯಬೇಕೆಂದು ಯೋಚಿಸಿ, ವಿಷ್ಣುವಿಗೆ, ತನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಿ ಅವನ ಆಶೀರ್ವಾದದೊಡನೆ, ಕೂಡಲೇ ತನ್ನ ಲೋಕಕ್ಕೆ ತೆರಳಿದನು.

ಯಜ್ಞಶಾಲೆಯ ನಿರ್ಮಾಣ :

ನಂತರ, ದಕ್ಷನು ದೇವಶಿಲ್ಪಿಯಾದ ವಿಶ್ವಕರ್ಮನನ್ನು ಕರೆಯಿಸಿ, ಅವನೊಡನೆ ಯಾಗಶಾಲೆಯ ನಿರ್ಮಾಣದ ಬಗೆಗೆ ಚರ್ಚಿಸಿ, ಇದುವರೆವಿಗೂ ಯಾರೂ ನಿರ್ಮಿಸದಿರುವಂತಹ ಭವ್ಯವಾದ ಯಾಗಶಾಲೆಯನ್ನು ಅತಿ ಶೀಘ್ರದಲ್ಲಿ ನಿರ್ಮಿಸುವಂತೆ ಆದೇಶ ನೀಡಿದನು. ಇತ್ತ ತಾನು ತನ್ನ ಆಪ್ತರನ್ನು ಕರೆಯಿಸಿ, ಶಿವನ ವಿನಹ ಉಳಿದೆಲ್ಲ ದೇವತೆಗಳಿಗೂ, ಮುನಿಪುಂಗವರಿಗೂ, ಮತ್ತು ನರಶ್ರೇಷ್ಠರಿಗೂ ಆಹ್ವಾನವನ್ನು ಕಳುಹಿಸುವಂತೆ ವ್ಯವಸ್ಥೆ ಮಾಡಿದನು. ಯಾಗಶಾಲೆಯನ್ನು ಅವಿಮುಕ್ತ ಕ್ಷೇತ್ರವಾದ ಕಾಶಿಗೆ ಪಶ್ಚಿಮ ದಿಕ್ಕಿನಲ್ಲಿರುವ 'ಹರದ್ವಾರ' ದ ಬಳಿ (ಅಂದರೆ ಗಂಗಾ ನದಿಯು ಮೊದಲಿಗೆ ಭೂಪ್ರದೇಶವನ್ನು ತಲುಪುವ ಸ್ಥಳ) ಗಂಗಾನದಿಯ ಸಮೀಪದಲ್ಲಿರುವ 'ಕನಖಲಿ ಕ್ಷೇತ್ರ'ದ ಬಳಿ ನಿರ್ಮಿಸಬೇಕೆಂದು ತೀರ್ಮಾನಿಸಿದನು. ಈ ಯಜ್ಞ

ನಡೆದ ಸ್ಥಳವನ್ನು ಒಬ್ಬೊಬ್ಬರು ಒಂದೊಂದು ಕಡೆಯಿರುವುದೆಂದು ಹೇಳಿರುವರು.

" ಆಪ್ಯನೀಲಗಿರೇಸ್ತು ಸ್ಮಾದ್ಧರದ್ವಾರಸಮೀಪತಃ " ಎಂಬ ಸ್ಕಾಂದ ಪುರಾಣೋಕ್ತಿಯಂತೆಯೂ ಶಿವರಹಸ್ಯದಲ್ಲಿ ಹೇಳಿರುವ—

ಹಿಮವಚ್ಛಿಖರೇ ರಮ್ಯೇ ಹೇಮಶೃಂಗೇ ಸುಶೋಭನೇ ।
ಯಜ್ಞವಾಟಸ್ತದಾ ತಸ್ಯ ಗಂಗಾದ್ವಾರಸಮೀಪಗಃ ॥

ಎಂಬ ಪ್ರಮಾಣದಿಂದ ದಕ್ಷನ ಯಜ್ಞಶಾಲೆಯು ಹರದ್ವಾರದ ಬಳಿಯಿರುವ ಕನಖಲ ಕ್ಷೇತ್ರದ ಬಳಿ ಇದ್ದಿತೆಂದು ಊಹಿಸಬಹುದಾಗಿದೆ. ಆ ಯಜ್ಞಶಾಲೆಯ ವಿಸ್ತೀರ್ಣ ಸಹಸ್ರ ಯೋಜನಗಳೆಂದು ಹೇಳಲಾಗಿದೆ. ವೇದೋಕ್ತ ವಿಧಿಯಂತೆ ಯಜ್ಞಶಾಲೆಯನ್ನು ನಿರ್ಮಿಸಲಾಯಿತು. ಯಜ್ಞಶಾಲೆಯು, ವಾಪಿ, ಕೂಪ, ತಟಾಕಗಳಿಂದಲೂ, ವೃಕ್ಷಾರಾಮಗಳಿಂದಲೂ, ಶತಯೋಜನ ವಿಸ್ತೀರ್ಣವುಳ್ಳ ವೇದಿಕೆಯುಳ್ಳದ್ದಾಗಿಯೂ, ಅನೇಕ ಚಿತ್ರಶಾಲೆಗಳಿಂದಲೂ ಕಂಗೊಳಿಸುತ್ತಿತ್ತು. ಯಜ್ಞಕುಂಡಗಳನ್ನೂ, ಮಂಟಪಗಳನ್ನೂ, ಯಜ್ಞ ಪಶುಗಳನ್ನು ಪೂಜಿಸುವ ಗೃಹಗಳನ್ನೂ, ಅವನ್ನು ವಧಿಸುವ ಯೂಪಸ್ತಂಭಗಳನ್ನೂ, ನಿರ್ಮಿಸಲಾಯಿತು.

ನಂತರ ಯಾಗಕ್ಕೆ ಆಹ್ವಾನಿತರಾಗಿದ್ದ ವಿಷ್ಣು, ಬ್ರಹ್ಮ ಇಂದ್ರಾದಿ ದೇವತೆಗಳಿಗೂ, ದಿಕ್ಪಾಲಕರಿಗೂ, ವಿದ್ಯಾಧರರು, ಕಿನ್ನರ–ಕಿಂಪುರುಷರು, ಗರುಡ–ಖೇಚರರು, ಉರಗರು, ಗಂಧರ್ವ–ಗರುಡರು, ಮರುದ್ಗಣಗಳು, ಮುನಿಜನಂಗಳು, ಮೊದಲಾದವರು ಕೂಡಲು ಅವರವರ ಯೋಗ್ಯತೆಗೆ ತಕ್ಕಂತೆ ವೈಭವಪೂರ್ಣವಾದ ಮಂಟಪಗಳನ್ನೂ, ಪಡಸಾಲೆಗಳನ್ನೂ ನಿರ್ಮಿಸಿ, ಅಲ್ಲಿ ರತ್ನಖಚಿತವಾದ ಆಸನಗಳನ್ನೂ, ವೇದಿಕೆಗಳನ್ನೂ, ನಿರ್ಮಿಸಲಾಯಿತು. ಆಯಾ ದೇವತೆಗಳ ಸ್ಥಾನಕ್ಕೆ ಅನುಗುಣವಾಗಿ, ಅವರ ಸೇವೆಗಾಗಿ ಸಹಸ್ರಾರು ಮಂದಿ ಸೇವಕರನ್ನೂ ನೇಮಿಸಲಾಯಿತು.

ಅತಿಥಿಗಳ ಊಟೋಪಚಾರಗಳಿಗೆ ಉತ್ತಮವಾದ ವ್ಯವಸ್ಥೆಯನ್ನೂ ಮಾಡಲಾಯಿತು. ಶ್ರೇಷ್ಠ ತರಗತಿಯ ವಸತಿಗೃಹಗಳನ್ನೂ ನಿರ್ಮಿಸಲಾಯಿತು. ನಾಲ್ಕೂ ಕಡೆಯಲ್ಲಿಯೂ ಮಹಾದ್ವಾರಗಳನ್ನು ಆಕರ್ಷಣೀಯವಾದ ರೀತಿ

ಯಲ್ಲಿ ನಿರ್ಮಿಸಿ, ಅವುಗಳನ್ನು ತಳಿರುತೋರಣಗಳಿಂದ ಅಲಂಕರಿಸಲಾಯಿತು. ಯಾಗಕ್ಕೆ ಯಾವ ತೊಂದರೆಯೂ, ಆಗದಂತೆ ಎಲ್ಲಾ ದ್ವಾರಗಳಲ್ಲಿಯೂ, ರಕ್ಷಣಾ ವ್ಯವಸ್ಥೆಯನ್ನೂ ಮಾಡಲಾಯಿತು. ಮಹಾದ್ವಾರಗಳ ಬಳಿ ಆಹ್ವಾನಿತರಿಗೆ ವೈಭವ ಪೂರ್ಣವಾದ ಸ್ವಾಗತ ನೀಡಲು, ವಂದಿ ಮಾಗಧರು, ಗಂಧರ್ವ ಕನ್ಯೆಯರೇ ಮೊದಲಾದ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ದಕ್ಷನೇ ಸ್ವತಃ ಯಜ್ಞಕ್ಕೆ ಬೇಕಾದ, ಮೃಗಾಜಿನ, ಸುರಭಿ, ಕಪಾಲ, ಸೋಮ, ಕುಶ, ಮಹಾವಿರಣೆ, ಶಂಖ, ಶಶಕ, ಪಶು, ಶಸ್ತ್ರ, ರಜ್ಜು ಮೊದಲಾದ ಯಾಗ ವಸ್ತುಗಳ ಸರಬರಾಜಿನ ವ್ಯವಸ್ಥೆಯನ್ನು ಮಾಡಿಸತೊಡಗಿದನು.

ದೇವತೆಗಳ ಆಗಮನ :

ಯಜ್ಞಕ್ಕೆ ವಿಷ್ಣು, ಬ್ರಹ್ಮ, ಇಂದ್ರರೇ ಮೊದಲಾದ ಎಲ್ಲಾ ಪ್ರಮುಖ ದೇವತೆಗಳೂ ಬರಲು, ದಕ್ಷನು ತಾನೇ ಅವರನ್ನು ಗೌರವದಿಂದ ಸ್ವಾಗತಿಸಿ, ಸಕಲ ಮರ್ಯಾದೆಗಳೊಡನೆ ಅವರವರ ಸ್ಥಳಗಳಲ್ಲಿ ಕೂಡಿಸಿದನು. ಮೊದಲೇ ಶೀರ್ಮಾನಿಸಿದ್ದಂತೆ ವಿಷ್ಣುವು ಯಾಗ ಶಾಲೆಯ ಮಧ್ಯಭಾಗದಲ್ಲಿ ಕಂಗೊಳಿಸುತ್ತಿದ್ದ ದಿವ್ಯವಾದ ಯಜ್ಞಾಧಿಪತಿಯ ಪೀಠವನ್ನು ಅಲಂಕರಿಸಿದನು. ದಕ್ಷನು ಶಿವ ದ್ವೇಷಿಯೆಂದು ತಿಳಿದಿದ್ದ ಮಹಾ ಶಿವ ಭಕ್ತರಾದ ಅಗಸ್ತ್ಯ, ನಾರದ, ಸನಕಾದಿಗಳೂ, ಅತ್ರಿ, ವಶಿಷ್ಠ, ಪರಾಶರ, ಗೌತಮ, ದುರ್ವಾಸ, ಭೃಗು ಮುಂತಾದ ಮುನಿಶ್ರೇಷ್ಠರೂ, ದಕ್ಷನ ಆಹ್ವಾನವನ್ನು ನಿರಾಕರಿಸಿ, ಯಜ್ಞಕ್ಕೆ ಬರದಾದರು. ನಂತರ ಯಾಗಾಭಿಜ್ಞರಾದ ಮುನಿವೃಂದವನ್ನೂ, ವೈದಿಕ ಶ್ರೋತ್ರಿಯರನ್ನೂ ಕರೆಸಿದನು.

ನಂತರ ಯಾಗಕ್ಕೆಬಲಿ ಕೊಡ ಬೇಕಾದ ಹೋತ, ಅಶ್ವ, ಗೋವು ಮುಂತಾದ ಯಾಗ ಪಶುಗಳನ್ನೂ ತರಿಸಿದನು. ಹೋತೃ, ಸದಸ್ಯ, ಬ್ರಹ್ಮ ಅಧ್ವರ್ಯು ಮುಂತಾದ ಯಾಗಕ್ಕೆ ಅಂಗವಾದ ಎಲ್ಲಾ ವ್ಯವಸ್ಥೆಗಳನ್ನೂ ಮಾಡಿಸಿದನು. ಹೀಗೆ ದಕ್ಷನ ಆಹ್ವಾನವು ಎಲ್ಲಾ ಋಷಿ ಶ್ರೇಷ್ಠರಿಗೂ ಕಳುಹಲ್ಪಟ್ಟಿತ್ತು. ಆ ಆಹ್ವಾನವನ್ನು ನೋಡಿದ ಋಷಿಗಳಿಗೆ ಅತ್ಯಂತ ಆಶ್ಚರ್ಯವಾಯಿತು. ಅವರಿಗೆ, ದಕ್ಷನು ಶಿವರಾಹಿತ್ಯಯಜ್ಞವನ್ನು ಆಚರಿಸಬಹುದೆಂಬ ಅನುಮಾನವು ತಲೆದೋರಿತು. ಏಕೆಂದರೆ, ದಕ್ಷನು ಅನೇಕ ಕಾಲ

ದಿಂದಲೂ, ಶಿವನನ್ನು ವಿರೋಧಿಸುತ್ತಿದ್ದ ವಿಷಯವು ಅವರಿಗೆಲ್ಲಾ ತಿಳಿದೇ ಇದ್ದಿತು. ಆ ಸ್ಥಿತಿಯಲ್ಲಿ ಅವರು, ಅವನ ಆಹ್ವಾನದಂತೆ ಯಜ್ಞಕ್ಕೆ ಹೋಗಬೇಕೇ ಬೇಡವೇ ? ಎಂದು ಯೋಚಿಸತೊಡಗಿದರು. ನಂತರ ಅವರೆಲ್ಲಾ, ವಯೋವೃದ್ಧರೂ, ಜ್ಞಾನವೃದ್ಧರೂ, ತ್ರಿಕಾಲಜ್ಞಾನಿಗಳೂ ಆದ ಪೂಜ್ಯ ವಿಶಿಷ್ಠರ ಸಲಹೆಯನ್ನು ಪಡೆದ ನಂತರ ತೀರ್ಮಾನ ಮಾಡುವ ಉದ್ದೇಶದಿಂದ ಎಲ್ಲರೂ ವಿಶಿಷ್ಠರ ಆಶ್ರಮದತ್ತ ತೆರಳಿದರು. ದಾರಿಯಲ್ಲಿ, ಪೂಜ್ಯ ಅಗಸ್ತ್ಯರೇ ಮೊದಲಾದ ಅನೇಕ ಋಷಿ ಪುಂಗವರೂ ಅವರನ್ನು ಕೂಡಿಕೊಂಡರು. ಹೀಗೆ ಅಪಾರ ಋಷಿಸಮೂಹವು ವಶಿಷ್ಠರನ್ನು ಕಂಡು ಭಕ್ತಿ ಪುರಸ್ಸರವಾಗಿ ವಂದಿಸಿತು. ಅನಿರೀಕ್ಷಿತವಾಗಿ ತಮ್ಮ ಆಶ್ರಮಕ್ಕೆ ಬಂದ ಎಲ್ಲಾ ಮುನೀಶ್ವರರನ್ನೂ ವಶಿಷ್ಠರು ಆದರದಿಂದ ಬರಮಾಡಿಕೊಂಡು, ಅತಿಥಿ ಸತ್ಕಾರಗಳಾದ ಮೇಲೆ, ಅವರ ಆಗಮನದ ಉದ್ದೇಶವೇನೆಂದು ಕೇಳಿದರು. ಆಗ ಜ್ಞಾನಿಗಳಾದ ಅಗಸ್ತ್ಯರು, ಹೇ ! ಋಷಿಕುಲೋತ್ತಮಾ, ನಮಗೆಲ್ಲಾ, ದಕ್ಷನು ನಡೆಸುತ್ತಿರುವ ಯಾಗಕ್ಕೆ ಆಹ್ವಾನ ಬಂದಿದೆ. ಈ ದಕ್ಷನು ನಮ್ಮೆಲ್ಲರ ಕುಲದೈವವಾದ ಶಂಕರನಲ್ಲಿ ದ್ವೇಷ ಸಾಧಿಸುತ್ತಿರುವ ವಿಚಾರ ಸರ್ವವೇದ್ಯವೇ ಆಗಿದೆ. ಹೀಗಿರುವಲ್ಲಿ ಅವನು ಶಿವನನ್ನು ಕಡೆಗಣಿಸಿ, ಅವನಿಗೆ ಬದಲಾಗಿ, ವಿಷ್ಣುವಿನ ಅಧ್ಯಕ್ಷತೆಯಲ್ಲಿ ಯಜ್ಞವನ್ನು ನಡೆಸಿ, ಶಿವನಿಗೆ ಸಲ್ಲ ಬೇಕಾದ ಹವಿಸ್ಸನ್ನು, ದೇವತೆಗಳಿಗೆ ಕೊಡಬೇಕೆಂದು ತೀರ್ಮಾನಿಸಿರುವನೆಂಬ ವಿಚಾರ ತಿಳಿದು ಬಂದಿದೆ. ಇಂಥಾ ಶಿವರಹಿತ ಯಜ್ಞದಲ್ಲಿ ಭಾಗವಹಿಸುವುದು ಶಂಕರನ ಭಕ್ತರಾದ ನಮಗೆ ಹಿತವಾಗಿ ಕಾಣುವುದಿಲ್ಲ. ಆದುದರಿಂದ ಈ ವಿಷಯದಲ್ಲಿ ಪ್ರಾಜ್ಞರಾದ ತಮ್ಮ ಸಲಹೆಯನ್ನು ಅಪೇಕ್ಷಿಸಿ, ನಾವೆಲ್ಲಾ ಬಂದಿರುವೆವು. ಕೃಪೆ ಮಾಡಿ, ತಮ್ಮ ಸೂಕ್ತ ಸಲಹೆಯನ್ನು ನೀಡಬೇಕು. ತಮ್ಮ ಅಭಿಪ್ರಾಯವೇ ನಮ್ಮ ಅಭಿಪ್ರಾಯ ಎಂದು ತಿಳಿಸಿದರು.

ಇದನ್ನೆಲ್ಲಾ ಸಾವಧಾನದಿಂದ ಕೇಳುತ್ತಿದ್ದ ವಸಿಷ್ಠರು ಕೊಂಚಕಾಲ ಧ್ಯಾನಮಗ್ನರಾಗಿ, ನಂತರ ಎಚ್ಚೆತ್ತು, ಎಲೈ ! ಪೂಜ್ಯ ಅಗಸ್ತ್ಯರೇ ನೀವು ಹೇಳಿದ ಮಾತು ಸತ್ಯವಾದುದು. ಆ ದಕ್ಷನಿಗೆ ವಿನಾಶಕಾಲ ಸನ್ನಿಹಿತವಾಗಿದೆ. ಅದೂ ಅಲ್ಲದೆ, ಅವನಿಗೆ ದ್ವಿತೀಯ ಶಂಭುವಾದ ನಂದೀಶ್ವರ ಹಾಗೂ, ಮುನಿಶ್ರೇಷ್ಠರಾದ ನಾರದರ ಶಾಪದಿಂದ, ಅವನ ಯಾಗವೂ ಧ್ವಂಸವಾಗುವುದು,

ಆ ದಕ್ಷಯಜ್ಞದಲ್ಲಿ ಭಾಗವಹಿಸುತ್ತಿರುವ ದೇವತೆಗಳೆಲ್ಲಾ ಶಿಕ್ಷಿಸಲ್ಪಡುವರು. ಆ ದಕ್ಷನ ಶಿರಸ್ಸು ಯಜ್ಞಕ್ಕೆ ಆಹುತಿಯಾಗುವುದು. ಇದು ಸತ್ಯ. ಆದುದರಿಂದ, ಶಿವರಹಿತ ಯಜ್ಞಕ್ಕೆ ಹೋಗುವುದು ಮಹಾಪರಾಧ ಮತ್ತು ಅಪಾಯಕರ. ಈ ಶಿವದ್ರೋಹಿಗಳ ಯಜ್ಞಕ್ಕೆ ನಾವು ಹೋಗದಿರುವುದೇ ಸೂಕ್ತವೆಂದು ನನ್ನ ಅಭಿಮತ ಎಂದು ಹೇಳಿದರು. ಆಗ ಅಗಸ್ತ್ಯರು ಅಲ್ಲಿ ನೆರೆದಿದ್ದ, ಭೃಗು, ಕಣ್ವ, ಅತ್ರೇಯ, ಕಪಿಲ, ದುರ್ವಾಸ, ಗೌತಮ, ಉಪಮನ್ಯು, ವ್ಯಾಸ ಮೊದಲಾದ ಋಷಿಶ್ರೇಷ್ಠರನ್ನು ಕುರಿತು, ಅವರವರ ಅಭಿಪ್ರಾಯಗಳನ್ನು ಸೂಚಿಸುವಂತೆ ತಿಳಿಸಲು, ಅವರೆಲ್ಲರೂ, ಏಕಕಂಠದಿಂದ ಯಜ್ಞವನ್ನು ಬಹಿಷ್ಕರಿಸುವುದಾಗಿ ಘೋಷಿಸಿದರು. ಅದನ್ನು ಸರ್ವಾನುಮತದಿಂದ ಅಂಗೀಕರಿಸಿ ಎಲ್ಲರೂ ವಸಿಷ್ಠರಿಗೆ ವಂದಿಸಿ, ತಮ್ಮ ತಮ್ಮ ತಪೋವನಗಳಿಗೆ ತೆರಳಿದರು.

ಯಜ್ಞಾರಂಭಕ್ಕೆ ಅನುಮತಿ :

ಅಷ್ಟರಲ್ಲಿ ದಕ್ಷನು, ಮುಂದೆ ಬಂದು ಯಜ್ಞಾಧಿಪತಿಯಾದ ವಿಷ್ಣುವೇ ಮೊದಲಾದ ದೇವತೆಗಳಿಗೆ ವಂದಿಸಿ, ನಂತರ ಸಭೆಗೆ ಕೈಮುಗಿದು, ಎಲೈ ಪೂಜ್ಯರೇ ! ನಾನು ಸಂಕಲ್ಪಿಸಿರುವ ಹಾಗೂ ಆಚರಿಸುತ್ತಿರುವ ಈ ಯಾಗವನ್ನು ಪ್ರಾರಂಭಿಸುವುದಕ್ಕೆ ಅನುಮತಿಯನ್ನು ನೀಡಿರಿ. ಮತ್ತು ಈ ಯಜ್ಞವು ನಿರ್ದಿಷ್ಟವಾಗಿ ನಡೆಯುವಂತೆ ಆಶೀರ್ವದಿಸಿರೆಂದು ಪ್ರಾರ್ಥಿಸಿದನು. ಯಜ್ಞದ ಭವಿಷ್ಯವನ್ನು ತಿಳಿದಿದ್ದ ಹರಿ, ಬ್ರಹ್ಮರು ತಮ್ಮ ವಚನಕ್ಕೆ ಕಟ್ಟುಬಿದ್ದು, ಕೇವಲ ಯಜ್ಞಾರಂಭಕ್ಕೆ ಸಮ್ಮತಿ ನೀಡಿ ಮೌನವಾಗಿ ಕುಳಿತರು. ಯಜ್ಞಾಧ್ಯಕ್ಷ ಪುರುಷೋತ್ತಮನೂ ಹಾಗೂ ಸೃಷ್ಟಿ ಕರ್ತನಾದ ಬ್ರಹ್ಮನೂ ಸಮ್ಮತಿ ನೀಡಿದಮೇಲೆ ಉಳಿದವರು ತಮ್ಮ ವಿರೋಧವನ್ನು ವ್ಯಕ್ತಪಡಿಸುವ ಸಾಹಸವನ್ನು ಮಾಡಲಿಚ್ಛಿಸದೆ ಸುಮ್ಮನೆ ಮೌನದಿಂದಲೇ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದರು. ಆದರೂ, ವಿವೇಕಿಗಳಾದ ಕೆಲವು ಜನ ಋಷಿಗಳೂ ಮತ್ತು ದೇವತೆಗಳೂ, ಶಿವರಹಿತವಾದ ಯಜ್ಞದಲ್ಲಿ ಭಾಗವಹಿಸುವುದು ಪಾಪಕರವೂ ಮತ್ತು ವಿನಾಶಕಾರಿಯೂ, ಆಗಿದೆ ಎಂದು, ಯಾಗಶಾಲೆಯನ್ನು ಬಿಟ್ಟು ಹೊರಟುಹೋದರು. ಇದನ್ನು ಹರಿವಿಧಿಗಳು ಗಮನಿಸಿದರೂ ಅದು ಯೋಗ್ಯ ಕಾರ್ಯವೆಂದು ಭಾವಿಸಿ ಸುಮ್ಮನಿದ್ದರು. ದಕ್ಷನಾದರೋ ಇವಾವುದನ್ನೂ ಗಮನಿಸದೆ, ಯಜ್ಞವಿಧಿಗಳನ್ನು ಕೈಯಲ್ಲಿ ಹಿಡಿದು, ಕೋಡು

ಗಳನ್ನು ಧರಿಸಿ, ಮೈಗೆ ಬೆಣ್ಣೆಯನ್ನು ಲೇಪಿಸಿಕೊಂಡು, ಮೃಗದ ಚರ್ಮ ವನ್ನು ಹೊದ್ದು ಯಾಗಶಾಲೆಗೆ ಬಂದನು. ನಂತರ, ಯಾಗಶಾಲೆಯ ನಾಲ್ಕು ಕಡೆಯೂ ನೋಡಿ ಋಷಿಗಳ ಸಾಲಿನಲ್ಲಿ, ಮುನಿಕುಲಶಿರೋಮಣಿ ಯಾದ ದಧೀಚಿಗಳು ಕಾಣದಿರಲು, ಅವರು ಬಂದಿಲ್ಲವೆಂದು ಗ್ರಹಿಸಿ, ಅವರನ್ನು ಕರೆತರಲು ಚಾರರನ್ನು ಕಳುಹಿಸಿದನು. ಚಾರರು ಶೀಘ್ರದಿಂದ ಪಂಪಾಕ್ಷೇತ್ರ ದಲ್ಲಿದ್ದ ದಧೀಚಿಗಳನ್ನು ಸಮೀಪಿಸಿ, ಯಾಗಕ್ಕೆ ಬರುವಂತೆ ಬೇಡಿದರು. ದಧೀಚಿಗಳು ಅವರನ್ನು ಕುರಿತು ಎಲೈ ದಕ್ಷಪ್ರತಿನಿಧಿಗಳೇ! ಯಾಗಕ್ಕೆ ಎಲ್ಲರೂ ಬಂದಿರುವರೇ? ಎಂದು ಕೇಳಲು, ಅದಕ್ಕೆ ಅವರು ಎಲ್ಲರೂ ಆಗಮಿಸಿರುವರೆಂದೂ, ಎಲ್ಲ ಸಿದ್ಧತೆಗಳೂ ಮುಗಿದು ತಮ್ಮ ಆಗಮನಕ್ಕಾಗಿ ದಕ್ಷನು ಯಾಗಾರಂಭ ಮಾಡದೆ ಕಾದಿರುವನೆಂದೂ ಬಿನ್ನವಿಸಿದರು.

ದಧೀಚಿಗಳ ಆಗಮನ :

ಆಗ ದಧೀಚಿಗಳು ತಮ್ಮ ಆರಾಧ್ಯ ದೈವವಾದ ಚಂದ್ರಮೌಳಿಯನ್ನೂ ಜಗಜ್ಜನನಿಯಾದ ದಾಕ್ಷಾಯಣಿಯನ್ನೂ, ದರ್ಶನ ಮಾಡುವ ಆತುರದಿಂದ ಕೂಡಲೇ ಯಜ್ಞ ಶಾಲೆಗೆ ಆಗಮಿಸಿದರು. ಅಲ್ಲಿ ತಮಗೆ ನೀಡಿದ ಸ್ವಾಗತವನ್ನು ಸ್ವೀಕರಿಸಿ, ಯಾಗಶಾಲೆಗೆ ಬಂದು ಆತುರದಿಂದ ಜನಭರಿತವಾದ ಯಾಗ ಶಾಲೆಯ ಸುತ್ತಲೂ ನೋಡಿ, ಅಧ್ಯಕ್ಷ ಸ್ಥಾನದಲ್ಲಿಯೂ, ವೇದಗಳ ಶಿರೋ ಭಾಗದಲ್ಲಿಯೂ, ಮಂತ್ರಮಸ್ತಕದಲ್ಲಿಯೂ, ಜಟಾಮುಕುಟಧಾರಿಗಳ ಗುಂಪಿ ನಲ್ಲಿಯೂ, ತನ್ನ ಇಷ್ಟ ದೈವವಾದ ಶಂಕರನನ್ನು ಕಾಣದೆ ಆಶ್ಚರ್ಯದಿಂದ, ಎದುರಿನಲ್ಲಿದ್ದ ದಕ್ಷನನ್ನು ಕುರಿತು, ಎಲೇ ದಕ್ಷನೇ! ಅಧ್ವರದೊಡೆಯನೂ, ಜಗತ್ಪಿತನೂ, ತ್ರಿಪುರಾಂತಕನೂ, ತ್ರಿಮೂರ್ತಿಗಳಿಗೆ ಕರ್ತನೂ, ದೇವ ದೇವನೂ ಆದ ಶಂಕರನು ಎಲ್ಲಿಯೂ ಕಾಣುತ್ತಿಲ್ಲವಲ್ಲ! ಅವನೆಲ್ಲಿರುವನು ತೋರಿಸು. ಅವನಿಲ್ಲದೆ ಯಾಗವನ್ನು ಹೇಗೆ ಪ್ರಾರಂಭಿಸುವೆ? ಯಾಗಾರಂಭಕ್ಕೆ ಅನುಮತಿ ನೀಡಿದವರಾರು? ನಿನ್ನ ದೂತರು ಯಾಗಕ್ಕೆ ಎಲ್ಲರೂ ಬಂದಿರು ವರೆಂದು ಸುಳ್ಳು ಹೇಳಿದರೇಕೆ? ಎಂದು ಕೇಳಿದನು.

ದಕ್ಷ-ದಧೀಚಿಗಳ ಸಂವಾದ :

ಆಗ ಕುಟಿಲನೂ, ದುರಾತ್ಮನೂ, ಶಿವದ್ವೇಷಿಯೂ ಆದ ದಕ್ಷನು, ಎಲೈ ದಧೀಚಿಗಳೇ ನೀವು ದೇವನಾದ ಶಿವನು ಮೂಳೆಗಳನ್ನೂ ಮೃಗಗಳ ಚರ್ಮ

ವನ್ನೂ ಸದಾ ಧರಿಸಿ, ಸ್ಮಶಾನದಲ್ಲಿ ವಾಸಿಸುವವನು. ಅಂಥವನನ್ನು ಯಜ್ಞಾಧ್ಯಕ್ಷನನ್ನಾಗಿ ಹೇಗೆ ಮಾಡುವುದು ? ಆದುದರಿಂದ ಆವನಿಗೆ ಇಲ್ಲಿ ಸ್ಥಾನವಿಲ್ಲ ಎಂದು ಹೇಳಿದನು. ಶಿವನಿಂದೆಯನ್ನೂ ಶಿವನಿಗೆ ಆಹ್ವಾನ ನೀಡಿಲ್ಲವೆಂಬುದನ್ನೂ ಕೇಳಿದ ಕೂಡಲೇ, ಶಿವಶಿವಾ ಎಂದು ಕಿವಿಗಳನ್ನು ಮುಚ್ಚಿಕೊಂಡು, ದಧೀಚಿಗಳು, ಛೆ! ಇಂತಾ ಶಿವರಹಿತವಾದ ಯಾಗಕ್ಕೆ ಬರಬಾರದಾಗಿತ್ತು, ಇದು ಮಹಾಅಪರಾಧ ಎಂದು ಚಿಂತಿಸಿ,ದಕ್ಷನನ್ನು ಕುರಿತು, ಎಲಾ ಪಾಪಿ ದಕ್ಷ! ಘನ ಮಂಗಳಕಾಯನಾದ ಶಿವನು ಯಾವುದನ್ನು ಉಡುವನೋ ಅದೇ ಪಾವನವಾದುಡಿಗೆ, ಯಾವುದನ್ನು ಕೊಡುವನೋ ಅದೇ ಶ್ರೇಷ್ಠ ಕೊಡುಗೆ, ಆ ಮಹಿಮನ ವಿಷಯ ನಿನ್ನಂಥ ಪಾಪಿಗಳಿಗೆ ಹೇಗೆ ತಿಳಿದೀತು ? ಅಲ್ಲದೆ ಸನ್ಮಾರ್ಗಾವಲಂಬಿಗಳೂ ಶಿವಾರಾಧಕರೂ, ಆದ ಹರಿವಿಧಿಗಳೂ, ಋಷಿಗಳೂ ಈ ಶಿವರಹಿತಯಜ್ಞಕ್ಕೆ ಹೇಗೆ ಬಂದರು ? ಯಜ್ಞಾಧಿಪತಿಯಾದ ಶಂಕರನಿಲ್ಲದ ಈ ಯಾಗಕ್ಕೆ ಅನುಮತಿಯನ್ನು ಹೇಗೆ ನೀಡಿದರು ? ಎಲಾ ದಕ್ಷ ಕೇಳು ? ಈ ರುದ್ರನೇ ಬ್ರಹ್ಮ-ವಿಷ್ಣು -ಮಹೇಶ್ವರರನ್ನು ಸೃಷ್ಟಿ ಮಾಡುವವನು. ಅವನೇ ಸಕಲ ಜಗತ್ತಿಗೂ ಅಧಿಪತಿಯೂ ಮತ್ತು ಪರಿಪೂರ್ಣನು. ಸಕಲ ದೇವತೆಗಳೂ ಅವನ ಕಿಂಕರರು. ಯೋಗಶಾಸ್ತ್ರಪಾರಂಗತರು, ಮತ್ತು ತತ್ವಾರ್ಥವೇತ್ತರಾದ ಋಷಿಪುಂಗವರು, ರುದ್ರನು ಪ್ರಕೃತಿಗಿಂತಲೂ ಭಿನ್ನನೆಂದೂ, ಸರ್ವೇಶ್ವರನೆಂದೂ, ಸದಾ ಈ ಶಂಕರನನ್ನೇ ಆರಾಧಿಸಿ ಧ್ಯಾನಿಸುತ್ತಿರುವರು.

ಬ್ರಹ್ಮವಿಷ್ಣುಮಹೇಶಾನಾಂ ಸ್ರಷ್ಟಾ ಯಃ ಪ್ರಭುರವ್ಯಯಃ ।
ಬ್ರಹ್ಮಾದಯಃ ಪಿಶಾಚಾಂತಾಃ ಯಸ್ಯ ಕೈಂಕರ್ಯವಾದಿನಃ ॥

(ಶಿ.ಪು. 19-15)

ಮತ್ತು ಈ ಶಂಕರನು ನಾಶರಹಿತನು, ಪರಬ್ರಹ್ಮಸ್ವರೂಪನು, ಆದಿ ಮಧ್ಯ-ಅಂತ್ಯ ರಹಿತನು, ನಿತ್ಯನಾಗಿ ಸೃಷ್ಟಿ, ಸ್ಥಿತಿ, ಲಯಕರ್ತನಾಗಿರುವ ಮಹೇಶನು. ಈ ಯಜ್ಞದಲ್ಲಿರುವ ವಸ್ತುಗಳೆಲ್ಲಾ ಶಿವಸ್ವರೂಪವಾದವುಗಳಲ್ಲದೆ ಬೇರೆಯಲ್ಲ ಎಂದು ಹೇಳಿದನು.

ಯಃ ಸ್ರಷ್ಟಾ ಚೈವ ಸಂಹರ್ತಾ ಭರ್ತಾ ಚೈವ ಮಹೇಶ್ವರಃ ।
ತಸ್ಮಾದನ್ಯೋ ನ ಪಶ್ಯಾಮಿ ಶಂಕರಾತ್ಮಾನಮುಚ್ಯತೇ ॥ (19-18)

ಆಗ ದಕ್ಷನು ಎಲೈ ದಧೀಚಿಯೇ ಈ ನನ್ನ ಯಜ್ಞಕ್ಕೆ ವಿಷ್ಣುವೇ ಅಧಿಪತಿಯು, ಅವನೇ ಸರ್ವಶ್ರೇಷ್ಠನು, ಆದುದರಿಂದ ಅವನಿಗೇ ಯಜ್ಞಭಾಗ ವನ್ನು ಅರ್ಪಿಸುವೆನೆಂದು ದೃಢವಾಗಿ ಹೇಳಿದನು. ದಕ್ಷನ ಮಾತುಗಳನ್ನು ಕೇಳುತ್ತಿದ್ದಂತೆಯೇ ದಧೀಚಿಯ ಕಣ್ಣಿನಿಂದ ಕೋಪಜ್ವಾಲೆಯು ಹೊರ ಹೊಮ್ಮಿತು, ನುಡಿ ಬಿರುಸಾಯಿತು. ಹುಬ್ಬು ಗಂಟಿಕ್ಕಿತು, ತುಟಿ ಅಲುಗಿತು, ಕಮಂಡಲದ ನೀರು ಕುದಿಯಿತು. ಆಗ ಅವನು ಪ್ರಳಯಕಾಲದ ರುದ್ರನೋ ಎಂಬಂತೆ ಭಯಂಕರವಾಗಿ ಕಂಡನು. ನಂತರ ದಧೀಚಿಯು, ಎಲೈ ದುಷ್ಟ ದಕ್ಷಾ! ಆ ಈಶ್ವರನು ಸಕಲ ದೇವತೆಗಳಿಗೂ ಪ್ರಭುವು, ವಿಷ್ಣುವಿಗೂ ಅವನೇ ಅಧಿಪತಿಯು. ಇಂತಹ ಈಶ್ವರನನ್ನು ಆಹ್ವಾನಿಸಿ ಪೂಜಿಸಿ ಆರಾಧಿಸದೆ ಶಿವ ರಹಿತವಾದ ಯಜ್ಞವನ್ನು ಆಚರಿಸುತ್ತಿರುವುದರಿಂದ, ನಿನ್ನ ಯಜ್ಞವು ನಿರ್ವಿಘ್ನ ವಾಗಿ ನಡೆಯಲಾರದು. ಇದು ನಾನಾ ವಿಧವಾದ ವಿಪತ್ತುಗಳಿಗೆ ಎಡೆಗೊಡು ವುದು.

ಯಸ್ಮಾನ್ನಾರಾಧಿತೋ ರುದ್ರಸ್ಸರ್ವದೇವೇಶ್ವರೇಶ್ವರಃ ।
ತಸ್ಮಾದ್ದಕ್ಷ ತವಾಶೇಷೋ ಯಜ್ಞೋಽಯಂ ನ ಭವಿಷ್ಯತಿ ॥(19–20)

ಮತ್ತು ಎಲೈ ದಕ್ಷ, ಶಂಕರನ ಕಿಂಕರರನ್ನು ಆಶ್ರಯಿಸಿ ಪೂಜಿಸುವುದ ರಿಂದ ಪ್ರಯೋಜನಕ್ಕೆ ಬದಲು, ವಿಪತ್ತೇ ಫಲವು. ಯಜ್ಞಕ್ಕೆ ಅಧಿಪತಿಯಾದ, ತ್ರಿಭುವನದೊಡೆಯನೂ, ತ್ರಿಶೂಲಧರನೂ, ಪಶುಪತಿಯೂ, ಆದ ಮೃತ್ಯುಂ ಜಯನನ್ನೇ ನೀನು ಉಪೇಕ್ಷಿಸಿ ಯಾಗವನ್ನು ಆಚರಿಸುತ್ತಿರುವುದರಿಂದ ನಿನ್ನ ಯಾಗವು ನಾಶವಾಗುವುದಲ್ಲದೆ, ನಿನಗೆ ಕೇಡು ತಪ್ಪಿದ್ದಲ್ಲವೆಂದು ಹೇಳಿದನು.

ಅದಕ್ಕೆ ಮೃತ್ಯುಮುಖನಾದ ದಕ್ಷನು, ಎಲೈ ದಧೀಚಿಯೇ ನಿನ್ನ ಶಿವನು ಅನಾಮಿಕ, ಅಬದ್ಧ ನಿರ್ಗುಣ ದೈವ; ಅವನನ್ನು ಈ ಪವಿತ್ರ ಯಜ್ಞ ಶಾಲೆಯಲ್ಲಿ ನೆನೆಯಬೇಡವೆಂದು ನುಡಿದನು. ಆಗ ದಧೀಚಿಯು ಉದ್ರೇಕದಿಂದ ಎಲೈ ದಕ್ಷನೇ ಯಜ್ಞದಲ್ಲಿ ಅಪೂಜ್ಯನಂ ಪೂಜಿಸುವುದರಿಂದ ತತ್‌ಕ್ಷಣವೇ ಮೃತ್ಯು ಸಂಭವಿಸುವುದೆಂದು ಶಾಸ್ತ್ರಜ್ಞರು ಹೇಳುವರು. ಸರ್ವಶ್ರೇಷ್ಠನಾದ ಮಹಾದೇವನೇ ಅಧ್ವರೇಶ್ವರನೆಂದು ವೇದಗಳ ಅಭಿಮತವು. ಆ ಪರಮೇಶ್ವರನಿಗೆ ಯಾಗದಲ್ಲಿ ಪ್ರಥಮ ಪೂಜೆ ಸಲ್ಲತಕ್ಕದ್ದು ಎಂದು ಮತ್ತೆ ಹೇಳಿದನು. ಅದಕ್ಕೆ ದಕ್ಷನು ಪ್ರತಿಯಾಗಿ ಶಿವನಿಗೆ ಬದಲಾಗಿ, ಈಶಾನನನ್ನೂ, ಏಕಾದಶರುದ್ರ

ರನ್ನೂ ಪೂಜಿಸುವೆನಲ್ಲದೆ 'ಶಿವನನ್ನು ಪೂಜಿಸಲಾರೆನೆಂದು ಗರ್ವ
ನುಡಿದನು. ಅದಕ್ಕೆ ದಧೀಚಿಯು, ಎಲೈ ಮೂರ್ಖನಾದ ದಕ್ಷನೇ
ರುದ್ರರು ದೇವತೆಗಳಿಗಿಂತಲೂ ಶ್ರೇಷ್ಠರೇನೋ ಹೌದು. ಆದರೂ
ಶಿವನಿಗೆ ಸಮನಾಗಬಲ್ಲರೇ? ಉತ್ತಮವಾದ ನಿನ್ನ ಯಜ್ಞಕ್ಕೆ ಅವರು
ರಲ್ಲ. ಅವರು ಯಜ್ಞಭಾಗವನ್ನು ಸ್ವೀಕರಿಸುವುದೂ ಇಲ್ಲ. ಒಮ್ಮೆ ನಿನ್ನ
ನಾದ ಬ್ರಹ್ಮನು ತನ್ನ ಕೈಗಳನ್ನು ಮೇಲಕ್ಕೆತ್ತಿ ಋಷಿಗಳನ್ನು ಸಂಬೋಧಿ
ಎಲೈ ಋಷಿಗಳಿರಾ! ಸರ್ವ ವಿದ್ಯೆಗಳಿಗೂ ಈಶ್ವರನಾದ, ಜಗತ್ಪ್ರಭುವಾ
ಶಂಭುವಾದ, ಬ್ರಹ್ಮಾಧಿಪತಿಯಾದ, ಅವ್ಯಯನಾದ, ಪರಂಜ್ಯೋತಿಯಾದ
ಓಂಕಾರನಿಲಯನಾದ, ಶಂಕರನೇ ಪರಬ್ರಹ್ಮನು. ನನಗೂ ಅವನೇ ಪ್ರಭು
ಇದು ಸತ್ಯ ಎಂದು ಘೋಷಿಸಿದನು. ಅಲ್ಲದೆ ವೇದಗಳು ಸತ್ಯನಾದ, ಬ್ರಾಹ್ಮ
ನಾದ, ಪುರುಷನಾದ, ಕೃಷ್ಣಪಿಂಗಳನಾದ, ಊರ್ಧ್ವರೇತಸ್ಕನಾದ ಶಂಕ
ಸರ್ವೇಶ್ವರನು. ಈ ಮಹಾದೇವನು, ಹರಿಬ್ರಹ್ಮರಿಗೂ ಅಗೋಚರ
ಬ್ರಹ್ಮಾದಿಗಳು ಪಶುವೆಂದು ಹೇಳಲ್ಪಡುವರು. ಅವರಿಗೆ ಶಂಕರನು ಅಧಿ
ಯಾದುದರಿಂದ, ಪಶುಪತಿಯಾದನು. ಆದುದರಿಂದ ನೀನು ಈಗಲಾದ
ವಿವೇಕ ತಂದುಕೊಂಡು, ಶಿವ–ಶಿವೆಯರನ್ನು ಪ್ರಾರ್ಥಿಸಿ ಕರೆತಂದು, ಪೂಜಿ
ಅವರಿಗೆ ಯಜ್ಞಭಾಗವನ್ನು ಅರ್ಪಿಸಿ ಕೃತಾರ್ಥನಾಗೆಂದು ವಿವೇಕ ಹೇಳಿದ
ಮತ್ತೆ ಅವನನ್ನು ಕುರಿತು, ನೀನು ಶಿವಮಾಯೆಯಿಂದ ಮೋಹಿತನಾ
ಶಿವರಹಿತವಾದ ಯಜ್ಞವನ್ನಾಚರಿಸಿ, ನೀನಾಗಿಯೇ ಮೃತ್ಯುದೇವತೆಯ
ಆಹ್ವಾನಿಸುತ್ತಿರುವೆ. ಶಿವನು ಮಾಯಾತೀತನು. ಈ ವಿಷ್ಣು ಬ್ರಹ್ಮರಾದಿ
ಮಾಯಾಸಹಿತರು. ಅವರು ಮಾಯೆಯನ್ನು ನಿಗ್ರಹಿಸಲಸಮರ್ಥರು
ಆದುದರಿಂದಲೇ ಅವರು ತಮ್ಮ ಸ್ವಾರ್ಥ ಸಾಧನೆಯ ದುರುದ್ದೇಶದಿಂದ ನಿ
ಬೆಂಬಲ ನೀಡಿ ನಿನ್ನ ನಾಶದ ಜೊತೆಗೆ ತಾವೂ ನಾಶಹೊಂದುವುದರಲ್ಲಿ ಯಾ
ಸಂಶಯವೂ ಇಲ್ಲ ಎಂದು ಎಚ್ಚರಿಸಿದನು. ಇದನ್ನು ಕೇಳಿದ ದಕ್ಷನು
ದೆದ್ದು, ಎಲೈ ದಧೀಚಿಯೆ! ನಾನೆಂದಿಗೂ ಆ ಸ್ಮಶಾನವಾಸಿಯೂ, ಚರ್ಮ
ಧಾರಿಯೂ, ಅಶುದ್ಧನೂ ಆದ ಶಿವನನ್ನು ಸರ್ವೇಶ್ವರನೆಂದು ಅಂಗೀಕ
ಲಾರೆ. ಅವನಾರಾದರೇನು? ಅವನಿಗೆ ಹವಿರ್ಭಾಗವನ್ನು ಎಂದಿಗೂ ಕೊಡ
ಲಾರೆನು. ಈ ಯಜ್ಞದಲ್ಲಿ ಭಾಗವಹಿಸುವ ಧೈರ್ಯ ನಿನಗಿಲ್ಲದ ಪಕ್ಷ
ನೀನು ಇಲ್ಲಿಂದ ಹೊರಟುಹೋಗು ಎಂದು ಬಿರುನುಡಿದನು.

ದಧೀಚಿ ಶಾಪ :

ಇದನ್ನು ಕೇಳಿದ ದಧೀಚಿಯು, ಕೋಪೋದ್ರಿಕ್ತನಾಗಿ, ಕಣ್ಣಿನಿಂದ ಕಿಡಿ ಕಾರುತ್ತಿರಲು, ತನ್ನ ಯೋಗದಂಡವನ್ನು ಮೇಲಕ್ಕೆತ್ತಿ ಎಲೈ ದಕ್ಷನೇ ಕೇಳು! ನಿನಗೆ ಮೃತ್ಯು ಸನ್ನಿಹಿತವಾಗಿದೆ. ಆದ್ದರಿಂದಲೇ ನನ್ನ ಹಿತೋಪದೇಶವು ನಿನಗೆ ಹಿಡಿಸದಾಯಿತು. ಶಿವರಹಿತವಾದ ಈ ನಿನ್ನ ಯಜ್ಞವು ನಾಶವಾಗಲಿ. ನಿನ್ನ ತಲೆಯು ಹುಡಿಯಾಗಲಿ, ಈ ಯಾಗಕ್ಕೆ ಬೆಂಬಲವಾಗಿರುವ ಹರಿಯು ಮಡಿಯಲಿ, ಪೂಷನ ಹಲ್ಲು ಮುರಿಯಲಿ, ಕಾಲನ ಕೈಗಳು ಭಂಗವಾಗಲಿ, ಇಂದ್ರನು ಹಿಂಸೆ ಪಡಲಿ, ಬ್ರಹ್ಮನ ಮಡದಿಯ ನಾಸಿಕವು ಭಂಗವಾಗಲಿ, ದಿಕ್ಪಾಲಕರು ನಿಗ್ರಹಿಸಲ್ಪಡಲಿ, ಅಗ್ನಿಯ ನಾಲಗೆಯು ಕತ್ತರಿಸಲ್ಪಡಲಿ, ದೇವ ಗಣ ಮರಣವನ್ನೈದಲಿ, ಅರಿಯದೆ ಬಂದ ಮುನಿಸ್ತೋಮವು ಶಿವನನ್ನು ಮೊರೆಹೊಕ್ಕು ಕ್ಷಮಾದಾನ ಬೇಡಲಿ, ಈ ಯಜ್ಞದಲ್ಲಿ ಭಾಗಿಗಳಾಗಿರುವ ಇತರೆಯವರೆಲ್ಲಾ ನರಕ ಭಾಗಿಗಳಾಗಲಿ, ಎಂದು ಶಾಪಕೊಟ್ಟು, ಅಲ್ಲಿ ಒಂದು ಕ್ಷಣವೂ ನಿಲ್ಲದೆ ನಿರ್ಗಮಿಸಿದರು. ದಧೀಚಿಗಳ ಶಾಪಜ್ವಾಲೆಯಿಂದ ಸಂತಪ್ತ ರಾದ ಎಂಟು ಸಾವಿರ ಋಷಿಗಳು, ಅರಿಯದೆ ಮಾಡಿದ ಅಪರಾಧಕ್ಕಾಗಿ ಪಶ್ಚಾತ್ತಾಪ ಪಟ್ಟು ಶಿವನನ್ನು ಧ್ಯಾನಿಸುತ್ತಾ, ತಾವು ದಕ್ಷನನ್ನು ಶಪಿಸಿ, ಯಾಗ ಶಾಲೆಯನ್ನು ಬಿಟ್ಟು ದಧೀಚಿಗಳನ್ನು ಹಿಂಬಾಲಿಸಿದರು.

ಉಳಿದ ಶಾಪಗ್ರಸ್ತ ಮೂವತ್ತೆರಡು ಮುನಿಗಳು ದಕ್ಷ ಹಾಗೂ ವಿಷ್ಣುವಿನ ಭಯದಿಂದ ಅಲ್ಲಿಯೇ ಉಳಿದರು. ದಧೀಚಿಗಳು ಶಪಿಸಿದ ಕೂಡಲೇ ಅನೇಕ ದುಶ್ಶಕುನಗಳು ತಲೆ ದೋರಿದವು. ಯಾಗ ಶಾಲೆಯು ಅರ್ಥವಾಗಿ ಎಲ್ಲೆಲ್ಲಿಯೂ ಹಾಹಾಕಾರ ಉಂಟಾಯಿತು.

ಶಿವನಿಗೆ ನಾರದರಿಂದ ಯಜ್ಞದ ವಿವರಣೆ :

ಇಷ್ಟಾದರೂ ಹರಿಬ್ರಹ್ಮಾದಿಗಳು ಅಚಲರಾಗಿ ಕುಳಿತಿದ್ದರು. ತಮಗೆ ಮುಂದೆ ಸಂಭವಿಸಲಿರುವ ಪರಾಭವವನ್ನು ಅವರು ಮೊದಲೇ ಅರಿತಿದ್ದರು. ಇದನ್ನೇ ವಿಧಿವಿಲಾಸವೆಂದು ಕರೆಯುವುದು. ಇವರ ಪ್ರೇರಣೆಯಿಂದ ದಕ್ಷನು ಧೈರ್ಯ ತಂದು ಕೊಂಡು ಯಜ್ಞವನ್ನು ಪ್ರಾರಂಭಿಸಿದನು. ಇದೇ ಸಮಯವೆಂದು ಕಲಹಪ್ರಿಯ ನಾರದರು ಕೈಲಾಸಕ್ಕೆ ತೆರಳಿ, ಶಿವನಿಗೆ ದಕ್ಷಯಜ್ಞದ ವಿವರಗಳನ್ನೆಲ್ಲಾ ವಿವರಿಸಿದರು.

ಇತ್ತ ಕೈಲಾಸದಲ್ಲಿ ಇದನ್ನೆಲ್ಲಾ ಕೇಳಿದ ಶಿವೆಯು ತನ್ನ ಪಿತನ
ಶಿವನಿಂದೆಯನ್ನು ಸೈರಿಸಲಾರದೆ, ಹೇಗಾದರೂ ಮಾಡಿ ಯಾಗಕ್ಕೆ
ದಕ್ಷನಿಗೆ ಬುದ್ಧಿ ಕಲಿಸ ಬೇಕೆಂದು ತೀರ್ಮಾನಿಸಿದಳು. ನಂತರ ಶಿ
ಕುರಿತು ಸ್ವಾಮಿಯೇ ! ನಾನು ಯಾಗಕ್ಕೆ ಹೋಗಿ ದಕ್ಷನಿಗೆ ವಿವೇಕ
ಬರುವೆನು. ನನ್ನನ್ನು ಆಶೀರ್ವದಿಸೆಂದು ಬೇಡಿದಳು. ಆಗ ಶಂಕರನು
ನಗುತ್ತಾ ಎಲೇ ದೇವಿ ! ದಕ್ಷನು ಗರ್ವಿಯಾಗಿ ನನ್ನನ್ನು ಅಪಮಾ
ಬೇಕೆಂದು ನನ್ನನ್ನೂ ಆಹ್ವಾನಿಸದೆ ಯಾಗವನ್ನು ಆರಂಭಿಸಿರುವನು.
ಹಾಗೂ ದಧೀಚಿಗಳ ಶಾಪದಿಂದ ಯಜ್ಞ ಭಂಗವಾಗಿ ಅನೇಕ ಅನಾ
ಗಳಾಗುವುವು. ಆ ಪಾಪಿ ದಕ್ಷನು ನಿನ್ನನ್ನು ಅಪಮಾನಗೊಳಿಸುವನೇ
ಮಗಳೆಂದು ಮಮತೆ ತೋರುವುದಿಲ್ಲ. ಅಲ್ಲದೆ ಕರೆಯದ ಸ್ಥಳಕ್ಕೆ
ವುದೂ ಯುಕ್ತವಲ್ಲವೆಂದು ತಿಳಿಸಿದನು. ಆಗ ಸತಿಯು ಶಿವನನ್ನು ಕುರಿತು
ಶಂಕರನೆ ದಕ್ಷನು ನನ್ನ ತಂದೆ, ಮಗಳು ತೌರಿಗೆ ಹೋಗಲು ಯಾವ
ದಾಯ ಬದ್ಧವಾದ ಅಡ್ಡಿಯೂ ಇರದು. ' ಅನಾಹೂತೋಽಧ್ವರಂ ಗ
ಹೂತಃ ಸ್ಮಾರ್ತಕರ್ಮಣಿ' ಎಂಬಂತೆ ದೇವತಾ ಪ್ರೀತಿಕರಗಳಾದ ಯಾ
ಮಹೋತ್ಸವಗಳಿಗೆ ಕರೆಯಿಸಿಕೊಳ್ಳದೆ ಹೋಗುವುದು ತಪ್ಪಾಗಲಾ
ವಿವಾಹ ಮೊದಲಾದ ಸ್ಮೃತ್ಯುಕ್ತ ಕರ್ಮಾಚರಣೆಗಳಿಗೆ ಕರೆಯದೆ
ಬಾರದೆಂದು ಶಾಸ್ತ್ರ ನಿಯಮವಿರುವುದು. ಅಲ್ಲದೆ ನಾರದರು ತಿಳಿ
ದಕ್ಷನು ನಿನ್ನನ್ನು, ನಿನ್ನ ಕಿಂಕರರಿಂದ ತುಂಬಿದ ಸಭೆಯಲ್ಲಿ ನಿಂದಿಸಿ
ಅದನ್ನು ಕೇಳಿದಾಗಿನಿಂದಾ ನನ್ನ ಮನಸ್ಸು ದುಃಖದಿಂದ ಪರಿತಪಿಸು
ಆ ಶಿವನಿಂದೆಯು ನನ್ನ ಸತೀತ್ವಕ್ಕೆ ಸವಾಲಿನಂತಿದೆ. ಆದುದರಿಂದ
ಹೋಗಿ ದಕ್ಷನಿಗೆ ತನ್ನ ಸತೀತ್ವದ ಪ್ರಭಾವವನ್ನು ತೋರಿ ಬುದ್ಧಿ
ದಾಗಿ ಶಿವನ ಅನುಮತಿಯನ್ನು ಪಡೆದು, ಪ್ರಯಾಣಕ್ಕೆ ಸಿದ್ಧಳಾದಳು.

ಸತಿಯ ಆಗಮನ:

ಜಗನ್ಮಾತೆಯಾದ ದಾಕ್ಷಾಯಣಿಯು ಶಿವನ ಅಪ್ಪಣೆಯನ್ನು
ಮಿತಪರಿವಾರದೊಡನೆ, ಸರ್ವಾಲಂಕಾರಭೂಷಿತಳಾಗಿ, ಸಂಭ್ರಮ
ಪ್ರಸನ್ನವದನಳಾಗಿ ಪುಷ್ಪಕದಲ್ಲಿ ದಕ್ಷನ ಯಾಗಶಾಲೆಗೆ ಪ್ರ
ಮಾಡಿದಳು. ಆಗ ಅಂತರಿಕ್ಷದಲ್ಲಿ ದೇವದುಂದುಭಿಗಳು ಮೊಳ

ಗಂಧರ್ವರು ಪೂಮಳೆಗರೆದರು. ದೇವತೆಗಳು ಹಾಗೂ ಮುನಿಪುಂಗವರು ಹೀಗೆ ಅನಿರೀಕ್ಷಿತವಾಗಿ ಲಭಿಸುವ ಜಗನ್ಮಾತೆಯ ದರ್ಶನ ಭಾಗ್ಯ ಪಡೆಯಲು ತವಕ ದಿಂದ ಬಂದು ಮಾರ್ಗದ ಇಕ್ಕೆಡೆಗಳಲ್ಲಿಯೂ, ಸಾಲಾಗಿ ನಿಂತು ದೇವಿಯ ದರ್ಶನದಿಂದ ಪುನೀತರಾಗಿ ದೇವಿಯನ್ನು ನಾನಾ ವಿಧದಿಂದ ಪ್ರಾರ್ಥಿಸಿದರು. ಅವರು ಮಾಡಿದ ಜಯಘೋಷವು ಆಗಸವನ್ನೆಲ್ಲಾ ತುಂಬಿ ಪ್ರತಿಧ್ವನಿ ಮಾಡಿತು.

ನನೃತುರ್ಮುನಯಸ್ಸರ್ವೇ ಮುಮುದುಃ ಸಿದ್ಧಿಯೋಗಿನಃ ।
ಸಸೃಜುಃ ಪುಷ್ಪವೃಷ್ಟಿಂ ಚ ವಿತೇನುಃ ಪರಿಚಾರಿಕಾಃ॥ (ಶಿ.ಪು. 18-36)

ದೇವಿಯು ಹೀಗೆ ಸಕಲ ಮರ್ಯಾದೆಗಳೊಡನೆ ಯಾಗಶಾಲೆಯನ್ನು ಸಮೀಪಿ ಸುತ್ತಿರಲು, ಮಹಾದ್ವಾರದಲ್ಲಿದ್ದ ವಂದಿಮಾಗಧರು ಜಯಘೋಷಮಾಡಿದರು. ವಾದ್ಯಘೋಷವು ಯಾಗಶಾಲೆಯಲ್ಲಿದ್ದವರ ಮನಸ್ಸನ್ನು ಆಕರ್ಷಿಸಿತು. ನಂತರ ದಿಕ್ಪಾಲಕರು ದೇವಿಯ ಗುಣಗಾನ ಮಾಡುತ್ತಾ ಭವ್ಯ ಸ್ವಾಗತ ನೀಡಿ ಭಕ್ತಿ ಗೌರವಗಳಿಂದ ಜಯಕಾರ ಮಾಡುತ್ತಿದ್ದಂತೆಯೇ ದೇವಿಯು ಯಾಗಶಾಲೆಯನ್ನು ಪ್ರವೇಶಿಸಿದಳು. ಶಿವ-ಶಿವೆಯರು ಬಾರದಿದ್ದರಿಂದ ನಿರಾಶರೂ, ದಧೀಚಿಗಳ ಶಾಪದಿಂದ ಭೀತರೂ ಆದ ಸಭಾಸದರು, ಕೂಡಲೇ ತಮ್ಮ ಆಸನಗಳಿಂದ ಎದ್ದು ದೇವಿಗೆ ಅನನ್ಯ ಭಕ್ತಿಯಿಂದ ನಮಸ್ಕರಿಸಿ ಸ್ತೋತ್ರಮಾಡಲಾರಂಭಿಸಿದರು. ಹರಿಬ್ರಹ್ಮಾದಿ ದೇವತೆಗಳು ತಮ್ಮ ಸ್ಥಳ ದಿಂದಲೇ ದೇವಿಗೆ ನಮಸ್ಕರಿಸಿ ಗೌರವಿಸಿದರು. ಇನ್ನು ಕೆಲವರು ದೇವಿಯ ಸುತ್ತಲೂ ಗುಂಪಾಗಿ ಸೇರಿ ಸ್ತುತಿಸಹತ್ತಿದರು. ಲಕ್ಷ್ಮಿ, ಸರಸ್ವತಿಯರೆಲ್ಲಾ ತಮ್ಮ ತಮ್ಮ ಸ್ಥಾನಗಳಿಂದಲೇ ದೇವಿಯನ್ನು ವಂದಿಸಿ ಗೌರವಿಸಿದರು. ಇಷ್ಟೆಲ್ಲಾ ನಡೆಯುತ್ತಿರಲು ಯಜ್ಞ ಮಂಟಪದ ಸಮೀಪದಲ್ಲಿದ್ದ ದಾಕ್ಷಾ ಯಣಿಯ ತಾಯಿ ಮತ್ತು ತಂಗಿಯರೂ, ಗೆಳತಿಯರೂ, ಪರಿಚಾರಕರೂ ದೇವಿಯನ್ನು ದೂರದಿಂದಲೇ ನೋಡಿ ಸಂತೋಷದಿಂದ ಕುಣಿದಾಡಿ ಓಡಿಬಂದು ಅವಳನ್ನು ತಬ್ಬಿಕೊಂಡು ಕುಣಿದಾಡಿದರು. ದೇವಗಣವು ಭಕ್ತಿಯಿಂದ ತಾಯಿ ಜಗಜ್ಜನನಿ, ಸರ್ವಮಂಗಳೆ, ಕಾತ್ಯಾಯನಿ, ದಯಾಮಯಿ, ಅನ್ನಪೂರ್ಣೆ, ವಿದ್ಯಾಪ್ರದಾಯಕಿ, ಭಕ್ತವತ್ಸಲೆ, ದಿವ್ಯತೇಜೋಮಯಿ, ಆದಿಶಕ್ತಿ, ಪ್ರಕೃತಿ ಸ್ವರೂಪಿಣಿ, ಚಂದ್ರಶೇಖರನ ಅರ್ಧಾಂಗಿ, ಸಹಸ್ರಾರು ವರ್ಷಗಳು ಘೋರ

ತಪಸ್ಸನ್ನಾಚರಿಸಿದರೂ ದುರ್ಲಭವಾದ ನಿನ್ನ ಮಂಗಳಸ್ವರೂಪವನ್ನು ಕಾಣುವ ಭಾಗ್ಯ ನಮ್ಮ ಪೂರ್ವಾರ್ಜಿತ ಪುಣ್ಯವಿಶೇಷದಿಂದ ಲಭಿಸಿದೆ. ನಾವು ಪುನೀತರಾದೆವು. ಮಹಾತಾಯಿ ನಮ್ಮ ಎಲ್ಲಾ ಪಾಪಗಳೂ ನಿನ್ನ ದರ್ಶನಮಾತ್ರದಿಂದಲೇ ನಾಶವಾದವು. ಎಂದು ಬಗೆಬಗೆಯಾಗಿ ಸ್ತೋತ್ರ ಮಾಡುತ್ತಿದ್ದರು. ದೇವಿಯು ಭಕ್ತರ ಸಂತೋಷ, ಉತ್ಸಾಹ, ಅವರ ಸ್ತೋತ್ರಗಳಿಂದ ಪ್ರಸನ್ನವದನೆಳಾಗಿ ಅವರನ್ನೆಲ್ಲಾ ಹರಸುತ್ತಾ ಯಜ್ಞ ಮಂಟಪದ ಹತ್ತಿರ ಕುಳಿತಿದ್ದ ತನ್ನ ತಂದೆಯ ಬಳಿಗೆ ಹೋಗಿ ವಂದಿಸಿದಳು. ದಕ್ಷನು ಕರೆಯದಿದ್ದರೂ, ಪಿತೃವಾತ್ಸಲ್ಯದಿಂದ ಮಗಳುತಾನಾಗಿಯೇ ಬಂದು ಮುಂದೆ ನಿಂತು ವಂದಿಸಿದರೂ, ಅವಳನ್ನು ನೋಡದವನಂತೆ ಮುಖವನ್ನು ಬೇರೆಕಡೆಗೆ ತಿರುಗಿಸಿದನು. ಇದರಿಂದ ದೇವಿಗೆ ಅತ್ಯಂತ ದುಃಖವಾಯಿತು. ಇದನ್ನು ನೋಡಿದ ದೇವಿಯ ತಾಯಿ, ತಂಗಿಯರೂ ಸಖಿಯರೂ ಅತ್ಯಂತ ದುಃಖದಿಂದ ದೇವಿಯ ಮುಖವನ್ನೇ ನಿಸ್ಸಹಾಯಕತೆಯಿಂದ ನೋಡುತ್ತಾ ಚಿಂತಿಸುತ್ತಿದ್ದರು. ಉಕ್ಕಿ ಬರುತ್ತಿದ್ದ ದುಃಖವನ್ನು ಸಹಿಸಿಕೊಂಡು ತಂದೆಯನ್ನು ಕುರಿತು ಎಲೈ ಜನಕನೇ! ನಾನು ನಿನ್ನ ಮೆಚ್ಚಿನ ಮಗಳು; ನೀನು ಕರೆಯದಿದ್ದರೂ ಪಿತೃ ಪ್ರೇಮದಿಂದ ಪೀಡಿತಳಾಗಿ ನಾನೇ ಬಂದೆನು. ದೇವಾದಿ ದೇವತೆಗಳೂ, ಮುನಿಗಳೂ ಎಲ್ಲರೂ ನನಗೆ ವೈಭವಯುಕ್ತವಾದ ಸ್ವಾಗತ ನೀಡಿ ನನ್ನನ್ನು ವಿಧವಿಧವಾದ ಸ್ತೋತ್ರಗಳಿಂದ ತೃಪ್ತಿಪಡಿಸಿದರು. ಇದರಿಂದ ನನಗೆ ಆತ್ಮಾನಂದವಾಯಿತು. ಆದರೆ ತಂದೆಯಾದ ನೀನು ನನ್ನನ್ನು ಕಂಡರೂ ಒಂದು ಮಾತನ್ನೂ ಆಡಲಿಲ್ಲ. ನನ್ನ ಯೋಗ ಕ್ಷೇಮವನ್ನೂ ಕೇಳಲಿಲ್ಲ. ನಾನೇ ಬಂದು ಮಾತನಾಡಿಸಿದರೂ ಮುಖಕೊಡದೆ ತುಂಬಿದ ಸಭೆಯಲ್ಲಿ ನನ್ನನ್ನು ಈ ರೀತಿ ಅಪಮಾನಿಸಲು ಕಾರಣವನ್ನಾದರೂ ಹೇಳು. ಮಗಳು ತನ್ನ ತೌರಿಗೆ ಬರಲು ಯಾವ ಸಂಪ್ರದಾಯಗಳೂ ಅಡ್ಡಿ ಬರಲಾರವು. ನಿನ್ನ ಇತರ ಮಕ್ಕಳಾದ ನನ್ನ ತಂಗಿಯರನ್ನೆಲ್ಲಾ ಅವರವರ ಪತಿಗಳೊಡನೆ ಆಹ್ವಾನಿಸಿರುವೆ. ಆದರೆ ಜೇಷ್ಠಪುತ್ರಿಯೂ ನಿನ್ನ ಹೆಚ್ಚಿನ ಪ್ರೀತಿಗೆ ಪಾತ್ರಳೂ, ಪರಮೇಶ್ವರನ ಅರ್ಧಾಂಗಿಯೂ ಆದ ನನ್ನನ್ನು ಏನು ಕಾರಣ ಆಹ್ವಾನಿಸಲಿಲ್ಲ? ಮೇಲಾಗಿ ಯಜ್ಞಾಧಿಪತಿಯೂ, ಸರ್ವೇಶ್ವರನೂ ಆದ ಶಂಕರನನ್ನು ನೀನು ಉಪೇಕ್ಷಿಸಲು ಕಾರಣವೇನು? ಯಾರನ್ನು ಯಜ್ಞಾಧಿಪತಿಯನ್ನಾಗಿ ಮಾಡಿ, ಪೂಜಿಸಿ, ಯಜ್ಞಭಾಗವನ್ನು ಅರ್ಪಿಸ

ಬೇಕೋ ಅವರೇ ಇಲ್ಲದೆ ಯಜ್ಞವನ್ನು ಆಚರಿಸಬಹುದೇ? ಎಂದು ವಿಧ ವಿಧವಾಗಿ ಪ್ರಾರ್ಥಿಸುತ್ತಿದ್ದರೂ ದೇವಿಯ ಮುಖವನ್ನೂ ಕೂಡ ನೋಡದೆ ಉದಾಸೀನ ಭಾವದಿಂದಿದ್ದನು.

ದಕ್ಷನಿಗೆ ಹಿತೋಪದೇಶ :

ಇದನ್ನು ಕಂಡು ದೇವಿಗೆ, ಶಿವನ ಹಿತೋಪದೇಶವನ್ನು ಕೇಳದೆ ಬಂದ ಚಿಂತೆಯೊಂದು ಕಡೆ, ತುಂಬಿದ ದೇವಸಭೆಯಲ್ಲಿ ತನ್ನ ಜನಕನಿಂದಾದ ಅಪ ಮಾನದ ಸಂಕಟ ಒಂದು ಕಡೆ, ಹೀಗೆ ಉಭಯ ಸಂಕಟಗಳಿಂದ ತನ್ನನ್ನೇ ತಾನು ನಿಂದಿಸಿ ಕೊಂಡು ಮತ್ತೆ ದುಃಖ ಅಪಮಾನಗಳಿಂದ ಕೆಂಪೇರಿದ ಕಣ್ಣು ಗಳಿಂದಲೂ, ಗದ್ಗದ ಕಂಠದಿಂದಲೂ ಮತ್ತೆ ತಂದೆಯನ್ನು ಕುರಿತು, ಎಲೈ ಪಿತನೇ! ಶಂಕರನಲ್ಲಿ ನಿನಗೆ ದ್ವೇಷವು ಎಂದಿಗೂ ಸಲ್ಲದು. ಅವನು ಸರ್ವ ಶಕ್ತ, ಸರ್ವಕರ್ತ, ಸರ್ವ ಸಂಹರ್ತ. ಹರಿಬ್ರಹ್ಮಾದಿಗಳಿಗೂ ಅವನೇ ಕರ್ತನು. ಅವನು ತ್ರಿಗುಣಾತೀತನು. ನಿರಾಕಾರನು, ಸಾಕಾರನು, ಜ್ಞಾನ ಗೋಚರನು ಭಕ್ತವತ್ಸಲನು ಪಶುಪತಿಯು. ತನ್ನ ಲೀಲೆಗಾಗಿ ಅವನೇ ಈ ಬ್ರಹ್ಮಾಂಡವನ್ನು ಸೃಷ್ಟಿಸುವನು, ಪರಿಪಾಲನೆ ಮಾಡುವನು. ಕೊನೆಗೆ ತಾನೇ ಲಯಗೊಳಿಸು ವನು. ವೇದಗಳು ಅವನನ್ನು ಸರ್ವೇಶ್ವರನೆಂದೂ, ಸರ್ವತಂತ್ರಸ್ವತಂತ್ರ ನೆಂದೂ ಮುಕ್ತ ಕಂಠದಿಂದ ಸಾರುತ್ತಿರುವವು. ಅಲ್ಲದೆ ಶಿವನೇ ವಿಶ್ವವು, ವಿಶ್ವವೇ ಶಿವನು. ಅವನು ಸರ್ವಾಂತರ್ಯಾಮಿ. ಎಲ್ಲ ಜೀವಿಗಳ ಹೃದಯ ಕಮಲದಲ್ಲಿ ಅಗೋಚರನಾಗಿ ನೆಲೆಸಿರುವನು. ಸಕಲ ದೇವತೆಗಳೂ ಅವನ ಇಚ್ಛೆಯಿಂದಲೇ ತಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ನೆರವೇರಿಸುತ್ತಿರುವರು. ಹರಿಬ್ರಹ್ಮಾದಿ ದೇವತೆಗಳು ಅವನನ್ನು ನಾನಾ ವಿಧದಿಂದ ಆರಾಧಿಸಿ ಸೇವಿಸಿ ತಮ್ಮ ತಮ್ಮ ಸ್ಥಾನಗಳನ್ನು ಪಡೆದಿರುವರು. ಶಿವನು ಮಾಯಾರಹಿತನು. ಈ ದೇವತೆ ಗಳಾದರೋ ಮಾಯೆಗೆ ವಶರಾದವರು. ಶಿವನು ನಾಶರಹಿತನು. ಉಳಿದೆಲ್ಲಾ ಜೀವಿಗಳೂ ಅವನಿಂದ ನಾಶಹೊಂದುವವರು. ನೀನು ಶಿವರಹಿತವಾದ ಯಜ್ಞ ವನ್ನು ಮಾಡುವುದು ಶ್ರೇಯಸ್ಕರವಲ್ಲ ಎಂದು ಹೇಳಿದಳು.

ವೇದಗಳಿಂದ ಶಿವಪಾರಮ್ಯವನ್ನು ಹೊಗಳಿಸಬಯಸಿ, ಸತಿಯು, ಶಿವನ ಪಾರಮ್ಯದಲ್ಲಿ, ತನ್ನ ಯಥಾರ್ಥವಾದ ಅಭಿಪ್ರಾಯವನ್ನು ಹೇಳುವಂತೆ ಸಾಮ ವೇದಕ್ಕೆ ಆಜ್ಞಾಪಿಸಿದಳು. ದೇವಿಯ ಅಪ್ಪಣೆಯಂತೆ, ಸಾಮವೇದವು, ತನ್ನ

ಶಿರಸ್ಸಿನಲ್ಲಿ ಅಂಜಲಿಯನ್ನಿಟ್ಟು ದೇವಿಗೆ ವಂದಿಸುತ್ತಾ, ಸಭಿಕರನ್ನು ಕುರಿತು

ಅಗ್ನಿರೂಪೋ ಮಹಾದೇವೋ ಮಾಮಾಯೂತು ಸವೀತಯೇ ।
ಹವ್ಯದಾತಾರಮೀಶಾನಂ ಹವ್ಯಭೋಕ್ತಾರಮೀಶ್ವರಂ ॥
(ಶಿ.ರ. 12-4-3)

ಮಹಾದೇವನು ಅಗ್ನಿರೂಪನು. ಅಂತಹ ದೇವ ದೇವನು ನನಗೆ ಜ್ಞಾನ ಪ್ರದನಾಗಲಿ; ದೇವತೆಗಳಿಗೆ ಹವ್ಯವನ್ನು ಅನುಗ್ರಹಿಸುತ್ತಾ ತಾನೂ ಈಶ್ವರ ರೂಪದಿಂದ ಹವ್ಯವನ್ನು ಸ್ವೀಕರಿಸುತ್ತಾ ಇರುವ ಪರಮಾತ್ಮನನ್ನು ಸಾಮಗಾನದಿಂದಲೇ ಮನಃ ಪೂರ್ವಕವಾಗಿ ಪ್ರಾರ್ಥಿಸುವೆನು.

ಹಿರಣ್ಯರೂಪಂ ದೇವೇಶಂ ಕೃಣುಧ್ವಮವಸೇ ಸುರಾಃ ।
ಅಧಿಪತಿರ್ಮಿತ್ರಪತಿಃ ಶಿವಕ್ಷೇತ್ರಪತಿಸ್ಸುರಾಃ ॥ (ಶಿ.ರ. 12-4-8)

ಹಿರಣ್ಯ ರೂಪದಿಂದ ವಿರಾಜಿಸುವ ದೇವದೇವನೂ, ಸಕಲದೇವ ಗಳನ್ನೂ ರಕ್ಷಿಸುವವನು ಶಂಕರನೇ. ಸೂರ್ಯಾದಿ ಗ್ರಹಗಳಿಗೂ, ಶಿವಕ್ಷೇತ್ರ ಗಳಿಗು, ಅಧಿಪತಿ ಯೆನಿಸಿರುವ ಮಹೇಶ್ವರನೇ, ನಿಜವಾಗಿಯೂ, ದೇವ ಶ್ರೇಷ್ಠನು.

ಏಷೋಽನ್ತರೋ ಮಹಾದೇವ ಆದಿತ್ಯೇ ದೃಶ್ಯತೇ ವಿಭುಃ ।
ಹಿರಣ್ಯಶ್ಮಶ್ರುರೀಶಾನೋ ಹಿರಣ್ಮಯಸುಕೇಶವಾನ್ ॥
(ಶಿ.ರ. 12-4-2[?])

ಸರ್ವ ಏವ ಸುವರ್ಣೋಽಯಂ ಶಿವೋಽಽದ್ಯಾತ್ಪ್ರಣವಾತ್ಸುರಾಃ ।
ಸೀಮಾ ಭೂಮಾ ಮಹಾನಾತ್ಮಾ ವಿಶ್ವರೂಪೋ ಮಹೇಶ್ವರಃ ॥
(4-2[?])

ಕಂಖಂ ಬ್ರಹ್ಮೇಶ್ವರೋ ಹ್ಯೇಷ ಮಹಾದೇವಃ ಪ್ರಕಾಶತೇ ।
ವೈಶ್ವಾನರಾತ್ಮಾ ತ್ರಿಮಧುಸ್ತ್ರಿಸುಪರ್ಣೋ ಹ್ಯತೀಂದ್ರಿಯಃ ॥
(4-[?])

ಸೂರ್ಯಮಂಡಲ ಮಧ್ಯವರ್ತಿಯಾಗಿ ಕಾಣುವ ಪರಮಾತ್ಮನು ಈತನೇ; ಹಿರಣ್ಯವರ್ಣದಿಂದಿರುವ ಮೀಸೆಯುಳ್ಳವನೂ, ಹಿರಣ್ಯದಂತೆ ಹೊಳೆ ಸುವ ಕೇಶಪಾಶವುಳ್ಳವನೂ, ಆದಿಪ್ರಣವರೂಪಿಯೂ, ಪ್ರಕಾಶಮಾನ

ವರ್ಣವುಳ್ಳವನೂ, ಆದ ಪರಶಿವನೇ ಪ್ರಪಂಚಕ್ಕೆಲ್ಲಾ ಒಂದು ಎಲ್ಲೆಯಂತಿರುವನು. ಅವನೇ ಪ್ರಪಂಚರೂಪಿಯು. ಕಕಾರದಿಂದಲೂ, ಖಕಾರದಿಂದಲೂ, ಬ್ರಹ್ಮ ಅಂತರಿಕ್ಷವೆನಿಸಿ, ಅವುಗಳಿಗೆ ಪತಿ ಎನಿಸಿರುವವನು ಈ ಮಹಾದೇವನೊಬ್ಬನೇ, ಅವನೇ ಸ್ವಯಂಪ್ರಕಾಶಕನು.

ಮಾವದೇವಸಾಮವು ಮಹೇಂದ್ರಾತ್ಮಕವಾದದ್ದು. ಪರಶಿವನೇ ಸರ್ವಸಾಮರೂಪನು. ಎಲೈ ದೇವತೆಗಳಿರಾ, ನೀವು ಇನ್ನು ಮುಂದೆ ತಪ್ಪದೆ, ಮಹಾದೇವನನ್ನೇ ಭಕ್ತಿಯಿಂದ ಆರಾಧಿಸಿರಿ. ಆದರಿಂದ ನಿಮಗೆ ಭುಕ್ತಿಮುಕ್ತಿಗಳು ದೊರೆಯುವುವು. ಈ ನನ್ನ ಮಾತನ್ನು ನಂಬಿರಿ. ಈ ನನ್ನ ಮಾತಿಗೆ ಮಹೇಶ್ವರನೇ ಪ್ರಮಾಣವು. ಹೀಗೆ, ಸಹಸ್ರ ಶಾಖೆಗಳಿಂದಲೂ, ನಾನಾವಿಚಾರಗಳಿಂದಲೂ, ಕೂಡಿ, ಶಿವಪ್ರಿಯವಾಗಿರುವ ಸಾಮವೇದವು ಶಿವನೇ ಸರ್ವೋತ್ಕೃಷ್ಟನೆಂದು ಹೇಳಿ ಶಾಂತವಾಯಿತು.

ನಂತರ ಸತೀದೇವಿಯು, ಅಥರ್ವಣವೇದವನ್ನು ಕುರಿತು ಶಿವನ ವಿಷಯವಾಗಿ ತನ್ನ ಅಭಿಪ್ರಾಯವನ್ನು ನೀಡುವಂತೆ ಆಜ್ಞಾಪಿಸಿದಳು. ಆಗ ಅಥರ್ವಣವೇದವು, ಸತಿಗೆ ಕೈಮುಗಿದು ಭಕ್ತಿಯಿಂದ–ಬ್ರಹ್ಮಸ್ವರೂಪನೂ, ರುದ್ರರೂಪನೂ, ವಿಷ್ಣುವಿನ ಆಕಾರದವನೂ, ಉಮಾದೇವಿಯ ಆಕಾರರಂಜಿತನೂ, ಆಗಿರುವ ದೇವರೆಂದರೆ ಪರಮೇಶ್ವರನೇ. ಅವನೇ ಷಡ್ಗುಣೈಶ್ವರ್ಯಸಂಪನ್ನನು. ಅವನೇ ಪರಬ್ರಹ್ಮನು. ಓಂಕಾರಾದಿಯಾದ,ಓಂಕಾರಾಂತವಾದ, ಓಂಕಾರಸಹಿತವಾದ ಭೂಃ, ಭೂವಃ ಸ್ವಃ ಎಂಬ ಪದಗಳೂ, ಪರಶಿವನ ಸ್ವರೂಪನನ್ನೇ ಬೋಧಿಸುವುವು. ನಾರಾಯಣನೇ ಮೊದಲಾದ ದೇವತೆಗಳಿಗೆಲ್ಲಾ ಉತ್ಪತ್ತಿಸ್ಥಾನನು ಈತನು. ಯಾರಿಂದಲೂ ತಿಳಿಯಲಾಗದವನು. ಸರ್ವೇಂದ್ರಿಯಗಳ ಗುಣಗಳಿಂದಲೂ ಕೂಡಿದವನು ಈ ಪರಶಿವನು. ಸರ್ವರ ಹೃದಯದಲ್ಲಿಯೂ ಅಡಗಿ, ಎಲ್ಲವನ್ನೂ ನೋಡುತ್ತಾ ಸಕಲ ಕಾರ್ಯಕ್ಕೂ ಕರ್ತನೆನಿಸಿ, ಪ್ರಕಾಶಿಸುತ್ತಿರುವವನು ಈಶ್ವರನೊಬ್ಬನೇ. ಪರಶಿವನಿಗೆ, ಅಸ್ತ, ಉದಯ,ಹಗಲು, ರಾತ್ರಿ, ಇರುವುದು, ಸಾಯುವುದು ಎಂಬ ಯಾವ ಭೇದಗಳಾಗಲಿ, ವಿಕಾರಗಳಾಗಲಿ, ಇಲ್ಲ. ನಿಜವಾಗಿ ಸ್ಥಿರವಾಗಿರುವವನೆಂದರೆ ಶಂಕರನೊಬ್ಬನೇ. ಉಳಿದವರೆಲ್ಲಾ ಜನನಮರಣಗಳಿಗೆ ಅಧೀನರಾಗಿ ನಾಶಹೊಂದುತ್ತಿರುವವರೇ–ಎಂದು, ಪರಶಿವನನ್ನೇ ಬಹಳವಾಗಿ ಸ್ತುತಿಸಿ, ಸಭೆಯಲ್ಲಿ ಸುಮ್ಮನೆ ಕುಳಿತಿತು.

ಅಲ್ಲಿಯವರೆವಿಗೂ ಮೌನವಾಗಿದ್ದ ದಕ್ಷನ ಸಹನೆ ಮಿತಿಮೀರಿತ್ತು. ತಾನು ಕರೆಯದಿದ್ದರೂ ಸತಿಯು ಬಂದದ್ದು ಅವನಿಗೆ ಹಿಡಿಸಲಿಲ್ಲ. ಅಲ್ಲದೆ ದೇವಾದಿ ದೇವತೆಗಳೂ ಸತಿಗೆ ಅಭೂತ ಪೂರ್ವಸ್ವಾಗತ ನೀಡಿ, ನಾನಾ ಬಗೆಯಿಂದ ಸ್ತೋತ್ರ ಮಾಡಿದ್ದಂತೂ ಅವನ ಅಸಹನೆಯನ್ನು ಬಡಿ ದೆಬ್ಬಿಸಿದಂತಾಯಿತು. ಅದು ತನ್ನ ತೇಜೋವಧೆಯೆಂದೇ ಭಾವಿಸಿದನು. ಇನ್ನು ಒಂದು ಕ್ಷಣವೂ ಸತಿಯ ಮಾತನ್ನು ಅವನು ಸೈರಿಸದಾದ. ತನ್ನ ಮಗಳೆಂಬ ಅಭಿಮಾನವೂ ಅವನಲ್ಲಿ ಉಳಿಯಲಿಲ್ಲ. ಕೆಂಪಡರಿದ ಕಣ್ಣು ಗಳಿಂದಲೂ, ಕೋಪಾತಿರೇಕದಿಂದ ಕಂಪಿಸುತ್ತಿದ್ದ ಕಂಠದಿಂದಲೂ ಸತಿಯ ಕಡೆ ಮತ್ತೆ ತಿರುಗಿ ಎಲೈ ಮಂದ ಮತಿಯಾದ, ದಾಕ್ಷಾಯಣಿಯೇ ! ಇಲ್ಲಿಗೆ ನಿನ್ನನ್ನು ಬರಹೇಳಿದವರಾರು ? ಕರೆಯದ ಈ ಯಜ್ಞದಲ್ಲಿ ನಿನಗೇನು ಕೆಲಸ ವಿದೆ ? ನಿನ್ನ ಸ್ಥಾನ ಮಾನವನ್ನು ತಿಳಿಯದೆ, ಈ ತುಂಬಿದ ದೇವಸಭೆಯಲ್ಲಿ, ಸಭಾಮರ್ಯಾದೆಯನ್ನೂ ಅತಿಕ್ರಮಿಸಿ, ಸ್ಮಶಾನವಾಸಿಯೂ, ರುಂಡ ಮಾಲೆಗಳನ್ನು ಧರಿಸಿರುವ ಆ ಅಮಂಗಲ ಸ್ವರೂಪಿಯಾದವನೂ, ತಿರಿದುಣ್ಣು ವವನೂ, ಅದ ಆ ನಿನ್ನ ಪತಿ ಶಂಕರನೇ ಸರ್ವೇಶ್ವರನೆಂದೂ, ಸರ್ವಸ್ವತಂತ್ರ ನೆಂದೂ, ನಾನಾ ಬಗೆಯಿಂದ ಬಾಯಿಗೆ ಬಂದ ಹಾಗೆ ಹೊಗಳುತ್ತಿರುವೆ. ಅಲ್ಲದೆ ಈ ದೇವಸಭೆಯಲ್ಲಿ ಉಪಸ್ಥಿತರಾಗಿರುವ ಶ್ರೇಷ್ಠ ದೇವತೆಗಳಿಗೇ ವಿವೇಕ ಹೇಳುವಷ್ಟು ಧೈರ್ಯ ನಿನಗೆ ಹೇಗ ಬಂದಿತು ? ಇದು ನಿನ್ನ ಅಧಿಕ ಪ್ರಸಂಗತ ನದ ಪರಮಾವಧಿ. ಇಲ್ಲಿರುವ ಸಾಕ್ಷಾತ್ ವಿಷ್ಣುವೇ ಸರ್ವೇಶ್ವರನು. ಎಲ್ಲ ರಿಗೂ, ಅಧಿಕನು. ಅವನೇ ಯಜ್ಞಾಧಿಪತಿಯು. ಅವನೇ ಯಜ್ಞ ಭಾಗವನ್ನು ಸ್ವೀಕರಿಸಲು ಅರ್ಹನು, ತಿಳಿಯಿತೇ ? ಇನ್ನು ನಿನಗೆ ಯಾವ ಕೆಲಸವೂ ಉಳಿ ದಿರುವುದಿಲ್ಲ. ಈ ಪವಿತ್ರವಾದ ಅಧ್ವರ ಕಾರ್ಯಗಳಿಗೆ, ನಿನ್ನ ಅಮಂಗಳ ಮತ್ತು ಅನಾವಶ್ಯಕವಾದ ವೃಥಾಲಾಪಗಳಿಂದ ಅಡಚಣೆ ಮಾಡಬೇಡ. ಇಂಥಾ ಅಕ್ಷಮ್ಯ ಅಪರಾಧವನ್ನು ನಾನು ಒಂದುಕ್ಷಣಕಾಲವೂ ಸೈರಿಸಲಾರೆನು. ಇಲ್ಲಿಂದ ನೀನು ಕೂಡಲೇ ಹೊರಡು. ಎಂದು ದುರಭಿಮಾನದಿಂದ ಗದರಿದನು.

ಆಗ ದೇವಿಯು ಮತ್ತೆ, ಎಲೈ ಪಿತನೇ, ಶಿವನು ಮಸಣ ವಾಸಿಯೆಂದೆ ಯಲ್ಲವೇ ಕೇಳು ! ಆ ಶಿವನು ಪ್ರಳಯ ಕಾಲದಲ್ಲಿ ಈ ಬ್ರಹ್ಮಾಂಡವನ್ನೆಲ್ಲಾ ದಹಿಸಿ ಭಸ್ಮ ಮಾಡಿ ಆ ಸ್ಮಶಾನದಲ್ಲಿಯೇ ನೆಲೆಸುವನು. ಪ್ರಳಯದಲ್ಲಿ ನಿನ್ನ

ಲೋಕ, ವೈಕುಂಠ, ಸತ್ಯಲೋಕಗಳೆಲ್ಲವೂ ಭಸ್ಮವಾಗಿ ಮಸಣವಾಗಿರುವುವು. ಅದನ್ನರಿಯದೆ ಶಿವನನ್ನು ಮಸಣ ವಾಸಿಯೆನ್ನ ಬಹುದೇ ? ಅಲ್ಲದೆ ಗರ್ವದಿಂದ ಶಿವನು ತಿರಿದುಂಬುವವನೆಂದೆಯಲ್ಲವೇ ! ಆ ಶಿವನೇ ಅಲ್ಲವೆ ಹರಿ, ವಿಧಿ, ಇಂದ್ರ, ಕುಬೇರ, ವರುಣ ಇತ್ಯಾದಿ ದೇವತೆಗಳಿಗೆಲ್ಲಾ ಅವರು ಬೇಡಿದ ಅಷ್ಟೈಶ್ವರ್ಯಗಳನ್ನೂ, ವೈಕುಂಠಾದಿಲೋಕಗಳನ್ನೂ, ಅಸಮಾನವಾದ ಬಲಗಳನ್ನೂ, ಉನ್ನತಪದವಿಗಳನ್ನೂ ಅನುಗ್ರಹಿಸಿದವನು. ಅಲ್ಲದೆ ಹಿಂದೆ, ನೀನು ಶಿವನನ್ನು ಕುರಿತು ತಪಸ್ಸು ಮಾಡಿ ಬೇಡಲು ನಿನಗೆ ಈ ಪದವಿಯನ್ನು ಶಿವನೇ ಅಲ್ಲವೆ ಅನುಗ್ರಹಿಸಿದುದು. ಅಂಥಾ ಭಕ್ತವತ್ಸಲನೂ, ದಾನ ಶೀಲನೂ ಆದ ಶಂಕರನನ್ನು ತಿರುಕನೆಂದು ಕರೆಯುಬಹುದೇ ?. ಶಿವನನ್ನು ನೀನು ಅಮಂಗಳ ಸ್ವರೂಪಿಯೆಂದೆಯಲ್ಲವೇ : ಹರಿವಿಧಿಗಳೂ, ಋಷಿಪುಂಗವರೂ, ಯೋಗೀಶ್ವರರೂ, ಸಹಸ್ರಾರು ವರ್ಷಗಳು ಶಿವದರ್ಶನ ಬಯಸಿ ತಪಸ್ಸುಮಾಡಿದರೂ, ಅವರಿಗೆ ಅವನ ದರ್ಶನಭಾಗ್ಯಲಭಿಸುವುದು ಕಷ್ಟವಾಗಿದೆಯಲ್ಲದೆ. ಕೈಲಾಸ ದ್ವಾರದಲ್ಲಿ ಅವನ ದರ್ಶನವನ್ನು ಬಯುಸಿ, ಅನಂತ ಕಾಲ ಕಾದಿರುವರು. ನೀನೂ, ನಿನ್ನ ಪಿತನೂ, ಹಾಗೂ ಪಿತಾಮಹನೂ, ಅವನ ದರ್ಶನವನ್ನು ಬಯುಸಿ ಎಷ್ಟು ಕಾಲ ಕೈಲಾಸಕ್ಕೆ ಆಗಮಿಸಲಿಲ್ಲ ? ಇಂಥ ಮಂಗಳ ಸ್ವರೂಪನೂ, ಚಂದ್ರಮೌಳಿಯೂ, ಸಚ್ಚಿದಾನಂದಮಯನೂ ಆದ ಶಂಕರನನ್ನು ಅಮಂಗಳ ಸ್ವರೂಪನೆಂದು ಮತಿಹೀನನಂತೆ ತೆಗಳ ಬಹುದೇ ?.

ಮತ್ತೂ ಶಿವನು ಚರ್ಮಾಂಬರಧಾರಿಯೆಂದೆಯಲ್ಲವೇ ಕೇಳು ! ಹಿಂದೆ ಗಜಾಸುರನು ಮೂರು ಲೋಕಗಳನ್ನೂ ಧ್ವಂಸಮಾಡಿ ಪೀಡಿಸುತ್ತಿರಲು, ಹರಿ ಬ್ರಹ್ಮಾದಿ ದೇವತೆಗಳೆಲ್ಲಾ ಭೀತಿಯಿಂದ ಶಿವನನ್ನು ಮರೆಹೊಕ್ಕು, ರಕ್ಷಿಸಬೇಕೆಂದು ಪ್ರಾರ್ಥಿಸಿದರು. ಆಗ, ಕರುಣಾಮಯನಾದ ಶಂಕರನು ಗಜಾಸುರನನ್ನು ಸಂಹರಿಸಿ, ಅವನ ಪ್ರಾರ್ಥನೆಯಂತೆ ಅವನ ಚರ್ಮವನ್ನು ತಾನೇ ಧರಿಸಿದನಾ ಭಕ್ತವತ್ಸಲನು.

ಮತ್ತೆ ವ್ಯಾಘ್ರಾಸುರನು ಲೋಕವನ್ನು ಪೀಡಿಸುತ್ತಿರಲು, ಅವನನ್ನು ಸಂಹರಿಸಿ, ಅವನ ಪ್ರಾರ್ಥನೆಯಂತೆ ಅವನ ಚರ್ಮವನ್ನು ಧರಿಸಿದನು. ಮತ್ತು ದೈತ್ಯರು ವರಬಲದಿಂದ ಗರ್ವಿತರಾಗಿ, ದೇವತೆಗಳನ್ನೆಲ್ಲಾ ಜಯಿಸಿ ಪೀಡಿಸುತ್ತಿರಲು, ದೇವತೆಗಳ ಪ್ರಾರ್ಥನೆಯನ್ನು ಮನ್ನಿಸಿ, ಆ ದುರುಳ ರಕ್ಕಸರನ್ನೆಲ್ಲಾ.

ಸಂಹರಿಸಿ, ಅವರ ಪ್ರಾರ್ಥನೆಯಂತೆ ಅವರ ಶಿರಗಳನ್ನು ತನ್ನ ರುಂಡಮಾಲಿಯಲ್ಲಿ ಧರಿಸಿದನು. ಆ ರುಂಡಮಾಲೆಯಲ್ಲಿ ನೃಸಿಂಹಾವತಾರದ ವಿಷ್ಣುವಿನ ಶಿರಸ್ಸೂ ಇರುವುದು ಕಾಣುವುದಿಲ್ಲವೇ ?

ಇಂಥಾ ವಿಶ್ವನಾಥನಾದ ಶಂಕರನ ಮಹಿಮಾತಿಶಯಗಳು ಮದಾಂಧನೂ ಮಾಯಾಪರವಶನೂ ಆದ ನಿನಗೆ ಹೇಗೆ ತಿಳಿದೀತು ? ಮತ್ತು, ನನ್ನನ್ನು ಇಲ್ಲಿಗೇಕೆ ಬಂದೆ ಯೆಂದು, ಕೇಳಿದೆಯಲ್ಲವೇ ? ಕೇಳು ! ನಿನ್ನ ಶಿವರಹಿತವಾದ ಯಜ್ಞವು ಭಂಗವಾಗಿ ನಿನಗಾಗಬಹುದಾದ ಕೇಡನ್ನು ತಪ್ಪಿಸಿ, ನನ್ನ ಜನನಿಯ ಮಾಂಗಲ್ಯವನ್ನು ರಕ್ಷಿಸಲೆಂದು ಬಂದೆನಲ್ಲದೆ ಅನ್ಯಥಾ ಅಲ್ಲ. ಈಗಲಾದರೂ ಶಿವನ ಮರೆಹೊಕ್ಕು ಕೃತಾರ್ಥನಾಗೆಂದು ತಿಳಿಸಿದಳು. ಅದನ್ನು ಕೇಳಿದ ದಕ್ಷನು ಕನಲಿ ಕಿಡಿಕಿಡಿಯಾದನು. ನಂತರ ಸತಿಯನ್ನು ಕುರಿತು ಎಲೈ ! ಸತಿಯೇ ! ನಿನ್ನ ಶಿವನು ಮೂರು ಲೋಕವನ್ನು ಭಸ್ಮಮಾಡುವವನೆಂದು ಹೇಳಿದೆಯಲ್ಲವೆ ? ಇಲ್ಲಿ ನೋಡು ಈ ಸಭೆಯಲ್ಲಿರುವ ಅಸಮಾನ ಪರಾಕ್ರಮ ಶಾಲಿಗಳಾರಾರೆಂದು ತಿಳಿಯದೆ ನಿನ್ನ ಮರುಳ ಜಂಗಮನಾದ ಶಿವನ ಪ್ರತಾಪ ವನ್ನು ಏಕೆ ವೃಥಾ ಈ ಸಭೆಯಲ್ಲಿ ಬಿತ್ತರಿಸುತ್ತಿರುವೆ ? ಇಲ್ಲಿ ಅದನ್ನು ಕೇಳುವ ವರಾರೂ ಇಲ್ಲ. ಈ ಯಜ್ಞಕ್ಕೆ ಹರಿಯೇ ಅಧಿಪತಿಯು, ಮೂರು ಲೋಕ ಗಳನ್ನೂ ಕ್ಷಣಾರ್ಧದಲ್ಲಿ ಜಯಿಸಬಲ್ಲ, ದೇವೇಂದ್ರ, ವರುಣ, ಅಗ್ನಿ ವಾಯು, ಯಮ, ಚಂದ್ರ, ಸೂರ್ಯ, ಅಷ್ಟದಿಕ್ಪಾಲಕರೇ ಮೊದಲಾದ ದೇವತೆಗಳೇ ಈ ಈ ಯಜ್ಞದ ರಕ್ಷಕರು. ಇವರು ಧರಿಸಿರುವ ದಿವ್ಯಾಸ್ತ್ರಗಳ ಮುಂದೆ ನಿಲ್ಲುವ ಸಾಮರ್ಥ್ಯವುಳ್ಳವರು ಈ ಮೂರು ಲೋಕಗಳಲ್ಲಿ ಯಾರೂ ಇಲ್ಲ. ಇಂಥಾ ಸೃಷ್ಟಿಸ್ಥಿತಿ ಕರ್ತರೂ ಅಜೇಯರೂ ಅರಿಭಯಂಕರರೂ, ಮರಣವಿಲ್ಲದವರೂ ಆದ ದೇವತೆಗಳ ಸಮೂಹದ ಮುಂದೆ ನಿನ್ನ ಶಿವನ ಪ್ರತಾಪ ಎಷ್ಟರದು ? ಇವರ ಶಕ್ತಿಸಾಮರ್ಥ್ಯಗಳನ್ನರಿಯದೆಯೇ ಅವರ ಮುಂದೆ ಸುಮ್ಮನೆ ಬುದ್ಧಿ ವಿಕಲ್ಪದಿಂದ ಪತಿಯ ಪರಾಕ್ರಮವನ್ನು ಹೊಗಳದೆ, ಸುಮ್ಮನೆ ಇಲ್ಲಿಂದ ಹೊರಡು ಎಂದು ದುರಭಿಮಾನದಿಂದಲೂ, ಗರ್ವದಿಂದಲೂ ನುಡಿದನು.

ದೇವತೆಗಳಿಗೆ ಹಿತೋಕ್ತಿ :

ದಕ್ಷನ ದುರಭಿಮಾನ ಹಾಗೂ ಗರ್ವದ ಮಾತುಗಳನ್ನು ಕೇಳುತ್ತಿದ್ದಂ ತೆಯೇ ದೇವಿಯು ಶಾಂತಳಾಗಿ ಸಾವಧಾನವಾಗಿ ಮಂದಹಾಸದಿಂದ ಗಂಭೀರ

ವಾಯಿತು ; ಧ್ವನಿಯು ಗಡುಸಾಯಿತು. ಆಗ, ದೇವತೆಗಳಕಡೆ ತಿರುಗಿ, ಎಲೈ ಶಂಕರನ ಭಕ್ತರಾದ ದೇವತೆಗಳಿರಾ ಕೇಳಿದಿರಾ ದಕ್ಷನ ಗರ್ವೋಕ್ತಿಗಳನ್ನು? ಅವನಿಂದಾದ ಶಿವದೂಷಣೆಯು ನಿಮಗೆ ಹಿಡಿಸಿತೇ? ಶಿವನ ಸರ್ವೋತ್ತಮತ್ವವೂ ಶಿವನೇ ಯಜ್ಞಾಧಿಪತಿಯೆಂಬುದೂ ನಿಮಗೆ ತಿಳಿಯದೇ? ಇದುವರೆವಿಗೆ ಶಿವ ರಹಿತ ಯಜ್ಞವನ್ನು ಯಾವ ದೇವತೆಗಳಾದರೂ ಆಚರಿಸುವರೇ? ಯಜ್ಞ ಭಾಗಕ್ಕೆ ಸರ್ವೇಶ್ವರನಾದ ಶಂಕರನೇ ಅರ್ಹನೆಂಬುದನ್ನು ನೀವು ಮರೆತಿರಾ? ಶಿವರಹಿತವಾದ ಯಜ್ಞವು ಗತಿಕಾಣುವುದೇ? ಶಿವನಿಗೆ ವೀಸಲಾದ ಈ ಯಜ್ಞದ ಅಧ್ಯಕ್ಷತೆ ವಹಿಸುವ ಮತ್ತು ಯಜ್ಞಭಾಗವನ್ನು ಪಡೆಯುವ ಅರ್ಹತೆ ನಿಮ್ಮೆಲ್ಲಾರಿಗಾದರೂ ಇದೆಯೇ? ಇಂಥಾ ಗಹನ ವಿಚಾರಗಳನ್ನೆಲ್ಲಾ ವಿಚಾರಿಸದೆ, ಅವಿವೇಕದಿಂದ ಯಜ್ಞಾರಂಭಕ್ಕೆ ಅನುಮತಿಯನ್ನು ಹೇಗೆ ನೀಡಿದಿರಿ? ಈಗ ದಕ್ಷನು ನಿಮ್ಮ ಶಕ್ತಿಸಾಮರ್ಥ್ಯಗಳ ಅರಿವಿಲ್ಲವೆಂದೂ, ಅಲ್ಪ ನಾದ ಶಿವನನ್ನು ವೃಥಾ ಹೊಗಳುತ್ತಿರುವೆನೆಂದೂ ಹೇಳಿದನಲ್ಲವೆ? ಕೇಳಿರಿ ನೀವೆಲ್ಲರೂ ಸರ್ವಜ್ಞರು, ಜ್ಞಾನಿಗಳು. ಆದರೂ ಸತ್ಯನೂ, ಶಾಶ್ವತನೂ, ಆಗಿರುವ ಜಗದೀಶ್ವರನನ್ನು ತಿಳಿಯಲು, ನಿಮ್ಮಿಂದ ಸಾಧ್ಯವಾಗಲಿಲ್ಲವೆಂಬುದು ಅತ್ಯಂತ ಆಶ್ಚರ್ಯದ ವಿಷಯ. ಶಂಕರನಿಗೆ ಹುಟ್ಟುಸಾವುಗಳಿಲ್ಲ. ಅವನು ಸರ್ವೇಶ್ವರನು, ಅಗೋಚರನು, ಅಪಾರ ಮಹಿಮಾನ್ವಿತನು. ಆತನ ಕಾರ್ಯ ಕಾರಣಗಳನ್ನರಿಯಲು ನಿಮಗೆ ಶಕ್ಯವಿಲ್ಲವಾದರೂ, ಅವನು ಪರಿಪೂರ್ಣವಾದ ಜ್ಞಾನದಿಂದ ಕೂಡಿರುವನೆಂಬುದನ್ನಾದರೂ ನಂಬಲಾರಿರಾ? ಇನ್ನೂ ಕೇಳಿರಿ! ಸೃಷ್ಟಿಕರ್ತನಾದ ಬ್ರಹ್ಮ, ಲಯಕರ್ತನಾದ ರುದ್ರ, ಸ್ಥಿತಿಕರ್ತನಾದ ವಿಷ್ಣು ಮುಂತಾದ ದೇವತೆಗಳಿಗೂ, ಋಷಿಶ್ರೇಷ್ಠರಿಗೂ ಯಾವಾತನ ಮಹಿಮೆಯನ್ನೂ ಉತ್ಪತ್ತಿಯನ್ನೂ ತಿಳಿಯಲಾಗಿಲ್ಲವೋ, ಅಂತಹ ಸದಾಶಿವನ ಮಹಿಮೆಯನ್ನು ವರ್ಣಿಸಲಸದಳವು. ಕಶ್ಯಪನಿಂದ ಅದಿತಿಯಲ್ಲಿ ನಾರಾಯಣನೇ ಮೊದಲಾದ ದೇವತೆಗಳು ಹುಟ್ಟಿದರು. ಕಶ್ಯಪನು ಮರೀಚಿಯ ಮಗನು. ಅದಿತಿಯು, ದಕ್ಷಪ್ರಜಾಪತಿಯ ಮಗಳು. ಆ ಮರೀಚಿಯೂ, ದಕ್ಷನೂ ಬ್ರಹ್ಮನ ಮಕ್ಕಳು. ಬ್ರಹ್ಮನಾದರೋ ಶಿವನ ಸಂಕಲ್ಪ ಮಾತ್ರದಿಂದಲೇ ಹುಟ್ಟಿದವನು, ಪ್ರಕೃತಿಯು ಸಂಬಂಧವುಳ್ಳವನು. ಇಚ್ಛಾ-ಜ್ಞಾನ-ಕ್ರಿಯಾ-ಶಕ್ತಿಗಳೇ ಪ್ರಕೃತಿಯ ಮೂರು ಭೇದಗಳು. ಇಚ್ಛೆಯೆಂಬುದೇ ಈಶ್ವರನ ಸಂಕಲ್ಪ. ಆ ಸಂಕಲ್ಪವನ್ನು ಕ್ರಿಯಾ

ರೂಪಕ್ಕೆ ತರುವ ಆಲೋಚನೆಯೇ ಜ್ಞಾನಶಕ್ತಿಯ ಕಾರ್ಯ. ಸಂಕಲ್ಪದ
ಆಲೋಚಿಸಿದ ಕಾರ್ಯಸಾಧನೆಯು ಕ್ರಿಯಾಶಕ್ತಿಯ ಮೂಲಕಕಾರ್ಯಗ
ವಾಗುವುದು. ಈ ಮೂರನೇ ಪ್ರಕೃತಿಯಲ್ಲಿ ಬುದ್ಧಿಪೂರ್ವಕವಾಗಿ ಮಾಡಿದ್ದ
ಕ್ರಿಯೆಗಳಾಗುತ್ತವೆ. ಹಾಗೆ ಹುಟ್ಟಿದ ಬ್ರಹ್ಮನು ಶಿವನ ಮಾರ್ಗವನ್ನನುಸ
ಸುವವುಗಳನ್ನು ಬುದ್ಧಿ ಪೂರ್ವಕವಾಗಿ ಸೃಷ್ಟಿಸಿದನು. ಉತ್ಪತ್ತಿರಹಿತನಾ
ಶಿವನೇ ಬ್ರಹ್ಮ-ವಿಷ್ಣುಗಳಿಗೆ ಜನ್ಮ ಕೊಟ್ಟಿರುವನು. ಶಿವನ ಇಚ್ಛೆಯಂ
ಹಾಯೂ ಸಹಾ ನಾನಾವಿಧವಾದ ರೂಪಗಳನ್ನು ಹೊಂದಿ, ಉತ್ತಮ ಮಧ್ಯ
ಮಾಧಮಕೃತ್ಯಗಳನ್ನು ಎಸಗುವನು. ಶಿವನಿಗೆ ಆದಿ-ಅಂತ್ಯಗಳೆಂಬುದೇ ಇಲ್ಲ
ದೇಹಗಳನ್ನು ಹೊಂದಿದವರಲ್ಲಿ ಶಿವನಹೊರತು, ಉಳಿದವರೆಲ್ಲಾ ಕಾಲವಶ
ಗುತ್ತಾರೆ. ಹೀಗೆ ತಮಗೆ ತಿಳಿಯದಂತೆಯೇ ಹುಟ್ಟು ಸಾವುಗಳನ್ನನುಭವಿಸ
ವವರಲ್ಲಿ ವಿಷ್ಣುವೇ ಮೊದಲಾದ ದೇವತೆಗಳೆಲ್ಲಾ ಸೇರಿಹೋಗಿರುವರು. ಶಿ
ನೊಬ್ಬನೇ (ಏಕಮೇವಾದ್ವಿತೀಯ) ಆಗಿದ್ದರೂ, ನಾನಾ ಆಕಾರ ಉಳ್ಳವನೂ
ನಾನಾ ವ್ಯಾಪಾರಗಳುಳ್ಳವನೂ, ಆಗಿರುವನೆಂದು ವೇದಾಗಮಗಳು ಸಾರುತ್ತಿ
ರುವುವು. ಪಿನಾಕಧರನಾದ ಶಂಕರನು ಪ್ರಾಣಿಮಾತ್ರದ ಯೋಗ್ಯತೆಗನು
ಗುಣವಾದ ಫಲಗಳನ್ನು ಕೊಡಬಲ್ಲವನು. ಈಶ್ವರೀಭಾವದಿಂದ ಸ್ಥಿರನಾಗಿ
ವವನು ಅವನೊಬ್ಬನೇ. ಆ ಸ್ಥಾಣುವೇ ಯಾರಿಂದಲೂ ಸಾಧ್ಯವಾಗದ ಅದ್ಭುತ
ಕಾರ್ಯಗಳನ್ನು ಮಾಡಲು ಸಮರ್ಥನು. ಇಂಥಹ ಅಮೋಘವಾದ ಅನು
ಪಮ ಹಾಗೂ ಅದ್ವಿತೀಯ ಗುಣಭರಿತನಾದ ಶಂಕರನನ್ನು ಅಲ್ಪನೆ
ಬಹುದೇ ? ಅಲ್ಲದೆ ನೀವೆಲ್ಲಾ ಆ ಶಂಕರನ ಸರಿಸಮಾನರಾಗಬಲ್ಲಿರಾ!
ನೀವೆಲ್ಲಾ ಧರ್ಮಾತ್ಮರು, ಧರ್ಮಕಾರ್ಯನಿರತರು. ಪರರಿಗೆ ಮಾರ್ಗದರ್ಶ
ನೀಡುವಂಥಾ ಪರಿಶುದ್ಧವೂ, ಧರ್ಮಸಮ್ಮತವೂ ಆದ ನಡವಳಿಕೆಗಳುಳ್ಳವರು.
ವೇದಾಗಮ ಸಮ್ಮತವಾದ ಧರ್ಮದ ಉದ್ಧಾರ ಮಾಡಲು, ಕಂಕಣ ಬದ್ಧರಾ
ನೀವೇ ಇಂಥಾ ಅಧರ್ಮಕಾರ್ಯಗಳಿಗೆ ಪ್ರೋತ್ಸಾಹ ನೀಡಿ, ಧರ್ಮಗ್ಲಾ
ಯನ್ನುಂಟು ಮಾಡಹತ್ತಿದರೆ, ಲೋಕದಲ್ಲಿ, ಧರ್ಮವು ಉಳಿಯಲು ಸಾಧ್ಯವೆ
ನಿಮ್ಮ ಈ ನಿಷ್ಕ್ರಿಯತೆಯಿಂದ ಶಿವರಹಿತವಾದ ಯಜ್ಞಾಚರಣೆಯಿಂದ ಸಂಭ
ವಿಸುವ ದುಷ್ಫಲಗಳಿಗೆಲ್ಲಾ ನೀವೇ ಹೊಣೆಯೆಂಬುದನ್ನು ಅರಿಯದಾದಿರಾ
ದಕ್ಷನಿಗೆ ಬುದ್ಧಿ ಹೇಳುವ ಸಾಮರ್ಥ್ಯ ನಿಮಗಿಲ್ಲವೇ ? ಅವನಿಗೆ ನೀವು ಹೇ

ರುವಿರಾ ? ಅಥವಾ ನಿಮ್ಮ ಸ್ವಾರ್ಥಪರತೆಯೇ ಇದಕ್ಕೆಲ್ಲಾ ಕಾರಣವೆಂದು ಊಹಿಸಬಹುದೇ ? ಇದರಿಂದ ನಿಮ್ಮ ಘನತೆಗೌರವಗಳಿಗೆ ಲೋಪ ಬರುವುದಿಲ್ಲವೇ? ಶಿವಾಗ್ರಹದಿಂದ ನಿಮಗೊದಗ ಬಹುದಾದ ಅನರ್ಥಗಳ ಪರಿವೇ ನಿಮಗೆ ಇಲ್ಲವಾಯಿತೇ ? ನಿಮ್ಮ ಮೌನಕ್ಕೆ ಬೇರೆಯಾವುದಾದರೂ ಕಾರಣ ವಿರಬಹುದೇ ? ಎಂದು ನಿಷ್ಠುರ ವಾಕ್ಯಗಳಿಂದ ಅವರನ್ನು ಮೂದಲಿಸುತ್ತಿದ್ದಂತೆಯೇ, ಅತ್ಯಂತ ಕುಪಿತನಾಗಿ ಕೆಂಪಡರಿದ ಕಣ್ಣುಗಳಿಂದ ಸತಿಯ ಸಮೀಪಕ್ಕೆ ಬಂದು ದಕ್ಷನು, ಎಲೈ ಸತಿಯೇ ! ನಿಲ್ಲಿಸು ನಿನ್ನ ವೃಥಾಲಾಪ ಗಳನ್ನು. ಸರ್ವೇಶ್ವರರಾದ, ಹರಿ–ಬ್ರಹ್ಮಾದಿಗಳು ನಿನ್ನಿಂದ ಧರ್ಮರಹಸ್ಯವನ್ನು ತಿಳಿಯಬೇಕಾಗಿಲ್ಲ. ನೀನೇ ಅಲ್ಲ, ಆ ನಿನ್ನ ಪತಿ ಶಂಕರನೇ ಬಂದರೂ, ನನ್ನ ಯಜ್ಞವನ್ನು ತಡೆಯಲಾರರು. ನನ್ನ ನಿರ್ಧಾರವನ್ನು ಬದಲಿಸುವ ಸಾಮರ್ಥ್ಯ ಯಾರಿಗುಂಟು ? ನಿನ್ನ ಆ ಮರುಳ ಶಂಕರನಿಗೂ ನನಗೂ ಇದ್ದ ಸಂಬಂಧವು ಎಂದೋ ಹರಿದು ಹೋಯಿತು. ಅಂದ ಮೇಲೆ ಅವನ ಪತ್ನಿಯಾದ ನಿನಗೂ ನನಗೂ ಎತ್ತಣ ಸಂಬಂಧ ? ಅದೂ ಅಂದೇ ಕಡಿದು ಹೋಯಿತು.

ಶಿವನೇ ಸರ್ವೇಶನೆಂದು ಹೇಳಿದೆಯಲ್ಲವೇ ? ನಿನ್ನ ಪತಿ ಶಂಕರನ ಸರ್ವೇಶ್ವರತ್ವವು ಇಂದಿಗೇ ಮುಗಿಯಿತೆಂದು ತಿಳಿ. ಎಂದು ತುಂಬಿದ ಸಭೆಯಲ್ಲಿ ಘರ್ಜಿಸಿದನು.

ಸತಿಯ ಸಂಕಲ್ಪ :

ಇದನ್ನು ಕೇಳಿದ ಸತಿಯು ಇನ್ನೂ ಇಂಥಾ ಶಿವದ್ರೋಹಿಯ ಸಂಬಂಧವನ್ನು ಹೊಂದಿರುವುದು ತನ್ನ ಸತೀತ್ವಕ್ಕೇ ಕುಂದೆಂದು ತೀರ್ಮಾನಿಸಿ, ಶಿವನಿಂದೆಯನ್ನು ಕೇಳಿದ ಪ್ರಾಯಶ್ಚಿತ್ತಕ್ಕಾಗಿ ತನ್ನ ಈ ಭೌತಿಕ ಶರೀರವನ್ನು ಯೋಗ ಮಾರ್ಗದಿಂದ ತ್ಯಜಿಸಬೇಕೆಂದು ನಿರ್ಧರಿಸಿ, ಮನಸ್ಸಿನಲ್ಲಿಯೇ ಶಿವನ ಪಾದಾರವಿಂದಗಳನ್ನು ಧ್ಯಾನಿಸಿ, ಮತ್ತೆ ದಕ್ಷನನ್ನು ಕುರಿತು, ಎಲೈದಕ್ಷನೇ ಸರ್ವೇಶ್ವರನಾದ ಶಂಕರನ ಮಹಿಮೆಯನ್ನು ನೀನು ಅರಿಯದಿದ್ದರೆ ಅದು ಶಂಕರನಿಗೆ ನ್ಯೂನತೆಯೇ ? ಶಿವ ದ್ವೇಷಿಯಾದ ನಿನಗೆ ನಾನು ಮಗಳಾಗಿರಲಾರೆನು ನನ್ನ ಪೂರ್ವಕರ್ಮದಿಂದ ಪಾಪಿಯಾದ ನಿನ್ನ ಮಗಳಾಗಿ ಹುಟ್ಟಿದೆನು. ನಿನ್ನ ಮಗಳಾದರೂ, ಶಿವನ ತ್ರಿಶೂಲದ ಅಂಶದಿಂದ ಜನಿಸಿದವಳೆಂಬುದನ್ನೂ ಮರೆತು

ಈ ಪಂಚಭೂತಾತ್ಮಕವಾದುದೂ, ಅಶಾಶ್ವತವೂ ಆದ ಶರೀರವೇ ನಿನ್ನ ಪ
ಳೆಂಬ ಅಜ್ಞಾನ ಹಾಗೂ ದುರಭಿಮಾನದಿಂದ ಮತಿಗೆಟ್ಟವನಂತೆ ಮಾತನಾ
ತ್ತಿರುವೆ. ದೇಹ, ಜೀವಾತ್ಮ, ಪರಮಾತ್ಮಗಳ ಸ್ವರೂಪವನ್ನೇ ತಿಳಿಯ
ಅಜ್ಞಾನಿ ನೀನು. ಆದುದರಿಂದ ಪ್ರಾಯಶ್ಚಿತ್ತಾರ್ಥವಾಗಿ, ಕೇವಲ ತುಚ್ಛ
ಅಶಾಶ್ವತವೂ, ಆದ ಈ ಭೌತಿಕ ಶರೀರವನ್ನು ಯೋಗಾಗ್ನಿಯಲ್ಲಿ ನೀಗಿ
ನಿಂದಾಸ್ಪದವಾದ ಸಂಬಂಧವನ್ನು ತ್ಯಜಿಸಿ ಪವಿತ್ರಳಾಗುವೆನು. ನನ್ನ
ಯಾದ ಶಂಕರನು, ಸದಾ ಪರಬ್ರಹ್ಮಾನಂದದಲ್ಲಿರತಕ್ಕವನೂ ಜ್ಞಾನಗೋ
ರನೂ ಆಗಿರುವನು. ಯೋಗ ಮೂರ್ತಿಯಾದ ಅವನಿಗೆ ಕರ್ಮ ಪ್ರಧಾ
ವಾದ ವೇದ ಮಾರ್ಗಗಳು ಎಂದೂ ರುಚಿಸವು. ವೇದಗಳಲ್ಲಿ ಪ್ರವೃತ್ತಿ ನಿವೃ
ಮಾರ್ಗಗಳೆಂದು ಎರಡು ವಿಧಗಳುಂಟು. ಸಂಸಾರಿಗಳು ಪ್ರವೃತ್ತಿ ಮಾರ್ಗ
ಲ್ಲಿಯೂ, ಆತ್ಮಾನುಭವದಲ್ಲಿ ಅಭಿರುಚಿಯುಳ್ಳ ಯೋಗಿಗಳು ನಿವೃತ್ತಿ ಮಾರ್ಗಾ
ಚರಣೆಯಲ್ಲಿಯೂ ನಿರತರಾಗುವರು. ಉಪನಿಷತ್ತುಗಳಭಿಪ್ರಾಯವೂ ಕರ್ಮ
ಪ್ರಧಾನರಹಿತವಾದ ಭಗವದುಪಾಸನೆ ಮಾಡಬೇಕೆಂಬುದೇ ಆಗಿ
ನೀನಾದರೋ ಅಲ್ಪಸುಖ ಹೇತುವಾದ ಸ್ವರ್ಗಾದಿಸುಖಪ್ರಾಪ್ತಿಗಾಗಿ, ಪ್ರವೃ
ಧರ್ಮವನ್ನು ಅನುಷ್ಠಾನ ಮಾಡುತ್ತಿರುವೆ. ಪರಶಿವನಾದರೋ ತತ್ವಜ್ಞಾ
ಯಾಗಿ, ಆತ್ಮತತ್ವೋಪಾಸನೆಯೊಂದರಲ್ಲಿಯೇ ಮನಸ್ಸಿಟ್ಟು ನಿವೃ
ಧರ್ಮಪರಾಯಣನಾಗಿರುವನು. ಅವನು, ಮೇಲಾಗಿ, ನಿತ್ಯನೂ, ಪ
ಪೂರ್ಣನೂ, ಸರ್ವಾಂತರ್ಯಾಮಿಯೂ ಆಗಿ ಎಲ್ಲರ ಅಂತರಾತ್ಮದಲ್ಲಿ ಸದಾ
ನೆಲೆಸಿರುವನು. ಅವನು ಮಾಯಾ ದೂರನು, ನಾಶರಹಿತನು, ಜ್ಞಾನ
ಸ್ವರೂಪನು, ಎಂದು ಹೇಳಿ ಬಹಳ ದುಃಖದಿಂದ, ಎಲೈ ದಕ್ಷ ! ನೀನು ಅಜ್ಞಾನ
ದಿಂದ ಲೋಕೇಶ್ವರನಾದ ಶಿವನನ್ನು ಅವನ ಕಿಂಕರರಿಂದ ತುಂಬಿದ ಈ ಸಭೆ
ಯಲ್ಲಿ ನಿಂದಿಸಿರುವೆ.

ಅಕಸ್ಮಾನ್ಮಮ ಭರ್ತಾರಮಜಾತಾಶೇಷಭೂಷಣಂ ।
ವಾಚಾ ದೂಷಯಸೇ ದಕ್ಷ ಸಾಕ್ಷಾಲ್ಲೋಕಮಹೇಶ್ವರಂ ॥

(ಶಿ.ಪು. 8.46.)

ವಿದ್ಯೆಯನ್ನು ಕದಿಯುವವನೂ, ಗುರುವಿಗೆ ದ್ರೋಹವೆಸಗುವವನೂ
ವೇದ–ಈಶ್ವರ ಇವರನ್ನು ನಿಂದಿಸುವವನೂ, ಇವರೆಲ್ಲಾ ಬಹಳ ಪಾಪಿಗಳು

ಇಂಥವರಿಗೆಲ್ಲಾ ಕ್ರೂರಶಿಕ್ಷೆ ಅನಿವಾರ್ಯವೆಂದು ವೇದಸಾರುವುದು. ಅದು ಚರಿಂದ ಎಲೇ ಪಾಪಿ ದಕ್ಷನೇ ! ನಾನು ನಿನ್ನ ಮಗಳಲ್ಲವೆಂದೂ, ಶಿವನು ನಿನ್ನ ಅಳಿಯನಲ್ಲವೆಂದೂ ಹೇಳಿದೆಯಲ್ಲವೆ. ಅದು ಸತ್ಯವಾದ ಮಾತು ಆ ಪರಮೇಶ್ವರನೇ ನಿನ್ನ ಬಾಯಿಂದ ಆ ಮಾತನ್ನಾಡಿಸಿರುವನು. ಇದರಲ್ಲಿ ಯಾವ ಸಂಶಯವೂ ಇಲ್ಲ. ಆ ಸಚ್ಚಿದಾನಂದ ಸ್ವರೂಪನೂ, ತ್ರಿಜಗದೊಡೆಯನೂ, ಪಶುಪತಿಯೂ, ಜಗದ್ರಕ್ಷಕನೂ, ದಯಾಮಯನೂ, ಜ್ಞಾನಗೋಚರನೂ, ಮಾಯಾದೂರನೂ, ತ್ರಿಮೂರ್ತಿಗಳಿಗೂ ಕರ್ತನೂ, ವಿಶ್ವೇಶ್ವರನೂ ಆದ ಆ ಶಂಕರನೆಲ್ಲ ? ಪ್ರಕೃತಿರೂಪಾದ ಮಾಯೆಗೆ ಅಧೀನನಾಗಿ, ಕೇವಲ ಪ್ರವೃತ್ತಿ ಮಾರ್ಗವನ್ನು ಅನುಸರಿಸುತ್ತಾ, ಅನಿತ್ಯ ಐಹಿಕ ಭೋಗಗಳಿಗಾಗಿ ಧರ್ಮದ್ರೋಹ, ದೈವದ್ರೋಹಗಳನ್ನೆಸಗುತ್ತಾ, ಹಿಂಸಾತ್ಮಕವಾದ ಯಜ್ಞಯಾಗಾದಿಗಳನ್ನಾಚರಿಸುತ್ತಿರುವ ಅಲ್ಪನಾದ ನೀನೆಲ್ಲಿ ? ಮಾರ್ಜಾಲವನ್ನು ವ್ಯಾಘ್ರಕ್ಕೂ, ಮಿಂಚುಹುಳುವನ್ನು ದಿನಕರನಿಗೂ, ಕಾಗೆಯನ್ನು ಕೋಗಿಲೆಗೂ, ಕೊಳಚೆಯ ನೀರನ್ನು ಪಾವನಗಂಗೆಗೂ, ಕಿರಿಗುಡ್ಡವನ್ನು ಮಹಾಮೇರುವಿಗೂ, ಹೇಗೆ ಹೋಲಿಸಲಸಾಧ್ಯವೋ ಹಾಗೆಯೇ ಪಾಪಿಯೂ, ಅಲ್ಪನೂ ಆದ ನಿನಗೂ, ಆ ತ್ರಿಭುವನದೊಡೆಯ ಶಂಕರನಿಗೂ ಎಲ್ಲಿಯ ಹೋಲಿಕೆ ? ಶಂಕರನ ತ್ರಿಶೂಲದ ಅಂಶದಿಂದ ಜನಿಸಿದವಳೂ ಸರ್ವೇಶ್ವರನ ಅರ್ಧಾಂಗಿಯೂ ಆದ ನನಗೂ ನಿನಗೂ ಹೇಗೆ ತಾನೆ ಸಂಬಂಧವಿರಲು ಸಾಧ್ಯ ? ಎಲೈ ದಕ್ಷನೇ ಕೇಳು ! ಈ ಜನ್ಮದಲ್ಲಿ ನಿನಗೆ ತತ್ವಜ್ಞಾನ ಸಿದ್ಧಿಸಲಾರದು. ಅಲ್ಲದೆ ಶಿವನ ಕೃಪೆಯಿಂದ ಲಭಿಸಿರುವ ಈ ನಿನ್ನ ಪದವಿಯೂ ಹೆಚ್ಚು ಕಾಲ ಉಳಿಯಲಾರದು. ಈ ವಿಷಯಗಳನ್ನು ನಾನು ನಿನ್ನ ಮಗಳಾದ ಸತಿಯಾಗಿ ಹೇಳುತ್ತಿರುವೆನೆಂದು ಭಾವಿಸಬೇಡ ; ಆದರೆ ಸಾಕ್ಷಾತ್ ಶಕ್ತಿ ಸ್ವರೂಪಿಣಿಯಾಗಿ ಹೇಳುತ್ತಿರುವೆನೆಂದು ಗಮನಿಸಿ ಕೇಳು ! ಶಿವರಹಿತವಾದ ಈ ನಿನ್ನ ಯಜ್ಞವು ನಾಶವಾಗುವುದು. ಈ ಯಜ್ಞಕ್ಕೆ ಬೆಂಬಲ ನೀಡಿದವರೆಲ್ಲಾ ಕ್ರೂರ ಶಿಕ್ಷೆಗೆ ಗುರಿಯಾಗಿ ಮರಣ ಹೊಂದುವರು. ನಿನ್ನ ಯಜ್ಞಕ್ಕೆ ನಿನ್ನ ಶಿರಸ್ಸೇ ಆಹುತಿಯಾಗುವುದು ಎಂದು ಶಪಿಸಿ ಅಲ್ಲಿ ನಿಲ್ಲದೆ ಕೂಡಲೇ ಯಜ್ಞಕುಂಡದ ಉತ್ತರ ದಿಕ್ಕಿಗೆ ತ್ವರಿತದಿಂದ ಪ್ರಯಾಣ ಮಾಡಿದಳು.

ಸತಿಯ ದೇಹ ತ್ಯಾಗ :

ಸತಿಯು ಪರಮೇಶ್ವರನನ್ನು ಮನದಲ್ಲಿ ನೆನೆದು, ಹೇ ಶಂಕರಾ! ನಿನ್ನ ಅನುಮತಿಯನ್ನು ಕೇಳದೆ ಯಜ್ಞಕ್ಕೆ ಬಂದುದಕ್ಕೆ, ನೀನು ನುಡಿದಂತೆ ದಕ್ಷನು, ನನ್ನನ್ನು ಅವಮಾನಗೊಳಿಸಿದನು. ಅದನ್ನು ನಾನು ಸೈರಿಸಿದೆ. ನಂತರ ಅವನು ನಿನ್ನನ್ನು ನಾನಾ ವಿಧದಿಂದ ನಿಂದಿಸಿದನು. ಅದನ್ನು ಮಾತ್ರ ನಾನು ಸಹಿಸದಾದೆನು. ಅವನಿಗೂ, ಅವನ ಶಿವರಹಿತಯಜ್ಞದಲ್ಲಿ ಭಾಗಿಗಳಾಗಿರುವ ಹರಿವಿಧಿಗಳೇ ಮೊದಲಾದ ದೇವ ಸಮೂಹಕ್ಕೂ, ಸೂಕ್ತ ಬುದ್ಧಿ ಹೇಳಿದೆನು. ಅವರೆಲ್ಲರೂ ಅಜ್ಞಾನಾಂಧರಾಗಿ ಸ್ವಾರ್ಥ ಸಾಧನೆಗೋಸ್ಕರ ನನ್ನ ಹಿತವಚನಗಳಿಗೆ ಕಿವಿಗೊಡದೆ, ಉದಾಸೀನದಿಂದಿದ್ದರು. ಅದನ್ನೂ ನಾನು ಸೈರಿಸಿದೆನು. ಆದರೆ ಆ ಪಾಪಿ ದಕ್ಷನು, ನನ್ನ ಹಾಗೂ ಸರ್ವೇಶ್ವರನಾದ ನಿನ್ನ ಸಂಬಂಧವನ್ನು ತಾನಾಗಿಯೇ ತ್ಯಜಿಸಿರುವುದಾಗಿ, ತುಂಬಿದ ಸಭೆಯಲ್ಲಿ ಘೋಷಿಸಿ, ಈ ಯಜ್ಞವನ್ನು ಆಚರಿಸಿ, ನಿನ್ನ ಸರ್ವೇಶತ್ವವನ್ನು ತಾನು ಪಡೆಯುವುದಾಗಿ ಅವಿವೇಕದಿಂದ ನುಡಿದನು. ಆಗ ನನಗೆ ಮಹಾ ವ್ಯಥೆಯಾಯಿತು. ನಾನಾ ವಿಧದಿಂದ ಯೋಚಿಸಿದೆ. ಕೊನೆಗೆ ನನ್ನ ಸತೀತ್ವವನ್ನು ಪಾಲಿಸಿಕೊಳ್ಳುವುದಕ್ಕಾಗಿಯೂ, ದುಷ್ಟ ದಕ್ಷನ ಸಂಬಂಧದಿಂದಾದ ಈ ಹೇಯ ಮತ್ತು ಅನಿತ್ಯ ಶರೀರವನ್ನು ಯೋಗಮಾರ್ಗದಿಂದ ತ್ಯಜಿಸುವುದಾಗಿಯೂ, ಆ ನೀಚದಕ್ಷನ ಅಳಿಯನೆಂಬ ಅಪಕೀರ್ತಿ ನಿನಗೆ ಬಾರದಂತೆ ಮಾಡುವ ಉದ್ದೇಶದಿಂದಲೂ, ಕೊನೆಯದಾಗಿ ನಿನ್ನ ಆಜ್ಞೆಯನ್ನು ಮೀರಿ, ಕರೆಯದೆ ದಕ್ಷನ ಯಾಗಕ್ಕೆ ಬಂದುದರಿಂದಾದ ಅಪರಾಧಕ್ಕೆ ಪ್ರಾಯಶ್ಚಿತ್ತಾರ್ಥವಾಗಿಯೂ, ಇಗೋ! ಈ ದೇಹವನ್ನು ಭಸ್ಮ ಮಾಡಿ, ದಕ್ಷನ ಯಜ್ಞವನ್ನು ನಾಶಮಾಡಿ ನಿನ್ನ ಸನ್ನಿಧಿಗೆ ಶೀಘ್ರದಲ್ಲಿಯೇ ಬರುವೆನು. ಹೇ ದೇವ, ಜಗದೀಶ, ದಯಾನಿಧೇ, ಇದೇ ಈ ದಾಕ್ಷಾಯಣಿಯು ನಿನಗೆ ಮಾಡುವ ಕೊನೆಯ ಪ್ರಣಾಮ. ಇನ್ನು ಈ ಶರೀರವನ್ನು ತೊರೆದು, ಅನಂತರ ಪುತ್ರಾರ್ಥಿಯಾಗಿ ತಪಸ್ಸನ್ನಾಚರಿಸುತ್ತಿರುವ, ಆ ನಿನ್ನ ಮಹಾಭಕ್ತನಾದ ಪರ್ವತರಾಜನ ಮಗಳಾಗಿ ಜನಿಸಿ, ಸದಾ ನಿನ್ನ ಧ್ಯಾನದಲ್ಲಿರುವೆನು. ಶಂಕರನೇ ಕೃಪೆ ಮಾಡಿ ನನ್ನನ್ನು ಮತ್ತೆ ಸ್ವೀಕರಿಸೆಂದು ಪ್ರಾರ್ಥಿಸಿದಳು.

ನಂತರ, ಒಂದು ಪವಿತ್ರವಾದ ಸ್ಥಳದಲ್ಲಿ ದರ್ಭಾಸನವನ್ನು ನಿರ್ಮಿಸಿ ಶುದ್ಧ ಮನಸ್ಸಿನಿಂದ, ಶುದ್ಧಾಚಮನಗೈದು, ದರ್ಭಾಸನದಲ್ಲಿ ಪದ್ಮಾಸನ

ರೂಢಳಾಗಿ ಕುಳಿತು, ಕಣ್ಣುಗಳನ್ನು ಮುಚ್ಚಿ, ಶಿವಧ್ಯಾನನಿರತಳಾಗಿ, ಯೋಗಾಸನದಲ್ಲಿ ಪ್ರಾಣವಾಯುವನ್ನೂ, ಅಪಾನವಾಯುವನ್ನೂ, ಕ್ರಮವಾಗಿ ಚಲಿಸದಂತೆ ತಡೆದು, ಅವುಗಳನ್ನು ನಾಭಿಸ್ಥಾನದಲ್ಲಿ ಸಮಾನ ವಾಯುವಿನೊಡನೆ ಕೂಡಿಸಿ, ನಂತರ ಕಂಠದಲ್ಲಿರುವ ಉದಾನವಾಯುವನ್ನು, ನಾಭಿಚಕ್ರದ ಮೇಲಿರುವ ಹೃದಯಕಮಲದಲ್ಲಿ ಸ್ಥಿರಗೊಳಿಸಿ, ತದನಂತರ ಅದನ್ನು ಹೃದಯದಿಂದ ಭ್ರೂಮಧ್ಯ (ಹುಬ್ಬುಗಳ ಮಧ್ಯಭಾಗದಲ್ಲಿ) ಸೇರಿಸಿದಳು. ಆಮೇಲೆ ದೇಹದಲ್ಲಿ ಅಗ್ನಿವಾಯುವನ್ನು ಸೃಜಿಸತಕ್ಕ "ಅನಿಲಾಗ್ನಿ ಧಾರಣೆ" ಯೆಂಬ ಕ್ರೂರ ಸಮಾಧಿಯಲ್ಲಿ ನಿಂತು, ಶರೀರಸಂಬಂಧವನ್ನು ತ್ಯಜಿಸಿ, ಶಂಕರನ ಪಾದಾರವಿಂದಗಳಲ್ಲಿ, ತನ್ನ ಅಂತರಾತ್ಮವನ್ನು ಲಯಗೊಳಿಸಿದಳು. ಕೂಡಲೇ ದೇವಿಯ ಭೌತಿಕಶರೀರವು ಉರಿ ತಗುಲಿದ ಕರ್ಪೂರದಂತೆ ಜ್ಯೋತಿರೂಪದಿಂದ ಅದೃಶ್ಯವಾಯಿತು.

ದೇವತೆಗಳ ಪೇಚಾಟ :

ಇದನ್ನು ನೋಡುತ್ತಿದ್ದ ಹರಿ–ಬ್ರಹ್ಮ–ಇಂದ್ರಾದಿ ದೇವತೆಗಳು ಭಯಚಕಿತರಾಗಿ, ಮುಂದಾಗಬಹುದಾದ ಅನಾಹುತಗಳನ್ನು ನೆನೆದು ಕಂಪಿಸತೊಡಗಿದರು. ಕೆಲವರು ದೇವಿಯ ಬಗ್ಗೆ ಅನುಕಂಪ ತೋರಿಸಿದರೆ ಮತ್ತೆ ಕೆಲವರು ಇನ್ನು ದಕ್ಷ ಯಜ್ಞಕ್ಕೆ ವಿನಾಶಕಾಲ ಸಮೀಪಿಸಿತೆಂದು ದಕ್ಷನನ್ನು ಮನಸಾರೆ ನಿಂದಿಸುತ್ತಾ ಗೋಳಾಡಹತ್ತಿದರು. ವಿವೇಕಿಗಳಾದ ಮತ್ತೆ ಕೆಲವರು ಈ ಪಾಪಕಾರ್ಯದಲ್ಲಿ ಭಾಗಿಗಳಾಗಲು ಇಷ್ಟಪಡದೆ, ಕೂಡಲೇ ಯಾಗಶಾಲೆಯನ್ನು ತ್ಯಜಿಸಿ ಹೋದರು. ಇದನ್ನೆಲ್ಲಾ ಗಮನಿಸಿದ ಬ್ರಹ್ಮನು ಕೂಡಲೇ ಯಾಗಶಾಲೆಯನ್ನು ತ್ಯಜಿಸಿದನು. ಅನೇಕ ದೇವತೆಗಳು ಅವನನ್ನು ಹಿಂಬಾಲಿಸಿದರು. ಯಾಗಶಾಲೆಯು ಅರ್ಧವಾಗಿ, ನಿಸ್ತೇಜವಾಗಿ ಕಾಣುತ್ತಿತ್ತು. ಎಲ್ಲೆಲ್ಲಿಯೂ, ದುಃಖಸಂತಾಪದ ಆಲಾಪನೆಗಳೇ. ಎಲ್ಲರೂ, ದಕ್ಷನ ಹಾಗೂ ಅವನ ಬೆಂಬಲಿಗರ ಕಡೆ ಕೈತೋರಿ, ಈ ಶಿವದ್ವೇಷಿಗಳ ದುಷ್ಕಾರ್ಯಗಳಿಂದಲೂ, ಜಗನ್ಮಾತೆಯಾದ ದಾಕ್ಷಾಯಣಿಯ ದೇಹತ್ಯಾಗದಿಂದಲೂ ಕುಪಿತನಾದ ಶಂಕರನು, ಇವರನ್ನೆಲ್ಲಾ ಶಿಕ್ಷಿಸದೆ ಬಿಡುವನೇ ? ಇನ್ನು ನಮ್ಮಗಳ ಪಾಡೇನಾಗುವುದೋ ? ಎಂದು ಅತ್ಯಂತ ದುಃಖದಿಂದಲೂ, ಭಯದಿಂದಲೂ ದಕ್ಷನನ್ನು ಶಪಿಸತೊಡಗಿದರು.

ಯಜ್ಞಾರಂಭ :

ಇಷ್ಟೆಲ್ಲಾ ಅಪಶಕುನಗಳೂ, ಶಾಪೋಕ್ತಿಗಳೂ, ಅಮಂಗಳ
ಗಳೂ, ಸಂಭವಿಸಿ, ತುಂಬಿದ್ದ ಯಾಗಶಾಲೆಯು ಅರ್ಥವಾಗಿದ್ದರೂ
ದಕ್ಷನು ತನ್ನ ಹಟವನ್ನು ಬಿಡದೆ ಹರಿಯ ಬೆಂಬಲದಿಂದ ನಿರ್ಭೀ
ಯಾಗವನ್ನು ಆರಂಭಿಸುವುದಕ್ಕೆ ಆದೇಶ ನೀಡಿ ಯಜ್ಞಕುಂಡದ ಮುಂದೆ
ಷ್ಠಾಪದಯಜ್ಞಪಶುಗಳ ಪಕ್ಕದಲ್ಲಿಯೇ ತಾನೂ ಕುಳಿತು ಯಾಗವನ್ನು
ಲನುವಾದನು. ಪಾಪ, ತನ್ನ ಯಜ್ಞಕ್ಕೆ ತಾನೇ ಪ್ರಥಮಬಲಿಯಾಗು
ಕಲ್ಪನೆಯೇ ಅವನಿಗೆ ಇಲ್ಲವಾಯಿತು.

ಅಧರ್ಮನಿರತಶ್ಚತ್ರ ಭಾರ್ಗ್ಯೈರ್ನೈವ ಹಿ ಲಭ್ಯತೇ ।
ಅಧೀತವೇದಶಾಸ್ತ್ರೋಽಪಿ ಸದಾ ಧರ್ಮರತೋಽಪಿ ವಾ ॥
ವಿನಾಶಕಾಲೇ ಸಂಪ್ರಾಪ್ತೇ ಧರ್ಮಮಾರ್ಗಚ್ಯುತೋ ಭವೇತ್
ಪೀಡ್ಯಂತೇ ದೇವತಾಸ್ಸರ್ವಾಃ ಸತತಂ ಯೇನ ಪಾಪಿನಾ ॥

ಎಂದು ಪದ್ಮಪುರಾಣಾಂತರ್ಗತ ಶಿವಗೀತೆಯಲ್ಲಿ ಹೇಳಿರುವಂತೆ ಎಷ್ಟೇ
ನಾಗಲೀ, ಶಾಸ್ತ್ರಜ್ಞನಾಗಲೀ, ಧರ್ಮಪರಾಯಣನಾಗಲೀ, ವಿನಾ
ಬಂದರೆ ಅಧರ್ಮಿಯಾಗುವನು ; ಅಧರ್ಮದಿಂದ ಜೀವ, ಬ್ರಾಹ್ಮಣ
ಮೊದಲಾದವರನ್ನು ಪೀಡಿಸಿ ನಾಶಹೊಂದುವನು. ಅದರಂತೆಯೇ ಶಿವದ್ರೋ
ಶಿವನಿಂದಕ ದಕ್ಷನು ನಡೆಸುತ್ತಿದ್ದ ಆ ಶಿವರಹಿತಯಜ್ಞದಲ್ಲಿ ಭಾಗವಹಿಸು
ಹರಿ, ಇಂದ್ರ ಮೊದಲಾದ ದೇವಸಮೂಹದ ಸ್ಥಿತಿಯೂ ಆಗಿದ್ದಿತು.
ಯೊಡನೆ ಬಂದಿದ್ದ ಅಂಗರಕ್ಷಣಾದಳದ ರುದ್ರಗಣದವರು ಅತಿದುಃಖ
ಕೈಲಾಸಕ್ಕೆ ತೆರಳಿ, ಶಿವನಿಗೆ ಎಲ್ಲಾ ಅನಾಹುತಗಳನ್ನೂ ವಿವರಿಸಿದರು.
ಸಮಯಕ್ಕೆ ನಾರದನೂ ಬಂದು ಶಿವನಿಗೆ ವಂದಿಸಿ, ಅತ್ಯಂತ ದುಃಖ
ಯಜ್ಞದಲ್ಲಿ ನಡೆದ ಘಟನೆಗಳನ್ನೆಲ್ಲಾ ವಿವರಿಸಿ, ಸತಿಯ ಯೋಗಾಗ್ನಿ
ಶರೀರತ್ಯಾಗಮಾಡಿದುದನ್ನು ತಿಳಿಸಿದನು.

ವೀರೇಶನ ಅವತಾರ :

ದೇವಿಯು ಅಸುನೀಗಿದ ವಿಷಯವನ್ನೂ, ದಕ್ಷನು ಮಾಡಿದ
ನಿಂದೆಯನ್ನೂ ತನ್ನ ಕಿಂಕರರಾದ ಹರಿ, ಇಂದ್ರನೇ ಮೊದಲಾದ

ದೇವತೆಗಳು ಶಿವರಹಿತವಾದ ದಕ್ಷನ ಯಜ್ಞದಲ್ಲಿ ಸ್ವಾರ್ಥಸಾಧಕರಾಗಿ ಭಾಗ ವಹಿಸಿ ಶಿವದ್ರೋಹಿ ದಕ್ಷನಿಗೆ ಬೆಂಬಲ ನೀಡುತ್ತಿರುವ ವಿಷಯುವನ್ನೂ ಕೇಳು ತ್ತಿದ್ದ ಹಾಗೆಯೇ ಶಂಕರನು ಉಗ್ರವಾದ ಪ್ರಳಯಭೈರವನ ರೂಪವನ್ನು ತಾಳಿ ದನು. ಆಗಿನ ಅವನ ಸ್ವರೂಪವು ಕಾಮದಹನಕಾಲದ, ತ್ರಿಪುರಸಂಹಾರ ಕಾಲದ, ಮೃತ್ಯುಂಜಯಕಾಲದ, ಅಂಧಕಾಸುರವಧೆಯ ಕಾಲದ, ಗರಳಾಸುರ ಸಂಹಾರಕಾಲದ, ಉಗ್ರರೂಪಕ್ಕಿಂತಲೂ ಸಹಸ್ರಪಾಲು ಭಯಂಕರವಾಗಿ ಕಂಡಿತು. ಪ್ರಳಯ ಜ್ವಾಲೆ ಕಿಡಿಕೆದರಿತು. ಜಡೆಗಳು ಕೆದರಿ ದಶದಿಕ್ಕುಗಳನ್ನು ಆವರಿಸಿದವು. ಶಿವನ ಫಾಲನೇತ್ರವು ಭುಗಿಲ್ ಭುಗಿಲ್ ಎಂದು ಶಬ್ದ ಮಾಡುತ್ತಾ ತೆರೆಯಿತು. ಅದರ ಜ್ವಾಲಾಮಾಲೆಗಳು ನಭೋಮಂಡಲ ವನ್ನೆಲ್ಲಾ ಆವರಿಸಿ ಭೂಮಿಯಿಂದ ಹಿಡಿದು ಗಗನದ ವರೆವಿಗೂ ಒಂದೇ ರೂಪ ದಿಂದ ಸ್ತಂಭಾಕಾರವಾಗಿ ನಿಂತ ದಳ್ಳುರಿಯೋ ಎಂಬಂತೆ ಕಾಣುತ್ತಿತ್ತು. ಲೋಕವೆಲ್ಲಾ ಸುಡಹತ್ತಿತು. ಶಿವನ ಜಡೆಯ:ಲ್ಲಡಗಿದ್ದ ಗಂಗೆಯು ಕುದಿದು ಅಂಬರವನ್ನೆಲ್ಲಾ ಆವರಿಸಿದಳು. ಈ ಭಯಂಕರವಾದ ಫಾಲನೇತ್ರದ ಜ್ವಾಲೆ ಮೂರು ಲೋಕವನ್ನೂ ಆವರಿಸಿ ದಹಿಸತೊಡಗಿತು. ಸಪ್ತಸಮುದ್ರಗಳೂ ಉಕ್ಕಿ ಮೇರೆ ಮೀರಿದವು. ಗಿರಿಪಂಕ್ತಿ ಬಿರಿಯಿತು. ಆಕಾಶ ನಡುಗಿತು. ರವಿ-ಶಶಿಗಳು ಮುಗ್ಗುರಿಸಿದರು. ನಕ್ಷತ್ರಗಳು ಉದುರಲಾರಂಭಿಸಿದವು. ನಂತರ ಕ್ಷಣಾರ್ಧದಲ್ಲಿ ರುದ್ರ–ಶಿವನ ಫಾಲನೇತ್ರದಿಂದ ಭಯಂಕರ ರೂಪವೊಂದು ಆವಿರ್ಭವಿಸಿತು. ಆ ರೂಪವು ವೀರೇಶನ ರೂಪಧರಿಸಿ ಧರೆಗೆ ಧುಮ್ಮಿಕ್ಕಿ ಶಂಕರನಿಗೆಪ್ರಣಾಮಮಾಡಿ, ಅವನ ಮುಂದೆ ಕೈಜೋಡಿಸಿ ನಿಂತಿತು.

ಆ ವೀರೇಶನ ಮೂರ್ತಿಯು ಬೆಂಕಿಯ ಮೈಬಣ್ಣದಿಂದಲೂ, ನಿಡುಜಡೆ ಮುಡಿಯಿಂದಲೂ, ಮಸ್ತಕದಲ್ಲಿ ಥಳಥಳಿಸುತ್ತಿದ್ದ ಜ್ಯೋತಿರ್ಲಿಂಗದಿಂದಲೂ, ಮುಕುಟಕುಂಡಲಾದಿ ದಿವ್ಯಾಭರಣಗಳಿಂದಲೂ, ತೆರೆದ ಉರಿಗಣ್ಣಿನ ನೋಟ ದಿಂದಲೂ, ಕೋಟಿಸೂರ್ಯಪ್ರಕಾಶದಿಂದಲೂ ಕೂಡಿತ್ತಲ್ಲದೆ, ರವಿ–ಶಶಿಗಳನ್ನೇ ಆಭರಣವನ್ನಾಗಿ ಉಳ್ಳದ್ದಾಗಿಯೂ, ಭಕ್ತರ ರುಂಡಮಾಲೆಗಳನ್ನು ಧರಿಸಿದ್ದು ದಾಗಿಯೂ, ಯಮನಿಗೇ ಯಮಸ್ವರೂಪಿಯೂ, ಅತಿಭಯಂಕರವೂ, ಕೈಯಲ್ಲಿ ವೀರಖಡ್ಗ ಧರಿಸಿ, ತ್ರಿಶೂಲಧಾರಿಯೂ ಆಗಿ, ಅತಿ ಭಯಂಕರವಾಗಿ ಕಂಡಿತು. ನಂತರ ವೀರೇಶನು ಶಂಕರನ ಚರಣಕಮಲಗಳಿಗೆ ವಂದಿಸಿ, ಪೂಜ್ಯ

ಪಿತನೇ! ಹರಿಬ್ರಹ್ಮರನ್ನು ನಿಗ್ರಹಿಸಲೋ, ಗಿರಿಪಂಕ್ತಿಯನ್ನು ಪುಡಿಮಾಡಲೋ, ಶರಧಿಯನ್ನು ಈಂಟಲೋ, ಚತುರ್ಭುವನಗಳನ್ನು ಭಸ್ಮಮಾಡಲೋ, ಅಂಬ... ವನ್ನು ಸುತ್ತಿ ನಿನ್ನ ಪಾದದಡಿ ಇಡಲೋ, ನನ್ನ ಕರ್ತವ್ಯವೇನೆಂಬುದನ್ನು ಅಪ್ಪಣೆ ಮಾಡಿದರೆ, ಅದನ್ನು ಕ್ಷಣಾರ್ಧದಲ್ಲಿ ನಿರ್ವಹಿಸುವೆನೆಂದು ಪ್ರತಿಜ್ಞೆ ಮಾಡಿದನು.

ಶಿವನ ಆದೇಶ :

ಆಗ ಶಂಕರನು ಎಲೈ ವೀರಕುವರಾ! ಶಾಂತನಾಗು. ಶಿವದ್ರೋಹಿಯಾದ ದಕ್ಷನು, ನನ್ನನ್ನು ಧಿಕ್ಕರಿಸಿ, ನಿಂದಿಸಿ, ಮಹಾ ಸತ್ವಶಾಲಿಗಳಾದ ಹ... ಇಂದ್ರಾದಿ ದೇವತೆಗಳ ಬೆಂಬಲದಿಂದ, ಪಶುಬಲಿ ಮುಂತಾದ ಹಿಂಸಾತ್ಮಕವಾದ ಯಾಗವನ್ನು ನನ್ನನ್ನು ಆಹ್ವಾನಿಸದೆ ನಡೆಯಿಸುತ್ತಿರುವನು. ಕರೆಯದಿದ್ದರೂ ಕೇವಲ ಪಿತೃವಾತ್ಸಲ್ಯದಿಂದ ಅಲ್ಲಿಗೆ ಹೋಗಿ ಸೂಕ್ತ ವಿವೇಕ ಹೇಳಿದ ದಾಕ್ಷಾಯಣಿಯನ್ನು ತುಂಬಿದ ಸಭೆಯಲ್ಲಿ, ಅದೂ ನನ್ನ ಕಿಂಕರರ ಮುಂದೆ, ಆ ದುರುಳ ದಕ್ಷನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಅಪಮಾನಿಸಿದನು.

ಸ್ವಪತಿ ನಿಂದೆಯಿಂದ ನೊಂದ ಸತಿಯು, ಯೋಗಾಗ್ನಿಯಲ್ಲಿ ತನ್ನ ತನುವನ್ನು ನೀಗಿದಳು. ನಂತರ ಪರ್ವತರಾಜನ ಪುತ್ರಿಯಾಗಿ ಜನಿಸಲು ನಿರ್ಧರಿಸಿದಳು. ಎಲೈ ವೀರೇಶಾ! ನೀನು ನಿನ್ನ ಅಗಣಿತ ಗಣ ಸಮೂಹದೊಡನೆ ಅಲ್ಲಿ ಹೋಗಿ ದಕ್ಷನನ್ನು ಸಂಹರಿಸಿ, ಆ ಶಿವರಹಿತ ಯಜ್ಞದಲ್ಲಿ ಭಾಗಿಗಳಾದವರನ್ನೆಲ್ಲಾ ನಿಗ್ರಹಿಸು. ಹರಿಯನ್ನು ಪರಾಜಯ ಗೊಳಿಸಿ, ಇಲ್ಲಿಗೆ ಎಳೆದು ತಾ. ನೀನು ಶಾಂತ ರೀತಿಯಿಂದ ಅವರಿಗೆ ವಿವೇಕ ಹೇಳು. ಪಶ್ಚಾತ್ತಾಪದಿಂದ ಶರಣಾದವರನ್ನು ರಕ್ಷಿಸು. ಅಹಂಕರಿಸುವವರನ್ನು ಸಂಹರಿಸು. ಸಂದರ್ಭಾನುಸಾರ ನಿನಗೆ ಸೂಕ್ತ ತೋರಿದಂತೆ ನಡೆ. ಅವಶ್ಯಕವಿದ್ದಾಗ ನನ್ನನ್ನು ನೆನೆ. ನಿನಗೆ ನನ್ನ ಪೂರ್ಣಾನುಗ್ರಹವುಂಟು ಎಂದು ಅಣತಿಯಿತ್ತನು. ದೇವಿಯ ಶರೀರ ತ್ಯಾಗದ ಮಾತು ಕಿವಿಗೆ ಬಿದ್ದೊಡನೆಯೇ ಕನಲಿದ ಕೇಸರಿಯಂತೆ ಕೃದ್ಧನಾದ ಅವನ ಕಣ್ಣುಗಳಿಂದ ಕಿಡಿಕಾರ ಹತ್ತಿದವು.

ವೀರೇಶ ಭದ್ರಕಾಳಿಯರ ಕಲ್ಯಾಣ :

ಅಷ್ಟರಲ್ಲಿ ಶಿವನ ಸಂಕಲ್ಪ ಮಾತ್ರದಿಂದಲೇ, ಮೂರು ಉರಿಗಣ್ಣಿನಿಂದಲೂ ದಶಾಯುಧಗಳಿಂದಲೂ, ಸಿಡಿಲನ್ನು ನಾಚಿಸುವಂಥ ಆರ್ಭಟದಿಂದಲೂ, ನೀಲಾ



ಶ್ರೀವೀರೇಶ–ಭದ್ರಕಾಳಿಯರು

ದ್ರಿಯೇ ವ್ಯೈವೆತ್ತು ಬಂದಿತೋ ಎಂಬಂತೆ ದಿವ್ಯ ತೇಜೋರೂಪಾಂತ ಭದ್ರ, ಕಾಳಿಯು ಶಿವನ ಮುಂದೆ ಆವಿರ್ಭವಿಸಿ, ಶಿವನ ಪಾದಾರವಿಂದಗಳಿಗೆ ವಂದಿಸಿ, ಅಂಜಲಿ ಬದ್ಧಳಾಗಿ, ತಲೆ ಬಾಗಿ ನಿಂತಳು.

ಆಗ ಶಾಂತನಾದ ಶಂಕರನು, ಮಂದಸ್ಮಿತವದನಾರವಿಂದದಿಂದ ಅವರೀ ರ್ವರನ್ನೂ ಕೃಪಾದೃಷ್ಟಿಯಿಂದ ಅವಲೋಕಿಸಿ, ಶಿವಗಣಗಳ ಜಯ ಘೋಷ ಗಳೊಡನೆ, ವೀರೇಶ–ಭದ್ರಕಾಳಿಯರಿಗೆ ಕಲ್ಯಾಣ ಮಾಡಿ ಹರಸಿದನು. ದೇವ ದುಂದುಭಿಗಳು ಮೊಳಗಿದವು. ಯಕ್ಷಗಂಧರ್ವರು ಪುಷ್ಪ ವೃಷ್ಟಿಗರೆದರು. ಸಕಲ ದೇವಗಣಗಳೂ ಆನಂದದಿಂದ ಜಯಕಾರ ಮಾಡುತ್ತಾ ಆ ನೂತನ ಮೂರ್ತಿ ಗಳನ್ನು ಸ್ತೋತ್ರ ಮಾಡಿದರು.

ಗಣಸೇನೆಯ ಪಯಣ :

ಶಿವದ್ರೋಹಿಯಾದ ದಕ್ಷನನ್ನು ಸಂಹರಿಸಿ, ಶಿವದ್ರೋಹಿಗಳನ್ನು ನಿಗ್ರ ಹಿಸುವ ಆತುರದಿಂದ ವೀರೇಶನ ಕಣ್ಣುಗಳಿಂದ ಪ್ರಳಯಾಗ್ನಿಯ ಕಿಡಿಹಾರಿದವು. ಖಡ್ಗವು ಝಳಪಿಸಹತ್ತಿತು. ಧನುಸ್ಸು ತಾನೇ ನಾದ ಮಾಡಿತು. ಭುಜಗಳು ಉಬ್ಬಿದವು. ಕಾಲುಗಳು ಭೂಮಿಯನ್ನು ಮೆಟ್ಟುತ್ತಿರಲು, ಭೂದೇವಿಯು ಆ ಪಾದಾಘಾತಕ್ಕೆ ತತ್ತರಿಸಿದಳು. ಆಗ ವೀರೇಶನು ಶಿವನಿಗೆ ವಂದಿಸಿ ಅವನ ಆಶೀರ್ವಾದವನ್ನು ಪಡೆದು ಭದ್ರಕಾಳಿಯೊಡನೆ ಯಾಗ ಶಾಲೆಗೆ ಪ್ರಯಾಣ ಮಾಡಿದನು. ನಂತರ ವೀರೇಶನು ತನ್ನ ಮುಖ, ಕುತ್ತಿಗೆ, ಹೊಟ್ಟೆ, ಕೈ ಕಾಲು ಮೊದಲಾದ ಶರೀರದ ನಾನಾ ಭಾಗಗಳಿಂದ, ತನಗೆ ಸಮಾನವಾದ ಬಲಪರಾಕ್ರಮವುಳ್ಳವರೂ, ದಿವ್ಯಾಯುಧಗಳನ್ನು ಧರಿಸಿದವರೂ ಆದ ಅಸಂಖ್ಯ ಗಣ ಸೇನೆಯನ್ನು ಸೃಷ್ಟಿಸಿ ಅವರೊಡನೆ ಹೊರಟನು. ಇಂಥಾ ಭಯಂಕರಾ ಕಾರವುಳ್ಳ ಗಣಸೇನೆಯೊಡನೆ ಕೂಡಿದ್ದ ವೀರೇಶನು, ಪ್ರಳಯ ಕಾಲದ ಭೈರ ವನಂತೆ ಕಾಣುತ್ತಿದ್ದನು.

ಪಾದಾತ್ತಥೋರುದೇಶಾಚ್ಚ ಪೃಷ್ಠಾತ್ಪಾರ್ಶ್ವಾನ್ಮುಖಾದ್ಗು ಲಾತ್ ।
ಗುಹ್ಯಾದ್ಗುಲ್ಫಾಚ್ಛಿರೋಮಧ್ಯಾತ್ಕಂಠಾದಾಸ್ಯಾತ್ತಥೋದ ರಾತ್ ॥ (ಶಿ.ಪು. 19.51)

ತದಾ ಗಣೇಶ್ವರೈರ್ಭದ್ರೈರ್ಭದ್ರತುಲ್ಯಪರಾಕ್ರಮೈಃ ।
ಆಚ್ಛಾದಿತಮಭೂತ್ಸರ್ವಂ ಸಾಕಾಶವಿವರಂ ಜಗತ್ ॥ (19-52)
ತೈರ್ಭದ್ರೈರ್ಭಗವಾನ್ ಭದ್ರಸ್ತಥಾ ಪರಿವೃತೋ ಬಭೌ ।
ಕಾಲಾನಲಶತೈರ್ಯುಕ್ತೋ ಯಥಾಂತೇ ಕಾಲಭೈರವಃ ॥ (19-56)

ಯಜ್ಞಶಾಲೆಯಲ್ಲಿ ದುಶ್ಶಕುನಗಳು :

ಇತ್ತ ಮೊದಲೇ ಅರ್ಥವಾಗಿದ್ದ ಯಾಗಶಾಲೆಯಲ್ಲಿ
ಪರ್ವತಾಶ್ಚ ವ್ಯಶೀರ್ಯಂತ ಪ್ರಚಕಂಪೇ ವಸುಂಧರಾ ।
ಮರುತಶ್ಚಾಸ್ಯ ಘೂರ್ಣಂತಃ ಚುಕ್ಷುಭೇ ಮಕರಾಲಯಃ ॥ (ಲಿಂ.ಪು. 100-9)
ಅಗ್ನಯೋ ನೈವ ದೀಪ್ಯಂತಿ ನ ಚ ದೀಪ್ಯತಿ ಭಾಸ್ಕರಃ ।
ಗ್ರಹಾಶ್ಚ ನ ಪ್ರಕಾಶಂತೇ ನ ದೇವಾ ನ ಚ ದಾನವಾಃ ॥ (100-10)
ತತಃ ಕ್ಷಣಾತ್ ಪ್ರವಿಶ್ಯೈವ ಯಜ್ಞವಾಟಂ ಮಹಾತ್ಮನಃ ।
ರೋಮಜೈಃ ಸಹಿತೋ ಭದ್ರಃ ಕಾಲಾಗ್ನಿರಿವ ಚಾಪರಃ ॥ (100-11)

ವೀರೇಶನ ಪ್ರಯಾಣವಾದೊಡನೆಯೇ, ಲೋಕಗಳಿಗೆ ಭಯವನ್ನು ಸೂಚಿಸುವ ಅನೇಕ ದುಶ್ಶಕುನಗಳೂ, ಉತ್ಪಾತಗಳೂ, ತಲೆದೋರಿದವು. ಗಿರಿಗಳು ಬಿರಿದವು. ಭೂಮಿಯು ಕಂಪಿಸಿತು. ಧೂಮಕೇತು ಗೋಚರಿಸಿತು. ಆಕಾಶವು ರಕ್ತಮಯವಾಗಿ ಕಂಡಿತು. ಸಾಗರಗಳು ಉಕ್ಕಿದವು. ಅಗ್ನಿಯು ಮಂದವಾದನು. ಸೂರ್ಯನು ಪ್ರಕಾಶಹೀನನಾದನು. ಚಂದ್ರನೂ–ನಕ್ಷತ್ರಗಳೂ ಕಾಂತಿಗುಂದಿದವು. ದೇವದಾನವರ ಅವಯವಗಳು ಭಯದಿಂದ ಕಂಪಿಸತೊಡಗಿದವು. ಅಷ್ಟರಲ್ಲಿ ಪ್ರಳಯಕಾಲದ ಭೈರವನೋ ಎಂಬಂತೆ, ವೀರೇಶನು ತನ್ನ ಗಣಸೇನೆಯೊಡನೆ, ಘರ್ಜಿಸುತ್ತಾ ಕದಳೀವನವನ್ನು ಮುತ್ತುವ ಮದಗಜದಂತೆಯೂ, ಕುರಿಯ ಹಿಂಡನ್ನು ಪ್ರವೇಶಿಸುವ ಕೇಸರಿಯಂತೆಯೂ, ದಕ್ಷನ ಯಾಗಶಾಲೆಯನ್ನು ಪ್ರವೇಶಿಸಿದನು.

ದಕ್ಷನ ದರ್ಪ :

ತತೋ ವಿಷ್ಣುಪ್ರಧಾನಾನಾಂ ಸುರಾಣಾಮಮಿತೌಜಸಾಂ ।
ದದರ್ಶ ಚ ಮಹತ್ಸತ್ರಂ ಚಿತ್ರಧ್ವಜಪರಿಚ್ಛದಂ ॥ (ಶಿ.ಪು. 20-1)

ನಂತರ ವೀರೇಶನು ಅಪರಿಮಿತ ಶಕ್ತಿಶಾಲಿಗಳಾದ ವಿಷ್ಣು ವೇ ಮೊದಲಾದ ದೇವತೆಗಳನ್ನೊಳಗೊಂಡಿದ್ದ ಯಾಗಶಾಲೆಯನ್ನು ತೀಕ್ಷ್ಣದೃಷ್ಟಿಯಿಂದ ನೋಡಿ, ವೀರಾವೇಶದಿಂದ ಘರ್ಜಿಸಿದನು. ಹೀಗೆ ಅನಿರೀಕ್ಷಿತವಾಗಿ ತನ್ನ ಯಾಗಶಾಲೆಯನ್ನು ಧೈರ್ಯದಿಂದ ಮುತ್ತಿದ ವೀರೇಶನನ್ನು ಕುರಿತು, ದಕ್ಷನು, ಭೀತನಾಗಿದ್ದರೂ, ಚೇತರಿಸಿಕೊಂಡು, ಎಲವೋ ನೀನಾರು ? ಇಲ್ಲಿಗೆ ಬಂದ ಕಾರಣವೇನು ? ಇಲ್ಲಿ ನಿನಗೇನು ಕೆಲಸ ? ಎಂದು ದರ್ಪದಿಂದಲೇ ಕೇಳಿದನು. ಆಗ ವೀರೇಶನು ಸಮಾಧಾನದಿಂದಲೇ ಎಲೈ ದಕ್ಷ ಪ್ರಜಾಪತಿಯೇ ನಾವು ಅಪರಿಮಿತ ಶಿವತೇಜಸ್ಸಿನಿಂದ ಕೂಡಿದ ರುದ್ರ–ಶಿವನ ಅನುಚರರು. ಶಿವನ ಫಾಲನೇತ್ರದಿಂದ ಉದ್ಭವಿಸಿದ ವೀರೇಶನೇ ನಾನು. ಶಿವನಾಣತಿಯಂತೆ, ಈ ಯಜ್ಞದಲ್ಲಿ, ಶಿವನಿಗೆ ಸಲ್ಲಬೇಕಾದ ಯಜ್ಞಭಾಗವನ್ನು (ಹವಿರ್ಭಾಗ) ಅಪೇಕ್ಷಿಸಿ ಬಂದಿರುವೆವು ಎಂದನು. ಆಗ ದಕ್ಷನು ಎಲೈ ವೀರೇಶನೇ ! ನಿಶಾಚರನಾದ ರುದ್ರನಿಗೆ ಇಲ್ಲಿ ಸ್ಥಾನವೇ ಇಲ್ಲವೆಂದಮೇಲೆ ಅವನಿಗೆ ಹವಿರ್ಭಾಗ. ಕೊಡುವುದೆಂತು ? ಅವನು ಪೂಜಾರ್ಹನೂ ಅಲ್ಲ ಎಂದು ಉತ್ತರಿಸಿದನು. ಆಗ ವೀರಭದ್ರನು, ಸಭೆಯವರಿಗೆಲ್ಲಾ ಕೇಳುವಂತೆ, ಎಲೈ ದಕ್ಷ ! ರುದ್ರನೇ ಯಜ್ಞಾಧಿಪತಿಯು ; ಅವನನ್ನು ಆಹ್ವಾನಿಸಿ, ಪೂಜಿಸಿ, ಯಜ್ಞಾರಂಭ ಮಾಡಬೇಕಾಗಿತ್ತು. ಅದಕ್ಕೆ ವಿರೋಧವಾಗಿ ಅವನನ್ನು ನಿರಾಕರಿಸಿ, ನಿಂದಿಸಿ, ಯಜ್ಞಕ್ಕೆ ಬಂದ ಜಗಜ್ಜನನಿಯಾದ ಸತಿಯನ್ನೂ ಅಗೌರವದಿಂದ ಕಂಡು, ತುಚ್ಛವಾದ ವಾಕ್ಯಗಳಿಂದ ನೀನು ನಿಂದಿಸಿದೆ. ದೇವಿಯು ಶಿವನಿಂದೆಯನ್ನು ಕೇಳಲಾರದೆ, ಯೋಗಾಗ್ನಿಯಲ್ಲಿ ತನುವನ್ನು ನೀಗಿದಳು. ಎಂದು ಹೇಳಿ ದೇವತೆಗಳ ಕಡೆ ತಿರುಗಿ, ಇಷ್ಟಾದರೂ ಈ ಶಿವದ್ರೋಹಿಯು ಆಚರಿಸುತ್ತಿರುವ ಶಿವರಹಿತವಾದ ಯಜ್ಞಕ್ಕೆ ಬೆಂಬಲ ನೀಡಿ ನೀವೂ ಪಾಪಭಾಗಿಗಳಾಗಿರುವಿರಿ. ಇಂಥಾ ಶಿವದ್ರೋಹಿಗಳಿಗೆ ತಕ್ಕ ಶಿಕ್ಷೆಯಾಗದಿರಲಾರದು. ಎಂದು ಹೇಳುತ್ತಿರಲು, ದಕ್ಷನು ಎಲೇ ವೀರೇಶನೇ ! ನಿನ್ನಿಂದ ನಾನು ಧರ್ಮಶಾಸ್ತ್ರವನ್ನು ತಿಳಿಯಬೇಕಾಗಿಲ್ಲ. ನಿನ್ನ ರುದ್ರನಿಗೆ ಈ ಯಜ್ಞದಲ್ಲಿ ಸ್ಥಾನವಿಲ್ಲ. ಅವನ ಸರ್ವೇಶತ್ವವನ್ನೂ ನಾನು ಮನ್ನಿಸುವುದೂ ಇಲ್ಲ. ಅವನಿಗೆ ಯಜ್ಞಭಾಗವನ್ನೂ ಕೊಡುವುದಿಲ್ಲ. ಇಲ್ಲಿಂದ ನೀನು ಹೊರಡು ಎಂದು ಕಠಿಣೋಕ್ತಿಯಿಂದ ತಿಳಿಸಿದನು.

ವೀರೇಶನ ಹಿತೋಕ್ತಿ :

ಇದನ್ನು ಕೇಳಿದ ವೀರೇಶನು, ಎಲೈ ದಕ್ಷಾ ! ನೀನು ಪೂಜ್ಯನು ದಕ್ಷನು. ನವಬ್ರಹ್ಮರಲ್ಲಿ ಒಬ್ಬನು. ವಿವೇಕಿಯೆಂದೆನಿಸಿರುವೆ. ವೇದ ಶಾಸ್ತ್ರ ಪಾರಂಗತನೂ ಹೌದು. ಆದರೂ, ವೇದಪ್ರಾಮಾಣ್ಯದಂತೆ ಶಿವನೇ ಯಜ್ಞಕ್ಕೆ ಅಧಿಪತಿಯೆಂಬುದನ್ನು ತಿಳಿಯೆಯಾ ? ಶಿವನಿಲ್ಲದೆ ಯಜ್ಞವನ್ನು ಆರಂಭಿಸಬಹುದೇ ? ಮಹಾತಪೋಧನರೂ, ಯೋಗಿವರ್ಯರೂ ಆದ ದಧೀಚಿಗಳು ನಿನಗೆ ಎಷ್ಟೋ ವಿಧದಲ್ಲಿ ತತ್ವಬೋಧ ಮಾಡಿದರೂ, ಗರ್ವಿಯಾದ ನೀನು ಅವರನ್ನು ಅಪಮಾನಿಸಿರುವೆ. ನಿನ್ನ ಯಜ್ಞಕ್ಕೆ ಬರಲು ನಿರಾಕರಿಸಿ, ಶಿವರಹಿತ ಯಜ್ಞ ಮಾಡಲಾಗದೆಂದು ಎಚ್ಚರಿಸಿದ ಮಹಾಪೂಜ್ಯರೂ, ಋಷಿ ಶ್ರೇಷ್ಠರೂ ಆದ, ಅಗಸ್ತ್ಯ, ವಶಿಷ್ಠ, ಭೃಗು, ಕಣ್ವ, ಆತ್ರೇಯ, ಕಪಿಲ, ದುರ್ವಾಸ ಮುಂತಾದ ಶಂಕರನ ಭಕ್ತರ ಮಾತೂ ನಿನಗೆ ಹಿಡಿಸದಾಯಿತಲ್ಲವೇ ? ನಿನ್ನ ಪುತ್ರಿಯೂ, ಸರ್ವೇಶ್ವರನಾದ ಶಂಕರನ ಅರ್ಧಾಂಗಿಯೂ, ಆದ ಜಗನ್ಮಾತೆಯನ್ನೂ ನೀನು ಅಪಮಾನಿಸಿದ್ದಲ್ಲದೆ, ಮಹಾ ಸತೀಶಿರೋಮಣಿಯಾದ ದೇವಿಯು ಹಾಗೂ ಶಂಕರನ ಕಿಂಕರರಿಂದ ಕೂಡಿರುವ ಈ ಸಭೆಯಲ್ಲಿ ಶಿವನನ್ನು ತುಚ್ಛವಾದ ಮಾತುಗಳಿಂದ ನಿಂದಿಸಿದೆ. ದೇವಿಯು ನಿನಗೆ ನಾನಾ ವಿಧದಿಂದ ತತ್ವಬೋಧ ಮಾಡಿದರೂ, ಮದಾಂಧನಾದ ನೀನು ದೇವಿಯನ್ನು ನಿರಾಕರಿಸಿದ್ದರಿಂದ ದೇವಿಯು ಯೋಗಾಗ್ನಿಯಲ್ಲಿ ದೇಹತ್ಯಾಗ ಮಾಡಿದಳು. ನೀನು ಮಾಯಾವಿಗಳೂ, ಸ್ವಾರ್ಥಪರರೂ ಆದ ದೇವತೆಗಳ ಬೆಂಬಲದಿಂದ ಈ ಧರ್ಮ ಬಾಹಿರವಾದ ಯಜ್ಞಕಾರ್ಯದಲ್ಲಿ ತೊಡಗಿರುವೆ. ಈ ನಿನ್ನ ಬೆಂಬಲಿಗರು ಮಹಾದೇವನನ್ನು ನಾನಾ ವಿಧದಿಂದ ಸೇವಿಸಿ, ಅವನ ಕೃಪೆಯಿಂದ, ತಮ್ಮ ಪದವಿಗಳನ್ನು ಪಡೆದಿರುವವರು. ಶಿವನೇ ಪರಬ್ರಹ್ಮನೆಂದೂ, ಸರ್ವೇಶ್ವರನೆಂದೂ, ಸೃಷ್ಟಿಸ್ಥಿತಿಲಯಗಳಿಗೆ ಕಾರಣನೆಂದೂ, ತ್ರಿಗುಣಾತೀತನೆಂದೂ, ವೇದಗಳು ಸಾರುತ್ತಿರುವುದನ್ನು ನೀನು ಅರಿಯೆಯಾ ? ಇದೆಲ್ಲಾ ನಿನಗೆ ತಿಳಿದ ವಿಷಯವೇ. ಆದರೂ, ಅಜ್ಞಾನದಿಂದಲೂ, ಶಿವದ್ವೇಷದಿಂದಲೂ, ಸ್ವಾರ್ಥಸಾಧನೆಯ ದುರಾಲೋಚನೆಯಿಂದಲೂ, ಗರ್ವಿತನಾಗಿ, ಇದರಿಂದಾಗುವ ಅನರ್ಥಗಳ ಪರಿವೆಯೇ ಇಲ್ಲದೆ ಈ ಶಿವರಹಿತ ಯಜ್ಞವನ್ನು ಮಾಡುತ್ತಿರುವೆ.

ನಂದೀಶ್ವರನ, ದಧೀಚಿಗಳ, ಹಾಗೂ, ಜಗನ್ಮಾತೆಯಾದ ದಾಕ್ಷಾಯಣೀ ದೇವಿಯ ಶಾಪದ ಭಯವೂ ನಿನಗಿಲ್ಲವಾಯಿತೇ ? ಇವರ ಶಾಪವು ಎಂದಿಗಾದರೂ ಸುಳ್ಳಾಗುವುದೇ ? ಅಲ್ಲದೆ ಇದರಲ್ಲಿ ಭಾಗ ವಹಿಸಿರುವ ಶಂಕರನ ಆಪ್ತ ಕಿಂಕರರೂ, ಅವನ ಕೃಪಾವಿಶೇಷದಿಂದಲೇ ತಮ್ಮ ಪದವಿಗಳನ್ನು ಅನುಭವಿಸುತ್ತಿರುವವರೂ, ವೇದಶಾಸ್ತ್ರಪಾರಾಯಣರೂ, ಆದ ಹರಿ-ಇಂದ್ರ ಮೊದಲಾದವರೂ ನಿನಗೆ ವಿವೇಕ ಹೇಳದಾದರೆ ? ಎಂದು ನುಡಿದನು. ಮೊದಲೇ ಗರ್ವಿಷ್ಠನಾದ ದಕ್ಷನು, ಹರಿ–ಇಂದ್ರ ಮೊದಲಾದ ದೇವತೆಗಳಾರೂ ವೀರೇಶನ ಮಾತಿಗೆ ಬೆಲೆ ಕೊಡದೆ ಉದಾಸೀನರಾಗಿರುವುದನ್ನು ಕಂಡು, ಅವರ ಪರಾಕ್ರಮದ ಮುಂದೆ ಈ ಗಣಸೇನೆಯು ಕ್ಷಣಕಾಲವೂ ನಿಲ್ಲಲಾರದೆಂದೂ, ಅವರಿಂದ ತನ್ನ ಯಜ್ಞಕ್ಕೆ ಯಾವ ಭಯವೂ ಇಲ್ಲವೆಂದೂ ನಿರ್ಧರಿಸಿಕೊಂಡು ಮತ್ತೆ ಸ್ಫೂರ್ತಿ ಹೊಂದಿದವನಾಗಿ, ವೀರೇಶನನ್ನು ಕುರಿತು ಎಲೈ ವೀರೇಶನೆ ! ಹುಚ್ಚು ಆವೇಶದಿಂದ ಬಾಯಿಗೆ ಬಂದಂತೆ ಮಾತನಾಡುತ್ತಿರುವೆ. ಕೇಸರಿಯ ಮುಂದೆ, ಮೊಲದ ಪ್ರತಾಪವೆ ?. ಸೂರ್ಯನ ಮುಂದೆ ಮಿಂಚು ಹುಳುವಿನ ಹೊಳಪೆ ? ಮದಗಜದ ಮುಂದೆ, ಇಲಿಯ ಪೌರುಷವೆ ? ನಿನ್ನ ಸಾಮರ್ಥ್ಯದ ಅರಿವೇ ನಿನಗಿದ್ದಂತೆ ಕಾಣುವುದಿಲ್ಲ. ಈ ನಿನ್ನ ನಿಶಾಚರಬಳಗವನ್ನು ನೆಚ್ಚಿ ಉಬ್ಬಿ ಪೌರುಷದ ಮಾತುಗಳನ್ನಾಡಿ ಕೆಡಬೇಡ. ವಿಷ್ಣು ಬ್ರಹ್ಮಾದಿಗಳ ಮುಂದೆ ಮೂರು ಲೋಕಗಳಲ್ಲಿ ಯಾರೂ ನಿಲ್ಲಲಾರರು. ನಿನ್ನ ಗಣಸಮೂಹವನ್ನು ಕ್ಷಣಾರ್ಧದಲ್ಲಿ ಅವರು ಧ್ವಂಸ ಮಾಡಬಲ್ಲರು. ಸರ್ವೋತ್ತಮನಾದ ಹರಿಯೇ ಈ ಅಧ್ವರದ ಅಧಿಪತಿ ಹಾಗೂ ರಕ್ಷಕನು. ಹೀಗಿರುವಲ್ಲಿ ಈ ಯಜ್ಞಕ್ಕೆ ಅಡ್ಡಿ ಮಾಡುವ ಪ್ರತಾಪ ಶಾಲಿಗಳಾರು ? ನಿನ್ನ ಶಿವನು ಯಜ್ಞ ಭಾಗವನ್ನು ಅಪೇಕ್ಷಿಸುವುದಿರಲಿ ; ಈ ದೇವ ಸಭೆಗೆ ಬರಲೂ ಅರ್ಹನಲ್ಲ. ಆದುದರಿಂದಲೇ ನಾನು ಅವನನ್ನು ಕರೆಯಿಸಲಿಲ್ಲವೆಂದು ಹೇಳಿದನು.

ಇದನ್ನೆಲ್ಲಾ ಸಾವಧಾನದಿಂದ ಕೇಳುತ್ತಿದ್ದ ವೀರೇಶನು, ಶಿವನಿಂದೆಯು ಕಿವಿಗೆ ಬಿದ್ದ ಕೂಡಲೇ ಕೆರಳಿದ ಕೇಸರಿಯಂತೆ ಆರ್ಭಟಿಸುತ್ತಾ, ನೀಚನಾದ ದಕ್ಷನ ಮುಖವನ್ನು ನೋಡದೆ ಹರಿಬ್ರಹ್ಮರನ್ನು ದ್ವೇಶಿಸಿ, ಎಲೈ ವಿಷ್ಣು ಬ್ರಹ್ಮರಿರಾ ! ನೀವು ಸೃಷ್ಟಿಸ್ಥಿತಿಗಳಿಗೆ ಕರ್ತರು, ಧರ್ಮರಕ್ಷಕರು. ಶಿವನ ಪೂರ್ಣ ಕೃಪೆಗೆ ಪಾತ್ರರು. ಹಿಂದಿನ ಎಷ್ಟೋ ಯುಗಗಳಲ್ಲಿ ಶಿವನಿಗೇ ಆಧಿಪತ್ಯವನ್ನು

ನೀಡಿ ಹವಿರ್ಭಾಗವನ್ನು ಅರ್ಪಿಸಿರುವಿರಿ. ಶಿವರಹಿತವಾದ ಯಾಗಗಳೇ ನ
ಯುವಂತಿಲ್ಲ. ಇಂತಿದ್ದರೂ ನೀವು ಶಿವನಿಲ್ಲದ ಯಜ್ಞಕ್ಕೆ ಹೇಗೆ ಬಂದಿ
ಮತ್ತು ಯಜ್ಞಾರಂಭಕ್ಕೆ ಒಪ್ಪಿಗೆಯನ್ನು ಹೇಗೆ ನೀಡಿದಿರಿ ? ತಪೋಧನ
ದಧೀಚಿಗಳು ದಕ್ಷನಿಗೆ ತುಂಬಿದ ಸಭೆಯಲ್ಲಿ ನೀಡಿದ ತತ್ತ್ವೋಪದೇಶದಿಂ
ದರೂ ನಿಮ್ಮ ತಪ್ಪು ನಿಮಗೆ ತಿಳಿಯಲಿಲ್ಲವೇ ? ಅಲ್ಲದೆ ಜಗನ್ಮಾತೆಯು
ದಕ್ಷನಿಂದ ಅಪಮಾನಿಸಲ್ಪಟ್ಟಾಗ ನೀವು ಮೂಕರಂತೆ ಸುಮ್ಮನೆ ಕ
ಕುಳಿತಿದ್ದಿರಿ ? ನಂತರ ದೇವಿಯು ಶರೀರತ್ಯಾಗ ಮಾಡುತ್ತಿದ್ದಾಗ ನಿ
ಬುದ್ಧಿಗೆ ಗ್ರಹಣ ಹಿಡಿದು ನೀವು ಜ್ಞಾನ ಶೂನ್ಯರಾಗಿದ್ದಿರಾ ? ದಕ್ಷನ ಧ
ಬಾಹಿರವಾದ ನಡತೆಯನ್ನು ಏಕೆ ಖಂಡಿಸಿ ವಿವೇಕ ಹೇಳದಾದಿರಿ ? ಈ ಎ
ಅಪರಾಧಗಳಿಗೂ ನೀವು ಸಮಭಾಗಿಗಳಾಗಿ ಶಿಕ್ಷಾರ್ಹರಾಗಿರುವಿರಿ. ಈಗ
ದರೂ ನಿಮ್ಮ ಅವಿವೇಕವನ್ನು ಅರಿತು, ಈ ಯಾಗ ಶಾಲೆಯನ್ನು ತ್ಯಜಿ
ಶಿವನ ಮರೆಹೊಕ್ಕು ಅವನ ಕೃಪೆಯಿಂದ ನಿಮಗೆ ಸಂಭವಿಸಬಹುದ
ಭಯಂಕರವಿಪತ್ತುಗಳಿಂದ ಪಾರಾಗಿರಿ. ಇಲ್ಲವಾದಲ್ಲಿ ಶಿವನಾಣತಿಯಂತೆ,
ಯಜ್ಞದಲ್ಲಿ ಭಾಗವಹಿಸುತ್ತಿರುವ ಶಿವದೂಷಕರಾರೇ ಆಗಲಿ, ಅವ
ನಿಗ್ರಹಿಸಿ, ದಕ್ಷಾಧ್ವರವನ್ನು ನಿರ್ನಾಮಗೊಳಿಸಿ, ನಿಮ್ಮೆಲ್ಲರನ್ನೂ ಶ
ಸನ್ನಿಧಿಗೆ ಎಳೆದೊಯ್ಯುವೆನು ಎಂದು ನುಡಿದನು.

ಇದನ್ನು ಕೇಳುತ್ತಿದ್ದಂತೆಯೇ ದಕ್ಷನು ಕೋಪೋದ್ರೇಕದಿಂದ ದೇ
ಗಳನ್ನು ಕುರಿತು ಎಲೈ ದೇವತೆಗಳಿರಾ, ಈ ವೀರೇಶನ ವೀರಾಲಾಪಗ
ಕೇಳುತ್ತ ಸುಮ್ಮನೆ ಕುಳಿತಿರುವಿರಲ್ಲ. ಇವನನ್ನು ಮುತ್ತಿ ಸರಿಯಾದ ಬು
ಕಲಿಸಿರಿ ಎಂದು ಎಚ್ಚರಿಸಿದನು.

ಆಗ ಇಂದ್ರನು ತನ್ನ ಜವಾಬ್ದಾರಿಯನ್ನು ಅರಿತು, ದುಡುಕಿ ಗಣ
ಯನ್ನು ಎದುರು ಹಾಕಿ ಕೊಳ್ಳುವುದು ಸಾಧುವಲ್ಲವೆಂದು ಯೋಚಿಸಿ, ದೇ
ಗುರುವಾದ ಬೃಹಸ್ಪತ್ಯಾಚಾರ್ಯರನ್ನು ಕಂಡು ಅವರ ಸಲಹೆ ಮತ್ತು ಸಹ
ಕಾರಗಳನ್ನು ಕೇಳಿದನು.

ಬೃಹಸ್ಪತಿಯ ಹಿತೋಕ್ತಿ :

ಆಗ ಬೃಹಸ್ಪತ್ಯಾಚಾರ್ಯರು ದೇವಸಭೆಯನ್ನುದ್ದೇಶಿಸಿ, ದೇ
ಇಂದ್ರಾದಿ ದೇವತೆಗಳಿರಾ !

ಜಾತು ವೀರಾಃ ಸಂಭವಂತಿ ಭಕ್ತ್ಯಾ ಜ್ಞೇಯಸ್ತ್ವನವ್ಯಯಃ ।
ಶಾಂತ್ಯಾ ಚ ಪರಯಾ ಭಕ್ತ್ಯಾ ಜ್ಞಾತವ್ಯೋ ಹಿ ಸದಾಶಿವಃ ॥
(ಸ್ಕಾಂದ 1–4–22)

ತೇನ ಸರ್ವಂ ಸಂಭವತಿ ಸುಖದುಃಖಾತ್ಮಕಂ ಜಗತ್ ।
ಪರಂತು ಸಂವದಿಷ್ಯಾಮಿ ಕಾರ್ಯಾಕಾರ್ಯವಿವಕ್ಷಯಾ ॥
(1–4–23)

ಕರ್ಮಮಾರ್ಗವಾಗಲೀ, ವೇದಮಾರ್ಗವಾಗಲೀ, ಯಾಗಯಜ್ಞಗಳಾಗಲೀ, ದಾನಧರ್ಮಗಳಾಗಲೀ, ಪೂರ್ವೋತ್ತರಮೀಮಾಂಸೆಗಳಾಗಲೀ ಪರಬ್ರಹ್ಮ ಪರಮೇಶ್ವರನನ್ನು ತೋರಿಸಲಾರವು. ಆ ಪರಶಿವನಿಂದಲೇ ಈ ಸುಖ ದುಃಖ ರೂಪವಾದ ಪ್ರಪಂಚವು ಸೃಷ್ಟಿಸಲ್ಪಡುವುದು, ರಕ್ಷಿಸಲ್ಪಡುವುದು, ನಂತರ ಲಯಹೊಂದಿಸಲ್ಪಡುವುದು. ಈ ಪ್ರಪಂಚದ ಸಕಲ ವ್ಯಾಪಾರಗಳೂ ಅವನ ಇಚ್ಛೆಯಂತೆಯೇ ನಡೆಯುತ್ತಿರುವುವು. ತ್ರಿಮೂರ್ತಿಗಳೂ ಅವನ ಅಧೀನರು. ಅವನ ಆಣತಿಯನ್ನು ಮೀರಿ ನಡೆಯುವ ಶಕ್ತಿ ಯಾರಿಗೂ ಇಲ್ಲ. ಅವನು ಸರ್ವಾಂತರ್ಯಾಮಿಯೂ, ನಿರಾಕಾರನೂ, ಸಾಕಾರನೂ ಹೌದು. ಅವನೇ ದುಷ್ಟನಿಗ್ರಹಮಾಡುವವನು, ಶಿಷ್ಟಸಂರಕ್ಷಣೆ ಮಾಡುವವನು. ಅವನ ಸಂಕಲ್ಪವಿಲ್ಲದೆ ಒಂದು ಹುಲ್ಲು ಕಡ್ಡಿಯೂ ಚಲಿಸಲಾರದು. "ತೇನ ವಿನಾ ತೃಣಮಪಿ ನ ಚಲತಿ" ಹೀಗಿರುವಲ್ಲಿ ನೀವು ಶಿವನನ್ನು ಬಿಟ್ಟು ಯಜ್ಞಮಾಡು ವುದು ಶಾಸ್ತ್ರಸಮ್ಮತವಲ್ಲ. ಶಿವನೇ ಯಜ್ಞಾಧಿಪತಿಯೆಂದು ವೇದಗಳು ಸಾರು ತ್ತಿರಲು, ಅಸಂಭಾವದಿಂದ ಈ ಅವಿವೇಕ ಪೂರ್ಣವಾದ ಕಾರ್ಯಕ್ಕೆ ಬೆಂಬಲಿಗ ರಾಗಿರುವಿರಿ. ಈ ಗಣಸೇನೆಯು, ಶಿವಸಮಾನವಾದ ವೀರೇಶನ ನಾಯಕತ್ವದಲ್ಲಿ ಬಂದಿದೆ. ಅವರು ಅಸಹಾಯ ಶೂರರು, ಅಜೇಯರು, ಅಕ್ಷಯವೂ, ದಿವ್ಯ ಶಕ್ತಿಯುಕ್ತವೂ ಆದ ಮಾರಕಾಸ್ತ್ರಗಳನ್ನು ಹೊಂದಿರುವವರು. ಅವರನ್ನು ಜಯಿಸುವ ಸಾಮರ್ಥ್ಯ ಉಳ್ಳವರು ಮೂರು ಲೋಕಗಳಲ್ಲಿ ಯಾರೂ ಇಲ್ಲ. ಶ್ರೀವಿಷ್ಣುವೇ ಬೇರೊಂದು ಸಂದರ್ಭದಲ್ಲಿ ಹೇಳಿರುವಂತೆ, ಈ ರುದ್ರಗಣವು ದೇವಗಣವನ್ನು ಹುಲ್ಲುಕಡ್ಡಿಗಿಂತಲೂ ಕಡೆಯಾಗಿ ಕಾಣುವುದು. ತಮಗೆದು ರಾದವರನ್ನು ಅವರು ನಿಮಿಷ ಮಾತ್ರದಲ್ಲಿ ಕತ್ತರಿಸಿ ಚೆಲ್ಲುವರು. ಅವರು ಅಜೇಯರು; ಆದುದರಿಂದ ನಿಮಗೆ ಸೋಲು ತಪ್ಪದು. ನಿಮ್ಮ ಜೀವ ವುಳಿಯುವುದೂ ದುರ್ಲಭ. ನೀವು ದುಡುಕದೆ ಹಿಂದೆ ಮುಂದೆ ಯೋಚಿಸಿ,

ಯಾವುದನ್ನೂ ನಿರ್ಧರಿಸಿರೆಂದು ಸೂಚಿಸಿದನು. ಆದರೂ " ವಿನಾಶಕಾಲೇ ವಿಪರೀತಬುದ್ಧಿಃ " ಎಂಬಂತೆ ಗರ್ವದ ಅಮಲಿನಲ್ಲಿದ್ದ ದೇವಸೇನೆಯು ಯುದ್ಧ ಮಾಡುವುದೆಂದು ತೀರ್ಮಾನಿಸಿ ತನ್ನ ಸೇನೆಗೆ ಆದೇಶ ನೀಡಿತು. ಕೂಡಲೇ ದೇವತೆಗಳು ತಮ್ಮ ತಮ್ಮ ಆಯುಧಗಳನ್ನು ಧರಿಸಿ ಯುದ್ಧಕ್ಕೆ ಸಿದ್ಧರಾಗಿ ಯುದ್ಧ ಕಹಳೆಗಳನ್ನೂ, ಶಂಖಧ್ವನಿಗಳನ್ನೂ ಮೊಳಗಿಸಿದರು.

ಯುದ್ಧಾರಂಭ :

ದಕ್ಷನ ಯಾಗ ಶಾಲೆಯು ರಣಭೂಮಿಯಾಯಿತು. ಇತ್ತ ವೀರಗಣ ಸಮೂಹವೂ ಸಹ, ವಜ್ರಾಯುಧ, ಕುಂತ, ತೋಮರ, ಪಟ್ಟಸ, ಮುದ್ಗರ, ಚಕ್ರ, ಶೂಲ, ಶಕ್ತ್ಯಾಯುಧ, ದಂಡ, ಚಾಪ, ಕತ್ತಿ, ಟಂಕ, ಭಿಂಡಿವಾಳ ಕೊಡಲಿ, ಪಾಶ ಮೊದಲಾದ ಭಯಂಕರವಾದ ಆಯುಧಗಳನ್ನು ಧರಿಸಿ ವೀರಾ ವೇಶದಿಂದ ದೇವಗಣದ ಮೇಲೆ ಎರಗಿತು. ಇತ್ತ ಭದ್ರಕಾಳಿಯೂ, ತನಗೆ ಸಮಾನ ಬಲವುಳ್ಳ ಅಸಂಖ್ಯ ಸೇನೆಯನ್ನು ಸೃಷ್ಟಿಸಿ, ಅಧ್ವರದಲ್ಲಿ ಭಾಗಿಗಳಾ ಗಿದ್ದ, ಲಕ್ಷ್ಮಿ, ಸರಸ್ವತಿ, ಶಚಿ ಮೊದಲಾದ ದೇವಿಯರನ್ನು ಮುತ್ತಿ ಪರಾಭವ ಗೊಳಿಸಿದಳು. ದೇವಗಣಕ್ಕೂ ರುದ್ರ ಗಣಕ್ಕೂ ಭೀಕರ ಘರ್ಷಣೆಯಾಯಿತು. ರುದ್ರಗಣದ ಭೀಕರತೆಗೆ ಹೆದರಿ ಕೆಲ ದೇವತೆಗಳು ಮರಣಿಸಿದರು, ಇನ್ನೂ ಕೆಲ ವರು ಓಡಲಾರಂಭಿಸಿದರು. ಮತ್ತೂ ಕೆಲವರು ಶರಣಾಗತರಾದರು. ಇದನ್ನು ಕಂಡ ಇಂದ್ರನು ಚದುರುತ್ತಿದ್ದ ಯೋಧರನ್ನು ಹುರಿದುಂಬಿಸುತ್ತಿದ್ದನು. ನಂತರ ಭದ್ರಕಾಳಿಯ ಗುಂಪು ಯಜ್ಞಕುಂಡ, ಯೂಪಸ್ತಂಭಗಳು, ಯಜ್ಞಪಶು ಗಳು ಇತ್ಯಾದಿ ಯಾಗ ಸಾಮಗ್ರಿಗಳನ್ನು ಧ್ವಂಸ ಮಾಡಿ, ಗಂಗಾ ಪ್ರವಾಹ ದಲ್ಲಿ ಎಸೆಯಿತು. ರುದ್ರಗಣದ ಸಿಂಹ, ಶಾರ್ದೂಲ ಮುಂತಾದ ಮೃಗಗಳು ದೇವಸೇನೆಯಲ್ಲಿ ಅನೇಕರನ್ನು ಸಂಹರಿಸಿದವು. ವೀರೇಶನು, ತನ್ನ ಸೇನೆಯನ್ನು ಕುರಿತು, ಶರಣಾಗತರಾದವರನ್ನೂ, ನಿರಾಯುಧರನ್ನೂ, ಕ್ಷಮೆಯನ್ನು ಯಾಚಿಸುವವರನ್ನೂ, ಶಿವಭಕ್ತರನ್ನೂ ಶಿಕ್ಷಿಸ ಕೂಡದೆಂದು ಕಟ್ಟಾಜ್ಞೆ ಮಾಡಿ ದನು. ಆದರೆ ಶಿವದ್ರೋಹಿಗಳಾರೇ ಆಗಲಿ, ಅವರನ್ನು ನಿರ್ದಯದಿಂದ ಸಂಹರಿ ಸಿರೆಂದು ಹೇಳಿದನು.

ವೀರೇಶನು ರಭಸದಿಂದ ಇಂದ್ರ, ಅಗ್ನಿ, ವಾಯು, ವರುಣ ಮುಂತಾದ ಮುಖ್ಯರನ್ನು ಏಕಕಾಲದಲ್ಲಿ ತನ್ನ ಸಹಸ್ರ ಬಾಹುಗಳಿಂದ, ಬಾಣ ಬಿಡುತ್ತಾ,

ಅತಿಯಾಗಿ ನೋಯಿಸಿದನು. ಎದುರಾಳಿಗಳಿಂದ ಬರುತ್ತಿದ್ದ ಶರವರ್ಷಗಳನ್ನು ತನ್ನ ಪಿನಾಕವೆಂಬ ಧನುಸ್ಸಿನಿಂದ ಕತ್ತರಿಸುತ್ತಾ ಅವರನ್ನು ಅತಿಯಾಗಿ ಘಾಸಿ ಮಾಡುತ್ತಾ ಪ್ರಳಯಕಾಲದ ರುದ್ರನಂತೆ ವಿಜೃಂಭಿಸಿದನು. ಇವನ ಬಲವು ನಿಮಿಷ ನಿಮಿಷಕ್ಕೂ ಶಿವ ಕೃಪೆಯಿಂದ ವೃದ್ಧಿ ಹೊಂದ ತೊಡಗಿತು. ಅನಂತರ ಗಣೇಶ್ವರನಾದ ವೀರಭದ್ರನು, ವಿಷ್ಣುವೇ ಮೊದಲಾದವರನ್ನು ದ್ವೇಶಿಸಿ, ನಿಮ್ಮ ನಿಮ್ಮ ಸಾಮರ್ಥ್ಯದ ಹೆಮ್ಮೆಯಿಂದ ಮಂತ್ರಗಳನ್ನು ಪ್ರಮಾಣವೆಂದು ತಿಳಿದು ಈ ಯಜ್ಞದಲ್ಲಿ ನಮಗೆ ಹೀಗೆಲ್ಲಾ ಅಪಮಾನ ಮಾಡುತ್ತಿರುವಿರಿ. ಆದುದರಿಂದ ನಿಮಗೆ ಕೇವಲ ಉಪದೇಶಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ನಿಮ್ಮ ಅಹಂಕಾರವನ್ನು ಮುರಿದು ನಿಮಗೆ ಯೋಗ್ಯವಾದ ಶಿಕ್ಷೆಯನ್ನು ಮಾಡುವೆನು ಎಂದು ಹೇಳಿ ಭಗವಾನ್ ವೀರ ಭದ್ರನು, ಕೋಪದಿಂದ ತ್ರಿಪುರಸಂಹಾರಕಾಲದ ಮಹಾದೇವನಂತೆ, ತನ್ನ ಅಗ್ನಿ ಜ್ವಾಲೆಯಿಂದ ದೊಡ್ಡದಾದ ಆ ಯಾಗ ಶಾಲೆಯನ್ನು ಸುಟ್ಟನು, ಯಜ್ಞ ಶಾಲೆಯಲ್ಲಿ ಶೇಖರಿಸಲಾಗಿದ್ದ ಎಲ್ಲಾ ಸಾಮಗ್ರಿಗಳನ್ನೂ ಅಂದರೆ, ಪಾತ್ರೆ ಗಳು, ಬೆಟ್ಟದಂತೆ ರಾಶಿರಾಶಿಯಾಗಿದ್ದ ಅನ್ನ ಹಾಲು ಮೊಸರಿನ ಉಗ್ರಾ ಣಗಳು, ರುಚಿಕರವಾದ ತಿಂಡಿ ಪದಾರ್ಥಗಳು, ಪೇಯ ದ್ರವ್ಯಗಳು, ಮತ್ತೂ ನಾನಾ ಬಗೆಯ ಭಕ್ಷ್ಯಭೋಜ್ಯ ವಸ್ತುಗಳನ್ನೆಲ್ಲಾ ನಾಶಮಾಡಿ, ಉಳಿದವು ಗಳನ್ನು ಗಂಗಾ ಪ್ರವಾಹದಲ್ಲಿ ಎಸೆದನು.

ವೀರಭದ್ರನಿಂದ ಸೃಷ್ಟಿಸಲ್ಪಟ್ಟ ಗಣೇಶ್ವರರು ವಜ್ರಾಯುಧ, ಚಕ್ರ, ಶೂಲಾಯುಧ, ಪಟ್ಟ ಮೊದಲಾದ ಆಯುಧಗಳನ್ನು ಧರಿಸಿ, ಬಲಿಷ್ಠರಾದ, ಲೋಕ ಪಾಲಕರೇ ಮೊದಲಾದ ದೇವತೆಗಳನ್ನು ಅನೇಕ ವಿಧವಾಗಿ ಶಿಕ್ಷಿಸಿ ದರು. ಮತ್ತೆ ಕೆಲವರು, ರತ್ನ ಖಚಿತವಾದ ವೇದಿಕೆಗಳನ್ನು ಒಡೆದು ಹಾಕಿ, ಯಜ್ಞ ಕುಂಡಗಳಿಗೆ ನೀರೆರೆದು ಆರಿಸುತ್ತಿದ್ದರು ಮತ್ತು ಇಂದ್ರರೇ ಮೊದಲಾದ ದೇವತೆಗಳನ್ನು ನಾನಾ ವಿಧವಾಗಿ ತೊಂದರೆಗೊಳಿಸುತ್ತಾ ಇದ್ದರು. ಮತ್ತೊಂದು ರುದ್ರಗಣವು, ಉದ್ಯಾನ ಲತಾ ಮಂಟಪ, ವಿಹಾರ ಗೃಹ ಇತ್ಯಾದಿ ಗಳನ್ನೆಲ್ಲಾ ಮುತ್ತಿ ಅವುಗಳನ್ನು ಧ್ವಂಸಮಾಡಿ ಅದರೊಳಗಿದ್ದ ಎಲ್ಲಾ ದೇವತೆಗಳನ್ನೂ ಕತ್ತರಿಸಿ ಚೆಲ್ಲಿದರು.

ನಂತರ ಆ ಮದಾಂಧರಾದ ದೇವ ಸಮೂಹಕ್ಕೆ ತಕ್ಕ ಶಾಸ್ತಿ ಮಾಡ ಬೇಕೆಂದು ವೀರಭದ್ರನು, ಶಿವನ ಶಕ್ತಿ ಎನಿಸಿಕೊಂಡಿರುವ ತ್ರಿಶೂಲಾಯುಧ

ಹಿಡಿದು, ಹೆದರಿ ಓಡುತ್ತಿದ್ದ ದೇವತೆಗಳನ್ನು ಹಿಂಬಾಲಿಸಿ, ಕೈಗೆ ಸಿಕ್ಕಿದವರನ್ನೆಲ್ಲಾ ಕತ್ತರಿಸುತ್ತಾ, ಕೈ, ಕಾಲು, ಮುಂತಾದ ಅಂಗಾಂಗಳನ್ನೆಲ್ಲಾ ತರಿದು, ರಕ್ತದ ಹೊಳೆಯನ್ನೇ ಹರಿಸಿದನು. ಹೀಗೆ ವೀರೇಶನ ಪ್ರತಾಪವನ್ನೆದುರಿಸಲಾರದೆ ದೇವವೃಂದ ದಿಕ್ಕಾಪಾಲಾಗಿ ಪಲಾಯನ ಮಾಡಿತು. ವೀರಭದ್ರನು ಕುದುರೆ ಯೊಡನೆ ಇರುವ ಸೂರ್ಯನನ್ನೂ, ರುದ್ರರನ್ನೂ, ಮತ್ತಿತರ ದೇವ ಪ್ರಮುಖ ರನ್ನೂ ಅತಿಯಾಗಿ ಘಾತಿಸಿ, ಭಂಗಗೊಳಿಸಿದನು. ಇತ್ತ ಗಣೇಶ್ವರರು ಸಿಂಹ ದಂತೆ ಘರ್ಜಿಸುತ್ತಾ, ಭೂತಪ್ರೇತಗಳೊಡಗೂಡಿ, ಅರಿಷ್ಟನೇಮಿ, ಸೋಮ, ಧರ್ಮ, ಅಂಗಿರಸ್ಸು, ಕೃಶಾಶ್ವ, ಕಾಶ್ಯಪ ಇವರುಗಳನ್ನೆಲ್ಲಾ ಮತ್ತಿ ಕ್ರೂರ ರೀತಿಯಿಂದ ಪ್ರಹರಿಸಿ, ನಿಸ್ತೇಜರನ್ನಾಗಿ ಮಾಡುತ್ತಿದ್ದರು. ಉಳಿದ ದೇವತೆ ಗಳು ವೀರಭದ್ರನ ಶೂಲಾಯುಧದ ಏಟನಿಂದ ತೀವ್ರ ಗಾಯಗೊಂಡವರಾಗಿ, ಭೂಮಿಯಲ್ಲಿ ಬಿದ್ದಿದ್ದರು. ಕೆಲವರ ತೋಳುಗಳು, ಕಾಲುಗಳು, ಎದೆಯ ಭಾಗಗಳು, ತಲೆಯಭಾಗಗಳು ಹೀಗೆ ಶರೀರದ ನಾನಾ ಭಾಗಗಳು ಕತ್ತರಿಸ ಲ್ಪಟ್ಟು ಮೃತರಾದ ದೇವತೆಗಳ ಹೆಣದ ರಾಶಿಗಳೇ ಎಲ್ಲೆಲ್ಲಿಯೂ ಕಾಣು ತ್ತಿದ್ದವು.

ದೇವತೆಗಳ ಸೇನೆಯ ಭಂಗ :

ನಂತರ ವೀರೇಶನು ತನ್ನ ವಜ್ರಾಯುಧದಿಂದ ಇಂದ್ರನೇ ಮೊದಲಾದ ವರನ್ನು ಏಕಕಾಲದಲ್ಲಿ ಘಾತಿಸಿ, ಅವರನ್ನು ಸ್ತಂಭನಗೊಳಿಸಿ, ಸೂರ್ಯನ ಕಣ್ಣುಗಳನ್ನು ಕಳಚಿದನು, ಮುಷ್ಟಿಪ್ರಹಾರದಿಂದ ವರುಣನ ಹಲ್ಲುಗಳನ್ನು ಮುರಿದನು, ಹೆದರಿ ಓಡುತ್ತಿದ್ದ ಚಂದ್ರನನ್ನು ನೆಲಕ್ಕೆ ಕೆಡವಿ ಕಾಲಿನಿಂದ ಉಜ್ಜಿದನು, ಯಮನ ದಂಡಾಯುಧವನ್ನು ಕತ್ತರಿಸಿದನು, ಅಷ್ಟದಿಕ್ಪಾಲಕ ರನ್ನು ಬಾಣಗಳಿಂದ ನಿಗ್ರಹಿಸಿದನು. ಈಶಾನನನ್ನು ತ್ರಿಶೂಲದಿಂದ ತಿವಿದನು, ನಂತರ ಇತರ ದೇವತೆಗಳನ್ನು ಮದಗಜವು ಬಾಳೆಯ ವನವನ್ನು ನಿರ್ನಾಮ ಮಾಡುವಂತೆ, ದೇವ ಸಮೂಹವನ್ನು ಕತ್ತರಿಸುತ್ತಾ ಅಲ್ಲೋಲಕಲ್ಲೋಲ ಮಾಡಿದನು. ಎಲ್ಲೆಲ್ಲಿಯೂ ಆರ್ತನಾದ, ಎಲ್ಲೆಲ್ಲಿಯೂ ಮರಣದೆಸೆಯಲ್ಲಿ ದ್ದವರ ಗೋಳಾಟ, ಎಲ್ಲೆಲ್ಲಿ ನೋಡಿದರೂ, ಗಜ, ತುರಗ, ರಥ, ಪದಾತಿಗಳ ಹೆಣದ ರಾಶಿಗಳೇ ! ಶಸ್ತ್ರಧಾರಿಯಾದ ವೀರೇಶನು ಒಬ್ಬನೇ ಆದರೂ, ದೇವ ಸೇನೆಯ ಕಣ್ಣಿಗೆ ರುದ್ರಗಣದಲ್ಲಿರುವವರೆಲ್ಲಾ ವೀರೇಶನಂತೆಯೇ ಕಾಣು

ತ್ತಿದ್ದರು. ಇದರಿಂದ ಎಲ್ಲರೂ ತತ್ತರಿಸಿ ಓಡಲಾರಂಭಿಸಿದರು. ದೇವಸೇನೆಯ ದುಃಸ್ಥಿತಿಯನ್ನು ಕಂಡ ಹರಿಯು ವೀರೇಶನ ಮೇಲೆರಗಿದನು.

ಹರಿ-ವೀರೇಶರ ಯುದ್ಧ ಕೌಶಲ :

ಇವರ ಯುದ್ಧ ಅತಿಭಯಂಕರವಾಗಿತ್ತು; ನೋಡುವವರ ಎದೆಬಿರುಯು ವಂತಿತ್ತು. ವೀರೇಶನು ಹರಿಯು ತನ್ನನ್ನು ಸಮೀಪಿಸಲೆಂದೇ ಕಾದಿದ್ದನಾಗಿ, ಅವನು ಬಂದ ಕೂಡಲೇ ಅತಿತೀಕ್ಷ್ಣವಾದ ಮೂರು ಬಾಣಗಳಿಂದ ಅವನನ್ನು ಅತಿಯಾಗಿ ನೋಯಿಸಿದನು. ಹರಿಯು ಒಂಭತ್ತು ಬಾಣಗಳಿಂದ ವೀರೇಶನ ಧನುಸ್ಸನ್ನು ಕತ್ತರಿಸಿ ಶಂಖ ಧ್ವನಿ ಮಾಡಿದನು. ಇದರಿಂದ ಕೆರಳಿದ ವೀರೇಶನು ಅತಿ ಶಕ್ತಿಯುತವಾದ ಮೂರು ಬಾಣಗಳಿಂದ ಹರಿಯ ಗದೆಯನ್ನು ಕತ್ತರಿಸಿ, ಎದೆಯನ್ನು ಘಾತಿಸಿದನು. ಆದರಿಂದ ಅತಿಯಾಗಿ ನೊಂದ ಹರಿಯು, ವೀರಾ ವೇಶದಿಂದ ವೀರೇಶನ ಮೇಲೆ ಶರವರ್ಷವನ್ನೇ ಕರೆದನು. ವೀರೇಶನು ಅವುಗಳ ನ್ನೆಲ್ಲಾ ಮಾರ್ಗಮಧ್ಯದಲ್ಲಿಯೇ ಕತ್ತರಿಸುತ್ತಿದ್ದನು.

ನಂತರ ಇಬ್ಬರೂ, ಆಗ್ನೇಯಾಸ್ತ್ರ, ವಾರಣಾಸ್ತ್ರಗಳನ್ನು ಪ್ರಯೋಗಿ ಸುತ್ತಾ ಇರಲು, ಹರಿಯ ಬಾಣಗಳಿಂದ ರುದ್ರಗಣದಲ್ಲಿ ಅನೇಕರು ಘಾಯ ಗೊಂಡರು. ಇದನ್ನು ನೋಡಿದ ವೀರೇಶನು ಸಿಂಹಘರ್ಜನೆ ಮಾಡುತ್ತಾ ಹರಿಯನ್ನು ಮುತ್ತಿ ಶಿವಧ್ಯಾನ ಮಾಡುತ್ತಾ ಹರಿಯಮೇಲೆ ತನ್ನ ವಿಶಿಷ್ಟ ಆಯುಧವನ್ನು ಪ್ರಯೋಗಿಸಿ, ಅವನ ರಥ, ಛತ್ರ, ಚಾಮರಗಳನ್ನೆಲ್ಲಾ ಪುಡಿ ಪುಡಿ ಮಾಡಿದನು. ಹರಿಯೂ ನೆಲಕ್ಕುರುಳಿದನು. ವೀರೇಶನು ಕೂಡಲೇ ಅಗ್ನಿಯನ್ನು ಕತ್ತಿಯಿಂದಲೂ, ಯಮನನ್ನು ಪಟ್ಟಸದಿಂದಲೂ, ದೇವತೆಗಳನ್ನು ತ್ರಿಶೂಲದಿಂದಲೂ, ವರುಣನನ್ನು ಮುದ್ಗರದಿಂದಲೂ, ನಿರ್‌ಋತನನ್ನು ಪರಿಘ ಆಯುಧದಿಂದಲೂ, ವಾಯುವನ್ನು ಟಂಕಾಯುಧದಿಂದಲೂ, ಸಂಹರಿಸಿ ಶಿವ ದ್ವೇಷಿಗಳಾದ ಋಷಿಗಳನ್ನೂ ಶಿಕ್ಷಿಸುತ್ತಿರಲು ಇತ್ತ ಭದ್ರಕಾಳಿಯು, ಸರಸ್ವತಿ ಮತ್ತು ಅದಿತಿಯರ ಮೂಗನ್ನು ಕತ್ತರಿಸಿದಳು. ಹೀಗೆ ವೀರೇಶನಿಗೆ ನೆರವು ನೀಡಿ ಮತ್ತೆ ಯುದ್ಧಕ್ಕೆ ಪ್ರೇರೇಪಿಸಿದಳು.

ವಿಷ್ಣುಮಾಯೆ :

ಮಹಾ ಕೋಪಿಯಾದ ಹರಿಯು ಗರುಡನನ್ನೇರಿ, ತನ್ನ ಮಾಯೆ ಯಿಂದ ಶರಸಂಧಾನ ಮಾಡಿ ರುದ್ರಗಣವನ್ನು ಅತಿಯಾಗಿ ನೋಯಿಸಿದನು.

ಆಗ ವೀರೇಶನು ತನ್ನ ಶೈವಮಾಯೆಯಿಂದ ಗರುಡನ ರೆಕ್ಕೆ ಕಾಲುಗಳನ್ನೂ ಮುರಿದು ನೆಲಕ್ಕೆ ಕೆಡಹಲು, ವಿಷ್ಣುವೂ ನೆಲಕ್ಕೆ ಬಿದ್ದು ರಕ್ತಸ್ರಾವದಿಂದ ಬಳಲಿ ನಿಸ್ತೇಜನಾಗಿ ನಿಂತಿರಲು, ವೀರೇಶನು ಹರಿಯ ಬಳಿಗೆ ಹೋಗಿ ವಿಷ್ಣುವನ್ನು ಕುರಿತು ಎಲೈ ಜಗನ್ನಾಥನಾದ ಹರಿಯೇ! ಈಗಲಾದರೂ ನಿನಗೆ ನಿನ್ನ ಅವಿವೇಕದ ಅರಿವಾಗಲಿಲ್ಲವೇ? ಶಿವದ್ರೋಹಿಯಾದ ದಕ್ಷನು ಮಾಡುತ್ತಿರುವ ಶಿವರಹಿತ ಯಜ್ಞಕ್ಕೆ ನೀನು ಬೆಂಬಲನೀಡಬಹುದೇ? ಶಿವನಿಂದೆಯನ್ನು ಕೇಳಿಯೂ, ದಕ್ಷನನ್ನು ಶಿಕ್ಷಿಸದೆ ಮೌನದಿಂದಿರುವೆ ಏಕೆ? ಧರ್ಮರಕ್ಷಕನಾದ ನೀನೇ ಹೀಗೆ ಅಧರ್ಮ ಕಾರ್ಯಕ್ಕೆ ಬೆಂಬಲ ನೀಡಬಹುದೇ? ನಿನ್ನ ಶಸ್ತ್ರಾಯುಧಗಳೆಲ್ಲಾ ನಿಸ್ತೇಜವಾಗಿರುವುದರ ಕಾರಣ ನಿನಗೆ ತಿಳಿಯಲಿಲ್ಲವೇ? ನಿನಗೆ ಬೆಂಬಲಿಗರಾಗಿದ್ದ ಇಂದ್ರ, ವರುಣ, ಯಮ, ರವಿ, ಶಶಿ, ಮೊದಲಾದ ಅಸಹಾಯ ಶೂರರೆಲ್ಲಾ ಪರಾಜಿತರಾಗಿ, ಘಾತಿಹೊಂದಿ ದುಃಖಿಸುತ್ತಿರುವುದು ನಿನಗೆ ತಿಳಿಯದೇ? ನಿನ್ನ ಶಂಖ, ಚಕ್ರ ಗದೆಗಳೇನಾದವು? ಎಂದು ಮೂದಲಿಸುತ್ತಿದ್ದರೂ ಹರಿಯು ತಕ್ಷಣ ಚೇತರಿಸಿಕೊಂಡು ತನ್ನ ದಿವ್ಯಶಕ್ತಿಯಿಂದ ನೂತನವಾದ, ಶಂಖ, ಚಕ್ರ, ಗದೆಗಳನ್ನು ಪಡೆದು ನವಚೈತನ್ಯ ಹೊಂದಿ ಅಸಂಖ್ಯವಾದ ಬಾಣಗಳಿಂದ ವೀರಭದ್ರನನ್ನು ಪೀಡಿಸತೊಡಗಿದನು.

ಬ್ರಹ್ಮನ ಸಾರಥ್ಯ :

ಕೂಡಲೇ ಎಲ್ಲರೂ ಕೌತುಕ ಪಡುತ್ತಿರಲು, ಅಂತರಿಕ್ಷದಿಂದ ಒಂದು ದಿವ್ಯ ರಥವು ಆಗಮಿಸಿತು. ಆ ರಥವು ದಿವ್ಯಾಸ್ತ್ರಗಳಿಂದಲೂ, ಅಕ್ಷಯವಾದ ಬತ್ತಳಿಕೆಗಳಿಂದಲೂ, ಶಸ್ತ್ರಾಯುಧಗಳಿಂದಲೂ, ಸಜ್ಜುಗೊಳಿಸಲ್ಪಟ್ಟಿತ್ತು. ಆ ರಥವನ್ನು ಶಿವನ ಅಪ್ಪಣೆಯಂತೆ, ಬ್ರಹ್ಮನೇ ವೀರಭದ್ರನಿಗೆ ಅರ್ಪಿಸಿ, ಅದರ ಸಾರಥ್ಯವನ್ನು ತಾನೇ ವಹಿಸಿದನು. ವೀರೇಶನು ಇಮ್ಮಡಿಯಾದ ಶಕ್ತಿ ಪಡೆದು ರಥವನ್ನೇರಿ ಸಕಲ ಪರಿವಾರದೊಡನೆ ಹರಿಯನ್ನು ಸಮೀಪಿಸಿದನು. ಅವನ ರಥವು ಕೋಟಿಸೂರ್ಯಪ್ರಕಾಶದಿಂದ ಕಂಗೊಳಿಸುತ್ತಿತ್ತು. ಹಿಂದೆ ತ್ರಿಪುರಾಸುರ ಸಂಹಾರ ಕಾಲದಲ್ಲಿ ಶಿವನಿಗೆ, ಯಾರು ಸಾರಥ್ಯವನ್ನು ವಹಿಸಿದ್ದರೋ, ಆ ಬ್ರಹ್ಮನೇ ಈಗಲೂ ಸಾರಥಿಯಾಗಿದ್ದನು. ಹೀಗೆ ನೂತನ ರಥಾರೂಢನಾಗಿದ್ದ ವೀರೇಶನು ಸಾಕ್ಷಾತ್ ಶಿವನಂತೆ ಕಾಣುತ್ತಿದ್ದನು. ಆಗ ಭಾನುಕೋಪನೆಂಬ ಗಣಾಧೀಶ್ವರನು, ಪೂರ್ಣಚಂದ್ರನಂತೆ ಹೊಳೆಯುತ್ತಿದ್ದ ಶಂಖ

ವನ್ನು ಊದಿದ್ದಕ್ಕೆ, ದೇವತೆಗಳೆಲ್ಲಾ ದಿಗ್ಭ್ರಾಂತರಾಗಿ, ಓಡಲಾರಂಭಿಸಿದರು. ಇದನ್ನು ನೋಡುತ್ತಿದ್ದ ಹರಿಯು ಮತ್ತೆ ಹುರುಪಿನಿಂದ ವಿಜೃಂಭಿಸಿದನು.

ತಸ್ಮಿನ್ನವಸರೇ ವ್ಯೋಮ್ನಿ ಸಮಾವಿರಭವದ್ರಥಃ ।
ಸಹಸ್ರಸೂರ್ಯಸಂಕಾಶಶ್ಚಾರುಚೀರವೃಷಧ್ವಜಃ ॥ (ಶಿ.ಪು. 2_21)
ಅಶ್ವರತ್ನದ್ವಯೋದಾರೋ ರಥಶ್ಚಕ್ರಚತುಷ್ಟಯಃ ।
ಸಂಚಿತಾನೇಕದಿವ್ಯಾಸ್ತ್ರಶಸ್ತ್ರರತ್ನಪರಿಷ್ಕೃತಃ ॥ (22_2)
ತಸ್ಯಾಪಿ ರಥವರ್ಯಸ್ಯ ಸ್ಯಾತ್ಸ ಏವ ಹಿ ಸಾರಥಿಃ ।
ಯಥಾ ಚ ತ್ರೈಪುರೇ ಯುದ್ಧೇ ಪೂರ್ವಂ ಶಾರ್ವರಥೇ ಸ್ಥಿತಃ ॥ (22-3)

ನಂತರ ಹರಿಯು, ಶಾರ್ಙ್ಗವೆಂಬ ತನ್ನ ಧನುಸ್ಸನ್ನು ಧರಿಸಿ, ವೀರೇಶನ ಮೇಲೆ ಶರವರ್ಷಗರೆದನು. ಆದರಿಂದ ನೊಂದ ವೀರೇಶನು ತನ್ನ ಧನುಸ್ಸಿನಿಂದ ಹಾವಿನಂತೆ ಅತಿ ಕ್ರೂರವಾದ ಬಾಣಗಳನ್ನು ಸಂಧಾನ ಮಾಡಿ, ಹರಿಯ ಹಣೆಗೆ ಹೊಡೆದನು. ಅದರ ಘಾತದಿಂದ ನೊಂದ ಹರಿಯು, ವಜ್ರಾಯುಧಕ್ಕೆ ಸಮಾನವಾದ ಬಾಣಗಳಿಂದ ವೀರಭದ್ರನ ತೋಳಿಗೆ ಹೊಡೆದು ನೋಯಿಸಿದನು. ಹೀಗೆ ನಾಶರಹಿತರಾದ ಇಬ್ಬರೂ ಘೋರ ಯುದ್ಧಮಾಡುತ್ತಿದ್ದರು.

ಹರಿಯ ಮೂರ್ಛೆ :

ವೀರೇಶನು ಕುಪಿತನಾಗಿ ಸೂರ್ಯಪ್ರಕಾಶಮಾನವಾದುದೂ ಬೆಂಕಿಯನ್ನು ಕಾರುತ್ತಿದ್ದುದೂ ಆದ ಒಂದು ದಿವ್ಯ ಬಾಣವನ್ನು ಹರಿಯ ವಕ್ಷಸ್ಥಳಕ್ಕೆ ಗುರಿಯಿಟ್ಟು ಹೊಡೆದನು. ಅದು ಕ್ಷಣಾರ್ಧದಲ್ಲಿ ವಿಷ್ಣುವಿನ ಎದೆಯನ್ನು ಘಾತಿಸಲು, ಹರಿಯು ಮೂರ್ಛೆಬಿದ್ದನು. ಆದರೂ ತನ್ನ ದಿವ್ಯಶಕ್ತಿಯಿಂದ ಮತ್ತೆ ಚೇತರಿಸಿಕೊಂಡೆದ್ದು, ತನ್ನ ಹೆಸರಿನ ಒಂದು ದಿವ್ಯಬಾಣವನ್ನು ವೀರೇಶನ ಮೇಲೆ ಪ್ರಯೋಗಿಸಿದನು. ಕೂಡಲೇ ವೀರೇಶನು ತನ್ನ ಹೆಸರಿನ ಬಾಣದಿಂದ ಹರಿಯ ಬಾಣವನ್ನು ಮಧ್ಯದಲ್ಲಿಯೇ ಕತ್ತರಿಸಿದನು. ಆದರಿಂದ ಹತಾಶನಾದ ಹರಿಯು ನಿಸ್ಸಹಾಯಕನಾಗಿ ಸ್ತಬ್ಧನಾದನು.

ಹರಿಗೆ ಹಿತೋಪದೇಶ ಮತ್ತು ಶಿವಪಾರಮ್ಯ ವಿವರಣೆ :

ಹರಿಯ ಈ ಸ್ಥಿತಿಯನ್ನು ಕಂಡ ವೀರೇಶನು, ಎಲೈ ಧರ್ಮಜ್ಞನಾದ ಪೂಜ್ಯ ಹರಿಯೇ ! ನೀನು ಶಿವದ್ವೇಷಿಯ ಪಕ್ಷ ವಹಿಸಿ ಯುದ್ಧ ಮಾಡು

ತ್ತಿರುವುದರಿಂದ ಹೀಗೆ ಪದೇ ಪದೇ ಪರಾಜಿತನಾಗುತ್ತಿರುವೆ. ನಿನ್ನ ಶಸ್ತ್ರಾಸ್ತ್ರಗಳಾದರೋ ತೇಜೋಹೀನವಾಗಿ ನೆಪಮಾತ್ರಕ್ಕೆ ಕೆಲಸ ಮಾಡುತ್ತಿವೆ. ಶಿವದತ್ತವಾದ ದಿವ್ಯಾಸ್ತ್ರಗಳು, ದುಷ್ಟರೂ ಅಧರ್ಮಿಗಳೂ ಆದವರನ್ನು ಮಾತ್ರ ನಿಗ್ರಹಿಸಬಲ್ಲವು. ಅವು ಶಿವಾಂಶರೂ, ಧರ್ಮಾತ್ಮರೂ ಆದ ರುದ್ರಗಣದ ಸನಿಹಕ್ಕೂ ಸಹ ಬರಲಾರವು. ಈಗ ನೀನೇ ಅಧರ್ಮ ಮಾರ್ಗವನ್ನು ಅನುಸರಿಸುತ್ತಿರುವುದರಿಂದ ಅವು ಮತ್ತೂ ತೇಜೋಹೀನವಾಗಿರುವುವು. ನಿನ್ನ ಅವಿವೇಕ ಹಾಗೂ, ಅಸಹಾಯಕ ಸ್ಥಿತಿಯನ್ನು ಕಂಡು ನನಗೆ ಅನುಕಂಪವುಂಟಾಗಿದೆ. ಆದುದರಿಂದ ಮತ್ತೊಮ್ಮೆ ಕೊನೆಯ ಬಾರಿಗೆ, ನಿನಗೆ ಶಿವನಿಂದ ಹಿಂದೆ ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ಅನುಗ್ರಹಾತಿಶಯಗಳು ಲಭಿಸಿರುವುವೆಂಬುದನ್ನು ನಿನ್ನ ನೆನಪಿಗೆ ತರುವೆನು. ಆಗಲಾದರೂ, ನೀನು ಮಾಯಾ ದೂರನಾಗಿ ಈ ನಿನ್ನ ಧರ್ಮ ಬಾಹಿರ ಕಾರ್ಯವನ್ನು ನಿಲ್ಲಿಸಿ, ಪ್ರಾಣಾಪಾಯದಿಂದ ಮುಕ್ತನಾಗಬಹುದೆಂದು ಹೇಳಿ, ಶಿವಪಾರಮ್ಯವನ್ನು ವಿವರಿಸುವ ಸಲುವಾಗಿ ಹೀಗೆ ಹೇಳ ತೊಡಗಿದನು.

(1) ಎಲೈ ! ಶಂಕರನ ಆಪ್ತನೂ, ಭಕ್ತನೂ ಆದ ಗೋವಿಂದನೇ, ಹಿಂದೊಮ್ಮೆ ದಧೀಚಿಗಳ ಮೇಲೆ ಅನ್ಯಾಯವಾಗಿ ನಿನ್ನ ಚಕ್ರವನ್ನು ಪ್ರಯೋಗಿಸಿದೆ. ಶಂಕರನ ಭಕ್ತನಾದ ದಧೀಚಿಯು ಅದನ್ನು ಹಿಡಿದು ಪುಡಿ ಪುಡಿ ಮಾಡಿದನು. ಆಗ ನೀನು ಭೀತನೂ, ನಿಸ್ಸಹಾಯಕನೂ ಆಗಿ ಶಿವನನ್ನು ಸಹಸ್ರ ವರ್ಷಗಳ ಕಾಲ ಪ್ರತಿದಿನವೂ, ಸಹಸ್ರ ಕಮಲಗಳಿಂದ ಪೂಜಿಸುತ್ತಿದ್ದೆ. ಒಂದು ದಿನ, ಶಿವಮಾಯೆಯಿಂದ ಒಂದು ಕಮಲವು ಇಲ್ಲದಾಯಿತು. ಎಷ್ಟು ಹುಡುಕಿದರೂ ಆ ಪುಷ್ಪ ಸಿಗದಿರಲು ನೀನು ಹಿಂದು ಮುಂದು ನೋಡದೆ, ನಿನ್ನ ಪವಿತ್ರವಾದ ನೇತ್ರಕಮಲವನ್ನೇ ಶಿವನಿಗೆ ಅರ್ಪಿಸಿದೆ. ಅದರಿಂದ ಪ್ರಸನ್ನನಾದ ಶಂಕರನು, ಎಲೈ ಹರಿಯೇ ! ದೇವತೆಗಳಲ್ಲೆಲ್ಲಾ ನೀನೇ ನನ್ನ ಶ್ರೇಷ್ಠ ಭಕ್ತ ; ನಿನ್ನ ಭಕ್ತಿಯು ಹೀಗೇ ಇರಲಿ. ಎಂದು ದಿವ್ಯ ಪ್ರಕಾಶದಿಂದ ಕೂಡಿದ 'ಸುದರ್ಶನ' ವೆಂಬ ಚಕ್ರವನ್ನು ನಿನಗೆ ಅನುಗ್ರಹಿಸಿದುದನ್ನು ಮರೆತೆಯಾ ?

(2) ಭೃಗು ಋಷಿಗಳ ಶಾಪದಿಂದ ನೀನು, ಮತ್ಸ್ಯಾವತಾರ, ನೃಸಿಂಹಾವತಾರ, ವಾಮನಾವತಾರಗಳನ್ನೆತ್ತಿ, ಲೋಕಕ್ಕೆ ಉಂಟಾಗಿದ್ದ ಕಂಟಕಗಳನ್ನು

ಪರಿಹರಿಸಿದೆ. ನಂತರ, ಶಿವಮಾಯೆಯಿಂದ ಆವೃತನಾಗಿ, ಅವತಾರಗಳಲ್ಲಿ ನಿನಗೆ ಲಭಿಸಿದ ಜಯದಿಂದ ಮದೋನ್ಮತ್ತನಾಗಿ, ಲೋಕವನ್ನು ಹಿಂಸಿಸ ತೊಡಗಿದೆ. ಆಗ ಸಂಕಟಕ್ಕೀಡಾದ ದೇವತೆಗಳ ಪ್ರಾರ್ಥನೆಯಂತೆ, ಭಕ್ತವತ್ಸಲನಾದ ಶಂಕರನು, ವಿನಾಯಕ, ಭೈರವ, ಷಣ್ಮುಖ, ವೀರಭದ್ರರನ್ನು ಕಳುಹಿಸಿದನು. ಅವರು ನಿನ್ನ ಗರ್ವವನ್ನು ನೀಗಿ ನಿನ್ನ ಮಾಯಾ ಶರೀರವನ್ನು ಮರ್ದಿಸಿದರು. ಆಗ ನೀನು ದಿವ್ಯ ಜ್ಞಾನವನ್ನು ಹೊಂದಿ ಪಶ್ಚಾತ್ತಾಪದಿಂದ ಶಂಕರನನ್ನು ಪ್ರಾರ್ಥಿಸಿ, ನಿನ್ನ ಹೆಸರಿನಲ್ಲಿ ಲಂಕೆಯಲ್ಲಿ ಮತ್ಸ್ಯೇಶ್ವರ, ವೃಂದಗಿರಿಯಲ್ಲಿ ಕೂರ್ಮೇಶ್ವರ, ಗಯೆಯಲ್ಲಿ ವರಾಹೇಶ್ವರ, ವಾಮನೇಶ್ವರ, ಓಟಕಕ್ಷೇತ್ರದಲ್ಲಿ ನೃಸಿಂಹೇಶ್ವರ ಎಂಬ ಲಿಂಗಗಳನ್ನು ಪ್ರತಿಷ್ಠಿಸಿ, ಆರಾಧಿಸಿ, ಶಿವನ ಅನುಗ್ರಹದಿಂದ ಮತ್ತೆ ವೈಕುಂಠವನ್ನು ಸೇರಿದೆ. ಇದನ್ನು ನೀನು ಹೇಗೆ ಮರೆತೆ?

(3) ಒಮ್ಮೆ ನಿನಗೂ ಬ್ರಹ್ಮನಿಗೂ ಮೇಲ್ಮೆಯ ವಿಷಯದಲ್ಲಿ ವಿವಾದವುಂಟಾಗಿ ಕೊನೆಗೆ ನೀವಿಬ್ಬರೂ ಭಯಂಕರ ಯುದ್ಧದಲ್ಲಿ ತೊಡಗಿದಿರಿ. ನಿಮ್ಮ ಗರ್ವವನ್ನು ಅಡಗಿಸಬೇಕೆಂದು, ಶಿವನು ನಿಮ್ಮೀರ್ವರ ಮಧ್ಯೆ ಕೋಟಿಸೂರ್ಯ ಪ್ರಕಾಶಮಾನವಾದ ಸ್ತಂಭಾಕಾರದ ಜ್ಯೋತಿರ್ಲಿಂಗ ರೂಪದಲ್ಲಿ, ಆವಿರ್ಭವಿಸಿದನು. ಆಗ ನೀವಿಬ್ಬರೂ ಭೀತರಾಗಿ ಆ ಲಿಂಗಾಕಾರ ಶಿವನ ಆದಿ, ಅಂತ್ಯಗಳನ್ನು ಅರಿಯಲು ನೂರಾರು ವರ್ಷಕಾಲ ಶ್ರಮಿಸಿದರೂ ನಿಷ್ಫಲರಾದಿರಿ. ನಂತರ ನೀನು ಶಿವನ ಪಾದಗಳನ್ನು ನೋಡಲಾರದೆ ಹಿಂದಿರುಗಿ ಬಂದು, ಶಿವನನ್ನು ಅನನ್ಯ ಭಕ್ತಿಭಾವದಿಂದ ಆರಾಧಿಸಿ, ಅವನ ಕ್ಷಮೆಯನ್ನು ಯಾಚಿಸಿದೆ. ಆಗ ನಿನ್ನ ಭಕ್ತಿಗೂ, ಸತ್ಯಸಂಧತೆಗೂ, ಪ್ರಸನ್ನನಾದ ಶಂಕರನು ನಿನಗೆ ಜಗನ್ನಾಥ ಪದವಿಯನ್ನು ಅನುಗ್ರಹಿಸಿದನು. ಆದರೆ ಬ್ರಹ್ಮನು ಶಿವನ ಶಿರಸ್ಸನ್ನು ನೋಡದಿದ್ದರೂ, ನೋಡಿದೆನೆಂದು ಸುಳ್ಳು ಹೇಳಿ, ಅದರ ಸಮರ್ಥನೆಗಾಗಿ, ಕಾಮಧೇನುವಿನಿಂದಲೂ, ಕೇದಿಗೆ ಪುಷ್ಪದಿಂದಲೂ ಸುಳ್ಳುಸಾಕ್ಷ್ಯವನ್ನು ನುಡಿಸಿದನು. ಆಗ ಕುಪಿತನಾದ ಶಂಕರನು ನಿಮಗೆ ಪೂಜೆಯಿಲ್ಲದಂತಾಗಲೆಂದು ಶಾಪಕೊಟ್ಟನು. ಅದರಂತೆ ಬ್ರಹ್ಮನಿಗೂ ಕೇದಿಗೆಗೂ, ಕಾಮಧೇನುವಿನ ಮುಖಕ್ಕೂ ಈಗಲೂ, ಪೂಜೆಯಿಲ್ಲದಂತಾಯಿತು. ನಂತರ ನೀವೆಲ್ಲರೂ ಭಕ್ತಿಯಿಂದ ಶಿವನನ್ನು ಕುರಿತು ಎಲೈ ದಯಾಮಯನೆ. ನಮ್ಮ ಅಪರಾಧವನ್ನು ಮನ್ನಿಸಿ, ನಿನ್ನ ಸ್ವರೂಪವಾದ ಲಿಂಗವನ್ನು ಅನುಗ್ರಹಿಸಿ, ಅದನ್ನು

ಆರಾಧಿಸುವ ವಿಧಿಯನ್ನು ಬೋಧಿಸುವಂತೆ ಪ್ರಾರ್ಥಿಸಿದಿರಿ. ಆಗ ಪ್ರಸನ್ನನಾದ ಶಂಕರನು ನಿಮ್ಮ ಪ್ರಾರ್ಥನೆಯಂತೆ ಸೂಕ್ಷ್ಮಾಕಾರದ ಲಿಂಗರೂಪಧರಿಸಿ, ಅದನ್ನು ಅನುಗ್ರಹಿಸಿದನು. ಶಿವನ ಉಪದೇಶದಂತೆ ಅಂದಿನ ರಾತ್ರಿಯೆಲ್ಲಾ ನೀವು ಆ ಲಿಂಗವನ್ನು ಶ್ರದ್ಧಾ ಭಕ್ತಿಗಳಿಂದ ಪೂಜಿಸಿ ಸ್ತೋತ್ರ ಮಾಡಿದಿರಿ. ಆಗ ಶಿವನು ನಿಮ್ಮ ಇಷ್ಟಾರ್ಥಗಳನ್ನೆಲ್ಲಾ ಕರುಣಿಸಿ ಅಂದಿನ ರಾತ್ರಿಗೆ "ಮಹಾಶಿವರಾತ್ರಿ" ಯೆಂದು ಹೆಸರಿಟ್ಟು, ಮಹಾಶಿವರಾತ್ರಿಯಂದು ಶಿವನನ್ನು ಯಾರು ಭಕ್ತಿಯಿಂದ ಆರಾಧಿಸುವರೋ ಅವರಿಗೆ ಗಣಪದವಿ ದೊರೆಯಲೆಂದು ಹೇಳಿ ಅಂತರ್ಧಾನನಾದನು. ಅಂದಿನಿಂದ ನೀವೂ ಮತ್ತು ಸಕಲ ಋಷಿಗಳೂ, ಇತರ ದೇವತೆಗಳೂ, ಆ ಶಿವಸಂಕೇತವಾದ ಲಿಂಗವನ್ನು ನಿಮ್ಮ ನಿಮ್ಮ ಉತ್ತಮಾಂಗಗಳಲ್ಲಿ ಧರಿಸಿ ಆರಾಧಿಸುತ್ತಿರುವಿರಿ.

ಬ್ರಹ್ಮವಿಷ್ಣ್ವಾದಯೋ ದೇವಾ ಮುನಯೋ ಗೌತಮಾದಯಃ।
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ ॥ (ಸಿ. ಶಿ.)

(4) ಒಮ್ಮೆ ಬ್ರಹ್ಮನ ವರಬಲದಿಂದ ಮದೋನ್ಮತ್ತರಾದ ಶೂರಪದ್ಮ ಸಿಂಹವಕ್ತ್ರ, ತಾರಕರೆಂಬ ರಾಕ್ಷಸರು ಲೋಕಗಳನ್ನೆಲ್ಲಾ ಜಯಿಸಿ ಎಲ್ಲರನ್ನೂ ಹಿಂಸಿಸುತ್ತಿದ್ದರು. ಅವರು ನಿನ್ನನ್ನೂ, ಬ್ರಹ್ಮಾದಿಗಳನ್ನೂ ಪದಚ್ಯುತರನ್ನಾಗಿ ಮಾಡಲು, ನೀವೆಲ್ಲರೂ ಶಿವನ ಕೃಪೆಯಿಂದ ರಾಕ್ಷಸರಿಗೆ ಅಗಮ್ಯವಾದ ಮೇರು ಪರ್ವತದ ಗುಹೆಗಳಲ್ಲಿ ಆ ರಾಕ್ಷಸರಿಗೆ ಹೆದರಿ ಅವಿತುಕೊಂಡಿರಿ. ಆಗ ಬ್ರಹ್ಮಾದಿ ದೇವತೆಗಳು ನಿನ್ನನ್ನು ಕಾಣಲು ವೈಕುಂಠಕ್ಕೆ ಬರಲು ನೀನು ಗವಿಯಿಂದ ಹೊರಬಂದು ಅವರನ್ನು ಕಂಡು, ಎಲೈ ಬ್ರಹ್ಮಾದಿದೇವತೆಗಳಿರಾ, ಆ ರಾಕ್ಷಸರನ್ನು ಸಂಹರಿಸುವ ಚೈತನ್ಯ ನಮಗಾರಿಗೂ ಇಲ್ಲ. ಆ ಶಂಕರನ ಹೊರತು ಅವರನ್ನು ಯಾರೂ ಸಂಹರಿಸಲಾರರು ಎಂದು ಹೇಳಿ ಅವರೊಡನೆ ನೀನು ಕೈಲಾಸಕ್ಕೆ ಹೋಗಿ, ಶಂಕರನನ್ನು ಕುರಿತು, ಎಲೈ ಸ್ವಾಮಿಯೆ! ಸುರರ್ಗೆ ಪ್ರಭುವಾಗಿ, ತ್ರಿಯಂಬಕನಾಗಿ, ತ್ರಿಪುರಾಂತಕನಾಗಿ, ಮಹೇಶ್ವರನಾಗಿ, ಬ್ರಹ್ಮಾಂಡಕ್ಕೆ ಪಿತನಾಗಿ, ಅನಾಥರಕ್ಷಕನಾಗಿ, ಪಶುಪತಿಯಾಗಿ, ನಮ್ಮನ್ನೆಲ್ಲಾ ಸದಾ ಸಂರಕ್ಷಿಸುತ್ತಿರುವೆ. ಈಗ ದುರುಳರಾದ ಶೂರಪದ್ಮಾದಿ ರಕ್ಕಸರಿಂದ ನಾವೆಲ್ಲಾ ಅತಿಯಾದ ಬಾಧೆಗೊಳಗಾಗಿರುವೆವು. ನಮ್ಮನ್ನು ರಕ್ಷಿಸು ಎಂದು ಪ್ರಾರ್ಥಿಸಿದೆ. ಆಗ ದಯಾಮಯನಾದ ಶಂಕರನು ಪ್ರಸನ್ನನಾಗಿ, ಎಲೈ

ಭಕ್ತ ಹರಿಯೇ ! ಚಿಂತಿಸಬೇಡ. ನಾನು ಶೀಘ್ರದಲ್ಲಿಯೇ ಅಜೇಯನಾದ ಷಣ್ಮುಖನನ್ನು ಸೃಜಿಸಿ, ದೈತ್ಯರನ್ನು ಸಂಹರಿಸಿ ನಿಮ್ಮ ತೊಂದರೆಯನ್ನು ಪರಿಹರಿಸುವೆನೆಂದು ಅಭಯ ನೀಡಿ ಅಂತರ್ಧಾನನಾದನು.

(5) ಹಿಂದೆ ಮಹಾ ಶಿವಭಕ್ತರಾದ ಅಗಸ್ತ್ಯರು ಕುದ್ದಾಲವೆಂಬ ಪುರದಲ್ಲಿದ್ದ ನಿನ್ನ ದೇವಾಲಯದ ಬಳಿಗೆ ಬರಲು, ನಿನ್ನ ಭಕ್ತರು ಶಿವಭಕ್ತರೂ, ಭಸ್ಮರುದ್ರಾಕ್ಷಧರರೂ ಆದ ಅಗಸ್ತ್ಯರನ್ನು ದೇವಾಲಯದ ಒಳಗೆ ಬಿಡದೆ ತಡೆದರು. ಆಗ ಅಗಸ್ತ್ಯರು ತಮ್ಮ ತಪೋಬಲದಿಂದ ಭಾಗವತ ರೂಪ ಧರಿಸಿ ನಿನ್ನ ದೇವಾಲಯಕ್ಕೆ ಬರಲು ನಿನ್ನ ಭಕ್ತರು ಅವರನ್ನು ಒಳಗೆ ಬಿಟ್ಟರು. ಆಗ ಅಗಸ್ತ್ಯರು ನಿನ್ನ ಭಕ್ತರನ್ನು ಹೊರಕ್ಕೆ ಕಳುಹಿಸಿ, ಶಿವಭಾವದಿಂದ ನಿನ್ನ ವಿಗ್ರಹವನ್ನು ತಮ್ಮ ಕರದಿಂದ ಮರ್ದಿಸಲು ನೀನು ಕೂಡಲೇ ಲಿಂಗರೂಪಿಯಾದೆ. ಇದನ್ನು ನೋಡಿದ ನಿನ್ನ ಭಕ್ತರು ಅಗಸ್ತ್ಯರನ್ನು ಸಂಹರಿಸಲು ಪ್ರಯತ್ನಪಟ್ಟರು. ಆಗ ಅಗಸ್ತ್ಯರು ತಮ್ಮ ಕೋಪಾಗ್ನಿಯಿಂದ ಅವರನ್ನು ನೋಡಲು ನಿನ್ನ ಭಕ್ತರೆಲ್ಲಾ ಕೋಪಾಗ್ನಿಯಿಂದ ಸಂತಪ್ತರಾಗಿ ಹೆದರಿ ಊರನ್ನೇ ಬಿಟ್ಟು ಪಲಾಯನ ಮಾಡಿದರು.

(6) ಹಿಂದೆ ನೀನು ಪುತ್ರಾರ್ಥಿಯಾಗಿ ಶಿವನನ್ನು ಕುರಿತು ತಪಸ್ಸನ್ನಾಚರಿಸಿದೆ. ಆಗ ಶಿವ-ಶಿವೆಯರು ದರ್ಶನ ನೀಡಲು, ನೀನು ಶಿವನಿಗೆ ವಂದಿಸಿ ಪುತ್ರನಾಗುವಂತೆ ವರವನ್ನು ಪಡೆದೆ. ಆದರೆ ನೀನು ದೇವಿಯನ್ನು ನಿರ್ಲಕ್ಷಿಸಿದುದರಿಂದ ಕುಪಿತಳಾದ ಗಿರಿಜೆಯು, ಎಲೈ ಹರಿಯೇ ! ನೀನು ನನ್ನನ್ನು ವಂಚಿಸಿ, ಶಿವನಿಂದ ವರವನ್ನು ಪಡೆದೆಯಾದಕಾರಣ ನಿನ್ನ ಆ ಪುತ್ರನು ಗೃಹದಲ್ಲಿ ಅಗ್ನಿದಗ್ಧನಾಗಲಿ ಎಂದು ಶಪಿಸಿದಳು ಆಗ ನೀನು ಉಮಾಸ್ಕಂದ ಸಮೇತನಾದ ಮಹೇಶ್ವರನ ವಿಗ್ರಹವನ್ನು ಪ್ರತಿಷ್ಠಿಸಿ ಅನಂತ ಕಾಲ ಆರಾಧಿಸಿದೆ. ಆಗ ಶಿವನು ಶಿವೆಯೊಡನೆ ಪ್ರಸನ್ನನಾಗಲು, ನೀನು, ದೇವಿಗೆ ವಂದಿಸಿ, ಎಲೈ ಭವಾನಿಯೇ ! ನಾನು ಅಜ್ಞಾನದಿಂದ ನಿನ್ನನ್ನು ಬಿಟ್ಟು ಮಹೇಶ್ವರನನ್ನು ಆರಾಧಿಸಿ ನಿನ್ನ ಆಗ್ರಹಕ್ಕೆ ಪಾತ್ರನಾದೆನು. ನೀನು ಜಗನ್ಮಾತೆಯಾದುದರಿಂದ ನನ್ನ ತಪ್ಪನ್ನು ಮನ್ನಿಸಿ, ನಿನ್ನ ಶಾಪವನ್ನು ಪರಿಹರಿಸಿ ಕಾಪಾಡಬೇಕೆಂದು ಪ್ರಾರ್ಥಿಸಿದೆ. ಭಕ್ತವತ್ಸಲಳಾದ ದೇವಿಯು ಪ್ರಸನ್ನಳಾಗಿ ಎಲೈ ವಿಷ್ಣುವೆ, ಶಾಪವನ್ನು ಅನುಭವಿಸದೆ ಪರಿಹರಿಸಲಾಗದು. ಆದರೂ,

ದಗ್ಧನಾದ ನಿನ್ನ ಮಗನು ಪರಮೇಶ್ವರನ ಅನುಗ್ರಹದಿಂದ ಮರಳಿ ಬದುಕಲಿ ಎಂದು ಹೇಳಿ ಅಂತರ್ಧಾನಳಾದಳು.

(7) ಮಹಾ ಪ್ರಳಯಕಾಲದಲ್ಲಿ ಮಹಾದೇವನು ನಿನ್ನನ್ನೂ ಬ್ರಹ್ಮೇಂದ್ರಾದಿ ದೇವತೆಗಳನ್ನೂ ಸುಟ್ಟು ಆ ಭಸ್ಮವನ್ನು ಉದ್ಧೂಳನ ವಿಧಾನದಿಂದ ತನ್ನ ಶರೀರಕ್ಕೆ ಲೇಪನಮಾಡಿಕೊಂಡು, ನಿನ್ನನ್ನೂ ಬ್ರಹ್ಮನನ್ನೂ ತನ್ನ ತ್ರಿಶೂಲದಲ್ಲಿ ಧರಿಸಿ ಭಯಂಕರನಾಗಿ, ಚಿನ್ಮೂರ್ತಿಯಾಗಿ ತಾನೇ ಆನಂದದಿಂದ ನರ್ತನವಂ ಮಾಡುವನು. ನಂತರ ಪೂರ್ವದಂತೆ ನಿಮ್ಮನ್ನೂ, ಸಕಲ ಬ್ರಹ್ಮಾಂಡವನ್ನೂ ಸೃಷ್ಟಿಸಿ, ತನ್ನ ಲೀಲೆಯನ್ನು ಮುಂದುವರಿಸುವನು.

(8) ಹಿಂದೆ ಪಾರ್ವತೀ ಪರಮೇಶ್ವರರು ವಿನೋದಾರ್ಥವಾಗಿ ಪಗಡೆಯನ್ನು ಆಡಲು ಬಯಸಿದರು. ಅದಕ್ಕೆ ಪಣವಾಗಿ, ಶಿವನು ಸೋತರೆ, ಶಿವನು ದೇವಿಗೆ ತನ್ನ ವಡವೆಗಳನ್ನು ಕೊಡಬೇಕೆಂದೂ, ಶಿವೆಯು ಸೋತರೆ, ತನ್ನ ವಡವೆಗಳನ್ನು ಶಿವನಿಗೆ ಕೊಡಬೇಕೆಂದೂ ತೀರ್ಮಾನಿಸಿ, ಪಣಕ್ಕೆ ನಿನ್ನನ್ನು ಸಾಕ್ಷಿಯಾಗಿ ನಿಯಮಿಸಿ ಆಟವಾಡಿದರು. ಆಟದಲ್ಲಿ ಶಿವನು ಸೋತರೂ, ಗೆದ್ದಿರುವುದಾಗಿ ವಾದಿಸಿ, ಶಿವೆಯಿಂದ ವಡವೆಗಳನ್ನು ಅಪೇಕ್ಷಿಸಿದನು. ಆಗ ದೇವಿಯು ಆಟದಲ್ಲಿ ಶಿವನು ಸೋತಿದ್ದನ್ನು ಗಮನಿಸಿದ್ದ ನಿನ್ನ ಸಾಕ್ಷ್ಯವನ್ನು ದೇವಿಯು ಕೇಳಿದಳು. ಆಗ ನೀನು ಸತ್ಯವನ್ನು ಮರೆಮಾಚಿ, ಶಿವನೇ ಗೆದ್ದಿರುವನೆಂದು ಅಸತ್ಯವನ್ನು ನುಡಿದೆ. ಆಗ ಕುಪಿತಳಾದ ಶಿವೆಯು ಎಲೈ ಹರಿಯೇ! ನೀನು ಹುಸಿಯಾಡಿದುದರಿಂದ ಅಂದವಾದ ಅಜಗರವೆಂಬ ಸರ್ಪವಾಗೆಂದು ಶಪಿಸಿದಳು. ಆಗ ನೀನು ಶಿವನನ್ನು ಮರೆಹೊಕ್ಕು ಶಾಪವನ್ನು ಪರಿಹರಿಸಬೇಕೆಂದು ಪ್ರಾರ್ಥಿಸಿದೆ. ಆಗ ಶಂಕರನು ಪ್ರಸನ್ನನಾಗಿ ಎಲೈ ಹರಿಯೇ ವಟದ್ವೀಪಕ್ಕೆ ತೆರಳಿ ತಪಸ್ಸನ್ನಾಚರಿಸುತ್ತಿರು. ಕೆಲ ಕಾಲದನಂತರ ಗಜಮುಖನೆಂಬ ದೈತ್ಯನನ್ನು ಸಂಹರಿಸಲು, ಅಲ್ಲಿಗೆ ಗಜಾನನನು ಬರುವನು. ಅವನ ಸಂದರ್ಶನದಿಂದ ನಿನಗೆ ಶಾಪವಿಮೋಚನೆಯಾಗುವುದೆಂದು ಹೇಳಿದನು. ನೀನು ಅದರಂತೆ ಗಜಾನನನ ದರ್ಶನದಿಂದ ಪುನೀತನಾದೆ.

(9) ಪೂರ್ವದಲ್ಲಿ ಜಲಪ್ರಳಯ ಕಾಲದಲ್ಲಿ ನೀನು ಮಹಾಸಮುದ್ರ ಮಧ್ಯದಲ್ಲಿ ವಟ ಪತ್ರದ ಮೇಲೆ ಶಯನ ಮಾಡಿದ್ದೆ. ಆಗ ಪರಮೇಶ್ವರನು ನಿನ್ನ

ಬಳಿಗೆ ಬರಲು, ನೀನು ಅಜ್ಞಾನದಿಂದ ನೀನಾರೆಂದು ಶಂಭುವನ್ನು ಕೇಳಿದೆ. ಆಗ ಶಂಕರನು ನಿನಗೆ ದಿವ್ಯ ಭಸ್ಮವನ್ನು ಕೊಡಲು, ಅದನ್ನು ಧರಿಸಿ, ಕೊಂಚ ಭಾಗವನ್ನು ನೀನು ಭಕ್ಷಿಸಿದೆ. ಕೂಡಲೇ ನಿನ್ನ ಅಜ್ಞಾನ ನಿವೃತ್ತಿಯಾಗಲು ಶಂಕರನನ್ನು ಭಕ್ತಿಯಿಂದ ಪ್ರಾರ್ಥಿಸಿದೆ. ಆಗ ಶಂಕರನು ಎಲೈ ಹರಿಯೆ ಸಮಸ್ತ ಲೋಕಂಗಳಂ ಸೃಷ್ಟಿಸಲು ಬಂದಿರುವೆನೆಂದು ಹೇಳಿ, ಶಕ್ತಿ ಸ್ವರೂಪ ನಾದ ನಿನ್ನಲ್ಲಿಯೇ ಜಗತ್ಕರ್ತನಾದ ಬ್ರಹ್ಮಂಗೆ ಜನನ ಉಂಟಾಗಲೆಂದು ಹೇಳಿ ನಿನ್ನನ್ನು ಸತಿಯಾಗಿ ಮಾಡಿ ರಮಿಸಿದನು. ಆಗ ಅವನ ಕಾಂಚನ ವರ್ಣವಾದ ಊರ್ಧ್ವ ರೇತಸ್ಸು ನಿನ್ನ ಕಮಲದಲ್ಲಿ ಬೀಳಲು ನಿನ್ನ ನಾಭಿಕಮಲದಿಂದ ಪಂಚಮುಖನಾದ ಬ್ರಹ್ಮನ ಜನನವಾಯಿತು.

(10) ಹಿಂದೆ ನೀನು ಅವಿಮುಕ್ತ ಕ್ಷೇತ್ರವಾದ ಕಾಶೀ ಕ್ಷೇತ್ರದಲ್ಲಿ ಅನಂತ ಕಾಲ ಲಿಂಗಮೂರ್ತಿಯಾದ ಸದಾಶಿವನನ್ನು ಪೂಜಿಸಿ ಅವನ ಅನುಗ್ರಹದಿಂದ ವೈಕುಂಠ ಪದವಿಯನ್ನೂ, ಶಂಖ, ಚಕ್ರ, ಗದೆ, ಶಾರ್ಙ್ಗ ಮುಂತಾದ ದಿವ್ಯಾಸ್ತ್ರ ಗಳನ್ನೂ, ದುಷ್ಟ ನಿಗ್ರಹ ಶಿಷ್ಟ ಪರಿಪಾಲನ ಶಕ್ತಿಯನ್ನೂ ಪಡೆದೆ. ಬ್ರಹ್ಮನು ಕಾಂಚೀ ಕ್ಷೇತ್ರದಲ್ಲಿ ಶಿಲಾಮಯ ಲಿಂಗವನ್ನು ಪೂಜಿಸಿ, ಬ್ರಹ್ಮಪದವಿಯನ್ನೂ, ಇಂದ್ರನು ಶ್ರೀ ಶೈಲದಲ್ಲಿ ಶಿವಲಿಂಗವಂ ಪೂಜಿಸಿ, ಇಂದ್ರಪದವಿಯನ್ನೂ ಪಡೆದರು.

(11) ಹಿಂದೆ ನಿನ್ನ ಬೌದ್ಧಾವತಾರದಲ್ಲಿ ಸಮಸ್ತಲೋಕಗಳಲ್ಲಿಯೂ ನಿನ್ನ ಮಾಯೆಯಿಂದ, ಧರ್ಮಮಾರ್ಗವನ್ನು ತ್ಯಜಿಸಿ ಜನರು ನೀತಿ ಭ್ರಷ್ಟರಾದರು. ಆಗ ನಾರದರು ನಿನಗೆ ಎಲೈ ಬುದ್ಧ ರೂಪಿಯಾದ ಹರಿಯೆ ? ಶಿವಯೋಗಿ, ಸುಶೀಲ ಮತ್ತು ವಿರಕ್ತ ಎಂಬೀ ಮೂವರನ್ನುಳಿದು ಎಲ್ಲರೂ ನಿನ್ನ ಮಾಯೆ ಯಿಂದ ಮೋಹಿತರಾಗಿರುವರು. ಈ ಮೂವರಾದರೋ ಪಾಶುಪತೋತ್ತಮರು, ಶಿವಪೂಜಾಪರಾಯಣರು. ಇವರು ಉಪಮನ್ಯು, ದಧೀಚಿ, ವಸಿಷ್ಠರಿಗಿಂತ ಶ್ರೇಷ್ಠರು ಎಂದು ಹೇಳಲು, ನೀನು ಆ ಶಿವಭಕ್ತರೊಡನೆ ಯಾರೂ ಮಾತನಾಡ ಕೂಡದೆಂದು ಅಜ್ಞಾಪಿಸಿ, ನಾರದರ ಸಮೇತ ಕೈಲಾಸಕ್ಕೆ ಹೋದೆ. ಆದರೆ ಶಿವ ದ್ರೋಹದಿಂದ ಕೈಲಾಸ ಪರ್ವತವನ್ನು ಹತ್ತಲಾರದೆ, ಭಯದಿಂದ ಶಿವ ನನ್ನು ಕುರಿತು ತಪಸ್ಸನ್ನಾಚರಿಸಿದೆ. ಪ್ರಸನ್ನನಾದ ಶಂಕರನು ನಿನಗೆ ಎಲೈ ವಿಷ್ಣುವೆ ! ನನ್ನ ಭಕ್ತರಿಗೆ ಅಜ್ಞಾನವಂ ಪುಟ್ಟಿಸಿ, ಶಿವಾಲಯ ಭಂಗ ಇತ್ಯಾದಿ

ಧರ್ಮಕಾರ್ಯಗಳನ್ನು ನಿಷೇಧಿಸಿದ್ದರಿಂದ ನಿನಗೆ ಈ ಅವಸ್ಥೆ ಪ್ರಾಪ್ತವಾಯಿತು. ನೀನು ಮಾನಸ ಸರೋವರಕ್ಕೆ ಹೋಗಿ ತಪಸ್ಸು ಮಾಡೆಂದು ಹೇಳಿ ಅಂತರ್ಧಾನನಾದನು. ಆಗ ನೀನು ಹಾಗೆಯೇ ತಪಸ್ಸನ್ನಾಚರಿಸಿದೆ. ಆಗ ಪ್ರಸನ್ನನಾದ ಶಂಕರನು ಇತಃಪರ ಶಿವಭಕ್ತರನ್ನು ಕೆಣಕದೆ, ಪಾಶುಪತ ವ್ರತವನ್ನಾಚರಿಸಿ ನಿಮ್ಮ ನಿಮ್ಮ ಮನೋಭೀಷ್ಟಗಳನ್ನು ಪಡೆಯಿರೆಂದು ನಿರೂಪಿಸಿ ಅದೃಶ್ಯನಾದನು. ನೀನು ಅದರಂತೆಯೇ ಮಾಡಿ ಪಾಶುಪತೋತ್ತಮನಾಗಿ, ಶಿವಪೂಜಾಪರಾಯಣನಾದೆ.

(12) ಹಿಂದೆ ತ್ರಿಪುರಸಂಹಾರ ಕಾಲದಲ್ಲಿ ನೀನು ಒಂದು ದಿವ್ಯವಾದ ರಥವನ್ನು ನಿರ್ಮಿಸಿ ಕೈಲಾಸಕ್ಕೆ ಹೋಗಿ ಅದನ್ನು ಶಿವನಿಗೆ ಅರ್ಪಿಸಿ, ಎಲೈ ದೇವದೇವನಾದ ಶಂಭುವೇ ಈ ರಥವನ್ನು ಹತ್ತಿ ತ್ರಿಪುರರನ್ನು ಸಂಹರಿಸಿ ನಮ್ಮನ್ನು ಕಾಪಾಡಬೇಕೆಂದು ಪ್ರಾರ್ಥಿಸಿದೆ. ಆಗ ಶಂಕರನು ತನ್ನ ಶ್ವೇತ ವೃಷಭದಿಂದ ಕೆಳಗಿಳಿದು, ಧನುರ್ಬಾಣಗಳನ್ನು ರಥದಲ್ಲಿರಿಸಿ, ತನ್ನ ಒಂದು ಪಾದವನ್ನು ಅದರ ಮೇಲಿಟ್ಟನು. ಕೂಡಲೇ ವಿಶ್ವರೂಪಿ ಶಿವನ ಭಾರವನ್ನು ತಾಳಲಾರದೆ ರಥವು ಪಾತಾಳಕ್ಕೆ ಕುಸಿಯಿತು. ಆಗ ನೀನು ವೃಷಭರೂಪದಿಂದ ಆ ರಥವನ್ನು ಮೇಲಕ್ಕೆ ಎತ್ತಲು ಪ್ರಯತ್ನಿಸಿ, ಆ ಭಾರವನ್ನು ಸಹಿಸಲಾರದೆ, ಅರಳಿದ ಕಣ್ಣುಳ್ಳವನಾಗಿ, ಮುಖದಿಂದ ರಕ್ತಸ್ರಾವವಾಗುತ್ತಿರಲು, ಭೀತನಾಗಿ ಶಂಕರನನ್ನು ಮರೆಹೊಕ್ಕು ಪ್ರಾರ್ಥಿಸಿದೆ. ಆಗ ದಯಾಮಯನಾದ ಶಂಕರನು ನಿನಗೆ ದಿವ್ಯಶಕ್ತಿಯನ್ನು ಕರುಣಿಸಿದನು. ನೀನು ಆಗ ನಿನ್ನ ಬೆರಳಿನಿಂದ ರಥವನ್ನು ಮೇಲಕ್ಕೆ ಎತ್ತಿದೆ. ಆಗ ಶಿವನು ಎಲೈ ಹರಿಯೆ, ನಿನ್ನ ಭಕ್ತಿಗೆ ಮೆಚ್ಚಿರುವೆನು. ವರವನ್ನು ಕೇಳು ಕೊಡುವೆನು ಎಂದನು. ಆಗ ನೀನು ಎಲೈ ಜಗತ್ಪತಿಯೆ ! ನಿನಗೆ ಮಹತ್ತಾದ ಶಿವಶಕ್ತಿಯಿದ್ದರೂ, ನಾನು ಮೂಲಶಕ್ತಿಯಾದುದರಿಂದ, ಮಹಾ ವೃಷಭವಿದ್ದಲ್ಲಿಯೂ ನಾನು ವೃಷಭರೂಪನಾಗಿ, ನಿನ್ನ ಬಳಿಯಿರುವಂತೆಯೂ, ಯಾವಾಗಲೂ ನಿನ್ನ ಪಾದಾರವಿಂದಗಳಲ್ಲಿಯೇ ಅಚಲಭಕ್ತಿಯಿರುವಂತೆಯೂ, ಅನುಗ್ರಹಿಸೆಂದು ಪ್ರಾರ್ಥಿಸಿದೆ. ಶಿವನು ಅಂತೆಯೇ ನಿನ್ನ ಅಭೀಷ್ಟವನ್ನು ಕರುಣಿಸಿದನು.

[ಈ ಎಲ್ಲ ಘಟನೆಗಳನ್ನೂ ಶ್ರೀಕೃಷ್ಣರಾಜ ವಾಣಿವಿಲಾಸದ ಸ್ಕಾಂದಪುರಾಣ ಶಂಕರಸಂಹಿತೆಯೊಳು, ಶಿವರಹಸ್ಯ, ಉಪದೇಶಖಂಡಗಳಿಂದ ಉದಾಹರಿಸಲಾಗಿದೆ].

ಹಿಂದೊಮ್ಮೆ ಕಣ್ವಋಷಿಗಳೂ, ದುರ್ವಾಸರೂ, ದ್ವಿತೀಯ ಶಂಭು ವಾದ ನಂದೀಶ್ವರನೂ, ನಿನಗೆ ಭೂಲೋಕದಲ್ಲಿ, ಅನೇಕ ಜನ್ಮಗಳನ್ನು ಎತ್ತು ವಂತೆ ಶಪಿಸಿದರು. ಆಗ ನೀನು ಅತ್ಯಂತ ದುಃಖದಿಂದ, ಶಿವನನ್ನು ಮರೆಹೊಕ್ಕು ಪ್ರಾರ್ಥಿಸಿದೆ. ಆಗ ದಯಾಮಯನಾದ ಶಂಕರನು ನಿನ್ನ ಶಾಪದವಧಿ ಯನ್ನೂ, ಅವತಾರಗಳ ಸಂಖ್ಯೆಯನ್ನೂ ಇಳಿಸಿ ಅನುಗ್ರಹಿಸಿದನು.

ನೀನು ಹೀಗೆ, ಅನೇಕ ಸಂದರ್ಭಗಳಲ್ಲಿ ಶಿವನನ್ನು ನಾನಾ ಬಗೆಯಿಂದ ಅಂದರೆ, ಅವನ ವಾಹನವಾಗಿಯೂ, ಅವನ ಪತ್ನಿಯಾಗಿಯೂ, ಅವನ ನೃತ್ಯ ಸಮಯದಲ್ಲಿ ಮೃದಂಗವನ್ನು ನುಡಿಸುವವನಾಗಿಯೂ, ಸೇವೆ ಸಲ್ಲಿಸಿ, ಅವನ ಅನುಗ್ರಹದಿಂದ ನಿನ್ನ ಇಷ್ಟಾರ್ಥಗಳನ್ನು ಪಡೆದಿರುವೆ. ಇಷ್ಟಾದರೂ ಅವನಿಗೆ ಕೃತಜ್ಞನಾಗಿರದೆ, ಅವನ ವಿರೋಧಿಗಳ ಸಂಗದಿಂದ ಶಿವನಿಗೇ ದ್ರೋಹ ಮಾಡುತ್ತಿರುವುದನ್ನು ನೋಡಿದರೆ, ಮತ್ತೆ ನೀನು ಕೇಡನ್ನನುಭವಿಸಬೇಕಾಗಿದೆ ಯೆಂದು ಕಾಣುತ್ತಿದೆ. ಎಲೈ ಹರಿಯೇ! ಈಗಲೂ ಸಮಯ ಮಿಂಚಿಲ್ಲ. ನಿನ್ನನ್ನು ಭಂಗಿಸಿ, ಆದರೆ ಕೊಲ್ಲದೆ, ಅವನಲ್ಲಿಗೆ ಕರೆದೊಯ್ಯುವಂತೆ ಶಿವನು ಆಜ್ಞಾಪಿಸಿರುವನು. ಆದುದರಿಂದ ನೀನು ಈಗಲಾದರೂ, ನಿನ್ನ ದುಷ್ಕೃತ್ಯ ಗಳಿಂದ ವಿಮುಖನಾಗಿ ಶಿವನನ್ನು ಮರೆಹೊಕ್ಕರೆ, ಭಕ್ತವತ್ಸಲನಾದ ಅವನು ನಿನ್ನನ್ನು ಮನ್ನಿಸುವುದರಲ್ಲಿ ಯಾವಸಂಶಯವೂ ಇಲ್ಲ ಎಂದು ಎಚ್ಚರಿಸಿದನು. ಆದರೂ ಹರಿಯು ತನ್ನ ನಿರ್ಧಾರವನ್ನು ಬದಲಿಸದೆ, ವೀರಭದ್ರನೊಡನೆ ಯುದ್ಧವನ್ನು ಕೊನೆಯವರೆವಿಗೂ ಮುಂದುವರಿಸಬೇಕೆಂದು ನಿಶ್ಚಯಿಸಿ, ವೀರಭದ್ರನ ಮಾತಿಗೆ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸದೆ ಅವನಕಡೆ ನೋಡಿ—

ಉದಾಸೀನಭಾವದಿಂದ ಯುದ್ಧವನ್ನು ಮತ್ತೆ ತೀವ್ರಗೊಳಿಸಿದನು. ಹೀಗೆ ಅವರಿಬ್ಬರ ಮಧ್ಯೆ ಅನಂತಕಾಲ ಭೀಕರ ಹೋರಾಟ ನಡೆಯಿತು. ವೀರೇಶನು ದೇವತೆಗಳನ್ನು ಮತ್ತೆ ರೋಷಾವೇಶದಿಂದ ಕೆಲವರ ಕೈಗಳನ್ನೂ, ಕೆಲವರ ಕಾಲುಗಳನ್ನೂ ಕತ್ತರಿಸಿ ಚಲ್ಲಿದನು. ಅನೇಕರು ರಕ್ತವನ್ನು ಕಾರುತ್ತಾ ಭೂಮಿಯ ಮೇಲೆ ಬಿದ್ದು ಮೃತರಾದರು. ನಂತರ ವೀರಭದ್ರನು ಇಂದ್ರನನ್ನು ಮುತ್ತಿ ಶರವರ್ಷಗಳಿಂದ ಅವನನ್ನು ಅತಿಯಾಗಿ ನೋಯಿಸಿದನು. ಆಗ ಇಂದ್ರನು ತನ್ನ ವಜ್ರಾಯುಧವನ್ನು ಎತ್ತಲು ವೀರೇಶನು ಕೂಡಲೇ ಅವನ

ಕೈಕಾಲುಗಳನ್ನು ಸ್ತಂಭಿಸಿದನು. ಇಂದ್ರನು ನಿಶ್ಚೇಷ್ಟಿತನಾಗಿ, ವೀರೇಶನು ಶಿವಾಂಶದಿಂದ ಕೂಡಿರುವುದರಿಂದ ಇವನೊಡನೆ ಯುದ್ಧಮಾಡುವುದು ಅಪಾಯಕಾರಿಯೆಂದು ನಿಶ್ಚಯಿಸಿ ವೀರೇಶನಿಗೆ ಶರಣಾದನು.

ಇತ್ಯುಕ್ತವತಿ ಗೋವಿಂದೇ ಪ್ರಹಸ್ಯ ಸ ಮಹಾಭುಜಃ ।
ಪ್ರಾಶಯಾವನತೋ ಭೂತ್ವಾ ಇದಮಾಹ ಜನಾರ್ದನಃ ॥

(ಸ್ಕಾಂದ. 4-42)

ಯೋಧಯಸ್ವ ಮಹಾಬಾಹೋ ಮಯಾ ಸಾರ್ಧಮಶಂಕಿತಃ ।
ತವಾಸ್ತ್ರೈಃಪೂರ್ಯಮಾಣೋಽಹಂ ಗಚ್ಛಾಮಿ ಭವನಂ ಸ್ವಕಂ ॥

(4-45)

ಅದನ್ನು ಕಂಡ ವಿಷ್ಣುವು, ವೀರೇಶನನ್ನು ಕುರಿತು—ಎಲೈ ಮಹಾಬಾಹುವಾದ ವೀರೇಶನೇ! ಶಿವನಂತೆ ನಾನೂ, ಭಕ್ತವತ್ಸಲನು ಮತ್ತು ಭಕ್ತಪರಾಧೀನನು. ದಕ್ಷನು ನನ್ನನ್ನು ಕಂಡು, ತಾನು ಮಾಡುವ ಯಜ್ಞಕ್ಕೆ ಅಧಿಪತಿಯಾಗಿ, ಯಜ್ಞದ ರಕ್ಷಣಾ ಭಾರವನ್ನು ವಹಿಸಬೇಕೆಂದು ನಾನಾ ರೀತಿಯಲ್ಲಿ ಪ್ರಾರ್ಥಿಸಿದನು. ಆಗ ನಾನು ಬೇರೆ ಮಾರ್ಗವಿಲ್ಲದೆ ಅವನ ಪ್ರಾರ್ಥನೆಯನ್ನು ಮನ್ನಿಸಿ, ಭರವಸೆ ಇತ್ತೆನು. ಆ ವಚನವನ್ನು ಕಾಪಾಡಿಕೊಳ್ಳುವುದಕ್ಕಾಗಿ, ಈ ಯಜ್ಞದಲ್ಲಿ ಭಾಗವಹಿಸಿದೆನು. ಅದಕ್ಕಾಗಿ, ದಕ್ಷನ ರಕ್ಷಣಕಾರ್ಯದಲ್ಲಿ ಮುಂದಾಳುತ್ವವನ್ನು ವಹಿಸಿದೆನೇ ವಿನಹ ಮತ್ತಾವ ಸ್ವಾರ್ಥಸಾಧನೆಗಾಗಿಯೂ ಅಲ್ಲ. ಅಜೇಯನೂ, ರುದ್ರಾಂಶಸಂಭೂತನೂ ಆದ ನಿನ್ನೊಡನೆ ನನ್ನ ವಚನಪರಿಪಾಲನೆಗೋಸ್ಕರವಾಗಿ ಯುದ್ಧಮಾಡಬೇಕಾಗಿದೆ. ಎಲೈ ವೀರೇಶನೇ ಈ ಯುದ್ಧದಲ್ಲಿ ನೀನೇ ಜಯಗಳಿಸುವೆ. ಅದನ್ನು ನಾನು ಬಲ್ಲೆ. ಆದರೂ ವಚನಭ್ರಷ್ಟನೆನಿಸಿ ಅಪಕೀರ್ತಿಗೊಳಗಾಗುವುದಕ್ಕಿಂತಲೂ ನಿನ್ನ ಕೈಯಿಂದ ಪರಾಭವವನ್ನು ಸಂತೋಷದಿಂದ ಅನುಭವಿಸುವೆನು. ಆದುದರಿಂದ ಎಲೈ ವೀರೇಶನೇ! ನೀನು ನನ್ನನ್ನು ಬಾಣಗಳಿಂದ ನೋಯಿಸು. ನಾನೂ ನನ್ನ ಶಕ್ತಿ ಮೀರಿ ನಿನ್ನನ್ನು ಎದುರಿಸುವೆನು. ಇದು ಅನಿವಾರ್ಯ. ನಾನು ನಿನ್ನ ಬಾಣಗಳಿಂದ ಕೂಡಿದ ಮೈಯುಳ್ಳವನಾಗಿ, ವೈಕುಂಠಕ್ಕೆ ಹೋಗುವೆನು, ಎಂದು ಹೇಳಿ, ಮತ್ತೆ ಯುದ್ಧಾಸಕ್ತಿಯಿಂದ ಕೂಡಿದವನಾಗಿ, ತನ್ನ ರಥ, ಧನುಸ್ಸು, ಬತ್ತಳಿಕೆ, ಗದೆ, ಚಕ್ರ ಮುಂತಾದ

ಶಸ್ತ್ರಾಯುಧಗಳನ್ನು ಸಜ್ಜುಗೊಳಿಸಿಕೊಂಡು, ಉತ್ತೇಜಿತನಾಗಿ, ಮತ್ತೆ ವೀರಾವೇಶದಿಂದ ಮುಂದೆಬಂದು ಕಿಡಿಕಾರುವ ಕಣ್ಣುಗಳಿಂದ ವೀರೇಶನನ್ನು ದಹಿಸುವನೋ ಎನ್ನುವಂತೆ ತೀಕ್ಷ್ಣದೃಷ್ಟಿಯಿಂದ ನೋಡುತ್ತಾ ಅವನ ಮೇಲೆ ಶರವರ್ಷವನ್ನು ಕರೆದನು.

ವೀರೇಶನು ತನ್ನ ಪಿನಾಕದಿಂದ ಅವನ್ನೆಲ್ಲಾ ಮಧ್ಯದಲ್ಲಿಯೇ ತುಂಡರಿಸಿದನು. ಆಗ ಹರಿಯು ಅತಿ ತೀಕ್ಷ್ಣವಾದ ಐದು ಬಾಣಗಳನ್ನು ವೀರೇಶನ ಮೇಲೆ ಬಿಟ್ಟು ಘಾತಿಸಿದನು. ಆದರಿಂದ ಕುಪಿತನಾದ ವೀರೇಶನು, ಎರಡು ಬಾಣಗಳಿಂದ ವಿಷ್ಣುವಿನ ಧನುಸ್ಸನ್ನು ಮುರಿದು ಕೆಡಹಿದನು. ಆಗ ಹರಿಯು ತನ್ನ ಗದೆಯನ್ನು ವೀರೇಶನ ಮೇಲೆ ಪ್ರಯೋಗಿಸಲು, ಅದನ್ನು ವೀರೇಶನು ತುಂಡರಿಸಿದನು. ಇದರಿಂದ ಅತ್ಯಂತ ಕುಪಿತನಾದ ಹರಿಯು, ವಜ್ರಸಮಾನವಾದ ತನ್ನ ಖಡ್ಗವನ್ನು ಝಳಪಿಸಿ ವೀರೇಶನ ಕುತ್ತಿಗೆಗೆ ಗುರಿ ಇಟ್ಟು ಬೀಸಿದನು. ವೀರೇಶನು ಆ ಖಡ್ಗವನ್ನು ತೀಕ್ಷ್ಣ ಬಾಣಗಳಿಂದ ತುಂಡರಿಸಲು, ಆ ಕತ್ತಿಯ ಒಂದು ಚೂರು ಹರಿಯ ಎದೆಗೆ ನಾಟಿ, ರಕ್ತಸ್ರಾವವಾಗತೊಡಗಿತು. ಆಗ ಹರಿಯು ಇನ್ನು ವೀರೇಶನನ್ನು ಮುಗಿಸಬೇಕೆಂದು ತೀರ್ಮಾನಿಸಿ, ಕಿಡಿಕಾರುತ್ತಿದ್ದ ತನ್ನ ಸುದರ್ಶನ ಚಕ್ರವನ್ನು ಪ್ರಯೋಗಿಸಲು ಮೇಲಕ್ಕೆ ಎತ್ತಲು ಅದನ್ನು ಕಂಡ ವೀರೇಶನು ಆಶ್ಚರ್ಯದಿಂದ,

ಸ್ಮಯನ್ನಿವ ಗಣೇಶಾನೋ ವ್ಯಷ್ಟಂಭಯದಯತ್ನತಃ ।
ಸ್ತಂಭಿತಾಂಗಸ್ತು ತಚ್ಚಕ್ರಂ ಘೋರಮಪ್ರತಿಮಂ ಕ್ವಚಿತ್ ॥

(ಶಿ.ಪು. 11-22-36)

ಆ ಚಕ್ರವನ್ನು ನೋಡಿ, ಕ್ಷಣಾರ್ಧದಲ್ಲಿ ತನ್ನ ದಿವ್ಯಾಸ್ತ್ರವನ್ನು ಪ್ರಯೋಗಿಸಿ ಹರಿಯ ಭುಜಗಳನ್ನು ಸ್ತಂಭಿಸಿದನು. ಆಗ ಹರಿಯು, ಚಲಿಸಲಾರದೆ, ನಿರಾಯುಧನೂ, ಅಸಹಾಯಕನೂ ಆಗಿ, ತನ್ನ ಮಾಯಾ ಶಕ್ತಿಯಿಂದ ಯಜ್ಞಕುಂಡದ ಬೂದಿಯಲ್ಲಿ ಅಡಗಿದನು. ಆಗ ವೀರೇಶನು ತನ್ನ ಕಿಡಿಗಣ್ಣಿನಿಂದ ಯಜ್ಞಕುಂಡವನ್ನು ಸುಡಲುಪಕ್ರಮಿಸಿದನು. ಆಗ ಹರಿಯು ಹೆದರಿ ಬೇರೆ ದಾರಿಕಾಣದೆ, ಹರಿಣಿಯ ರೂಪ ಧರಿಸಿ, ಓಡಲಾರಂಭಿಸಿದನು. ವೀರೇಶನು ಕೂಡಲೇ ತನ್ನ ತೀಕ್ಷ್ಣ ಬಾಣದಿಂದ ಹರಿಣಿಯ ಹಣೆಯನ್ನು ಭೇದಿಸಲು, ಹರಿಣಿಯೂ ರಕ್ತ ಕಾರುತ್ತಾ ನೆಲಕ್ಕುರುಳಿತು.

ಬಹುನಾತ್ರ ಕಿಮುಕ್ತೇನ ವೃಥಾ ದಾನಂ ವೃಥಾ ತಪಃ ।
(ಶಿ.ಪು.ಭಾ. 11)
ವೃಥಾ ಯಜ್ಞೋ ವೃಥಾ ಹೋಮಃ ಶಿವನಿಂದಾರತಸ್ಯ ತು ॥
(ಲಿಂ. 22_68)

ತಸ್ಮಾನ್ನಾವೇದ ನಿರ್ದಿಷ್ಟಂ ನ ಚೇಶ್ವರಬಹಿಷ್ಕೃತಂ ।
ನಾಸತ್ಪರಿಗೃಹೀತಂ ಚ ಕರ್ಮ ಕುರ್ಯಾತ್ಕದಾಚನ । (22_65)

ಧರ್ಮಾದಯಸ್ಸದಸ್ಯಾಶ್ಚ ರಕ್ಷಿತಾ ಗರುಡಧ್ವಜಃ ।
ಭಾಗಾಂಶ್ಚ ಪ್ರತಿಗೃಹ್ಣಂತಿ ಸಾಕ್ಷಾದಿಂದ್ರಾದಯಃ ಸುರಾಃ ॥
(22_63)

ತಥಾಪಿ ಯಜಮಾನಸ್ಯ ಯಜ್ಞಸ್ಯ ಚ ಸಹರ್ತ್ವಿಜಃ ।
ಸತ್ಯ ಏವ ಶಿರಶ್ಛೇದಸ್ಸಾಧು ಸಂಪದ್ಯತೇ ಫಲಂ ॥ (22_64)

ಶಿವನಿಂದೆಯನ್ನು ಮಾಡುವವನು ಮಾಡುವ ಯಜ್ಞ, ದಾನ, ತಪಸ್ಸು, ಹೋಮ ಇವುಗಳೆಲ್ಲಾ ವ್ಯರ್ಥವು. ಆದುದರಿಂದ ವೇದ ವಿರೋಧ ಕಾರ್ಯವನ್ನೂ, ಈಶ್ವರ ಪೂಜೆಯಿಲ್ಲದ್ದನ್ನೂ, ಸತ್ಪುರುಷರು ಮಾಡದಿರುವ ಕಾರ್ಯವನ್ನೂ, ಎಂದೂ ಮಾಡಬಾರದು. ಈ ಎಲ್ಲಾ ಧರ್ಮಗಳನ್ನೂ ಕಡೆಗಣಿಸಿ ಆಚರಿಸುತ್ತಿದ್ದ ಯಜ್ಞವೆಂದರೆ ಅಶ್ವಮೇಧಯಜ್ಞ ; ಅದನ್ನು ನಡೆಸುವವನು ಬ್ರಹ್ಮನ ಮಗ ಈ ದಕ್ಷಬ್ರಹ್ಮನು ; ವಿಷ್ಣುವೇ ಅದರ ಅಧ್ಯಕ್ಷ ಹಾಗೂ ರಕ್ಷಕ; ಧರ್ಮವೇ ಮೊದಲಾದ ದೇವತೆಗಳೇ ಅದರ ಮುಖ್ಯ ಸದಸ್ಯರು ; ಇಂದ್ರನೇ ಮೊದಲಾದವರು ಹವಿರ್ಭಾಗವನ್ನು ಪಡೆಯಲು ಹಾಜರಿದ್ದವರು ; ಆಹಾ! ವಿಧಿವಿಪರ್ಯಾಸವನ್ನೇನೆಂದು ವರ್ಣಿಸುವುದು ? ಇಷ್ಟೆಲ್ಲಾ ರಕ್ಷಣೆಯಿದ್ದಾಗ್ಯೂ ದೈವಗತಿಯು ಪ್ರತಿಕೂಲವಾಗಿದ್ದುದರಿಂದ, ಆ ಯಜ್ಞವೂ ಧ್ವಂಸವಾಗಿ, ಋತ್ವಿಕ್ಕುಗಳೂ, ಯಜ್ಞದ ಕರ್ತನಾದ ದಕ್ಷಬ್ರಹ್ಮನೂ, ಆ ಶಿವರಹಿತ ಯಜ್ಞದ ಫಲವಾಗಿ ಮೃತ್ಯುವನ್ನೈದಬೇಕಾಗಿಬಂದಿತು.

ಹರಿಯ ಈ ದುಸ್ಥಿತಿಯನ್ನು ನೋಡುತ್ತಿದ್ದ ಬ್ರಹ್ಮನು, ವೀರಭದ್ರನಿಗೆ ಸಾರಥ್ಯ ಮಾಡುತ್ತಿದ್ದನಾದುದರಿಂದ, ರಥದಿಂದ ಕೆಳಗಿಳಿದು, ಸಲಿಗೆಯಿಂದ, ಎಲೈ ಷಡ್ಗುಣೈಶ್ವರ್ಯ ಸಂಪನ್ನನಾದ ವೀರೇಶನೇ ! ನೀನು ಈ ದೇವತೆಗಳ ಮೇಲೆ ಇನ್ನು ಕೋಪಮಾಡಬೇಡ, ಇವರೆಲ್ಲರೂ ಈಗ ಪೂರ್ಣ ನಾಶ

ಹೊಂದಿರುವರು. ಎಲೈ ಪೂಜ್ಯನೆ, ಇವರ ತಪ್ಪನ್ನು ಮನ್ನಿಸಿ ಕಾಪಾಡು ಎಂದು ಪ್ರಾರ್ಥಿಸಿದನು.

ತಸ್ಮಿನ್ನವಸರೇ ಬ್ರಹ್ಮಾ ಭದ್ರಮದ್ರೀಂದ್ರಜಾತ್ಮಜಂ ।
ಸಾರಥ್ಯಾಲ್ಲಬ್ಧವಾತ್ಸಲ್ಯಃ ಪ್ರಾರ್ಥಯನ್ಪ್ರಣತೋಽಬ್ರವೀತ್ ॥
(ಶಿ.ಪು.ಭಾ. 11_23_4)

ಅಲಂ ಕ್ರೋಧೇನ ಭಗವನ್ನಷ್ಟಾಶ್ಚೈತೇ ದಿವೌಕಸಃ ।
ಪ್ರಸೀದ ಕ್ಷಮ್ಯತಾಂ ಸರ್ವಂ ರೋಮಜೈಸ್ಸಹ ಸುವ್ರತ ॥ (23–5)

ಹರಿಗೆ ಕ್ಷಮಾದಾನ :

ಬ್ರಹ್ಮನ ಪ್ರಾರ್ಥನೆಯನ್ನು ಮನ್ನಿಸಿ ವೀರೇಶನು ಶಾಂತನಾದನು. ಅಷ್ಟರಲ್ಲಿ ಹರಿಯು ಕೈಮುಗಿದು, ಎಲೈ ರುದ್ರಾಂಶನಾದ ವೀರೇಶನೇ! ನಿನ್ನ ಮುಂದೆ ನಾನೆಷ್ಟರವನು? ಶಿವನು ನನಗೆ ಕರ್ತನು ನಾನು ಅವನ ಕಿಂಕರನು. ನಿನ್ನನ್ನು ನಾನು ಉದ್ದಿಶ್ಯಪೂರ್ವಕವಾಗಿ ವಿರೋಧಿಸುತ್ತಿಲ್ಲ. ಕೇವಲ ನನ್ನ ಭಾಷೆಯನ್ನು ಸಫಲಗೊಳಿಸುವುದಕ್ಕೋಸ್ಕರವೆಂದು ನಾನು ಹಿಂದೆಯೇ ನಿನಗೆ ತಿಳಿಸಿಲ್ಲವೇ. ನೀನು ದಯಾಮಯನು. ನನ್ನ ಅಪರಾಧವನ್ನು ಮನ್ನಿಸು. ಈ ನನ್ನ ಹರಿಣಿಯು ವೈದೊಗಲು, ಯೋಗಿಗಳಿಗೂ, ಆಚಾರನಿಷ್ಠರಾದ ಬ್ರಾಹ್ಮಣರಿಗೂ, ತಪಸ್ವಿಗಳಿಗೂ, ಪವಿತ್ರ ಆಸನವಾಗುವಂತೆ ಅನುಗ್ರಹಿಸೆಂದು ಪ್ರಾರ್ಥಿಸಿದನು. ಅಲ್ಲದೆ,

ಜ್ಞಾತ್ವಾ ಚ ತತ್ಸರ್ವಮಿದಂ ಚ ವಿಷ್ಣುಃ ।
ಕೃತೀ ಕೃತಂ ದುಷ್ಪ್ರಸಹಂ ಪರೇಷಾಂ ॥ (ಸ್ಕಾಂದ 4–75)

ಈಗ ಸೆರೆಸಿಕ್ಕಿರುವ ಎಲ್ಲಾ ದೇವತೆಗಳಿಗೂ ಹಾಗೂ ಋಷಿಗಳಿಗೂ ಜೀವದಾನ ಮಾಡಿ ಅನುಗ್ರಹಿಸಬೇಕೆಂದು, ಅತ್ಯಂತ ವಿನಯದಿಂದಲೂ ಆತ್ಮೀಯತೆಯ ಸಲಿಗೆಯಿಂದಲೂ, ಪ್ರಾರ್ಥಿಸಿದನು. ಆಗ ವೀರೇಶನು, ಎಲೈ! ಸ್ಥಿತಿಕರ್ತನಾದ ಹರಿಯೆ! ನನಗೆ ನಿನ್ನಲ್ಲಿ ಅನ್ಯಥಾ ವೈರವಿಲ್ಲ. ನೀನು ತ್ರಿಮೂರ್ತಿಗಳಲ್ಲಿ ಒಬ್ಬನು. ನಾಶರಹಿತನು. ಮೇಲಾಗಿ ಶಂಕರನ ಆತ್ಮೀಯನು ಆದಾಗ್ಯೂ ಶಿವದೂಷಕರನ್ನು ಮಾತ್ರ ಕ್ಷಮಿಸಲು ನನಗೆ ಅಧಿಕಾರವಿಲ್ಲ. ತಮ್ಮ ತಮ್ಮ ಅಪರಾಧಗಳನ್ನು ಅರಿತು ಕ್ಷಮೆ ಯಾಚಿಸುವವರನ್ನು ಮಾತ್ರ

ನಾನಾಗಲೀ ನನ್ನ ಪರಿವಾರದವರಾಗಲೀ ಎಂದೂ ಶಿಕ್ಷಿಸರು. ನಿನ್ನ ಮಾಯಾ ಶರೀರದ ಹರಿಣಿಯನ್ನು ಮಾತ್ರ ನಿಗ್ರಹಿಸಿರುವೆನು. ಆ ಹರಿಣಿಯನ್ನು ಶಿವನಿಗೆ ಅರ್ಪಿಸುವೆನು. ಇಚ್ಛೆಯಂತೆ ನೀನು ವೈಕುಂಠಕ್ಕೆ ನಿರಾತಂಕವಾಗಿ ಹೊರಡಬಹುದು ಎಂದು ತಿಳಿಸಿದನು. ಕೂಡಲೇ ಹರಿಯು ವೀರೇಶನಿಗೆ ವಂದಿಸಿ ಅದೃಶ್ಯನಾದನು.


ದಕ್ಷನ ಬಲಿ :

ನಂತರ ವೀರೇಶನು, ಯಜ್ಞಕುಂಡದ ಕಡೆ ತಿರುಗಿ ಅಲ್ಲಿಯೇ ನಿಂತಿದ್ದ ದಕ್ಷನನ್ನು ಕಂಡನು. ಅವನ ಮುಖವನ್ನು ಕಂಡಕೂಡಲೇ ಹಸಿದ ವ್ಯಾಘ್ರವು ತನ್ನ ಬೇಟೆಯ ಚಿಗರೆಯ ಕುತ್ತಿಗೆಯನ್ನು ಹಾರಿ ಹಿಡಿಯುವಂತೆ ಒಂದೇ ನೆಗೆತಕ್ಕೆ ದಕ್ಷನನ್ನು ಸಮೀಪಿಸಿ, ಅವನನ್ನು ಒದ್ದು ಕೆಡಹಿ ಅವನ ತಲೆಯನ್ನು ಹಿಡಿದು, ಎಲೈ ಪಾಪಾತ್ಮನಾದ ದಕ್ಷನೇ! ಈಗ ನಿನ್ನನ್ನು ರಕ್ಷಿಸುವವರಾರು? ಪುರುಷೋತ್ತಮನಾದ ಹರಿ ಮತ್ತು ಇಂದ್ರ, ಯಮ, ಅಗ್ನಿ, ವರುಣ, ರವಿ ಮೊದಲಾದ ನಿನ್ನ ಬೆಂಬಲಿಗರ ಗತಿ ಏನಾಯಿತು ನೋಡಿದೆಯಾ? ಇವರೆಲ್ಲಾ ಪಾಪಿಯಾದ ನಿನ್ನ ಪ್ರೇರಣೆಗೆ ಮನಸೋತು ಪರಾಭವ ಹೊಂದಿ ಅಪಕೀರ್ತಿಗೀಡಾಗಬೇಕಾಯಿತು. ಅಲ್ಲದೆ ಲೋಕಮಾತೆ ಯಾದ ಸತಿಯೂ, ನೀಚನಾದ ನಿನ್ನಿಂದ ಅಪಮಾನಿತಳಾಗಿ, ತನ್ನ ಸತೀತ್ವ ವನ್ನು ರಕ್ಷಿಸಿಕೊಳ್ಳಲೂ, ಪಾಪಿಯಾದ ನಿನ್ನ ಸಂಬಂಧವನ್ನು ತ್ಯಜಿಸಲೂ, ತನ್ನ ಪಾರ್ಥಿವಶರೀರವನ್ನು ಯೋಗಾಗ್ನಿಯಿಂದ ತ್ಯಜಿಸಿದಳು. ಈ ಎಲ್ಲಾ ಅನರ್ಥಗಳಿಗೂ ನಿನ್ನ ಶಿವದ್ವೇಷ ಹಾಗೂ ದುರಹಂಕಾರಗಳೇ ಕಾರಣವಲ್ಲವೇ? ಎಂದು ಹೇಳುತ್ತಿದ್ದಂತೆ ವೀರೇಶನ ಕಣ್ಣಿನಿಂದ ಕಿಡಿ ಹಾರಿದವು. ಭೂಮಿಯು ನಡುಗಿತು. ಅವನ ರಕ್ತಚಲನೆಯು ಇಮ್ಮಡಿಸಿತು. ಅವನ ಕಂಠವು ಬಿಗಿದು ಮಾತೇ ಹೊರಡದಾಯಿತು. ನಂತರ,

ಜಘಾನ ಮೂರ್ಧ್ನಿ ಪಾದೇನ ದಕ್ಷಂ ಚೈವ ಯಶಸ್ವಿನಂ ।
ಚಿಚ್ಛೇದ ಚ ಶಿರಸ್ತಸ್ಯ ದದಾಹಾಗ್ನೌ ದ್ವಿಜೋತ್ತಮಾಃ ॥

(ಲಿಂಗ. 100_37)

ಮನಸ್ಸಿನಲ್ಲಿ ಜಗನ್ಮಾತೆಯನ್ನು ಸ್ಮರಿಸಿ, ತಾಯೇ! ಇಗೋ ನಿನ್ನ ಕೋಮಲವಾದ ಮನಸ್ಸನ್ನು ನೋಯಿಸಿ, ಅಪಮಾನಿಸಿದ ನೀಚ ದಕ್ಷನಿಗೆ



ದಕ್ಷದಂಪತಿಗಳಿಂದ ಕೂಡಿರುವ ಶ್ರೀವೀರಭದ್ರ

ತಕ್ಕ ಶಾಸ್ತಿಮಾಡುವೆನು. ಹೇ ಜಗಜ್ಜನನೀ! ನಿನ್ನ ಆತ್ಮಕ್ಕೆ ಇನ್ನಾದರೂ ಶಾಂತಿ ದೊರೆಯಲಿ ಎಂದು ಮತ್ತೊಮ್ಮೆ ದಕ್ಷನನ್ನು ಕಾಲಿನಿಂದ ಝಾಡಿಸಿ ತನ್ನ ಕೈಯಲ್ಲಿದ್ದ ವೀರಖಡ್ಗದಿಂದ ಶಿವದ್ರೋಹಿಯಾದ ಅವನ ತಲೆಯನ್ನು ಒಂದೇ ಏಟಿಗೆ ಕತ್ತರಿಸಿದನು. ಅಷ್ಟಕ್ಕೆ ತೃಪ್ತನಾಗದೆ ಕತ್ತರಿಸಲ್ಪಟ್ಟ ದಕ್ಷನ ತಲೆಯನ್ನು ಮುಟ್ಟುವುದೂ ಸಹ ಪಾಪಕರವೆಂದು ಗ್ರಹಿಸಿ ಅದನ್ನು ತನ್ನ ಕತ್ತಿಯ ತುದಿಯಿಂದ ಚುಚ್ಚಿ ಎತ್ತಿ ಅಗ್ನಿಕುಂಡಕ್ಕೆ ಎಸೆದು ಆಹುತಿ ನೀಡಿದನು. ಇದಾದ ಮೇಲೆ ವೀರೇಶನ ಕೋಪವು ಶಾಂತವಾಯಿತು. ಶಿವದ್ರೋಹಿಯೂ, ಸತೀದೇವಿಯ ದೇಹತ್ಯಾಗಕ್ಕೆ ಕಾರಣನೂ ಆದ ದಕ್ಷನು ಮೃತಿಹೊಂದಿದ್ದನ್ನು ಕಂಡು ಆನಂದದಿಂದ ಇವನು ಕುಪ್ಪಳಿಸಿ ಜಯಕಾರ ಮಾಡಿದನು. ಅಲ್ಲಿದ್ದ ರುದ್ರಗಣವೆಲ್ಲಾ ಜಯವೀರೇಶ! ಜಯಯಜ್ಞಾರಿ! ಜಯ ವೀರಭದ್ರ! ಎಂದು ಜಯಘೋಷಮಾಡುತ್ತಿರಲು ದೇವತೆಗಳು ಪೂಮಳೆ ಗರೆದರು. ದೇವದುಂದುಭಿ ಮೊಳಗಿತು.

ದಕ್ಷನಿಗೆ ಪ್ರಾಣದಾನ :

ಅಷ್ಟರಲ್ಲಿ ದಕ್ಷನ ಪತ್ನಿ ಪ್ರಸೂತಿಯೂ, ದಕ್ಷಪುತ್ರಿಯರೂ ಗೋಳಾಡುತ್ತಾ ವೀರೇಶನ ಪಾದಗಳ ಮೇಲೆ ಬಿದ್ದು ದಕ್ಷನ ಪ್ರಾಣಭಿಕ್ಷೆ ಬೇಡಿದರು. ಆಗ ದಯಾಮಯನಾದ ವೀರೇಶನು ಅವರಿಗೆಲ್ಲಾ ಅಭಯನೀಡಿ ಸಂತೈಸಿದನು. ನಂತರ ಆ ಯಜ್ಞಕುಂಡದ ಬಳಿ ದಕ್ಷನಿಂದಲೇ ಕತ್ತರಿಸಲ್ಪಟ್ಟು ಬಿದ್ದಿದ್ದ ಒಂದು ಹೋತನ ತಲೆ ಕಾಣಿಸಲು ಅದನ್ನೇ ತೆಗೆದು ದಕ್ಷನ ಮುಂಡಕ್ಕೆ ತನ್ನ ಅಮೃತಹಸ್ತದಿಂದ ಸೇರಿಸಿ ಅನುಗ್ರಹಿಸಲು ದಕ್ಷನು ಮರಳಿ ಪ್ರಾಣ ಪಡೆದು ವೀರೇಶನಿಗೆ ಶರಣಾಗತನಾಗಿ ನಾನಾ ವಿಧದಿಂದ ಪ್ರಾರ್ಥಿಸಿ, ತನ್ನ ಅಪರಾಧವನ್ನು ಮನ್ನಿಸಿ ಕಾಪಾಡಬೇಕೆಂದು ಪ್ರಾರ್ಥಿಸಿದನು. ಅಷ್ಟರಲ್ಲಿ ವೀರೇಶನ ಗಣವು ಅಳಿದುಳಿದ ಯಾಗಶಾಲೆಯನ್ನು ಸಂಪೂರ್ಣವಾಗಿ ನಾಶಮಾಡಿ, ಯಜ್ಞಶಾಲೆಯ ಕುರುಹೇ ಇಲ್ಲದಂತೆ ಮಾಡಿ ಜಯಕಾರ ಮಾಡಿತು.

ಶಿವ ದರ್ಶನ :

ಎಲ್ಲವೂ ಶಾಂತವಾದ ಮೇಲೆ, ವೀರೇಶ – ಭದ್ರಕಾಳಿ, ದೇವಸಮೂಹ, ಋಷಿಸಮೂಹ ಇವರೆಲ್ಲರೂ ಶಿವದರ್ಶನ ಮಾಡುವ ಆತುರದಿಂದ ಇರಲು, ಅಲ್ಲಿಯವರೆಗೂ, ಗಗನದಲ್ಲಿ ನಿಂತು ಯಜ್ಞಧ್ವಂಸಕಾರ್ಯವನ್ನು ವೀಕ್ಷಿಸು

ತ್ತಿದ್ದ ತೇಜೋರೂಪಿಯೂ, ಮಹಾಮಹಿಮನೂ, ಸರ್ವೇಶ್ವರನೂ, ಜ್ಞಾನಗೋಚರನೂ, ವೃಷಭಾರೂಢನೂ, ಭಕ್ತವತ್ಸಲನೂ, ಅನಾಥನಾಥನೂ, ಆದ ಶಂಕರನು, ಬ್ರಹ್ಮದೇವನ ಪ್ರಾರ್ಥನೆಯಂತೆ, ಅವರೆಲ್ಲರಿಗೂ ತನ್ನ ದಿವ್ಯ ಮಂಗಳ ರೂಪದಿಂದ ದರ್ಶನವಿತ್ತು, ಅವರನ್ನೆಲ್ಲಾ ಹರಸಿ, ಅವರ ಸಾಹಸಕ್ಕಾಗಿ ಅವರೆಲ್ಲರನ್ನೂ ಪ್ರಸಂಶಿಸಿದನು. ಹೀಗೆ ಅನಿರೀಕ್ಷಿತವಾಗಿ ಲಭಿಸಿದ ಶಿವನ ದರ್ಶನ ಭಾಗ್ಯದಿಂದ ಪುನೀತರಾದ ದೇವತೆಗಳೇ ಆದಿಯಾಗಿ ಸರ್ವರೂ ಶಂಕರನಿಗೆ ಸಾಷ್ಟಾಂಗ ಪ್ರಣಾಮಗೈದು, ನಾನಾ ವಿಧದಿಂದ ಅವನನ್ನು ಕೊಂಡಾಡಿ ಪ್ರಾರ್ಥಿಸತೊಡಗಿದರು.

ಶಿವಕೃಪೆ :

ಭಕ್ತವತ್ಸಲನಾದ ಶಂಕರನು, ಪ್ರಸನ್ನವದನನಾಗಿ ಅವರನ್ನು ಕುರಿತು ಎಲೈ ! ದೇವತೆಗಳಿರಾ, ನೀವೆಲ್ಲರೂ ನನ್ನ ಮಕ್ಕಳೇ. ನೀವು ಮಾಡಿದ ಅಧರ್ಮ ಹಾಗೂ ಅನುಚಿತಕಾರ್ಯಗಳಿಗಾಗಿ ನಿಮಗೆ ವಿಧಿಸಲ್ಪಟ್ಟ ಶಿಕ್ಷೆಯು ಕೇವಲ ಅನುಗ್ರಹರೂಪವಾದುದೆಂದು ಭಾವಿಸಿರಿ. ಅದನ್ನು ನಾನು ಮನಸ್ಸಿನಲ್ಲಿಡುವುದಿಲ್ಲ. ಎಂದು ಹೇಳಿ ಅವರ ಪ್ರಾರ್ಥನೆಯಂತೆ, ಆ ಯಾಗದಲ್ಲಿ ಮೃತಿಹೊಂದಿದವರಿಗೆಲ್ಲಾ ಪುನಃ ಮುಂಚಿನಂತೆಯೇ ಅವರವರ ಶರೀರರೂಪುಗಳುಂಟಾಗುವಂತೆ ವರವನ್ನು ನೀಡಿ ಅನುಗ್ರಹಿಸಿದನು. ನಂತರ ಅಜಮುಖ ಹೊಂದಿ ಪಶ್ಚಾತ್ತಾಪದಿಂದ ಬೆಂದು ಬೆಂಡಾಗಿ, ನಾಚಿಕೆಯಿಂದ ತನ್ನ ಬಳಿ ನಿಂತಿದ್ದ ದಕ್ಷನನ್ನು ಮೈದಡವಿ, ನಗುಮುಖದಿಂದ ಎಲೈ ದಕ್ಷಪ್ರಜಾಪತಿಯೇ, ನಿನ್ನ ಎಲ್ಲಾ ಅಪರಾಧಗಳನ್ನೂ ಮನ್ನಿಸಿರುವೆನು. ನಿನಗೆ ಬೇಕಾದ ವರವನ್ನು ಕೇಳು ಅನುಗ್ರಹಿಸುವೆನು ಎಂದನು. ಅದನ್ನು ಕೇಳಿದ ದಕ್ಷನ ಆನಂದಕ್ಕೆ ಪಾರವೇ ಇಲ್ಲವಾಯಿತು. ಆನಂದ ಬಾಷ್ಪಗಳು ಉದುರುತ್ತಿರಲು ಎಲೈ ದಯಾಮಯನಾದ ಶಂಕರನೇ ! ನಿನ್ನ ಈ ಮಹೋನ್ನತವಾದ ದೈವತ್ವವನ್ನು ಅರಿಯದೆ, ಅಜ್ಞಾನಾಂಧಕಾರದಲ್ಲಿ ನಿನ್ನನ್ನೂ ಹಾಗೂ ನಿನ್ನ ಅರ್ಧಾಂಗಿಯೂ ಮತ್ತು ನನ್ನ ಮುದ್ದು ಮಗಳೂ ಆದ ಗೌರಿಯನ್ನೂ ನಾನಾ ರೀತಿಯಿಂದ ನಿಂದಿಸಿ, ನಿಮ್ಮಿಬ್ಬರ ಪವಿತ್ರವಾದ ಮತ್ತು ತ್ರಿಮೂರ್ತಿಗಳಿಗೂ, ಋಷಿ ಶ್ರೇಷ್ಠರಿಗೂ, ದುರ್ಲಭವಾದ ಶರೀರ ಸಂಬಂಧವನ್ನು ನಾನಾಗಿ ಪ್ರತ್ಯೇಕಿಸಿ ಪಾಪಿಯಾದೆನು. ನನಗಿಂತಲೂ ಪಾಪಿಗಳೂ ಅಜ್ಞಾನಿಗಳೂ ಈ ಮೂರು ಲೋಕಗಳಲ್ಲಿ

ಬೇರಾರೂ ಇರಲಾರರು. ನಿನ್ನ ಉದಾರತೆಗೆ ನಾನು ನಾಚಿರುವೆನು. ಸದಾ ಕಾಲವೂ ನಿನ್ನ ಸೇವೆ ಮಾಡಬೇಕೆಂಬುದೇ ನನ್ನ ಏಕೈಕ ಬಯಕೆ. ಆದ್ದರಿಂದ ಕೃಪೆ ಮಾಡಿ ಅದನ್ನು ಕರುಣಿಸಿ, ನನ್ನನ್ನು ಕೃತಾರ್ಥನನ್ನಾಗಿ ಮಾಡೆಂದು ಅತಿ ನಮ್ರತೆಯಿಂದ ಪ್ರಾರ್ಥಿಸಿದನು. ಆಗ ಶಂಕರನು ಅತ್ಯಂತ ಸಲಿಗೆ ಹಾಗೂ, ದಯೆಯಿಂದ ಅವನ ಶಿರಸ್ಸನ್ನು ಮುಟ್ಟಿ, ನಿನ್ನ ಇಚ್ಛೆಯಂತೆಯೇ ಆಗಲೆಂದು, ಅವನಿಗೆ ಎಲ್ಲಾ ವರಗಳನ್ನೂ ಕೊಟ್ಟು ಅವನನ್ನು ಪ್ರಮಥಗಣದ ಒಡೆಯನನ್ನಾಗಿ ಮಾಡಿದನು.

ಶಿವಸ್ತುತಿ :

ಇದನ್ನೆಲ್ಲಾ ನೋಡುತ್ತಿದ್ದ ದೇವತೆಗಳು ತಮ್ಮ ಕಣ್ಣುಗಳನ್ನು ತಾವೇ ನಂಬದಾದರು. ಅವರು ದಕ್ಷನ ಕಠೋರ ಶಿವನಿಂದೆಯಿಂದ ಕುಪಿತನಾದ ಶಂಕರನು, ದಕ್ಷನನ್ನು ತನ್ನ ಹಣೆಗಣ್ಣಿನಿಂದ ಎಲ್ಲಿ ಸುಟ್ಟು ಬಿಡುವನೋ ಎಂದು ಶಂಕಿಸುತ್ತಿದ್ದರು. ಆದರೆ ಅವರು ಎಣಿಸಿದ್ದಕ್ಕೆ ಪ್ರತಿಯಾಗಿ, ಶಿವನು ದಕ್ಷನನ್ನು ಪುತ್ರವಾತ್ಸಲ್ಯದಿಂದ ಅನುಗ್ರಹಿಸಿದ್ದನ್ನು ನೋಡಿ ಎಲ್ಲರೂ ಶಂಕರನ ಕ್ಷಮಾ ಶೀಲತೆಗೆ ಮುಗ್ಧರಾಗಿ ನಾನಾ ವಿಧದಿಂದ, ಎಲೈ ದೇವ ದೇವನೆ ! ನೀನು ಕರುಣಾಳುವು, ನೀನೇ ರಜ, ಸತ್ವ, ತಮ, ಗುಣಗಳಿಂದ ಬ್ರಹ್ಮ, ವಿಷ್ಣು, ಪರಮೇಶ್ವರರೆಂಬ ಬೇರೆ ಬೇರೆ ರೂಪಗಳನ್ನು ಹೊಂದಿರುವೆ. ನೀನು ನಿರಾಕಾರನಾದಾಗ್ಯೂ ಭಕ್ತರ ಉದ್ಧಾರಕ್ಕೋಸ್ಕರ, ಸಾಕಾರನಾಗಿ ನಮ್ಮನ್ನೆಲ್ಲಾ ಸಂರಕ್ಷಿಸುತ್ತಿರುವೆ. ನೀನು ಕಾಮರೂಪಿಯು. ಇಡೀ ಬ್ರಹ್ಮಾಂಡವನ್ನೇ ನಿನ್ನಲ್ಲಡಗಿಸಿಕೊಂಡು ಎಲ್ಲಾ ಜೀವಿಗಳನ್ನೂ ನಿನ್ನ ಮಕ್ಕಳೋಪಾದಿಯಲ್ಲಿ ಭಾವಿಸಿ ಪೋಷಿಸುತ್ತಿರುವೆ.

ಸರ್ವಮೂರ್ತೇ ನಮಸ್ತೇಽಸ್ತು ವಿಶ್ವಭಾವನ ಪಾವನ ।
ಅಮೂರ್ತೇ ಭಕ್ತಹೇತೋರ್ಹಿ ಗೃಹೀತಾಕೃತಿಸೌಖ್ಯದ ॥

(ಶಿ.ಪು. 23–21)

ದೇವದೇವನೇ, ನಿನ್ನ ದಯೆಯಿಂದ ಚಂದ್ರನಿಗೆ ಕ್ಷಯ ಹಾಗೂ ಇಂದ್ರನ ಯೋನಿಶರೀರ ನಾಶವಾಯಿತು. ವಿಷ್ಣುವಿಗೆ ವೈಕುಂಠ ದೊರೆಯಿತು. ಬ್ರಹ್ಮನಿಗೆ ಸತ್ಯಲೋಕ ಸಿಕ್ಕಿತು. ಕುಬೇರನು ಧನಾಧಿಪತಿಯಾದನು, ಇಂದ್ರನು ಸುರೇಶನಾದನು. ಶ್ರೀ ಕೃಷ್ಣನೆಂಬ ಗೊಲ್ಲ ಬಾಲಕನು ಗೋಪಪದವಿಯನ್ನು ಪಡೆದನು.

ಶ್ರೀಕರಾಯ ದದೌ ದೇವಃ ಸ್ವೀಯಂ ಪದಮನುತ್ತಮಂ ।
(ಶಿವ. ಪು. 23_24)

ಎಂದು ನಾನಾ ವಿಧವಾಗಿ ಕೊಂಡಾಡಿದನು.

ಹರಿಯಿಂದ ಶಿವಪಾರಮ್ಯ :

ನಂತರ ಹರಿಯು, ಶಿವನಿಗೆ ವಂದಿಸಿ, ಎಲೈ ದೇವದೇವನೆ, ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಕ್ಕೆ ಕಾರಣನು ನೀನೇ. ತ್ರಿಮೂರ್ತಿಗಳ ಕರ್ತನೂ ನೀನೇ ಆದರೂ, ಅವರಿಗಿಂತ ಅತೀತನಾಗಿರುವೆ. ನೀನು ನಿತ್ಯನು. ನಾಶ ರಹಿತನು. ನಿರಾಕಾರನೂ–ಸಾಕಾರನೂ ಹೌದು. ಜ್ಞಾನಗೋಚರನು. ಸಹಸ್ರ ವರ್ಷಗಳು ನಿನ್ನನ್ನು ಕಮಲಗಳಿಂದ ಪೂಜಿಸಿದರೂ ನನಗೆ ನಿನ್ನ ಪಾದಕಮಲ ಗಳ ದರ್ಶನ ಭಾಗ್ಯ ಲಭಿಸಲಿಲ್ಲ, ಎಲೈ, ಶಂಭುವೇ ಈ ಚರಾಚರವು ಇರುವುದೂ ನಿನ್ನ ಸಂಕಲ್ಪದಿಂದಲೇ

ತ್ವತ್ತಃ ಸರ್ವಂ ಚ ತ್ವಂ ಸರ್ವಂ ತ್ವಯಿ ಸರ್ವಂ ಗಿರೀಶ್ವರ ।
ತ್ರಾಹಿ ತ್ರಾಹಿ ಪುನಸ್ತ್ರಾಹಿ ಕೃಪಾಂ ಕುರು ಮಮೋಪರಿ ॥
(ಶಿ. ಪು. 23_29)

ನೀನೇ ಎಲ್ಲ ರೂಪದಿಂದಿರುವೆ. ನೀನೇ ನನಗೆ ರಕ್ಷಕನು, ಶಿಕ್ಷಕನು. ನನ್ನ ಅಕ್ಷಮ್ಯ ಅಪರಾಧಗಳನ್ನು ಮನ್ನಿಸಿ, ಕಾಪಾಡು ಎಂದು ಪ್ರಾರ್ಥಿಸಿದನು. ಹೀಗೆ ಹರಿ, ಬ್ರಹ್ಮ, ಇಂದ್ರ ಮೊದಲಾದ ದೇವತೆಗಳೆಲ್ಲಾ ಬಹು ವಿಧದಿಂದ ಪ್ರಾರ್ಥಿಸುತ್ತಿರಲು, ಕರುಣಾಕರನೂ, ಭಕ್ತಪರಾಧೀನನೂ, ಆದ ಶಂಕರನು ಮಂದಸ್ಮಿತ ವದನಾರವಿಂದದಲ್ಲಿ ಅವರನ್ನು ಕುರಿತು ಪುತ್ರವಾತ್ಸಲ್ಯಪೂರ್ಣ ವಾದ ಮಧುರ ಕಂಠದಿಂದ—

ಶಿವೋಪದೇಶ :

ಯದಿದಮಾಗ ಇಹಾಚರಿತಂ ಸುರೈರ್ವಿಧಿನಿಯೋಗವಶಾದಿವ
ಯಂತ್ರಿತೈಃ।
ಶರಣಮೇವ ಗತಾನವಲೋಕ್ಯ ವಸ್ತದಖಿಲಂ ಕಿಲ ವಿಸ್ಮೃತಮೇವ
ನಃ ॥ (ಶಿ.ಪು. 11_23_53)

ಶದಿಹ ಯೂಯಮಪಿ ಪ್ರಕೃತಂ ಮನಸ್ಯವಿಗಣಯ್ಯ ವಿಮರ್ದ
ಮಪತ್ರಪಾಃ ।
ಹರಿವಿರಿಂಚಿಸುರೇಂದ್ರಮುಖಾಸ್ಸುಖಂ ವ್ರಜತ ದೇವಪುರಂ ಪ್ರತಿ
ಸಂಪ್ರತಿ ॥ (ಶಿ.ಪು. 11-23-54).

ಎಲೈ ದೇವತೆಗಳಿರಾ! ವಿಧಿವಶಕ್ಕೆ ಬದ್ಧರಾದ ದೇವತೆಗಳು ನೀವು, ನಮ್ಮ ವಿಷಯದಲ್ಲಿ ಎಷ್ಟೋ ಅಕ್ಷಮ್ಯ ಅಪರಾಧಗಳನ್ನು ಮಾಡಿದ್ದಾಗ್ಯೂ ಪಶ್ಚಾತ್ತಾಪದಿಂದ ಈಗ ಶರಣು ಬಂದಿರುವಿರಿ. ಆದುದರಿಂದ ನಿಮ್ಮೆಲ್ಲಾ ಅಪರಾಧಗಳನ್ನು ಕ್ಷಮಿಸಿರುವೆವು. ಮತ್ತು ಅವುಗಳನ್ನು ನಾವು ಪುನಃ ಸ್ಮರಿಸುವುದೂ ಇಲ್ಲ. ನಾವು ನಿಮ್ಮೆಲ್ಲರ ತಪ್ಪನ್ನೂ ಮನ್ನಿಸಿರುವುದರಿಂದ, ವಿಷ್ಣು, ಬ್ರಹ್ಮ, ಇಂದ್ರರೇ ಮೊದಲಾದ ನೀವುಗಳೂ ಕೂಡ, ಪ್ರಕೃತ ಸಂದರ್ಭದಲ್ಲಿ, ನಾವು ಮಾಡಿದ ಶಿಕ್ಷೆಯನ್ನು ಗಣನೆಗೆ ತಾರದೆ, ಅದನ್ನು ಅನುಗ್ರಹವೆಂದೇ ಭಾವಿಸಿ, ನಿಮಗೆಲ್ಲಾ ಉಂಟಾಗಿರುವ ಅಪಮಾನವನ್ನು ಮಾರ್ಗದರ್ಶನವೆಂದೇ ಭಾವಿಸಿರಿ. ಮತ್ತು ನೀವುಗಳು ಮುಂದೆಂದೂ ಇಂಥಾ ಅಧರ್ಮ ಕಾರ್ಯ ಪ್ರವರ್ತಕರಾಗದಂತೆ ಎಚ್ಚರಿಕೆಯಿಂದಿದ್ದು, ನಿಮಗೆ ನಿಯಮಿಸಲ್ಪಟ್ಟಿರುವ ನಿಮ್ಮ ನಿಮ್ಮ ಪವಿತ್ರ ಕಾರ್ಯಗಳನ್ನು ಧರ್ಮಶ್ರದ್ಧೆಗಳಿಂದ ನಿರ್ವಹಿಸಿ ಸುಖಿಗಳಾಗಿರಿ ಎಂದು ಉಪದೇಶಿಸಿದನು.

ನಂತರ ಶಂಕರನು ಗಣಸಮೂಹದ ಕಡೆ ತಿರುಗಿ, ಎಲೈ ವೀರೇಶನೇ ದೇವತೆಗಳಿಗೆ ನಾವು ನೀಡಿದ ಹಿತೋಪದೇಶವು ನಿಮ್ಮೆಲ್ಲರಿಗೂ ಅನ್ವಯಿಸುವುದು ಎಂದು ಹೇಳಿ, ಅವರು ಗಳಿಸಿದ ವಿಜಯಕ್ಕಾಗಿ ಅವರನ್ನು ಅಭಿನಂದಿಸಿದನು. ನಂತರ ವೀರೇಶನನ್ನು ಕುರಿತು ಎಲೈ ವೀರೇಶ, ನೀನು ಇನ್ನು ಮುಂದೆ ರುದ್ರಗಣಕ್ಕೆಲ್ಲಾ ಒಡೆಯನಾಗಿರು. ಎಂದೆಂದಿಗೆ ಲೋಕದಲ್ಲಿ ಅಧರ್ಮ, ಹಿಂಸಾ ಕೃತ್ಯ, ಶಿವದ್ರೋಹ ಇತ್ಯಾದಿಗಳು ಸಂಭವಿಸುವವೋ, ಅಂದಂದಿಗೆ, ಅಂಥಾ ಧರ್ಮದ್ರೋಹಿಗಳನ್ನೂ ಹಾಗೂ ಲೋಕಕಂಟಕರನ್ನೂ ನಿಗ್ರಹಿಸಿ ಸನಾತನ ಧರ್ಮವನ್ನು ಸಂಸ್ಥಾಪಿಸು ಎಂದು ಹೇಳಿ ಹರಸಿದನು. ನಂತರ ಭದ್ರಕಾಳಿಯನ್ನು ಕುರಿತು, ಮಗಳೇ! ನಿನ್ನ ಧೈರ್ಯ ಸಾಹಸಗಳು ನಿನ್ನ ಪತಿಯ ಸಾಹಸಗಳಿಗಿಂತಾ ಯಾವ ವಿಧದಲ್ಲಿಯೂ ಕಡಿಮೆಯಲ್ಲ. ಇನ್ನು ಮುಂದೆ ನಿನಗೆ ಪ್ರಥಮ 'ವೀರರಮಣಿ' ಯೆಂಬ ಕೀರ್ತಿ ಲಭಿಸಲಿ. ಅಲ್ಲದೆ,

ಲೋಕವು ಇತಃಪರ ನಿನ್ನ ಪತಿಯೊಡನೆ ನಿನ್ನನ್ನೂ ಪೂಜಿಸಿ ಆರಾಧಿಸಲಿ ಎಂದು ಆಶೀರ್ವದಿಸಿ ಅಂತರ್ಧಾನನಾದನು.

ಫಲಶ್ರುತಿ

ಶ್ರೀ ವೀರೇಶಕೃತಂ ದಕ್ಷಗರ್ವಭಂಗವಿಮಂ ಭುವಿ ।
ಭಕ್ತ್ಯಾ ಪಠತಿ ಯೋ ನಿತ್ಯಂ ಶ್ರುಣುಯಾದಪಿ ವಾ ತತಃ ॥
ಮುಚ್ಯತೇ ಸರ್ವಪಾಪೇಭ್ಯೋ ಭುಕ್ತಿಂ ಮುಕ್ತಿಂ ಚ ವಿಂದತಿ ॥

ಶ್ರೀ ವೀರೇಶನು ತನ್ನ ಲೀಲೆಯಿಂದಾಚರಿಸಿದ ದಕ್ಷ ಗರ್ವಭಂಗವೆಂಬ ಈ ಕಥೆಯನ್ನು ಭಕ್ತಿಯಿಂದ ಕೇಳುವವರು ಮತ್ತು ಓದುವವರು ಎಲ್ಲ ಪಾಪಗಳಿಂದ ವಿಮುಕ್ತರಾಗಿ, ಭುಕ್ತಿ-ಮುಕ್ತಿಗಳನ್ನೂ ಹೊಂದಿ ಶಿವನೊಡನೆ ಐಕ್ಯ ಹೊಂದುವರು.

॥ ಶಿವಂ ಭೂಯಾತ್ ॥

ದ್ವಿತೀಯ ತರಂಗ

ಶರಭಲೀಲೆ

ಅಥ ವಿಭ್ರಮ್ಯ ಪಕ್ಷಾಭ್ಯಾಂ ನಾಭಿಪಾದೇಷು ದಾರಯನ್ ।
ಪಾದಾವಾಬಧ್ಯ ಪುಚ್ಛೇನ ಬಾಹುಭ್ಯಾಂ ಬಾಹುಮಂಡಲಂ ॥

(ಲಿಂ.ಪು. 4-95-71)

ಭಿಂದನ್ನುರಸಿ ಬಾಹುಭ್ಯಾಂ ನಿಜಗ್ರಾಹ ಹರೋ ಹರಿಂ ।
ತತೋ ಜಗಾಮ ಗಗನಂ ದೇವೈಃ ಸಹ ಮಹರ್ಷಿಭಿಃ ॥ (95–72)

[ಶರಭಾವತಾರ ತಾಳಿದ ವೀರೇಶನು, ತನ್ನ ಬಾಹುಗಳಿಂದ ನೃಸಿಂಹನನ್ನು ಹಿಡಿದು, ಹೊಕ್ಕಳುಗಳನ್ನೂ, ಕಾಲುಗಳನ್ನೂ ಸೀಳಿ, ತನ್ನ ಬಾಲದಿಂದ ಅವನ ಕಾಲನ್ನು ಕಟ್ಟಿ, ಬಾಹುಗಳಿಂದ ಬಾಹುಗಳನ್ನು ಬಂಧಿಸಿ, ವಕ್ಷಸ್ಥಳವನ್ನು ಸೀಳಿದನು. ನಂತರ ಸಕಲದೇವತೆಗಳೊಡನೆ, ಆಕಾಶಕ್ಕೆ ತೆರಳಿದನು]

ನೃಸಿಂಹಾವತಾರ :

ಹಿಂದೆ ಸನಕಾದಿಗಳ ಶಾಪದಿಂದ, ವೈಕುಂಠದ ದ್ವಾರಪಾಲಕರಾದ ಜಯ ವಿಜಯರು, ಹಿರಣ್ಯಾಕ್ಷ, ಹಿರಣ್ಯಕಶಿಪುಗಳೆಂಬ ರಾಕ್ಷಸರಾಗಿ ಭೂಲೋಕದಲ್ಲಿ ಜನಿಸಿದರು. ಹಿರಣ್ಯಾಕ್ಷನು ಭೂಮಿಯನ್ನು ಪಾತಾಳಕ್ಕೆ ಕದ್ದೊಯ್ದು ಪೀಡಿಸತೊಡಗಿದನು. ಆಗ ವಿಷ್ಣುವು ವರಾಹಾವತಾರದಿಂದ ಪಾತಾಳಕ್ಕೆ ಹೋಗಿ ಹಿರಣ್ಯಾಕ್ಷನನ್ನು ಸಂಹರಿಸಿ, ಭೂಮಿಯನ್ನು ಉದ್ಧರಿಸಿದನು. ನಂತರ ಹಿರಣ್ಯಕಶಿಪುವು ತನ್ನ ಅಣ್ಣನನ್ನು ಸಂಹರಿಸಿದ ಹರಿಯ ಮೇಲೆ ದ್ವೇಷ ಸಾಧಿಸುತ್ತಾ ಮೂರು ಲೋಕಗಳನ್ನೂ ಪೀಡಿಸತೊಡಗಿದನು. ತಾನೇ ಜಗತ್ತಿಗೆಲ್ಲಾ ಒಡೆಯನೆಂದೂ, ಎಲ್ಲರೂ, ತನ್ನನ್ನೇ ಆರಾಧಿಸಿ ಧ್ಯಾನಿಸಬೇಕೆಂದೂ ಬೋಧಿಸಿ, ಅದರಂತೆ ನಡೆಯದವರನ್ನು ಹಿಂಸಿಸತೊಡಗಿದನು. ಅವನಿಗೆ, ಪ್ರಹ್ಲಾದನೆಂಬ ಮಗನಿದ್ದನು. ಅವನು ವಿಷ್ಣು ಭಕ್ತನಾಗಿ ಸದಾ ಹರಿಧ್ಯಾನದಲ್ಲಿ ನಿರತನಾಗಿದ್ದನು. ಅದನ್ನು ತಪ್ಪಿಸಲು ಹಿರಣ್ಯಕಶಿಪುವು ಮಾಡಿದ ಉಪಾಯಗಳೆಲ್ಲಾ ವಿಫಲವಾಗಲು, ಅವನನ್ನು ನಾನಾ ವಿಧವಾದ ಹಿಂಸೆಗಳಿಗೆ ಗುರಿ ಮಾಡಿದನು. ಏನಾದರೂ ಬಾಲಕನು ಹರಿಧ್ಯಾನವನ್ನು ಬಿಡಲಿಲ್ಲ. ಅತ್ಯಂತ ಕುಪಿತನಾದ ಹಿರಣ್ಯ ಕಶಿಪುವು ಒಮ್ಮೆ, ತನ್ನ ಮಗನನ್ನು

ಕುರಿತು, ಎಲೈ ಕುಲವೈರಿಯಾದ ನೀಚನೇ, ನಿನ್ನ ಆ ಹರಿಯು ಎಲ್ಲಿರುವನು ? ತೋರಿಸು, ಇಲ್ಲವಾದರೆ ನಿನ್ನ ತಲೆಯನ್ನು ಕತ್ತರಿಸುವೆನೆಂದು ಹೆದರಿಸಿದನು. ಭೀತನಾದ ಪ್ರಹ್ಲಾದನು ಭಕ್ತಿಯಿಂದ ಹರಿಯನ್ನು ಪ್ರಾರ್ಥಿಸಲು, ಕೂಡಲೇ ಹರಿಯು, ಅರ್ಧ ಮನುಷ್ಯ, ಅರ್ಧಸಿಂಹದ ಆಕಾರ ಧರಿಸಿ, ಸಮೀಪದಲ್ಲಿದ್ದ ಕಂಭದಿಂದಲೇ ಹೊರಬಂದನು. ಆಗ ಹಿರಣ್ಯಕಶಿಪುವು ಕೆರಳಿದ ಕೇಸರಿಯಂತೆ ನೃಸಿಂಹನ ಮೇಲೆರಗಿದನು. ಈರ್ವರಿಗೂ, ಘನ ಘೋರ ಯುದ್ಧ ನಡೆದು ಕೊನೆಗೆ, ನೃಸಿಂಹನು ದೈತ್ಯನನ್ನು ತನ್ನ ಬಾಹುಗಳಿಂದ ಹಿಡಿದು ತನ್ನ ತೊಡೆಯ ಮೇಲಿರಿಸಿಕೊಂಡು, ಉಗುರುಗಳಿಂದ ಅವನ ವಕ್ಷಸ್ಥಳವನ್ನು ಸೀಳಿ ರಕ್ತಪಾನ ಮಾಡಿ, ಕರುಳನ್ನು ಹಾರವನ್ನಾಗಿ ಧರಿಸಿ, ಗರ್ವದಿಂದ ಲೋಕಗಳನ್ನೆಲ್ಲಾ ಸಂಹಾರ ಮಾಡಲು ಉಪಕ್ರಮಿಸಿದನು.

ಹಿರಣ್ಯಕಶಿಪುಂ ಹತ್ವಾ ಕರಜೈರ್ನಿಶಿತೈಃ ಸ್ವಯಂ ।
ದೈತ್ಯೇಂದ್ರೈ ರ್ಬಹುಭಿಃ ಸಾರ್ಧಂ ಹಿತಾರ್ಥಂ ಜಗತಾಂ ಪ್ರಭುಃ॥
(95-53)

ಸೈಂಹೀಂ ಸಮಾತ್ಮನಯನ್ನೋಽನಿಂ ಬಾಧತೇ ನಿಖಿಲಂ ಜಗತ್ ।
ಯತ್ಕೃತ್ಯಮತ್ರ ದೇವೇಶ ತತ್ಕುರುಷ್ವ ಭವಾನಿಹ ॥ (95-54)

ಹೀಗೆ ಲೋಕಕಂಟಕನಾದ ನೃಸಿಂಹನ ಹಿಂಸೆಯನ್ನು ತಾಳಲಾರದೆ ದೇವತೆಗಳೆಲ್ಲಾ ಪರಮೇಶ್ವರನನ್ನು ಮರೆಹೊಕ್ಕು,

ದೇವ ದೇವ ಮಹಾದೇವ ಶರಣಾಗತವತ್ಸಲ ।
ಪಾಹಿ ನಃ ಶರಣಾಪನ್ನಾನ್ಸರ್ವಾನ್ದೇವಾಞ್ಜಗಂತಿ ಚ ॥
(ಶಿ.ಪು. ಭಾ. 7, 10-32)

ನಮಸ್ತೇಽಸ್ತು ನಮಸ್ತೇಽಸ್ತು ನಮಸ್ತೇಽಸ್ತು ಸದಾಶಿವ ।
ಪೂರ್ವಂ ದುಃಖಂ ಯದಾ ಜಾತಂ ತದಾ ತೇ ರಕ್ಷಿತಾ ವಯಂ ॥
(ಶಿ.ಪು.ಭಾ. 7-10-33)

ಸಮುದ್ರೇ ಮಥಿತಶ್ಚೈವ ರತ್ನಾನಾಂ ಚ ವಿಭಾಗಶಃ ।
ಕೃತೇ ದೈವೈಸ್ತದಾ ಶಂಭೋ ಗೃಹೀತಂ ಗರಲಂ ತ್ವಯಾ ॥
(7-10-34)

ಎಲೈ ಶಂಕರನೇ! ನೀನೇ ಜಗತ್ತನ್ನು ಸೃಷ್ಟಿಸಿ, ಸಂಹರಿಸುವವನು. ನೀನು ತ್ರಿಗುಣಾತೀತನು. ಭಕ್ತವತ್ಸಲನು. ತ್ರಿಮೂರ್ತಿಗಳಿಗೂ ಕರ್ತನು. ಹಿಂದೆ ಇದೇ ರೀತಿಯ ಕಂಟಕಗಳು ಲೋಕಕ್ಕೆ ಪ್ರಾಪ್ತವಾದಾಗಲೆಲ್ಲಾ ಲೋಕವನ್ನು ರಕ್ಷಿಸಿದವನು ನೀನೊಬ್ಬನೇ. ಸಮುದ್ರಮಥನ ಕಾಲದಲ್ಲಿ ಹುಟ್ಟಿದ ಹಾಲಾಹಲವನ್ನು ನುಂಗಿ ನೀಲಕಂಠನಾಗಿ ಲೋಕವನ್ನು ಸಲಹಿದೆ. ಹರಿಯು, ಹಿಂದೆ ಮತ್ಸ್ಯಾವತಾರ, ಕೂರ್ಮಾವತಾರ, ವರಾಹಾವತಾರ ಕಾಲಗಳಲ್ಲಿಯೂ ಹೀಗೆಯೇ ಗರ್ವಿಸಿ ಲೋಕಗಳನ್ನು ಹಿಂಸಿಸುತ್ತಿರಲು, ನೀನು ಅವನನ್ನು ನಿಗ್ರಹಿಸಿ, ಲೋಕವನ್ನು ಉದ್ಧರಿಸಿದೆ. ಈಗ ನೃಸಿಂಹನು ಶಾಂತನಾಗದೆ ಲೋಕವನ್ನು ಹಿಂಸಿಸುತ್ತಿರುವನು. ನಮಗೆ ನೀನಲ್ಲದೆ ರಕ್ಷಕರಾರು ?

ಇದಾನೀಂ ನೃಹರಿಜ್ವಾಲಾಪೀಡಿತಾನ್ನಸ್ಸದಾಶಿವ ।
ಶಾಂ ತ್ವಂ ಶಮಯಿತುಂ ದೇವ ಶಕ್ತೋಽಸೀತಿ ಸುನಿಶ್ಚಿತಂ ॥

(ಶಿ.ಪು. ಭಾಗ 7, 10-37)

ಇದಕ್ಕೆ ನೀನೊಬ್ಬನೇ ಸಮರ್ಥನು. ಆದುದರಿಂದ ಹೇ ಚಂದ್ರಶೇಖರನೇ! ಗಿರಿಜಾರಮಣನೇ, ಭಕ್ತವತ್ಸಲನೇ, ತ್ರಿಶೂಲಿಯೇ, ಪಿನಾಕಧರನೇ ನಾಶರಹಿತನೇ, ನೃಸಿಂಹನನ್ನು ಸಂಹರಿಸಿ, ಲೋಕವನ್ನು ರಕ್ಷಿಸಿ ಕಾಪಾಡೆಂದು ಅನಂತ ಭಕ್ತಿಯಿಂದ ಪ್ರಾರ್ಥಿಸಿದರು. ಭಕ್ತವತ್ಸಲನಾದ ಶಂಕರನು ಕೂಡಲೇ ದರ್ಶನ ನೀಡಿ, ಹರಿ–ಬ್ರಹ್ಮಾದಿ ದೇವತೆಗಳು ಬಗೆಬಗೆಯಿಂದ ಸ್ತೋತ್ರಮಾಡುತ್ತಿರಲು,

ಶಿವಕೃಪೆ–ವೀರೇಶನ ದರ್ಶನ :

ಮಂದಸ್ಮಿತ ವದನಾರವಿಂದದಿಂದ ಶಂಕರನು, ಭೀತಿಯಿಂದ ಶರಣಾಗತರಾಗಿ ಸ್ತೋತ್ರಮಾಡುತ್ತಿದ್ದ ದೇವತೆಗಳನ್ನು ಕುರಿತು,

ಸ್ವಸ್ಥಾನಂ ಗಚ್ಛತ ಸುರಾಸ್ಸರ್ವೇ ಬ್ರಹ್ಮಾದಯೋಽಭಯಾಃ ।
ಶಮಯಿಷ್ಯಾಮಿ ಯದ್ದುಃಖಂ ಸರ್ವಥಾ ಹಿ ವ್ರತಂ ಮಮ ॥

(ಶಿ.ಪು. ಭಾಗ 7, 10-39)

ಎಲೈ ದೇವತೆಗಳಿರಾ! ನಿರ್ಭಯರಾಗಿ ನಿಮ್ಮ ನಿಮ್ಮ ಸ್ಥಳಗಳಿಗೆ ಹಿಂದಿರುಗಿರಿ. ನಾನು ಕೂಡಲೇ ನಿಮ್ಮ ದುಃಖವನ್ನು ಪರಿಹರಿಸುವೆನು. ಇದೇ ನನ್ನ

ವ್ರತವು ಎಂದು ಸಂತೈಸಿ, ಮನದಲ್ಲಿ ವೀರೇಶನನ್ನು ನೆನೆದನು. ಮರುಕ್ಷಣದಲ್ಲಿಯೇ,

ಯತ್ತೇಜಸ್ತು ನೃಸಿಂಹಾಖ್ಯಂ ಸಂಹರ್ತುಂ ಪರಮೇಶ್ವರಃ ।
ತದಥ ಸ್ಮೃತವಾನ್ ರುದ್ರೋ ವೀರಭದ್ರಂ ಮಹಾಬಲಂ ॥

(ಲಿಂ.ಪು. ಭಾಗ 4, 96-2)

ನೃಸಿಂಹನ ಸಂಹಾರಾರ್ಥವಾಗಿ, ಪ್ರಳಯಾಗ್ನಿಯಂತೆ ಪ್ರಜ್ವಲಿಸುವ, ದೇದೀಪ್ಯಮಾನವಾದ ಮೂರು ಕಣ್ಣುಗಳುಳ್ಳ, ತ್ರಿಶೂಲಧಾರಿಯೂ, ದಿವ್ಯಾಸ್ತ್ರಧರನೂ, ಅಜೇಯನೂ, ದಕ್ಷಾರಿಯೂ, ವೀರಮಣಿಯೂ, ಆದ ವೀರೇಶನು ಪ್ರಕಟವಾದನು. ನಂತರ ವಿನಯದಿಂದ ಶಂಕರನ ಚರಣಾರವಿಂದಗಳಿಗೆ ಮಣಿದು, ಎಲೈ ಪಿತನೇ! ಭೂಮಂಡಲವನ್ನು ನುಂಗಲೇ! ಸಮುದ್ರವನ್ನು ಈಂಟಲೇ. ಆಕಾಶವನ್ನು ಸುತ್ತಿ ನಿನ್ನ ಪಾದದಡಿಯಲ್ಲಿ ಅರ್ಪಿಸಲೇ, ಪರ್ವತಪಂಗ್ತಿಯನ್ನು ಧೂಳೀಪಟಮಾಡಲೇ. ಹರಿ-ಬ್ರಹ್ಮ-ಇಂದ್ರಾದಿಗಳನ್ನು ಸೆರೆಹಿಡಿದು ತಂದು ನಿನ್ನ ಪಾದಾರವಿಂದಗಳ ಬಳಿ ನಿಲ್ಲಿಸಲೇ, ಯಾವ ಪಾಪಿಯಿಂದ ಮತ್ತೆ ಲೋಕಕ್ಕೆ ವಿಪತ್ತು ಸಂಭವಿಸಿದೆ? ನಿನ್ನ ಶಾಂತಿಗೆ ಭಂಗ ಬರಲು ಕಾರಣರಾರು ? ಹೇ ಶಂಕರನೇ! ನನ್ನ ಕರ್ತವ್ಯವೇನೆಂದು ಅಪ್ಪಣೆ ಮಾಡು ಎಂದು ಪ್ರಾರ್ಥಿಸಿದನು.

ಶಿವನಾಣತಿ :

ಹೀಗೆ ವೀರಾವೇಶದಿಂದ ಆವಿರ್ಭವಿಸಿದ ವೀರಭದ್ರನನ್ನು ಕಂಡು ಶಂಕರನು ನಸುನಗುತ್ತಾ ಇಂತೆಂದನು. ಎಲೈ ಕುಮಾರಾ! ಹಿರಣ್ಯಕಶಿಪುವಿನ ರಕ್ತಪಾನದಿಂದ ತನ್ನ ರಾಜಸಗುಣಪ್ರಧಾನತೆಯಿಂದ ಹರಿಯು ಶಾಂತನಾಗದೆ, ಭಯಂಕರ ರೂಪದಿಂದ ಪ್ರಪಂಚವನ್ನೆಲ್ಲಾ ಹಿಂಸಿಸುತ್ತಿರುವನು. ನೀನು ಅವನನ್ನು ಕಂಡು ಹಿತೋಪದೇಶದಿಂದ ಅವನನ್ನಾವರಿಸಿರುವ ನನ್ನ ಮಾಯೆಯಿಂದ ಮುಕ್ತನನ್ನಾಗಿ ಮಾಡು. ಅದರಿಂದಲೂ ಅವನು ಶಾಂತನಾಗದೆ, ನಿನ್ನನ್ನು ನಿರ್ಲಕ್ಷಿಸಿದರೆ, ಆಗ ಶರಭರೂಪವನ್ನು ಧರಿಸಿ, ಸೂಕ್ಷ್ಮಭಾಗವನ್ನು ಸೂಕ್ಷ್ಮತೇಜಸ್ಸಿನಿಂದಲೂ, ಸ್ಥೂಲಭಾಗವನ್ನು ಸ್ಥೂಲತೇಜಸ್ಸಿನಿಂದಲೂ ಸಂಹರಿಸಿ, ಅವನ ಮುಖ ಹಾಗೂ ಮೈದೊಗಲನ್ನು ತೆಗೆದುಕೊಂಡು ಬಾಯೆಂದು ಹೇಳಿ ಹರಸಿದನು.

ಸಾಸ್ತ್ವಯುನ್ಯೋಽಥಯೋಽದೇಶಂ ತೇನ ಕಿನ್ಯೋಽಪಶಾಮ್ಯತಿ ।
ತತೋ ಮತ್ಸರವುಂ ಭಾವಂ ಭೈರವಂ ಸಂಪ್ರದರ್ಶಯ ॥

(ಲಿಂ.ಪು. 96–13)

ಸೂಕ್ಷ್ಮಂ ಸಂಹೃತ್ಯ ಸೂಕ್ಷ್ಮೇಣ ಸ್ಥೂಲಂ ಸ್ಥೂಲೇನ ತೇಜಸಾ ।
ವಕ್ತ್ರಮಾನಯ ಕೃತ್ತಿಂ ಚ ವೀರಭದ್ರ ಮಮಾಜ್ಞಯಾ ॥

(96.14)

ಇತಿ ನಿಷ್ಟೋ ಗಣಾಧ್ಯಕ್ಷಃ ಪ್ರಶಾಂತಂ ವಪುರಾಸ್ಥಿತಃ ।
ಜಗಾಮ ರಂಹಸಾ ತತ್ರ ಯತ್ರಾಸ್ತೇ ನರಕೇಸರೀ ॥ (96-15)

ನಂತರ ವೀರೇಶನು ನೃಸಿಂಹನ ಬಳಿಗೆ ಹೋಗಿ ಇಂತೆಂದನು.

ತ್ವಮೇವ ಸರ್ವಭೂತಾನಾಂ ಪ್ರಭವಃ ಪ್ರಭುರವ್ಯಯಃ ।
ಯದಾ ಯದಾ ಹಿ ಲೋಕಸ್ಯ ದುಃಖಂ ಕಿಂಚಿತ್ಪ್ರಜಾಯತೇ ॥

(ಲಿಂ.ಪು. 96-20)

ತದಾ ತದಾವತೀರ್ಣಸ್ತ್ವಂ ಕರಿಷ್ಯಸಿ ನಿರಾಮಯಂ ।
ನಾಧಿಕಸ್ತ್ವತ್ಸಮೋಽಪ್ಯಸ್ತಿ ಹರೇ ಶಿವಪರಾಯಣಃ ॥ (96–20)

ತ್ವಯಾ ಧರ್ಮಾಶ್ಚ ವೇದಾಶ್ಚ ಶುಭಮಾರ್ಗೇ ಪ್ರತಿಷ್ಠಿತಾಃ ।
ಯದರ್ಥಮವತಾರೋಽಯಂ ನಿಹತಸ್ಸ ಹಿ ದಾನವಃ ॥

ಹಿರಣ್ಯಕಶಿಪುಶ್ಚೈವ ಪ್ರಹ್ಲಾದೋಽಪಿ ಸುರಕ್ಷಿತಃ ॥ (96-23)

ಎಲೈ ! ಪೂಜ್ಯನಾದ ಹರಿಯೆ ! ನೀನು ಲೋಕದ ಕ್ಷೇಮಕ್ಕಾಗಿ ಭೂಮಿಯಲ್ಲಿ ಅವತರಿಸಿದ್ದೀಯೆ. ಪರಬ್ರಹ್ಮಶಿವನ ಇಚ್ಛೆಯಂತೆ ಜಗತ್ತನ್ನು ಕಾಪಾಡುತ್ತಿರುವೆ. ನೀನೇ ಎಲ್ಲಾ ಪ್ರಾಣಿಗಳಿಗೂ ಸಂರಕ್ಷಕನಾಗಿರುವೆ, ನಾಶರಹಿತನಾಗಿರುವೆ. ಯಾವಾಗ ಲೋಕಕ್ಕೆ ಕೊಂಚ ಸಂಕಟ ಸಂಭವಿಸಿದರೂ, ಆಗಾಗ ನೀನು ಕೂಡಲೇ ಅವತರಿಸಿ ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ಕಾರ್ಯವನ್ನು ಮಾಡಿ, ಜಗತ್ತನ್ನು ರಕ್ಷಿಸುವೆ. ಓ ಶಿವಭಕ್ತಾಗ್ರಗಣ್ಯನಾದ ಮಾಧವನೆ ! ನೀನು ಅನುಪಮ ಪರಾಕ್ರಮ ಶಾಲಿಯು. ನೀನು ಅಜೇಯನು. ನೀನೇ ವೇದಗಳನ್ನೂ, ಧರ್ಮವನ್ನೂ ಮಂಗಳ ಕರವಾದ ರೀತಿಯಲ್ಲಿ ಕಾಪಾಡುತ್ತಿರುವೆ. ನೀನು ಮತ್ಸ್ಯಾವತಾರದಲ್ಲಿ ಸಂಕಟಕ್ಕೀಡಾದ ಸಕಲ ಚರಾಚರ

ಗಳನ್ನೂ ಸಂರಕ್ಷಿಸಿದೆ. ಸಮುದ್ರ ಮಥನಕಾಲದಲ್ಲಿ, ಕೂರ್ಮಾವತಾರ ಧರಿಸಿ, ನಿನ್ನ ಬೆನ್ನಿನಿಂದ ಮಂದರ ಪರ್ವತವನ್ನು ಎತ್ತಿ ಮಥನ ಕಾರ್ಯಕ್ಕೆ ನೆರವಾದೆ. ವರಾಹಾವತಾರ ಧರಿಸಿ, ಪಾತಾಳದಲ್ಲಿದ್ದ ಭೂಮಿಯನ್ನು ಹಿರಣ್ಯಾಕ್ಷನಿಂದ ಕಿತ್ತು ತಂದು ಮತ್ತೆ ಸ್ವಸ್ಥಾನದಲ್ಲಿ ಸ್ಥಾಪಿಸಿದೆ. ಈಗ ನಿನ್ನ ಉಗ್ರ ನೃಸಿಂಹರೂಪದಿಂದ ಹಿರಣ್ಯಕಶಿಪುವನ್ನು ಕೊಂದು ಜಗತ್ತನ್ನು ರಕ್ಷಿಸಿರುವೆ. ಓ ನಾರಾಯಣನೆ! ನೀನು ಏತಕ್ಕಾಗಿ ಈ ಅವತಾರವನ್ನು ಎತ್ತಿದೆಯೋ ಆ ಕಾರ್ಯ ನೆರವೇರಿತು. ನಿನ್ನ ಈ ಉಗ್ರರೂಪವನ್ನು ಶಾಂತಗೊಳಿಸಿ ವೈಕುಂಠಕ್ಕೆ ತೆರಳುವುದಕ್ಕೆ ಬದಲು, ಮತ್ತೆ ಜಗತ್ತನ್ನು ಹಿಂಸಿಸಿ ನಾಶಪಡಿಸುತ್ತಿರುವೆ. ಇದು ನ್ಯಾಯಸಮ್ಮತವೇ? ಹೆತ್ತ ತಾಯಿಯೇ ತನ್ನ ಮಕ್ಕಳನ್ನು ಕೊಂದರೆ ಇನ್ನು ಅವರಿಗೆ ರಕ್ಷಣೆ ನೀಡುವವರಾರು? ಲೋಕರಕ್ಷಕನಾದ ನೀನು ಅವರನ್ನು ಸಂಹರಿಸಲುಪಕ್ರಮಿಸಿ ಲೋಕಭಕ್ಷಕನಾದರೆ ಅವರನ್ನು ರಕ್ಷಿಸುವವರಾರು? ಆದುದರಿಂದ ಪೂಜ್ಯ ಹರಿಯೇ ನನ್ನ ಸಮಕ್ಷಮದಲ್ಲಿ ನಿನ್ನ ಈ ಭಯಂಕರ ರೂಪವನ್ನು ಶಾಂತಗೊಳಿಸಿ, ಜಗತ್ತಿಗೆ ನಿನ್ನಿಂದ ಆಗುತ್ತಿರುವ ಹಿಂಸೆಯನ್ನು ನಿಲ್ಲಿಸು ಎಂದು ವಿನಯದಿಂದ ಅರುಹಿದನು

ನೃಸಿಂಹ-ವೀರೇಶರ ಸಂವಾದ :

ನೃಸಿಂಹನು ವೀರಭದ್ರನನ್ನು ಕುರಿತು ಎಲೈ ವೀರಭದ್ರನೇ! ನನಗೆ ಹಿತೋಪದೇಶ ಮಾಡಲು ನೀನಾರು? ಈ ಜಗತ್ತು ನನ್ನ ಅಧೀನವಾಗಿದೆ. ಸೃಷ್ಟಿ ಸ್ಥಿತಿ ಲಯಗಳಿಗೆಲ್ಲಾ ನಾನೇ ಕಾರಣ ಕರ್ತನು. ಬ್ರಹ್ಮರುದ್ರಾದಿಗಳೆಲ್ಲಾ ನನ್ನ ಅಧೀನರು. ನನಗಿಂತ ಅಧಿಕರು ಯಾರೂ ಇರುವುದಿಲ್ಲ. ನನ್ನ ಅನುಗ್ರಹದಿಂದಲೇ ಈ ಜಗತ್ತು ಎಲ್ಲೆ ಮೀರದೆ ಸಾಗುತ್ತಿದೆ. ನಾನೆ ಕಾಲಸ್ವರೂಪನು. ಕಾಲವನ್ನು ನಾಶಮಾಡಲು ಕಾರಣನಾಗಿಯೂ ಇರುವುದರಿಂದ ಲೋಕವನ್ನೆಲ್ಲಾ ನಾಶಮಾಡಲು ಹೊರಟಿರುವೆನು. ಸಾವಿನ ಅಧಿದೇವತೆಯಾದ ಯಮನಿಗೂ ನಾನು ಮೃತ್ಯುಸ್ವರೂಪನು. ಬ್ರಹ್ಮ – ರುದ್ರಾದಿ ದೇವತೆಗಳೆಲ್ಲಾ ನನ್ನ ಅನುಗ್ರಹದಿಂದಲೇ ಬದುಕಿರುತ್ತಾರೆ. ನನ್ನ ಶಕ್ತಿಯ ವಿಷಯದಲ್ಲಿ ಶಂಕೆಯನ್ನು ಬಿಡು. ಎಲೈ ವೀರಭದ್ರನೇ! ನೀನು ಈ ಕ್ಷಣವೇ ನನಗೆ ಶರಣಾಗಿ ಹಿಂದಿರುಗು. ಇಲ್ಲವಾದರೆ ನಿನ್ನನ್ನು ಸಂಹರಿಸುವೆನು, ಎಂದು ಗರ್ಜಿಸಿದನು.

ಸೃಷ್ಟಿವಿಚಾರ :

ಹೀಗೆ ನೃಸಿಂಹನಾಡಿದ ಗರ್ವೋಕ್ತಿಯನ್ನು ಕೇಳಿದ ವೀರಭದ್ರನು ಪ್ರಳಯಾಂತಕನಂತೆ ಕೆರಳಿ ನೃಸಿಂಹನನ್ನು ಕುರಿತು ಎಲೈ ನೃಸಿಂಹನೆ! ರಾಕ್ಷಸನ ರಕ್ತಪಾನದಿಂದ ಮದಿಸಿ ಮತಿಗೆಟ್ಟು ಹೀಗೆಲ್ಲಾ ಮಾತನಾಡುತ್ತಿರುವೆ. ಸೃಷ್ಟಿ–ಸ್ಥಿತಿ–ಲಯಕರ್ತನೂ, ಪಿನಾಕಧರನೂ, ತ್ರಿಮೂರ್ತಿಗಳಿಗೆ ಕರ್ತನೂ, ನಾಶರಹಿತನೂ ಆದ ಸದಾಶಿವನನ್ನು ಮರೆತಿರುವೆ. ಸಕಲ ಚರಾಚರವೂ ಅವನ ಇಚ್ಛೆಯಿಂದಲೇ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿದೆ. ತ್ರಿಮೂರ್ತಿಗಳಾದಿಯಾಗಿ ಋಷಿಶ್ರೇಷ್ಠರೂ, ಸಿದ್ಧರೂ, ಶಿವನ ಸಂಕೇತವಾದ ಲಿಂಗವನ್ನು ತಮ್ಮ ತಮ್ಮ ಉತ್ತಮಾಂಗಗಳಲ್ಲಿ ಧರಿಸಿ, ಆರಾಧಿಸಿ ಅವನ ಕೃಪೆಯಿಂದಲೇ ತಮತಮಗೆ ಬೇಕಾದ ಪದವಿಗಳನ್ನು ಪಡೆದಿರುವರು. ಇಂಥಹ ಸರ್ವೇಶ್ವರನಾದ ಶಂಕರನನ್ನು ನೀನು ಹೇಗೆ ಮರೆತೆ?

ವಿಷ್ಣುಬ್ರಹ್ಮಾದಯೋ ದೇವಾ ಮುನಯೋ ಗೌತಮಾದಯಃ ।
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ ॥

(ಪದ್ಮಪುರಾಣ–ಶಿವಗೀತೆ)

ಪ್ರಕೃತಿಸ್ತ್ವಂ ಪುಮಾನ್ರುದ್ರಸ್ತ್ವಯಿ ವೀರ್ಯಂ ಸಮಾಹಿತಂ ।
ತ್ವನ್ನಾಭಿಪಂಕಜಾಜ್ಜಾತಃ ಪಂಚವಕ್ತ್ರಃ ಪಿತಾಮಹಃ॥ (ಶಿ.ಪು. 11–40)

ಅಲ್ಲದೆ, ಸೂರ್ಯಚಂದ್ರಾದಿಗ್ರಹಗಳೂ, ದೇವಗಂಧರ್ವರೂ, ಕಿಂಪುರುಷರೂ, ಅಷ್ಟದಿಕ್ಪಾಲಕರೂ, ಪರಮೇಶ್ವರನ ಆಜ್ಞಾಧಾರಕರಾಗಿ ತಮ್ಮ ತಮ್ಮ ಕರ್ತವ್ಯಗಳನ್ನು ಧರ್ಮಸಮ್ಮತವಾಗಿ ನಿರ್ವಹಿಸುತ್ತಿರುವರು. ನೀನೇ ಪ್ರಕೃತಿಯು, ಶಂಕರನೇ ಪುರುಷನು. ಅವನು ನಿನ್ನಲ್ಲಿ ತನ್ನ ತೇಜಸ್ಸನ್ನು ಸ್ಥಾಪಿಸಿದನು. ಆಗ ನಿನ್ನ ನಾಭಿಕಮಲದಿಂದ ಐದು ಮುಖಗಳುಳ್ಳ ಬ್ರಹ್ಮನು ಹುಟ್ಟಿದನು. ಬ್ರಹ್ಮನು ಸೃಷ್ಟಿಕಾರ್ಯದಲ್ಲಿ ವಿಫಲತೆ ಹೊಂದಿ ಶಿವನನ್ನು ಕುರಿತು ತಪಸ್ಸನ್ನಾಚರಿಸಿದನು. ಅವನಿಗೆ ಪ್ರಸನ್ನನಾದ ಶಂಕರನು ಅವನ ಪ್ರಾರ್ಥನೆಯಂತೆ ಅವನ ಲಲಾಟದಿಂದಲೇ ಪ್ರಕಟನಾಗಿ ಸೃಷ್ಟಿಕ್ರಮವನ್ನು ಅವನಿಗೆ ಬೋಧಿಸಿದನು. ದೇವದೇವನೂ, ಉಗ್ರರೂಪನೂ, ಆದ ಆ ರುದ್ರಶಿವನ ಫಾಲನೇತ್ರದಿಂದ ನಾನು ಹುಟ್ಟಿದೆನು. ಈ ಶಂಕರನು ಸತ್ತ್ವ–ರಜ–ಸ್ತಮಸ್ಸೆಂಬ ಮೂರು ಗುಣಗಳಿಗೂ ಅಧಿಪತಿಯು. ಇವನೇ ಈ ತ್ರಿಮೂರ್ತಿ

ಗಳಿಗೂ, ಪ್ರಕೃತಿಪುರುಷರಿಗೂ ಕಾರಣನಾಗಿ ಈಶ್ವರನೆನಿಸಿಕೊಂಡು, ತನ್ನ ಸಂಕಲ್ಪದಿಂದ ಸೃಷ್ಟಿಕಾರ್ಯಗಳನ್ನು ನಡೆಯಿಸುವನು.

ಸೋಽಯಮಾತ್ಮಾ ತ್ರಯಸ್ಯಾಸ್ಯ ಪ್ರಕೃತೇಃ ಪುರುಷಸ್ಯ ಚ ।
ಲೀಲಾಕೃತಜಗತ್ಸೃಷ್ಟಿರೀಶ್ವರತ್ವೇ ವ್ಯವಸ್ಥಿತಃ ॥

(ಶಿ.ಪು.ಭಾ. 11, 10-10)

ತ್ರಿಧಾ ವಿಭಜ್ಯ ಚಾತ್ಮಾನಂ ತ್ರೈಲೋಕ್ಯೇ ಸಂಪ್ರವರ್ತತೇ ।
ಸೃಜತೇ ಗ್ರಸತೇ ಚೈವ ವೀಕ್ಷತೇ ಚ ತ್ರಿಭಿಃ ಸ್ವಯಂ ॥ (10-25)

ಈ ಈಶ್ವರನೇ ತನ್ನನ್ನು ಮೂರು ಭಾಗ ಮಾಡಿಕೊಂಡು ಮೂರು ಲೋಕಗಳ ಸೃಷ್ಟಿ-ಸ್ಥಿತಿ-ಲಯ ಎಂಬ ಮೂರು ಕಾರ್ಯಗಳನ್ನೂ ತನ್ನ ಮೂರು ಗುಣಗಳಿಂದ ತಾನೇ ಮಾಡುವನು. ಇವನು ಅವ್ಯಕ್ತಸ್ವರೂಪನು. ಇವನಿಗೆ ಆದಿಮಧ್ಯಾಂತಗಳಿಲ್ಲ.ಇವನ ಶಕ್ತಿಸಾಮರ್ಥ್ಯಗಳಿಗೆ ಕೊನೆಯೆಂಬುದಿಲ್ಲ.

ಆ ಶಿವನ ತಿಲಾಂಶದಷ್ಟು ಶಕ್ತಿಹೊಂದಿದ್ದ ಒಬ್ಬ ರಾಕ್ಷಸ ಹಿರಣ್ಯಕಶಿಪುವನ್ನು ಕೊಂದೆನೆಂಬ ಅಹಂಕಾರದಿಂದ, ನಿನ್ನ ಸ್ಥಿತಿಯನ್ನೂ, ನಿನ್ನ ಅಲ್ಪಶಕ್ತಿಸಾಮರ್ಥ್ಯಗಳನ್ನೂ, ಅರಿಯದೆ, ಮೆರೆಯುತ್ತಾ, ಲೋಕಕಂಟಕನಾಗಿರುವೆ. ನೀನು ಸೃಷ್ಟಿಸುವವನೂ ಅಲ್ಲ ಸ್ಥಿತಿಕರ್ತನೂ ಅಲ್ಲ. ಬುದ್ಧಿಭ್ರಮಣೆಯಿಂದ ಏನೇನೋ ಮಾತನಾಡುತ್ತಿರುವೆ. ನೀನು ನಿಜಕ್ಕೂ ಪರಾಧೀನನು. ನಿನಗೆ ಯಾವ ಸ್ವಾತಂತ್ರ್ಯವೂ ಇಲ್ಲ. ಮೈಮರೆತಿರುವುದರಿಂದ, ನಿನ್ನ ಪೂರ್ವಾಪರ ವಿವೇಚನಾಶಕ್ತಿಯು ಕುಂದಿದೆ. ನಿನ್ನ ಪೂರ್ವ ವೃತ್ತಾಂತವನ್ನು ಜ್ಞಾಪಿಸಿದರೇನಾದರೂ ನಿನಗೆ ಜ್ಞಾನೋದಯವಾಗಬಹುದು. ಆದುದರಿಂದ ಕೇಳು—

1. ಹರಿಗೆ ಭೃಗುಋಷಿಯ ಶಾಪ:

ಎಲೈ ಹರಿಯೇ ನೀನು, ಹಿಂದೆ ಭೃಗುಋಷಿಗಳ ಶಾಪದಿಂದ, ಅನೇಕ ಜನ್ಮಗಳಲ್ಲಿ, ಪತ್ನೀವಿರಹದಿಂದ ಪರಿತಪಿಸಬೇಕಾಗಿದ್ದಿತು. ಆಗ ನೀನು ಶಂಕರನನ್ನು ಮರೆಹೊಕ್ಕೆ. ಆಗ ದಯಾಮಯನಾದ ಶಂಕರನು ಭೃಗುವಿಗೆ ಆಜ್ಞೆ ಮಾಡಿ, ನೀನು ಕೇವಲ ಹತ್ತು ಜನ್ಮಗಳನ್ನು ಮಾತ್ರ ಎತ್ತುವಂತೆಯೂ ಕೇವಲ ಒಂದು ಜನ್ಮದಲ್ಲಿ ಮಾತ್ರ ಪತ್ನೀವಿಯೋಗವನ್ನು ಅನುಭವಿಸುವಂತೆಯೂ ವಿಶಾಪವನ್ನು ಕರುಣಿಸಿದನು.

(ಕಾಳಿಕಾಖಂಡ-ಸ್ಕಾಂದ-ಪದ್ಮಪುರಾಣ)

2. ಮತ್ಸ್ಯಮರ್ದನ :

ಏಕಸ್ತು ಮತ್ಸ್ಯತನುಮೇತ್ಯ ಗತೋಽಬ್ಧಿ ತೋಯಂ–।
ಮನ್ಯಸ್ತು ತಸ್ಯ ಹನನಂ ಕೃತವಾ‌ನ್ ಜಗತ್ಯಾಂ॥
ಕೋ ವಾನಯೋಃ . . . . . . ॥ (ಶಿವಾಧಿಕ್ಯ)

ಹಿಂದೆ, ನಿನ್ನ ಮತ್ಸ್ಯಾವತಾರ ಕಾಲದಲ್ಲಿ ಸೋಮಕಾಸುರನೆಂಬುವನು ವೇದಗಳನ್ನು ಕದ್ದು ಪಾತಾಳ ಲೋಕಕ್ಕೆ ಕೊಂಡೊಯ್ದು ಲೋಕಕ್ಕೆ ಹಿಂಸೆ ಮಾಡುತ್ತಿರಲು, ನೀನು ಮತ್ಸ್ಯಾವತಾರದಿಂದ ಪಾತಾಳಕ್ಕೆ ಹೋಗಿ, ಅನೇಕ ಕಾಲ, ಸೋಮಕಾಸುರನೊಡನೆ ಯುದ್ಧಮಾಡಿ, ಅವನನ್ನು ಸಂಹರಿಸಿ, ವೇದಗಳನ್ನು ತಂದು ಬ್ರಹ್ಮನಿಗೆ ಕೊಟ್ಟೆ. ಗರ್ವಿತನಾಗಿ ಸಮುದ್ರವನ್ನು ಪುನಃ ಪ್ರವೇಶಿಸಿ, ಸಕಲ ಜಲಚರಗಳನ್ನೆಲ್ಲಾ ಭಕ್ಷಿಸುತ್ತಿರಲು, ದೇವತೆಗಳ ಪ್ರಾರ್ಥನೆಯಂತೆ ಶಿವನು, ಶಾಸ್ತಾಕುಮಾರನನ್ನು (ಭೈರವ) ಕಳುಹಿಸಿದನು. ಭೈರವನು ನಿನ್ನನ್ನು ಮರ್ದಿಸಿ, ನಿನ್ನ ಮುಖಾಗ್ರದಲ್ಲಿದ್ದ, ಗುಲುಗಂಜಿಗೆ ಸಮಾನವಾದ ನೇತ್ರವನ್ನು ಕೀಳಲು, ನೀನು ಅತಿಯಾಗಿ ರೋದಿಸಿದೆ. ಆಗ ಶಿವನು, ಆ ನಿನ್ನ ನೇತ್ರವನ್ನು ತನ್ನ ರುಂಡಮಾಲೆಯಲ್ಲಿ ಧರಿಸಿ, ನಿನ್ನನ್ನು ಅನುಗ್ರಹಿಸಿ ಕಾಪಾಡಲಿಲ್ಲವೇ ? (ಅಥರ್ವ)

ಎಲೈ ಹರಿಯೇ ಈಗ ಹಿಂದಿನಂತೆಯೇ ನೀನು, ಮದೋನ್ಮತ್ತನಾಗಿ ಗರ್ವಿಸುತ್ತಿದ್ದೀಯೆ. ಕೆಟ್ಟವರಿಗೆ ಉಪಕಾರಮಾಡಿದರೆ ಅದು ಅಪಕಾರವಾಗಿಯೇ ಪರಿಣಮಿಸುವುದು. ಶಿವಶಕ್ತಿಯಿಂದಲೇ ನೀನು, ಕುಂಬಾರನ ಚಕ್ರವು ತಿರುಗುವಂತೆ, ತಿರುಗಿಸಲ್ಪಡುತ್ತಿರುವೆಯೆಂಬುದನ್ನು ಅಜ್ಞಾನದಿಂದ ಮರೆತಿರುವೆ.

ಅಹಂಕಾರಾವಲೇಪೇನ ಗರ್ಜಸಿ ತ್ವಮತಂದ್ರಿತಃ ।
ಉಪಕಾರೋ ಹ್ಯಸಾಧೂನಾಂ ಅಪಕಾರಾಯ ಕೇವಲಂ ॥

(ಲಿಂ. ಪು. ಭಾಗ 4, 96-44)

ಕುಲಾಲಚಕ್ರವಚ್ಛಕ್ತ್ಯಾ ಪ್ರೇರಿತೋಽಸಿ ಪಿನಾಕಿನಾ ।
ಅದ್ಯಾಪಿ ತವ ನಿಕ್ಷಿಪ್ತಂ ಕಪಾಲಂ ಕೂರ್ಮರೂಪಿಣಃ ॥ (96-46)
ಹರಹಾರಲತಾಮಧ್ಯೇ ಮುಗ್ಧ ಸಮ್ಯಙ್ನ ಬುಧ್ಯಸೇ ।
ವಿಸ್ಮೃತಂ ಕಿಂ ತದಂಶೇನ ದಂಷ್ಟ್ರೋತ್ಪಾಟನಮೀದೃಶಂ ॥ (96-47)

ವಾರಾಹ ವಿಗ್ರಹಸ್ತೇऽದ್ಯ ಸಾಕ್ರೋಶಂ ತಾರಕಾರಿಣಾ ।
ದಗ್ಧೋऽಸಿ ಯಸ್ಯ ಶೂಲಾಗ್ರೇ ವಿಷ್ವಕ್ಸೇನಚ್ಛಲಾದ್ಭವಾನ್ ॥
(96-48)

3. ಕೂರ್ಮಮರ್ದನ:

ಎಲೈ ಹರಿಯೇ! ಮತ್ತೆ ಕೂರ್ಮಾವತಾರದಲ್ಲಿ ಅಮೃತ ಪಾನದಿಂದ ಗರ್ವಿಸಿ, ಸಮುದ್ರವನ್ನೆಲ್ಲಾ ಅಲ್ಲೋಲಕಲ್ಲೋಲಮಾಡಿ ಲೋಕವನ್ನು ಪೀಡಿಸತೊಡಗಿದೆ. ಆಗ ಶಂಕರನು, ಸಿದ್ಧಿವಿನಾಯಕನನ್ನು ನಿನ್ನ ಬಳಿಗೆ ಕಳುಹಲು ಅವನು ನಿನ್ನನ್ನು ಮರ್ದಿಸಿ ನಿನ್ನ ಬೆನ್ನಿನ ಚಿಪ್ಪನ್ನು ಶಿವನಿಗೆ ಕೊಡಲು ಅದನ್ನು ರುಂಡಮಾಲೆಯಲ್ಲಿ ಧರಿಸಿ ನಿನ್ನನ್ನು ಅನುಗ್ರಹಿಸಿದನು.
(ಸ್ಕಾಂದ–ಶರಭೋಕ್ತಿ).

ಅದ್ಯಾಪಿ ತವ ನಿಕ್ಷಿಪ್ತಂ ಕಪಾಲಂ ಕೂರ್ಮರೂಪಿಣಃ ।
ಹರಹಾರಲತಾಮಧ್ಯೇ ದಗ್ಧಃ ಕಶ್ಚಿನ್ನ ಭಿದ್ಯತೇ ॥ (ಶಿ.ಪು. 11–40)

4. ವರಾಹಮರ್ದನ :

ನಂತರ ವರಾಹರೂಪದಲ್ಲಿ ಭೂಮಿಯನ್ನು ಮೇಲಕ್ಕೆತ್ತಿದ ಮೇಲೆ ಮಾಯಾಪರವಶನಾಗಿ ನಿನ್ನ ಕೋರೆದಾಡೆಗಳಿಂದ ಲೋಕವನ್ನು ಪೀಡಿಸ ತೊಡಗಿದೆ. ಆಗ ಶಂಕರನು ಸ್ಕಂದಕುಮಾರನನ್ನು ಕಳುಹಲು ಅವನು ನಿನ್ನನ್ನು ನಿಗ್ರಹಿಸಿ ನಿನ್ನ ಪ್ರಾರ್ಥನೆಯಂತೆ ನಿನ್ನ ಕೋರೆದಾಡೆಯನ್ನು ಶಿವನಿಗೆ ಅರ್ಪಿಸಲು ಅದನ್ನು ತನ್ನ ಶಿರದಲ್ಲಿ ಧರಿಸಿ ನಿನ್ನನ್ನು ಅನುಗ್ರಹಿಸ ಲಿಲ್ಲವೇ? (ಸ್ಕಾಂದ. ಲೈಂಗಪುರಾಣ).

ವಿಸ್ಮೃತಿಃ ಕಿಂ ತದಂಶೇನ ದಂಷ್ಟ್ರೋ ತ್ವಾಂ ತನ್ನು ಪೀಡಿತಂ ।
ವಾರಾಹವಿಘ್ನ್ತಹಸ್ತೇऽದ್ಯಯಾಕ್ರೋಶಂ ತಾರಕಾರಿಣಾ ॥
(ಶಿ.ಪು. 11–50)

5. ಹರಿಗೆ ಕಣ್ವರ ಶಾಪ :

ಮತ್ತೊಮ್ಮೆ ನೀನು ಉಪೇಂದ್ರನೊಡನೆ ಏಕಾಂತದಲ್ಲಿ ಮಾತನಾಡು ತ್ತಿರಲು ನಿನ್ನನ್ನು ನೋಡಲು ಕಣ್ವಋಷಿಗಳು ಬಂದರು. ಅವರು ಶಿವಭಕ್ತ ರೆಂದು ಉಪೇಕ್ಷಿಸಿದೆ. ಅಗೌರವದಿಂದಾಗಿ ಕುಪಿತರಾದ ಕಣ್ವರು ಎಲೈ

ಹರಿಯೆ! ಅನೇಕ ಜನ್ಮಗಳನ್ನೆತ್ತಿ ಮೂಕನಾಗಿರೆಂದು ಶಪಿಸಲು ಭೀತನಾದ ನೀನು ಶಂಕರನನ್ನು ಮರೆಹೊಕ್ಕೆ. ದಯಾಮಯನಾದ ಶಂಕರನು ಕಣ್ವರಿಗೆ ಹೇಳಿ ಕೇವಲ ಒಂದೇ ಜನ್ಮವನ್ನು ಎತ್ತಿ ಮೂಕನಾಗಿರುವಂತೆ ವಿಶಾಪವನ್ನು ಕರುಣಿಸಿದನು. ಅದರಂತೆ ನೀನು ಜಿಂಕೆಯಾಗಿಯೂ, ಲಕ್ಷ್ಮಿಯು ಹೆಣ್ಣು ಜಿಂಕೆಯಾಗಿಯೂ ಅವತರಿಸಿ ಶಾಪವಿಮೋಚನೆ ಹೊಂದಿದುದನ್ನು ಮರೆತೆಯಾ? (ಸ್ಕಾಂದ, ಕಾಳಿಕಾಖಂಡ, ಪದ್ಮ)

6. ಲಿಂಗೋತ್ಪತ್ತಿ :

ಮತ್ತೊಮ್ಮೆ ನೀನೂ ಬ್ರಹ್ಮನೂ ಪರಸ್ಪರ ಮೇಲ್ಮೆಗಾಗಿ ವಿವಾದ ಮಾಡುತ್ತಾ, ಕೊನೆಗೆ, ಭಯಂಕರ ಯುದ್ಧದಲ್ಲಿ ನಿರತರಾದಿರಿ,

ಮಧ್ಯೇ ಸಮಾವಿರಭವಜ್ಜ್ಯೋತಿರ್ಲಿಂಗಮೈಶ್ವರಮದ್ಭುತಂ ।
ಜ್ವಾಲಾಮಾಲಾಸಹಸ್ರಾಢ್ಯಮಪ್ರಮೇಯಮನುತ್ತಮಂ ॥

(ಶಿ.ಪು. 33-36)

ಶಿವನು ಆಗ ನಿಮ್ಮಿಬ್ಬರ ಮಧ್ಯದಲ್ಲಿ, ಜ್ವಾಲಾಸ್ತಂಭ ರೂಪದಿಂದ ಆವಿರ್ಭವಿಸಿ, ನಿಮ್ಮ ನಿಮ್ಮ ಗರ್ವವನ್ನು ಭಂಗಿಸಿ, ನಿಮ್ಮನ್ನು ಅನುಗ್ರಹಿಸಿ, ತನ್ನ ಸಂಕೇತವಾದ ಲಿಂಗವನ್ನು ಧರಿಸಿ ಪೂಜಿಸುವಂತೆ ಆಜ್ಞೆಮಾಡಿದನು. ಆಗ ನೀವು ಲಿಂಗವನ್ನು ನಿಮ್ಮ ನಿಮ್ಮ ಉತ್ತಮಾಂಗಗಳಲ್ಲಿ ಧರಿಸಿ, ಅದನ್ನು ಆರಾಧಿಸಿ, ಈಗಿನ ನಿಮ್ಮ ಪದವಿಗಳನ್ನು ಪಡೆದಿರಲ್ಲವೇ?

(ಶಿವ-ಸ್ಕಾಂದ, ಲೈಂಗ, ಧರ್ಮಸಂಹಿತೆ)

7. ವಿಷಕಂಠ ಲೀಲೆ :

ಸಮುದ್ರ ಮಥನ ಕಾಲದಲ್ಲಿ, ನೀನು ದೈತ್ಯರನ್ನೆಲ್ಲಾ ಕೊಲ್ಲುತ್ತಿರಲು, ಅವರು ಪಾತಾಳಕ್ಕೆ ಹೋಗಿ ತಲೆ ಮರೆಸಿಕೊಂಡರು. ನೀನು ಅವರನ್ನು ಬೆನ್ನಟ್ಟಿ ಹೋಗಿ ಅವರನ್ನೆಲ್ಲಾ ಸಂಹರಿಸಿ, ನಂತರ ಅಲ್ಲಿ ಪೂರ್ಣಚಂದ್ರನಂತೆ ಮುಖಕಾಂತಿಯುಳ್ಳ, ಅಮೃತ ಜನ್ಯರಾದ, ಕಾಂತೆಯರನ್ನು ಕಂಡು ಮೋಹಿಸಿ, ಅವರೊಡನೆ ಕ್ರೀಡಿಸುತ್ತಾ ಅನೇಕ ಮಕ್ಕಳನ್ನು ಪಡೆದು ಮೈಮರೆತು, ಅಲ್ಲಿಯೇ ನೆಲೆಸಿದೆ. ನಿನ್ನ ಮಕ್ಕಳು ಗರ್ವಿತರಾಗಿ ಲೋಕಗಳನ್ನು ಪೀಡಿಸುತ್ತಾ, ಲೋಕ ಕಂಟಕರಾದರು,

ಸಂಮೋಹಿತಃ ಕಾಮಬಾಣೈರ್ಲೇಭೇ ಶತ್ರೈವ ನಿರ್ವೃತಿಂ ।
ತಾಭಿಶ್ಚ ವರನಾರೀಭಿಃ ಕ್ರೀಡಮಾನೋ ಬಭೂವ ಹ ॥
ತಾಭ್ಯಾಂ ಪುತ್ರಾನಜನಯದ್ವಿಷ್ಣುರ್ವರಪರಾಕ್ರಮಾನ್ ।
ಮಹೀಂ ಸರ್ವಾಂ ಕಂಪಯತೋ ನಾನಾಯುದ್ಧವಿಶಾರದಾನ್ ॥

(ಶಿ.ಪು. 22_46)

ಆಗ ಭಯದಿಂದ ದೇವತೆಗಳು, ರಕ್ಷಣೆಗಾಗಿ ಶಿವನನ್ನು ಮರೆಹೊಕ್ಕರು. ಶಂಕರನು, ಅವರಿಗೆ ಅಭಯ ನೀಡಿ ಕೂಡಲೇ, ಭಯಂಕರವಾದ ವೃಷಭರೂಪವನ್ನು ಧರಿಸಿ ಪಾತಾಳ ಲೋಕವನ್ನು ಹೊಕ್ಕನು.

ತತೋ ವೃಷಭರೂಪೇಣ ಗರ್ಜಮಾನಃ ಪಿನಾಕಧೃತ್ ।
ಪ್ರವಿಷ್ಟೋ ವಿವರಂ ತತ್ರ ನಿನಂದನ್ಭೈರವಾನ್ರವಾನ್ ॥

(ಶಿ.ಪು. 23_1)

ಮದಿಸಿದ ನಿನ್ನ ಪುತ್ರರು, ಅದು ಸಾಧಾರಣ ಎತ್ತೆಂದು ಭ್ರಮಿಸಿ, ಅದನ್ನು ನಾನಾ ವಿಧವಾದ ಅಸ್ತ್ರಗಳಿಂದ ಪೀಡಿಸ ತೊಡಗಿದರು. ಆ ದಿವ್ಯಾಸ್ತ್ರಗಳನ್ನೆಲ್ಲಾ ಆ ವೃಷಭವು ನುಂಗಿ, ನಿನ್ನ ಕುಮಾರರನ್ನು ಮುತ್ತಿ ತನ್ನ ವಜ್ರಸಮಾನವಾದ ಕೋಡುಗಳಿಂದಲೂ, ಗೊರಸುಗಳಿಂದಲೂ, ತಿವಿದು, ಸೀಳು ಸೀಳು ಮಾಡಿ ಸಂಹರಿಸಿತು.

ಆಯಾತಾಂಸ್ತಾನ್‌ಹರೇಃ ಪುತ್ರಾನ್ರುದ್ರೋ ವೃಷಭರೂಪಧೃತ್ ।
ಪ್ರಾಕುಪ್ಯದ್ವಿಷ್ಣುಪುತ್ರಾಂಶ್ಚ ಖುರೈಶ್ಶೃಂಗೈರ್ವ್ಯದಾರಯತ್ ॥

(ಶಿ.ಪು. 23-57)

ಹೀಗೆ ಪುತ್ರ ಶೋಕದಿಂದ ಕುಪಿತನಾದ ನೀನು, ಆ ವೃಷಭನನ್ನು ದಿವ್ಯಾಸ್ತ್ರಗಳಿಂದ ಹೊಡೆಯಲು, ಆ ಅಸ್ತ್ರಗಳೆಲ್ಲವೂ, ವೃಷಭನ ಹೊಟ್ಟೆಯನ್ನು ಸೇರಿದವು. ಆಗ ವೃಷಭನು, ಮೂರು ಲೋಕಗಳೂ ನಡುಗುವಂತೆ, ಗುಟುರು ಹಾಕುತ್ತಾ ನಿನ್ನನ್ನು ಮುತ್ತಿ, ನಿನ್ನ ಶರೀರವನ್ನು ನುಚ್ಚುನೂರು ಮಾಡಿತು.

ಕೃತಂ ಯುದ್ಧಂ ತ್ವಯೇಶೇನ ಸ್ವನಾಥೇನ ಮಯಾ ಪ್ರಭೋ ।
ಕೃಪಾಂ ಕೃತ್ವಾ ಮಯಿ ಸ್ವಾಮಿನ್ನೋಽಪರಾಧೋ ಹಿ ಸಹ್ಯತಾಂ ॥

(ಶಿ.ಪು. 23_16)

ಆಗ ನಿನಗೆ ಜ್ಞಾನೋದಯವಾಗಿ, ಇದೆಲ್ಲಾ ಶಿವನ ಲೀಲೆಯೆಂದು ಅರಿತು ಭಕ್ತಿಯಿಂದ ಶಿವನನ್ನು ಕುರಿತು, ಎಲೈ ಪ್ರಭುವೇ! ನನ್ನ ಸ್ವಾಮಿಯೂ, ಸರ್ವೇಶ್ವರನೂ, ಆದ ನಿನ್ನೊಡನೆ ಅರಿಯದೆ ಯುದ್ಧಮಾಡಿ ಮಹಾಪರಾಧಮಾಡಿರುವೆನು. ಕೃಪೆಮಾಡಿ ನನ್ನ ಅಪರಾಧವನ್ನು ಮನ್ನಿಸಿ ರಕ್ಷಿಸು ಎಂದು ಪ್ರಾರ್ಥಿಸಿದೆ. ಆಗ ಭಕ್ತವತ್ಸಲನಾದ ಶಂಕರನು ದರ್ಶನವಿತ್ತು ಎಲೈ ಸ್ಥಿತಿಕರ್ತನಾದ ಹರಿಯೇ! ಪದೇ ಪದೇ ಹೀಗೇಕೆ ಮಾಯೆಯಿಂದ ವಂಚಿತನಾಗಿ ದುಷ್ಕಾರ್ಯಗಳಲ್ಲಿ ನಿರತನಾಗುತ್ತಿರುವೆ? ಇಂಥಾ ಹೇಯ ಕಾರ್ಯಗಳಿಂದ ನಿನ್ನ ಕೀರ್ತಿಗೆ ಕಳಂಕ ಬರದಿರುವುದೇ? ನಿನ್ನ ಭಕ್ತರು ನಿನ್ನನ್ನು ಗೌರವಿಸುವರೇ? ನೀನು ಕೇವಲ ಮಾನವನಂತೆ ಹೀಗೆ ಕಾಮಾತುರ ನಾಗಿ, ಸ್ತ್ರೀಲೋಲನಾಗಿ ಪಾತಾಳದಲ್ಲಿ ನೆಲೆಸಬಹುದೆ? ಜ್ಞಾನಿಯಾದ ನೀನು ಇಂಥಾ ಕ್ಷಣಿಕ ಸುಖಾಸಕ್ತನಾಗಿ ದುಃಖಕ್ಕೀಡಾಗಬಹುದೇ? ನೀನು ಈಕ್ಷಣವೇ ಇಲ್ಲಿಂದ ಹೊರಡು.

ಕಾಮಾಧೀನಂ ಕಥಂ ಜ್ಞಾನಂ ಸ್ತ್ರೀಷು ಸಕ್ತೋ ವಿಹಾರಕೃತ್ ।
ನೋಚಿತಂ ತವ ದೇವೇಶ ಸ್ಮರಣಂ ವಿಶ್ವಕಾರಣಂ ॥(ಶಿ.ಪು. 23-20)
ನ ವಿಲಂಬಃ ಪ್ರಕರ್ತವ್ಯೋ ಗಂತವ್ಯಮಿತ ಆಶು ತೇ ।
ಮಚ್ಚಾಪಸನಾದ್ಧರೇ ಲೋಕೇ ಚಕ್ರಮತ್ರೈವ ಶಿಷ್ಮಿತಂ ॥ (23-24)

ಎಂದು ಅಪ್ಪಣೆಮಾಡಿದನು. ಆಗ ನೀನು ಎಲೈ ಶಂಕರನೆ, ನನ್ನ ಚಕ್ರವು ಇಲ್ಲಿಯೇ ಇದೆ. ಅದನ್ನು ತೆಗೆದುಕೊಂಡು ಹೊರಡುವೆನೆಂದು. ಬಿನ್ನವಿಸಿದೆ. ಆಗ ಶಂಕರನು ಹರಿಯೇ! ಆ ಚಕ್ರವನ್ನು ಇಲ್ಲಿಯೇ ಸ್ಥಾಪಿಸು. ನಿನಗೆ ನಾನು ಬೇರೊಂದು ಚಕ್ರವನ್ನು ಅನುಗ್ರಹಿಸುವೆನು, ಎಂದು ಹೇಳಿ,

ವಿಷ್ಣವೇ ಪ್ರದದೌ ಚಕ್ರಂ ಘೋರಾರ್ಕಾಯುತಸುಪ್ರಭಂ ।
ಸರ್ವಾಮರಮುನೀಂದ್ರಾಣಾಂ ರಕ್ಷಕಾಯ ಮಹಾತ್ಮನೇ ॥
(ಶಿ. ಪು. 23-27)

ನಂತರ ಹತ್ತುಸಾವಿರ ಸೂರ್ಯಪ್ರಕಾಶವುಳ್ಳ ಪ್ರಳಯಕಾಲದ ಅಗ್ನಿ ಯಂತೆ ಉರಿಯನ್ನು ಉಗುಳುತ್ತಾ ಇದ್ದ ದಿವ್ಯಚಕ್ರವೊಂದನ್ನು ನಿನಗೆ ಅನುಗ್ರಹಿಸಿದನು. ನಂತರ ಅದನ್ನು ಕೇವಲ ದೇವತೆಗಳ ಹಾಗೂ ಋಷಿಗಳ

ಸಂರಕ್ಷಣಾರ್ಥವಾಗಿ ಉಪಯೋಗಿಸೆಂದು ಎಚ್ಚರಿಸಿ ಅಂತರ್ಧಾನನಾದನು. ಇದನ್ನು ನೀನು ಈಗ ಮರೆತಂತಿಡೆ.

ಏವಂ ಸ್ತ್ರೀಲಃಪರೋ ವಿಷ್ಣುಶ್ಶಿವೇನ ಪ್ರತಿಶಾಸಿತಃ ।
ಸ್ವರ್ಲೋಕಮಗಮದ್ವ್ಯಾಸಃ ಸ್ವಾಸ್ಥ್ಯಂ ಪ್ರಾಪ ಜಗಚ್ಚ ತತ್ ॥ (23_35)

ವೃಷೇಶ್ವರೋಽಸಿ ಭಗವಾಂಶ್ಶಂಕರೋ ಭಕ್ತವತ್ಸಲಃ ।
ಇತ್ಥಂ ಕೃತ್ವಾ ದೇವಕಾರ್ಯಂ ಜಗಾಮ ಸ ಗಿರೀಶ್ವರಃ॥ (33_36)

8, ಹಿಂದೊಮ್ಮೆ ನೀನು ವಿಶ್ವಕ್ಸೇನರೂಪದಲ್ಲಿದ್ದಾಗ ಗರ್ವಿಸಲು ಶಂಕರನು ತ್ರಿಶೂಲಾಗ್ನಿಯಿಂದ ನಿನ್ನನ್ನು ದಹಿಸಲಿಲ್ಲವೇ? ದಕ್ಷಯಜ್ಞದಲ್ಲಿ ಪರಾಜಿತನಾಗಿ ಜಿಂಕೆಯ ರೂಪಧರಿಸಿ ಓಡುತ್ತಿದ್ದಾಗ ನನ್ನ ಬಾಣದಿಂದಲೇ ಮರಣಿಸಿದೆ. ಆಗ ನಿನ್ನ ಪ್ರಾರ್ಥನೆಯಂತೆ ನಿನ್ನ ಚರ್ಮವನ್ನು ನಾನೇ ಧರಿಸಿದೆನು. ನೀನು ಆಗ ನಿಜರೂಪದಿಂದ ಶಿವನನ್ನು ಮರೆಹೊಗಲು ಶಂಕರನು ನಿನ್ನನ್ನು ಮನ್ನಿಸಿ ಅನುಗ್ರಹಿಸಿದನು.

ದಗ್ಧೋಽಸಿ ಪಶ್ಯ ಶೂಲಾಗ್ನೇರ್ವಿಷ್ವಕ್ಸೇನಚ್ಛಲಾದ್ಭವಾನ್ ।
ದಕ್ಷಯಜ್ಞೇ ಶಿರಶ್ಛಿನ್ನಂ ಮಯಾ ತೇಜಃಸ್ವರೂಪಿಣಾ ॥ (11_50)

ನಿನ್ನ ಮಗನಾದ ಬ್ರಹ್ಮನ ಐದನೆಯ ತಲೆಯನ್ನು ಶಿವನು ಚಿಗುಟಿ ಹಾಕಿದನು. ನೀನೇ ಸೃಷ್ಟಿಕರ್ತನಾದರೆ ಆ ತಲೆಯನ್ನು ಏಕೆ ಸೃಷ್ಟಿಸದಾದೆ? ಅವನಿಗೆ ಈಗಲೂ ನಾಲ್ಕೇ ತಲೆಗಳಿರುವುವಲ್ಲವೇ?

ಅದ್ಯಾಪಿ ತವ ಪುತ್ರಸ್ಯ ಬ್ರಹ್ಮಣಃ ಪಂಚಮಂ ಶಿರಃ ।
ಛಿನ್ನಂ ನ ಸಜ್ಜಿತಂ ಭೂಯೋ ಹರೇ ತದ್ವಿಸ್ಮೃತಂ ತ್ವಯಾ ॥
(ಶಿ. ಪು. 11_52)

9. ಹರಿಗೆ ದುರ್ವಾಸರ ಶಾಪ :

ಹಿಂದೊಮ್ಮೆ ನೀನು ಗರುಡಾರೂಢನಾಗಿ, ಕೇದಾರ ಕ್ಷೇತ್ರದ ಮಾರ್ಗವಾಗಿ ಹೋಗುತ್ತಿದ್ದೆ. ಆಗ ಆ ಕ್ಷೇತ್ರದಲ್ಲಿಯೇ ದುರ್ವಾಸರು ಲಿಂಗ ಪೂಜಾಸಕ್ತರಾಗಿ ಧ್ಯಾನದಲ್ಲಿದ್ದರು. ನೀನು ಗರ್ವದಿಂದ ಶಿವನಿಗೆ ನಮಸ್ಕರಿಸದೆ, ಮುನಿಗಳನ್ನು ಗೌರವಿಸದೆ ಹಾಗೆಯೇ ಹೊರಟುಹೋದೆ. ಅದನ್ನು ಗಮನಿಸಿದ

ದುರ್ವಾಸರು, ಕುಪಿತರಾಗಿ, ನಿನ್ನ ಗರುಡನು ಸಾಯಲಿ, ನಿನ್ನ ಲಕ್ಷ್ಮಿಯು ಸಮುದ್ರದ ಪಾಲಾಗಲಿ, ನಿನ್ನ ಹಣೆಯನ್ನು ಭೈರವನು ತನ್ನ ತ್ರಿಶೂಲದಿಂದ ಕಿವಿದು ಘಾತಿಸಲಿ, ನಿನ್ನ ಭಕ್ತರು ಶಿವದ್ರೋಹಿಗಳಾಗಿ ಪಾಷಂಡಿಗಳಾಗಿ ಜನನ ಮರಣಗಳಿಂದ ನರಳುತ್ತಿರಲಿ, ಎಂದು ಶಪಿಸಿದರು. ಆಗ ನೀನು ಅತ್ಯಂತ ದುಃಖದಿಂದ ಪಶ್ಚಾತ್ತಾಪ ಹೊಂದಿದವನಾಗಿ, ಶ್ರೀ ಕಾಳಹಸ್ತೀಶ್ವರ ಕ್ಷೇತ್ರಕ್ಕೆ ಹೋಗಿ, ಶಿವಸನ್ನಿಧಿಯಲ್ಲಿ ಘೋರ ತಪಸ್ಸನ್ನಾಚರಿಸಿದೆ. ಆಗ ಪ್ರಸನ್ನನಾದ ಶಂಕರನು ಶಾಪಕ್ಕೆ ಪರಿಹಾರವನ್ನು ಕರುಣಿಸಿದನು. ಅದರಂತೆ ಭೈರವನು ನಿನ್ನ ಹಣೆಯನ್ನು ಮರ್ದಿಸಿ ಮತ್ತೆ ಪ್ರಾಣದಾನ ಮಾಡಿದನು. ಲಕ್ಷ್ಮಿಯು ಸಮುದ್ರ ಮಥನದಲ್ಲಿ ಜನಿಸಿದಳು. ಗರುಡನು ಕಾಶ್ಯಪನಿಂದ ಹುಟ್ಟಿದನು.. (ಸ್ಕಾಂದ–ಶಂಕರ ಸಂಹಿತೆ_ಶಿವರಹಸ್ಯ ಖಂಡ).

10. ಹರಿಗೆ ಚಕ್ರಪ್ರದಾನ :

ನೀನೊಮ್ಮೆ ಗರ್ವದಿಂದ ದಧೀಚಿಗಳೊಡನೆ ಯುದ್ಧಮಾಡಿ, ನಿನ್ನ ಚಕ್ರವನ್ನು ಅವರ ಮೇಲೆ ಪ್ರಯೋಗಿಸಿದೆ. ಕೇವಲ ಧರ್ಮರಕ್ಷಣಾರ್ಥವಾಗಿ ಉಪಯೋಗಿಸಬೇಕಾದ ಚಕ್ರವನ್ನು ದುರ್ಬುದ್ಧಿಯಿಂದ ಧರ್ಮಾತ್ಮರ ಮೇಲೆ ಪ್ರಯೋಗಿಸಲು, ಅವರು ಅದನ್ನು ಲೀಲಾಜಾಲವಾಗಿ ಹಿಡಿದು ಪುಡಿಮಾಡಿದರು. ನಿರಾಯುಧನಾಗಿ ಹೆದರಿ, ಕಾಂಚೀ ಪುರಕ್ಕೆ ಹೋಗಿ, ಅಲ್ಲಿ ತೊಂಭತ್ತೊಂಭತ್ತು ವರ್ಷಗಳ ಪರ್ಯಂತ, ಪ್ರತಿದಿನವೂ, ಸಹಸ್ರ ಕಮಲಗಳಿಂದ ಶಿವನನ್ನು ಪೂಜಿಸುತ್ತಿದ್ದೆ.

ಗೋಪಯಾಮಾಸ ಕಮಲಂ ತದೈಕಂ ಭುವನೇಶ್ವರಃ ।
ಹೃತಪುಷ್ಪೋ ಹರಿಸ್ತತ್ರಮಿದಂ ತ್ವಭ್ಯಚಿಂತಯತ್ ॥
(ಲಿಂ.ಪು.ಭಾ. 4–98–161)

ಜ್ಞಾತ್ವಾ ಸ್ವನೇತ್ರಮುದ್ಧೃತ್ಯ ನವಂ ತತ್ಕ್ರಾವಲಂಬಿನಂ ।
ಪೂಜಯಾಮಾಸ ಭಾವೇನ ನಾಮ್ನಾ ತೇನ ಜಗದ್ಗುರುಃ ॥
(98–162)

ಅಕಾಲಿಕೇ ತ್ವಧರ್ಮೇ ಅನರ್ಥೇ ವಾರಿಸೂದನ ।
ಏವಮುಕ್ತ್ವಾ ದದೌ ಚಕ್ರಂ ಸೂರ್ಯಾಯುತಸಮಪ್ರಭಂ ॥
(98–126)

ಭಕ್ತ್ಯೈತನ್ನಯನಂ ಚಕ್ರಂ ವಿಷ್ಣವೇ ನೀಲಲೋಹಿತಃ ।
ಪಸ್ಪರ್ಶ ಚ ಕರಾಭ್ಯಾಂ ವೈ ಸುಶುಭಾಭ್ಯಾಮುವಾಚ ಹ ॥(98–178)

ಒಂದುದಿನ ಶಿವಮಾಯೆಯಿಂದ ಒಂದು ಕಮಲವು ಮಾಯವಾಯಿತು. ಆಗ ನೀನು ಕಮಲಕ್ಕೆ ಬದಲಾಗಿ, ನಿನ್ನ ನೇತ್ರ ಕಮಲವನ್ನೇ ಕಳಚಿ, ಶಿವನಿಗೆ ಅರ್ಪಿಸಿದೆ. ನಿನ್ನ ದೃಢಭಕ್ತಿಗೆ ಪ್ರಸನ್ನನಾದ ಶಂಕರನು, ದಿವ್ಯ " ಸುದರ್ಶನ " ಚಕ್ರವನ್ನನುಗ್ರಹಿಸಿ, ಅದನ್ನು ಶಿವಭಕ್ತರ ಮೇಲೂ, ನಿರಪರಾಧಿಗಳ ಮೇಲೂ ಪ್ರಯೋಗಿಸಬೇಡವೆಂದು ಎಚ್ಚರಿಸಿದನು. ಮತ್ತು ನಿನ್ನ ಪ್ರಾರ್ಥನೆಯಂತೆಯೇ ನಿನಗೆ ಶಿವನ ದಾಸ್ಯವೃತ್ತಿಯನ್ನೂ ದಯಪಾಲಿಸಿದನು. ಅಲ್ಲದೆ ನೀನು ಮೇಘ ರೂಪನಾಗಿ ಶಿವನನ್ನು ಧಾರಣಮಾಡಿದ್ದರಿಂದ, ಶಿವನು ಮೇಘವಾಹನ ನಾದನು. ನೀನು ವೃಷರೂಪದಿಂದ ಶಿವನನ್ನು ಹೊತ್ತಿದ್ದರಿಂದ ಶಿವನು ವೃಷ ಧ್ವಜಾಖ್ಯನಾದನು. ಆಗ ನೀನು ಪರಮೇಶ್ವರನನ್ನು ಕುರಿತು ಅತ್ಯಂತ ಭಕ್ತಿ ಯಿಂದ, ಎಲೈ ಚಂದ್ರಮೌಳಿಯೇ! ನನ್ನ ಅನಂತಾಪರಾಧಗಳನ್ನು ಮನ್ನಿಸು. ನನ್ನ ಗರ್ವವು ನಾಶವಾಗಲು, ನೀನು ನನ್ನನ್ನು ವಾಹನವಾಗಿಯೂ, ಶರ ವಾಗಿಯೂ, ಪರಿಗ್ರಹಿಸೆಂದು ಪ್ರಾರ್ಥಿಸಿದೆ. ನಿನ್ನ ಪ್ರಾರ್ಥನೆಯನ್ನು ಮನ್ನಿಸಿದ ಶಿವನು, ತ್ರಿಪುರಸಂಹಾರ ಕಾಲದಲ್ಲಿ, ನಿನ್ನನ್ನು ವಾಹನ ವನ್ನಾಗಿಯೂ, ಶರವನ್ನಾಗಿಯೂ, ಉಪಯೋಗಿಸಿ, ತ್ರಿಪುರರನ್ನು ಸಂಹರಿ ಸಿದನು. ಆದುದರಿಂದ ಎಲೈ ಹರಿಯೇ! ಈಗಲಾದರೂ ನಿನ್ನ ಉಗ್ರರೂಪ ವನ್ನು ಉಪಸಂಹರಿಸು. ನಿನ್ನಿಂದ ಹಿಡಿದು ಹುಲ್ಲುಕಡ್ಡಿಯವರೆವಿಗೂ ಪ್ರತಿ ಯೊಂದೂ, ಶಿವನ ಶಕ್ತಿವಿಲಾಸವೆಂದೇ ತಿಳಿ. ಆ ಶಿವಮಾಯೆಯನ್ನು ಮೀರಲು, ಯಾರಿಗೂ ಶಕ್ಯವಿಲ್ಲ. ನೀನು (ಕ್ಷಣ) ಮುಹೂರ್ತ ಮಾತ್ರ ಕಾಲರೂಪನಾದರೆ, ಶಿವನು ಕಾಲನಿಗೂ ಕಾಲನಾದ ಮಹಾಕಾಲನಾಗಿರುವನು ಎಂದು ಹೇಳಲು, ನೃಸಿಂಹನು ತನ್ನ ಉಗ್ರತೆಯನ್ನು ಉಪಸಂಹರಿಸದೆ, ವೀರೇಶ ನನ್ನು ಕ್ರೂರದೃಷ್ಟಿಯಿಂದ ನೋಡುತ್ತಲೇ ಇದ್ದನು. ನೃಸಿಂಹನ ಗರ್ವವು ಇನ್ನೂ ಪೂರ್ಣವಾಗಿ ಇಳಿಯದಿರುವುದನ್ನು ಗ್ರಹಿಸಿ, ಅವನನ್ನು ಕುರಿತು, ಮತ್ತೆ ಎಲೈ ಹರಿಯೇ! ನಿನಗೆ ಇನ್ನೂ ಜ್ಞಾನೋದಯವಾದಂತೆ ತೋರುವು ದಿಲ್ಲ. ಮತ್ತೆ ಕೆಲವು ಘಟನೆಗಳನ್ನು ನಿನ್ನ ನೆನಪಿಗೆ ತರುವೆನು-ಆಗಲಾದರೂ ನಿನಗೆ ನಿಜದರಿವಾಗಬಹುದೆಂದು ಮತ್ತೆ ಹೀಗೆ ಉಪಕ್ರಮಿಸಿದನು.

11. ವ್ಯಾಸರಿಂದ ಶಿವಾಧಿಕ್ಯ :

ಎಲೈ ಹರಿಯೇ! ಒಮ್ಮೆ ಮಹಾಶಿವಭಕ್ತನಾದ ವ್ಯಾಸನು, ಶಿವಮಾಯೆಯಿಂದ, ತನ್ನ ಶಿಷ್ಯರಿಗೆ, ವಿಷ್ಣುವೇ ಶ್ರೇಷ್ಠ ದೈವವೆಂದೂ, ಪರಬ್ರಹ್ಮನೆಂದೂ, ತಿಳಿಸಿದನು. ಅವನ ಶಿಷ್ಯರು ಆಶ್ಚರ್ಯದಿಂದ ಎಲೈ ಗುರುವೇ! ಈವರಿಗೂ ನೀವು ಶಿವನೇ ಸಕಲಕ್ಕೂ ಕಾರಣನೆಂದೂ, ಅವನೇ ಆರಾಧ್ಯ ದೈವವೆಂದೂ, ಅವನೇ ತ್ರಿಮೂರ್ತಿಗಳಿಗೂ ಕರ್ತನೆಂದೂ, ಪರಬ್ರಹ್ಮನೆಂದೂ, ಉಪದೇಶಿಸಿರುವಿರಿ. ಇಂದು ಏನು ಕಾರಣ, ತದ್ವಿರುದ್ಧವಾಗಿ ಬೋಧೆಮಾಡುತ್ತಿರುವಿರಿ? ನಾವು ಯಾವುದು ಸತ್ಯ, ಯಾವುದು ಮಿಥ್ಯ ಎಂಬುದನ್ನು ಅರಿಯಲಾರದೆ ಭ್ರಾಂತರಾಗಿರುವೆವು.

ಯಸ್ಮಾದ್ರಮೇಶಾಧಿಕತಾಂ ಪ್ರವಕ್ತುರ್ವ್ಯಾಸಸ್ಯ ತದ್ಬಾಹು
ಯುಗೇ ಪ್ರಬದ್ಧೇ ।
ಪುನಸ್ಸ ಏವಾಹ ಶಿವಾಧಿಕತ್ವಂ ತಸ್ಮಾಚ್ಛಿವಸ್ಸರ್ವಸುರಪ್ರಕೃಷ್ಟಃ ॥
(ಶಿವಾಧಿಕ್ಯ)

ವಿಶ್ವಾಧಿಕಾಯ ಭವತೇ ನಮೋ ಯಜ್ಞೇಶ್ವರಾಯ ತೇ ।
ನಮಸ್ತೇ ಸರ್ವಕರ್ತ್ರೇಽಸ್ತು ಪುನರ್ಭೂಯೋ ನಮೋ ನಮಃ ॥
(ಶಿ.ಪು.)

ಆದುದರಿಂದ ನೀವು, ಕಾಶೀವಿಶ್ವೇಶ್ವರನ ಸನ್ನಿಧಿಯಲ್ಲಿ, ನಿಮ್ಮ ಎರಡೂ ಕೈಗಳನ್ನೆತ್ತಿ ಉಚ್ಚಕಂಠದಿಂದ 'ವಿಷ್ಣುವೇ ಸರ್ವೇಶ್ವರ'ನೆಂದು ಘೋಷಿಸಿದರೆ ಮಾತ್ರ ನಮ್ಮ ಸಂದೇಹ ನಿವೃತ್ತಿಯಾಗುವುದೆಂದು ವಿನಂತಿ ಮಾಡಿಕೊಂಡರು. ಆಗ ವ್ಯಾಸರು ವಿಶ್ವೇಶ್ವರನ ಸನ್ನಿಧಿಯಲ್ಲಿ ಕೈಗಳನ್ನೆತ್ತಿ "ಗೋವಿಂದಾದಧಿಕಂ ನ ದೈವತಮ್" ಎಂದು ಹೇಳಿದೊಡನೆಯೇ, ಅವರ ಕೈಗಳು ಸ್ತಂಭಿಸಿದವು, ನಾಲಗೆಯೂ ಚಲಿಸದಾಯಿತು. ಆಗ ಅವರು ಅತ್ಯಂತ ವ್ಯಸನದಿಂದ ಚಿಂತಿಸುತ್ತಿರಲು,

ಹರಿಯಿಂದ ಶಿವಾಧಿಕ್ಯ :

ನೀನು ಕೂಡಲೇ ವ್ಯಾಸರಿಗೆ ದರ್ಶನವಿತ್ತು, ಎಲೈ ವ್ಯಾಸನೇ! ನಿನ್ನ ನಿಯತವೆಂತು ಹೋಯಿತು? ಶಿವನು ವಿಶ್ವಾಧಿಕನು. ಶಾಂತನು. ನನಗೂ ಧ್ಯೇಯನು. ಸಚ್ಚಿದಾನಂದ ಸ್ವರೂಪನು. ಯೋಗಿಧ್ಯೇಯನು. ಏಕಾಂತನು.

ಅವ್ಯಯನು. ಸರ್ವವೇದಾಂತ ಸಾರಜ್ಞನು. ಸರ್ವಾಧಿಕನು. ಇಂಥಾ ಸ್ವಾಮಿಯನ್ನು ಬಿಟ್ಟು ಅವನ ಕಿಂಕರನಾದ ನನ್ನನ್ನು ಏನು ಕಾರಣ, ಸರ್ವಾಧಿಕನೆಂದು ಹೇಳಿದೆ ? ನಿನಗೇಕೆ ಇಂಥಾ ಅಜ್ಞಾನವುಂಟಾಯಿತು ? ಎಲೈ ವ್ಯಾಸನೇ। ನಾನು, "ಓಂ ನಮೋವಾಸುದೇವಾಯ ಶಿವಶಾಸ್ತ್ರಾವತಾರಿಣೇ। ಶಿವಲಿಂಗಾರ್ಚನವ್ಯಗ್ರತೇಜಸೇ ಶಿವಜನ್ಮನೇ" ಎಂದು ಪ್ರಾರ್ಥಿಸುವವರಿಗೆ ಮಾತ್ರ ಸುಲಭನಾಗುವೆನು. ಹೀಗೆ ನನ್ನನ್ನು ಶಿವಭಕ್ತನೆಂದಲ್ಲದೆ ಬೇರೆ ಯಾವ ರೀತಿಯಲ್ಲಿ ಸ್ತೋತ್ರ ಮಾಡಿದರೂ, ನಾನು ಅವರನ್ನು ಹೊರಳಿ ಸಹಾ ನೋಡೆನು. ಆದುದರಿಂದ ವ್ಯಾಸನೇ ನೀನು ನನಗೆ ಶ್ರೇಯಸ್ಸನ್ನು ಕೋರಬೇಕೆಂದಿದ್ದರೆ, ಕೂಡಲೇ ಆ ಶಂಭುವನ್ನು ಮರೆಹೊಕ್ಕು ಕ್ಷಮೆಯನ್ನು ಯಾಚಿಸು(ಸ್ಕಾಂದ- ಕಾ.ಖಂಡ)ಎಂದು ಹೇಳಿ ಮತ್ತೆ ನೀನು ನಿನ್ನ ಕೈಗಳನ್ನೆತ್ತಿ, ಎಲೈ ವ್ಯಾಸನೇ ಕೇಳು ಈ ನನ್ನ ಪ್ರತಿಜ್ಞೆಯನ್ನು ; ಶಿವನೇ ಪರತತ್ವವು, ಪರಬ್ರಹ್ಮನು, ವಿಶ್ವಾಧಿಕನು. ನಾನು ಸಕಲಕ್ಕೂ ಕರ್ತನಾದರೆ, ಆ ಸದಾಶಿವನು ನನಗೇ ಕರ್ತನು. ಆ ಮಹಾದೇವನಾದ ಶಂಕರನಿಗೆ ಕರ್ತನಾರೂ ಇಲ್ಲ. ಇವನೇ ಸರ್ವರಿಗೂ ಈಶ್ವರನು. ಈತನ ಮಹಾಪ್ರಸಾದದಿಂದಲೇ ಎಲ್ಲರಿಗೂ ಮೋಕ್ಷ ಲಭಿಸುವುದು. ಎಂದು ನೀನೇ ವ್ಯಾಸರಿಗೆ ಶಿವಪಾರಮ್ಯವನ್ನು ಉಪದೇಶಿಸಿ, ಶಿವನನ್ನು ಕುರಿತು,

ಜಯಶಂಭೋ ಮಹಾದೇವ ಸಚ್ಚಿದಾನಂದವಿಗ್ರಹ ।
ನಮಸ್ತೇಽಸ್ತು ಮಹಾದೇವ ಪರಾತ್ಪರ ತರಾಯ ಚ॥
ವಿಶ್ವಾಧಿಕಾಯ ಭವತೇ ನಮೋ ಯಜ್ಞೇಶ್ವರಾಯ ತೇ ।
ನಮಸ್ತೇ ಸರ್ವಕರ್ತ್ರೇಽಸ್ತು ಪುನರ್ಭೂಯೋ ನಮೋ ನಮಃ ॥
(ಶಿ.ಪು.)

ಹೀಗೆ ಪ್ರಾರ್ಥಿಸಿದೆ. ಅದರಂತೆ ವ್ಯಾಸರು, ವ್ಯಾಸಕಾಶಿಯಲ್ಲಿ, ಶಿವಲಿಂಗವನ್ನು ಸ್ಥಾಪಿಸಿ, ಶಿವದ್ರೋಹದ ಪಾಪವನ್ನು ಪರಿಹರಿಸಿಕೊಂಡರು.

12. ವೃಷಭಲೀಲೆ :

ಹಿಂದೆ ಸಮುದ್ರಮಥನಕಾಲದಲ್ಲಿ ಉದ್ಭವಿಸಿದ ಹಾಲಾಹಲವು ಮೂರು ಲೋಕಗಳನ್ನೂ ಸುಡುತ್ತಾ ಬಂದಿತು. ಭಯದಿಂದ ಬ್ರಹ್ಮ–ಇಂದ್ರಾದಿ ಸಕಲ ದೇವತೆಗಳೂ, ರಕ್ಷಕನಾದ ನಿನ್ನನ್ನು ಮರೆಹೊಕ್ಕು, ಹಾಲಾಹಲದಿಂದ ಲೋಕ

ಕ್ಕಾಗುತ್ತಿದ್ದ ವಿಪತ್ತನ್ನು ಪರಿಹರಿಸೆಂದು ಪ್ರಾರ್ಥಿಸಿದರು. ಆಗ ನೀನು ಅವರನ್ನುದ್ದೇಶಿಸಿ, ಎಲೈ ದೇವತೆಗಳಿರಾ, ಇದು ಸಾಮಾನ್ಯವಾದ ಹಾಲಾಹಲ ವಲ್ಲ. ಇದು ಬ್ರಹ್ಮಾಂಡವನ್ನೇ ಭಸ್ಮಮಾಡುವಂಥಾ ಸಾಮರ್ಥ್ಯವನ್ನು ಹೊಂದಿದೆ. ಇದನ್ನು ನಿಗ್ರಹಿಸುವ ಶಕ್ತಿ ನಮ್ಮೆಲ್ಲರಿಗೂ ಇರುವುದಿಲ್ಲ. ಇದು ಪ್ರಲಯಾಗ್ನಿಯಂತೆ ಲೋಕಗಳನ್ನೆಲ್ಲಾ ದಹಿಸುತ್ತಾ ಬರುತ್ತಿದೆ. ತಡ ಮಾಡಿದರೆ ಮಹಾಪ್ರಳಯವೇ ಆಗುವುದರಲ್ಲಿ ಸಂಶಯವಿಲ್ಲ. ಆದುದರಿಂದ ತಡಮಾಡದೆ ನಾವೆಲ್ಲರೂ ಈಗಲೇ ಕೈಲಾಸಕ್ಕೆ ತೆರಳಿ, ನಮಗೆಲ್ಲಾ ಅಧಿಕನೂ, ಸೃಷ್ಟಿ–ಸ್ಥಿತಿ–ಲಯಕರ್ತನೂ, ನಾಶರಹಿತನೂ, ಪತಿತೋದ್ಧಾರನೂ, ಪಶುಪತಿಯೂ, ದಯಾಮಯನೂ ಆದ ಶಂಭುವನ್ನು ಮರೆ ಹೊಕ್ಕು ನಮ್ಮ ಸಂಕಟವನ್ನು ಅರಿಕೆಮಾಡಿದರೆ ಶಂಕರನು ಗರಳವನ್ನು ನಿಗ್ರಹಿಸಿ ನಮ್ಮನ್ನು ರಕ್ಷಿಸುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ಹೇಳಿ, ಅವರೊಡನೆ ನೀನು ಕೈಲಾಸಕ್ಕೆ ಹೋಗಿ ಹಾಲಾಹಲವು ಮೂರು ಲೋಕ ಗಳನ್ನೂ ವ್ಯಾಪಿಸಿ ಎಲ್ಲವನ್ನೂ ನಿರ್ನಾಮಗೊಳಿಸುತ್ತಿರುವ ವಿಷಯವನ್ನು ಶಿವನಲ್ಲಿ ಅರಿಕೆಮಾಡಿ ಹಾಲಾಹಲವನ್ನು ನಿಗ್ರಹಿಸಿ, ಲೋಕವನ್ನು ರಕ್ಷಿಸ ಬೇಕೆಂದು ಪ್ರಾರ್ಥಿಸಿದೆ. ನಿಮ್ಮ ಪ್ರಾರ್ಥನೆಗೆ ಪ್ರಸನ್ನನಾದ ಶಂಕರನು,

ಮಥ್ಯಮಾನೇಽಮೃತೇ ಪೂರ್ವಂ ಕ್ಷೀರಾಬ್ಧೇಸ್ಸುರದಾನವೈಃ ।
ಅಗ್ರೇ ಹ ಸಮುತ್ಥಿತಂ ತಸ್ಮಾದ್ವಿಷಂ ಕಾಲಾನಲಪ್ರಭಂ ॥
(ಶಿ.ಪು. 16–3)

ದೃಷ್ಟ್ವಾ ತಂ ಶಂಕರಂ ಸರ್ವೇ ಸರ್ವದೇವಶಿಖಾಮಣಿಂ ।
ಪ್ರಣಮ್ಯ ತುಷ್ಟುವುರ್ಭಕ್ತ್ಯಾ ಸಾಚ್ಯುತಾ ನತಮಸ್ತಕಾಃ ॥
(16–5)

ತತಃ ಪ್ರಸನ್ನೋ ಭಗವಾಞ್ಛಂಕರೋ ಭಕ್ತವತ್ಸಲಃ ।
ಪಪೌ ವಿಷಂ ಮಹಾಘೋರಂ ಸುರಾಸುರಗಣಾರ್ದನಂ ॥
(16–6)

ಪೀತಂ ತದ್ವಿಷಮಂ ಕಂಠೇನ ದಧೌ ವಿಷಮುಲ್ಬಣಂ ।
ರೇಜೇ ತೇನಾಪಿ ಸ ವಿಭುರ್ನೀಲಕಂಠೋ ಬಭೂವ ಹ ॥ (16–7)

ಕೂಡಲೇ ನಿಮಗೆ ದರ್ಶನ ನೀಡಿ, ಆ ಹಾಲಾಹಲವನ್ನು ತನ್ನ ಅಂಗೈಯಲ್ಲಿ ಶೇಖರಿಸಿ, ಕಂಠದಲ್ಲಿ ಧರಿಸಿ, ನೀಲಕಂಠನಾದನು. ಹೀಗೆ ನಿಮ್ಮನ್ನೂ,

ಬ್ರಹ್ಮಾಂಡವನ್ನೂ ಸಲಹಿದ ದಯಾಮಯನಾದ ಶಂಕರನನ್ನು ನೀನು ಹೇಗೆ ಮರೆತೆ ?

13- ಯಕ್ಷಲೀಲೆ :

ನಂತರ ಸಮುದ್ರದಿಂದ ಜನಿಸಿದ ಲಕ್ಷ್ಮಿಯನ್ನು ನೀನೇ ಲಗ್ನವಾದೆ. ಅಮೃತವನ್ನು ಪಾನಮಾಡಿ, ಗರ್ವದಿಂದ ದೇವತೆಗಳೊಡನೆ ಸೇರಿ, ನನಗೆ ಸಮಾನರು ಮೂರು ಲೋಕದಲ್ಲಿ ಯಾರೂ ಇಲ್ಲವೆಂದು ಹೊಗಳಿಕೊಳ್ಳುತ್ತಾ ಮೆರೆಯಲಾರಂಭಿಸಿದೆ. ಆಗ ನಿಮ್ಮ ಗರ್ವ ಭಂಗಮಾಡಲು ಶಿವನು ಯಕ್ಷ ವೇಷ ಧರಿಸಿ,

ಸರ್ವಾನ್ದೃಷ್ಟ್ವಾಚ್ಯುತಮುಖಾನ್ದೇವಾನ್ಯಕ್ಷಪತಿಸ್ಸ ವೈ ।
ಮಹಾಗರ್ವಾಢ್ಯಮನಸಾ ಮಹೇಶಃ ಪ್ರಾಹ ಗರ್ವಹಾ ॥ (16-19)

ನಿಮ್ಮಲ್ಲಿಗೆ ಬಂದು, ಎಲೈ ಅಪ್ರತಿಭ ಶೂರರಾದ ದೇವತೆಗಳಿರಾ! ನೀವು ಕೇವಲ ನಿಮ್ಮ ಬಾಹು ಪರಾಕ್ರಮಗಳಿಂದಲೇ ದೈತ್ಯರನ್ನೆಲ್ಲಾ ಜಯಿಸಿದಿರೆಂದು ಹೇಳಿದಿರಲ್ಲದೇ! ನಿಮಗೆ ನಿಜವಾಗಿಯೂ ಅಂತಹ ಶಕ್ತಿ ಇದ್ದರೆ, ಈ ಹುಲ್ಲು ಕಡ್ಡಿಯನ್ನು ನಿಗ್ರಹಿಸಿರಿ ನೋಡೋಣ ಎಂದು, ನಿಮ್ಮ ಮುಂದೆ ಒಂದು ಹುಲ್ಲು ಕಡ್ಡಿಯನ್ನಿರಿಸಿದನು. ಆಗ ಮಹಾ ಗರ್ವದಿಂದ ನೀವೆಲ್ಲಾ,

ಅಥ ಸರ್ವೇ ಸುರಾ ವಿಷ್ಣುಪ್ರಮುಖಾ ವೀರಮಾನಿನಃ ।
ಕೃತ್ವಾ ಸ್ವಪೌರುಷಂ ತತ್ರ ಸ್ವಾಯುಧಾನಿ ವಿಚಿಕ್ಷಿಪುಃ ॥
(ಶಿ.ಪು. 16-28)

ತತ್ರಾಸನ್ನಿಪುಲಾನ್ಯಾಶು ತಾನ್ಯಸ್ತ್ರಾಣಿ ದಿವೌಕಸಾಂ ।
ಶಿವಪ್ರಭಾವತಸ್ತೇಷಾಂ ಮೂಢಗರ್ವಾಪಹಾರಿಣಃ ॥ (16-29)

ನಿಮ್ಮ ನಿಮ್ಮ ದಿವ್ಯಾಸ್ತ್ರಗಳನ್ನು ಆ ಕಡ್ಡಿಯ ಮೇಲೆ ಪ್ರಯೋಗಿಸಿದರೂ ಆ ಕಡ್ಡಿಯು ಅಲುಗದೆ ಯಥಾಸ್ಥಿತಿಯಲ್ಲಿಯೇ ಇದ್ದಿತು.

ಅದನ್ನು ನೋಡಿ, ನೀವೆಲ್ಲಾ ನಾಚಿ ತಲೆ ತಗ್ಗಿಸಿ ಒಬ್ಬರ ಮುಖವನ್ನೊಬ್ಬರು ನೋಡುತ್ತಾ ನಿಂತಿರಲು, ಅಶರೀರ ವಾಣಿಯೊಂದು, ಎಲೈ ಗರ್ವಿಷ್ಠರಾದ ಹರಿ-ಬ್ರಹ್ಮಾದಿದೇವತೆಗಳಿರಾ, ಆ ಯಕ್ಷನು ನಿಮ್ಮ ಗರ್ವಭಂಗ ಮಾಡಲು ಬಂದಿರುವ ಶಂಕರನಲ್ಲದೆ ಮತ್ತಾರೂ ಅಲ್ಲ ಎಂದು ನಿರೂಪಿಸಿತು.

ದೇವ ದೇವ ಮಹಾದೇವ ಸರ್ವಗರ್ವಾಪಹಾರಕ ।
ಯಕ್ಷೇಶ್ವರ ಮಹಾಲೀಲ ಮಾಯಯಾ ತೇऽತ್ಯದ್ಭುತಾ ಪ್ರಭೋ ॥
(ಶಿ.ಪು. 16-34)

ಇದಾನೀಂ ಜ್ಞಾನಮಾಯಾತಂ ತವೈವ ಕೃಪಯಾ ಪ್ರಭೋ ।
ಕರ್ತಾ ಹರ್ತಾ ಚ ಭರ್ತಾ ಚ ತ್ವಮೇವಾನ್ಯೋ ನ ಶಂಕರಃ ॥
(16-36)

ಆಗ ನೀವೆಲ್ಲರೂ ನಾಚಿ ಭಯದಿಂದ, ಗರ್ವವನ್ನು ಬಿಟ್ಟು, ಭಕ್ತಿಯಿಂದ ಶಿವನನ್ನು ಕುರಿತು, ಎಲೈ! ದೇವ ದೇವನೆ. ಸರ್ವಗರ್ವಾಪಹಾರಕನೂ, ಅನಂತ ಲೀಲಾ ವಿನೋದನೂ, ಆದ ಪ್ರಭುವೇ! ನಿನ್ನ ಈ ಯಕ್ಷಮಾಯೆಯು ಆಶ್ಚರ್ಯಕರವಾದುದು. ನಿನ್ನ ಕೃಪೆಯಿಂದಲೇ ಗರ್ವಿತರಾದ ನಮಗೆ ಜ್ಞಾನೋದಯವಾಯಿತು. ನೀನೇ ಸರ್ವಕರ್ತೃವು, ನೀನೇ ಸರ್ವಭರ್ತೃವು. ನೀನೇ ಮೂರು ಲೋಕಗಳಿಗೂ ಒಡೆಯನು. ನೀನು ನಾಶರಹಿತನೂ ಅದ್ವಿತೀಯನೂ ಆಗಿರುವೆ.

ಯಕ್ಷೇಶ್ವರಸ್ವರೂಪೇಣ ಸರ್ವೇಷಾಂ ನೋ ಮದೋ ಹೃತಃ ।
ಕೃತಂ ಮನ್ಯಾಮಹೇ ತತ್ತೇऽನುಗ್ರಹೋ ಹಿ ಕೃಪಾಲುನಾ॥(16-38)

ಆದುದರಿಂದ ಯಕ್ಷರೂಪದ ಶಂಕರನೆ! ನಮ್ಮ ಅಜ್ಞಾನಪೂರಿತವಾದ ಗರ್ವವನ್ನು ಮನ್ನಿಸಿ ಕಾಪಾಡಬೇಕೆಂದು ಪ್ರಾರ್ಥಿಸಿದಿರಿ. ಆಗ ಪ್ರಸನ್ನನಾದ ಶಂಕರನು ನಿಮ್ಮನ್ನು ಮನ್ನಿಸಿ ಕಾಪಾಡಲಿಲ್ಲವೇ ?

14. ಒಮ್ಮೆ ಶಿವನು ನಿನಗೆ ಪ್ರಣವಪಂಚಾಕ್ಷರೀ–ಗಾಯತ್ರೀಮಂತ್ರಗಳನ್ನು ಉಪದೇಶಿಸಿ ನಿನ್ನ ಶರೀರದ ಮೇಲೆ ಭಸ್ಮವನ್ನು ಉದ್ಧೂಳನಮಾಡಲು ಆ ಭಸ್ಮವು ದಿವ್ಯಜ್ಯೋತಿಯಂತೆ ಪ್ರಜ್ವಲಿಸುತ್ತಿರಲು ನೀನು ಅದನ್ನು ಭಕ್ತಿಯಿಂದ ಸ್ವೀಕರಿಸಿ, ಸರ್ವಾಂಗದಲ್ಲಿಯೂ ಧರಿಸಿದ್ದರಿಂದ ನೀನು ಧವಲಾಂಗನಾಗಿ ಪ್ರಕಾಶಿಸ ತೊಡಗಿದೆ (ಜಾಬಾಲೋಪನಿಷತ್ತು). ಆದುದರಿಂದ ಎಲೈ ಹರಿಯೇ ಈಗಲಾದರೂ, ವಿವೇಕದಿಂದ ನಿನ್ನ ಭಯಂಕರ ರೂಪವನ್ನು ತ್ಯಜಿಸಿ ಶಾಂತನಾಗು. ಇಲ್ಲದ ಪಕ್ಷದಲ್ಲಿ ನಿನ್ನನ್ನು ಭೈರವರೂಪದಿಂದ ಕ್ಷಣಾರ್ಧದಲ್ಲಿ ನಿಗ್ರಹಿಸ ಬೇಕಾಗುವುದು ಎಂದು ಎಚ್ಚರಿಸಿದನು.

ಇತ್ಥಂ ಸರ್ವಂ ಸಮಾಲೋಕ್ಯ ಸಂಹರಾತ್ಮಾನಮಾತ್ಮನಾ ।
ನ ವಿನಷ್ಟಂ ತ್ವಮಾತ್ಮಾನಂ ಕುರು ಹೇ ನೃಹರೇ ಬುಧ ॥ (11-62)
ನೋ ಚೇದಿದಾನೀಂ ಕ್ರೋಧಸ್ಯ ಮಹಾಭೈರವರೂಪಿಣಃ ।
ವಜ್ರಾಶನಿರಿವ ಸ್ಥಾಣೌ ತ್ವಯಿ ಮೃತ್ಯುಃ ಪತಿಷ್ಯತಿ ॥ (11-63)

ಶರಭಾವತಾರ :

ಹೀಗೆ ನುಡಿದ ವೀರೇಶನ ಮಾತುಗಳನ್ನು ಕೇಳಿದ ನೃಸಿಂಹನು,

ಇತ್ಯುಕ್ತೋ ವೀರಭದ್ರೇಣ ನೃಸಿಂಹಃ ಕ್ರೋಧವಿಹ್ವಲಃ ।
ನಿನದನ್ನನುವೇಗೇನ ತಂ ಗ್ರಹೀತುಂ ಪ್ರಚಕ್ರಮೇ ॥

(ಶಿ.ಪು.ಭಾ. 7. 12.2)

ಮಹಾ ಕ್ರೋಧಾನ್ವಿತನಾಗಿ, ಗರ್ಜಿಸುತ್ತಾ, ರಭಸದಿಂದ ವೀರಭದ್ರನನ್ನು ಹಿಡಿದನು.

ಅತ್ರಾಂತರೇ ಮಹಾಘೋರಂ ಪ್ರತ್ಯಕ್ಷಭಯಕಾರಣಂ ।
ಗಗನವ್ಯಾಪಿ ದುರ್ಧರ್ಷಂ ಶೈವತೇಜಸ್ಸಮುದ್ಭವಂ ॥ (ಶಿ.ಪು. 12-3)
ವೀರಭದ್ರಸ್ಯ ತದ್ರೂಪಮದೃಶ್ಯಂ ತು ತತಃ ಕ್ಷಣಾತ್ ।
ತದ್ವೈ ಹಿರಣ್ಮಯಂ ಸೌಮ್ಯಂ ನ ಸೌರಂ ನಾಗ್ನಿಸಂಭವಂ ॥ (12-4)

ಕೂಡಲೇ ವೀರಭದ್ರನು ತನ್ನ ಸೌಮ್ಯ ರೂಪವನ್ನು ಅದೃಶ್ಯ ಮಾಡಿಕೊಂಡನು. ಆ ಕೂಡಲೇ ಸೂರ್ಯಾಗ್ನಿಗಳ ತೇಜಸ್ಸನ್ನು ನಾಚಿಸುವಂಥಹುದೂ, ಸಿಡಿಲು ಮಿಂಚುಗಳನ್ನು ನುಂಗುವಂತಹದೂ, ಅತಿಭಯಂಕರವಾದುದೂ, ಎದುರಾಳಿಯ ಹೃದಯವನ್ನು ನಡುಗಿಸುವಂಥಹುದೂ, ಆದ ಮಹಾಶೈವ ತೇಜಸ್ಸೊಂದು ಆವಿರ್ಭವಿಸಿ, ಭೂಮ್ಯಾಕಾಶಗಳನ್ನೆಲ್ಲಾ ವ್ಯಾಪಿಸಿತು. ಆಗ ದೇವದುಂದುಂಭಿಗಳು ಮೊಳಗಿದವು ಪುಷ್ಪವೃಷ್ಟಿಯಾಯಿತು. ನಂತರ ಪ್ರಳಯರುದ್ರನು ತನ್ನ 'ಶರಭ' ರೂಪದಿಂದ ಗೋಚರಿಸಿದನು.

ಪಶ್ಯತಾಂ ಸರ್ವದೇವಾನಾಂ ಜಯಶಬ್ದಾದಿಮಂಗಲೈಃ ।
ಸಹಸ್ರಬಾಹುರ್ಜಟಿಲಶ್ಚಂದ್ರಾರ್ಧಕೃತಶೇಖರಃ ॥

(ಲಿಂ.ಪು. ಭಾ 4, 96.66)

ಸ ಮೃಗಾರ್ಧಶರೀರೇಣ ಪಕ್ಷಾಭ್ಯಾಂ ಚಂಚುನಾ ದ್ವಿಜಾಃ ।



ಶರಭಾವತಾರಿ ವೀರೇಶನಿಂದ ನೃಸಿಂಹಗರ್ವಭಂಗ

ಅತಿತೀಕ್ಷ್ಣಮಹಾದಂಷ್ಟ್ರೋ ವಜ್ರತುಲ್ಯನಖಾಯುಧಃ ॥ (96-67)
ಕಂಠೇ ಕಾಲೋ ಮಹಾಬಾಹುಃ ಚತುಷ್ಪಾದ್ವಹ್ನಿಸಂಭವಃ ।
ಯುಗಾಂತೋದ್ಯತಜೀಮೂತಭೀಮಗಂಭೀರನಿಸ್ವನಃ ॥ (96-68)
ಸಮಂ ಕುಪಿತವೃತ್ತಾಗ್ನಿವ್ಯಾವೃತ್ತನಯನತ್ರಯಃ ।
ಸ್ಪಷ್ಟದಂಷ್ಟ್ರೋಽಧರೋಷ್ಠಶ್ಚ ಹುಂಕಾರೇಣ ಯುತೋ ಹರಃ ॥
(96-69)

ಆ ತೇಜೋಮೂರ್ತಿಯು, ಸಾವಿರ ತೋಳುಗಳಿಂದಲೂ, ಜಡೆಗಳಿಂದಲೂ, ಚಂದ್ರಾಭರಣದಿಂದಲೂ, 'ಶರಭ' ಅಂದರೆ, ಅರ್ಧಮೃಗ ಅರ್ಧ ಪಕ್ಷಿಯ ಶರೀರವುಳ್ಳದ್ದಾಗಿಯೂ, ಎರಡು ರೆಕ್ಕೆ, ಎರಡು ಕೊಕ್ಕುಗಳುಳ್ಳದ್ದೂ, ವಜ್ರಾಯುಧಕ್ಕೆ ಸಮಾನವಾದ ಉಗುರುಗಳನ್ನೇ ಆಯುಧ ಉಳ್ಳದ್ದಾಗಿಯೂ, ದೊಡ್ಡ ತೋಳು, ನಾಲ್ಕು ಕಾಲುಗಳುಳ್ಳದ್ದೂ, ಬೆಂಕಿಯಂತೆ ಕೆಂಪಾದ ಮೂರು ಕಣ್ಣುಳ್ಳದ್ದೂ, ಕೋರೆದಾಡೆ, ಕೆಳತುಟಿಗಳುಳ್ಳದ್ದೂ ಆಗಿ ಹೂಂಕಾರ ಮಾಡುತ್ತಾ ಪ್ರಕಟವಾಯಿತು.

ನೃಸಿಂಹನ ಪರಾಭವ :

ಹರಿಸ್ತದ್ದರ್ಶನಾದೇವ ವಿನಷ್ಟಬಲವಿಕ್ರಮಃ ।
ಬಿಭ್ರದ್ಧಾಮ ಸಹಸ್ರಾಂಶೋರಧಃ ಖದ್ಯೋತವಿಭ್ರಮಂ ॥
(ಶಿ.ಪು. 7, 12-12)

ಇಂಥಾ ಅದ್ಭುತಾಕಾರವನ್ನು ನೋಡಿದೊಡನೆಯೇ ನೃಸಿಂಹನ ಬಲ ಪರಾಕ್ರಮಗಳೆಲ್ಲಾ ಕುಗ್ಗಿದವು. ಅವನು ದಿನಕರನ ಮುಂದೆ ಮಿಣುಕು ಹುಳುವಿನಂತೆಯೂ, ಸಿಂಹದ ಮುಂದೆ ತತ್ತರಿಸುವ ಹರಿಣಿಯಂತೆಯೂ, ತೇಜೋಹೀನನಾದನು. ಮತ್ತೆ ಕ್ಷಣಾರ್ಧದಲ್ಲಿ ಚೇತರಿಸಿಕೊಂಡು ಶರಭವನ್ನು ಹಿಡಿಯಲು ನುಗ್ಗಿದನು. ಕೂಡಲೇ ಶರಭನು ರಭಸದಿಂದ ಹಾರಿ, ನೃಸಿಂಹನನ್ನು ಹಿಡಿದು ನೆಲಕ್ಕೆ ಕೆಡಹಿ, ಅವನ ವಕ್ಷಸ್ಥಲವನ್ನು ವಜ್ರ ಸಮಾನವಾದ ತನ್ನ ಉಗುರುಗಳಿಂದ ಸೀಳಿ, ಹೊಕ್ಕುಳನ್ನು ಬಗೆದು, ನೃಸಿಂಹನನ್ನು ಪೀಡಿಸಿದನು. ನಂತರ, ಜೀರ್ಣವಾದ ಅವನ ಶರೀರವನ್ನು ಎತ್ತಿಕೊಂಡು ಗಗನಕ್ಕೆ ಹಾರಿ, ಮತ್ತೆ ಅದನ್ನು ನೆಲಕ್ಕೆ ಅಪ್ಪಳಿಸುತ್ತಾ ಇರಲು, ನೃಸಿಂಹನ ಶರೀರವೆಲ್ಲಾ ಜೀರ್ಣವಾಗಿ ಕೇವಲ ಮುಖದ ಭಾಗ ಉಳಿಯಿತು. ಹೀಗೆ ಘಾಶಿತಪ್ರಾಣ

ನಾದ ನೃಸಿಂಹನು ಶರಣಾಗಿ ದೈನ್ಯದಿಂದ ಶಿವರೂಪಿಯಾದ ಶರಭನನ್ನು ಅನನ್ಯಭಕ್ತಿಭಾವದಿಂದ ಹೀಗೆ ಪ್ರಾರ್ಥಿಸತೊಡಗಿದನು.

ನೃಸಿಂಹನಿಂದ ಶಿವನ ಸ್ತೋತ್ರ :

ತದ್ವಕ್ತ್ರಂ ಶೇಷಗಾತ್ರಾಂತಂ ಕೃತ್ವಾ ಸರ್ವಸ್ವವಿಗ್ರಹಂ ।
ಶಕ್ತಿಯುಕ್ತಂ ತದೀಯಾಂಗಂ ವೀರಭದ್ರಃ ಕ್ಷಣಾತ್ತತಃ ॥ (ಶಿ.ಪು. 12-22)
ನಾಮ್ನಾಮಷ್ಟಶತೇನೈವ ಸ್ತುತ್ವಾ ತಂ ಮೃಡಮೇವ ಚ ।
ಪುನಶ್ಚ ಪ್ರಾರ್ಥಯಾಮಾಸ ನೃಸಿಂಹಃ ಶರಭೇಶ್ವರಂ ॥ (12-19-20)
ಯದಾ ಯದಾ ಮಮಾಜ್ಞೇಯಂ ಮತಿಸ್ಸ್ಯಾದ್ಗರ್ವದೂಷಿತಾ ।
ತದಾ ತದಾಽಪನೇತವ್ಯಾ ತ್ವಯೈವ ಪರಮೇಶ್ವರ ॥ (11-20)
ನಮೋ ರುದ್ರಾಯ ಶರ್ವಾಯ ಮಹಾಗ್ರಾಸಾಯ ವಿಷ್ಣವೇ ।
ನಮ ಉಗ್ರಾಯ ಭೀಮಾಯ ನಮಃ ಕ್ರೋಧಾಯ ಮನ್ಯವೇ ।
(ಲಿಂ.ಪು. 4-96-76)
ನಮೋ ಭವಾಯ ಶರ್ವಾಯ ಶಂಕರಾಯ ಶಿವಾಯ ತೇ ॥
(ಲಿಂ.ಪು. 96-77, ಭಾಗ 4)
ಪರಾತ್ಪರಾಯ ವಿಶ್ವಾಯ ನಮಸ್ತೇ ವಿಶ್ವಮೂರ್ತಯೇ ।
ನಮೋ ವಿಷ್ಣುಕಲತ್ರಾಯ ವಿಷ್ಣುಕ್ಷೇತ್ರಾಯ ಭಾನವೇ ॥ (96-8
ನಮೋ ನೃಸಿಂಹಸಂಹರ್ತ್ರೇ ಕಾಮಕಾಲಪುರಾರಯೇ ।
ಮಹಾಪಾಶೌಘಸಂಹರ್ತ್ರೇ ವಿಷ್ಣುಮಾಯಾಂತಕಾರಿಣೇ ॥ (96-83)
ಅವ್ಯಕ್ತಾಯ ವಿಶೋಕಾಯ ಸ್ಥಿರಾಯ ಸ್ಥಿರಧನ್ವಿನೇ ।
ಸ್ಥಾಣವೇ ಕೃತ್ತಿವಾಸಾಯ ನಮಃ ಪಂಚಾರ್ಥಹೇತವೇ ॥ (96-90)
ಯೋಗೀಶ್ವರಾಯ ನಿತ್ಯಾಯ ಸತ್ಯಾಯ ಪರಮೇಷ್ಠಿನೇ ।
ಸರ್ವಾತ್ಮನೇ ನಮಸ್ತುಭ್ಯಂ ನಮಃ ಸರ್ವೇಶ್ವರಾಯ ತೇ ॥ (96-92)

ರುದ್ರನೂ, ಆಶ್ರಿತ ಭವರೋಗನಾಶಕನೂ, ಶರ್ವನೂ, ಭಕ್ತರಿಗೆ ಸುಖಕರನೂ, ಪ್ರಪಂಚವನ್ನು ನುಂಗಲು ಶಕ್ತನೂ, ವಿಷ್ಣುಸ್ವರೂಪನೂ, ಭಯಂಕರನೂ, ಯಾಗಸ್ವರೂಪನೂ, ಭವನೂ, ಶಂಕರನೂ, ಶಿವನೂ, ಯಮನೂ, ಕಾಲಸ್ವರೂಪನೂ, ಮೃತ್ಯುಸ್ವರೂಪನೂ, ವೀರನೂ, ವೀರಭದ್ರನೂ, ಶೂಲಧಾರಿಯೂ, ಆದ ಶಿವನಿಗೆ ನಮಸ್ಕಾರವು. ಮಹಾದೇವನೂ, ಪಶುಪತಿಯೂ

ಶ್ರೀಕಂಠನೂ, ಪಿನಾಕಧರನೂ, ನಾಶರಹಿತನೂ, ಸೂಕ್ಷ್ಮನೂ, ಶ್ರೇಷ್ಠನೂ, ಪರಾತ್ಪರನೂ, ವಿಶ್ವಸ್ವರೂಪಿಯೂ, ವಿಷ್ಣುವನ್ನೇ ಪತ್ನಿಯನ್ನಾಗುಳ್ಳವನೂ, ವಿಷ್ಣುವನ್ನೇ ಸ್ಥಾನವಾಗುಳ್ಳವನೂ, ಸೂರ್ಯಸ್ವರೂಪನೂ, ನಿತ್ಯನೂ, ರಕ್ಷಕನೂ, ಆದ ಶಿವನಿಗೆ ನಮಸ್ಕಾರವು. ನೃಸಿಂಹನನ್ನು ಸಂಹರಿಸಿದವನೂ, ಮನ್ಮಥ, ಯಮ, ತ್ರಿಪುರ, ಅಂಧಕರನ್ನು ನಾಶಮಾಡಿದವನೂ, ವಿಷ್ಣು ಮಾಯಾನಿಗ್ರಹನೂ, ಚಂದ್ರಸೂರ್ಯಾಗ್ನಿಲೋಚನನೂ, ದಕ್ಷಯಜ್ಞವನ್ನು ಭಂಗಗೊಳಿಸಿದವನೂ, ಆದ ಶಿವನಿಗೆ ನಮಸ್ಕಾರವು.

ಸತ್ವ, ರಜ, ತಮ ಎಂಬ ಮೂರು ಗುಣಗಳ ಸ್ವರೂಪನೂ, ಅವುಗಳನ್ನು ಮೀರಿದವನೂ, ಯೋಗಿಯೂ, ಜಗಚ್ಚಾಲಕನೂ, ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ, ಎಂಬ ಮುಕ್ತಿಗಳನ್ನು ಕೊಡುವವನೂ, ಪಂಚಭೂತಗಳಿಗೂ ಕಾರಣನೂ, ಜಗತ್ಪಿತನೂ, ಸಚ್ಚರಿತ್ರನೂ, ಭವರೋಗ ವೈದ್ಯನೂ, ವಿಷ್ಣುವೇ ವಾಹನವಾಗುಳ್ಳವನೂ, ಇಂದ್ರಿಯಗಳಿಗೆ ಅಗೋಚರನೂ, ಚರ್ಮಾಂಬರನೂ, ಜ್ಞಾನಗಮ್ಯನೂ, ಯಾಗಾಧಿಪತಿಯೂ, ಚಂದ್ರಶೇಖರನೂ, ಆದ ಶಿವನಿಗೆ ನಮಸ್ಕಾರವು.

ಪರಬ್ರಹ್ಮ ಸ್ವರೂಪನೂ, ಯೋಗೀಶ್ವರನೂ, ಎಲ್ಲರ ಆತ್ಮಸ್ವರೂಪನೂ ಆದ ಶಿವನೇ ಯಾವಾಗ ಯಾವಾಗ ನನಗೆ ಅಹಂಕಾರವು (ಶಿವ ಮಾಯೆಯು) ಹೆಚ್ಚಿ ಅಜ್ಞಾನವು ಉಂಟಾಗುವುದೋ, ಆಗಾಗಲೆಲ್ಲಾ ನೀನು ಹಿಂದೆಲ್ಲಾ ಮಾಡಿದಂತೆ ನನ್ನ ಅಜ್ಞಾನವನ್ನು ಹೋಗಲಾಡಿಸಿ, ಕಾಪಾಡುವಂಥವನಾಗು ಎಂದು ವಿಧ ವಿಧವಾಗಿ ಪ್ರಾರ್ಥಿಸಿದನು.

ಏವಂ ವಿಜ್ಞಾಪಯನ್ ಪ್ರೀತಃ ಶಂಕರಂ ನರಕೇಸರೀ ।
ನನ್ವಶಕ್ತೋ ಭವಾನ್ವಿಷ್ಣುರ್ಜೀವಿತಾಂತಂ ಪರಾಜಿತಃ ॥

(ಶಿ.ಪು. 12–31)

ತದ್ವಕ್ತ್ರಂ ಶೇಷಗಾತ್ರಾಂತಂ ಕೃತ್ವಾ ಸರ್ವಸ್ವವಿಗ್ರಹಂ ।
ಶಕ್ತಿಯುಕ್ತಂ ತದೀಯಾಂಗಂ ವೀರಭದ್ರಃ ಕ್ಷಣಾತ್ತತಃ ॥

(ಶಿ.ಪು. 12.22)

ಆಗ ಪ್ರಸನ್ನನಾದ ಶಂಕರನು ನೃಸಿಂಹನ ಸಿರಸ್ಸನ್ನು ತನ್ನ ರುಂಡ ಮಾಲೆಯಲ್ಲಿ ಧರಿಸಿ, ಚರ್ಮವನ್ನು ತಾನೇ ಹೊದ್ದನು. ಆಗ ಎಲ್ಲ ಬ್ರಹ್ಮಾದಿ

ದೇವತೆಗಳೂ, ವೀರಭದ್ರನ ಕ್ಷಮಾಗುಣವನ್ನೂ, ಭಕ್ತಪರಾಧೀನತೆಯನ್ನೂ, ವೈರಿಗಳಲ್ಲಿಯೂ ತೋರಿದ ಕ್ಷಮಾಗುಣವನ್ನೂ ನೋಡಿ ಆನಂದದಿಂದ ವೀರ ಭದ್ರನನ್ನು ಅನನ್ಯ ಭಕ್ತಿಭಾವದಿಂದ ಕೊಂಡಾಡಿದರು. ಹೀಗೆ ಸ್ತೋತ್ರ ಮಾಡಿದ ಬ್ರಹ್ಮಾದಿ ದೇವತೆಗಳನ್ನೂ ಋಷಿಪುಂಗವರನ್ನೂ ಕುರಿತು ವೀರ ಭದ್ರನು,

ಯಥಾ ಜಲಂ ಜಲೇ ಕ್ಷಿಪ್ತಂ ಕ್ಷೀರೇ ಕ್ಷೀರಂ ಘೃತೇ ಘೃತಂ ।
ಏವಮೇವ ತದಾ ವಿಷ್ಣುಃ ಶಿವೇ ಲೀನೋ ನ ಚಾನ್ಯಥಾ ॥ (12.31)

ಏಕೋ ವಿಷ್ಣುರ್ನೃಸಿಂಹಾತ್ಮಾ ಸದರ್ಪಶ್ಚ ಮಹಾಬಲಃ ।
ಜಗತ್ಸಂಹಾರಕರಣೇ ಪ್ರವೃತ್ತೋ ನರಕೇಸರೀ ॥ (12.32)

ಪ್ರಾರ್ಥನೀಯೋ ನಮಸ್ತಸ್ಮೈ ಮದ್ಭಕ್ತೈಸ್ಸಿದ್ಧಿಕಾರಿಭಿಃ ।
ಮದ್ಭಕ್ತಪ್ರವರಶ್ಚೈವ ಮದ್ಭಕ್ತವರದಾಯಕಃ ॥ (12.33)

ಎಲೈ ದೇವತೆಗಳಿರಾ! ನನ್ನ ತ್ರಿಮೂರ್ತಿ ಸ್ವರೂಪಗಳಲ್ಲಿ ಒಂದಾದ ವಿಷ್ಣುವಿನ ಅಂಶನಾದ ನೃಸಿಂಹನು ನಾಶರಹಿತನು. ಅವನ ತೇಜಸ್ಸು ನೀರಿನಲ್ಲಿ ನೀರು, ಹಾಲಿನಲ್ಲಿ ಹಾಲು, ತುಪ್ಪದಲ್ಲಿ ತುಪ್ಪ ಬೆರೆತಂತೆ ನನ್ನಲ್ಲಿ ಸೇರಿ ಐಕ್ಯ ಹೊಂದಿತು. ಆದೇ ವಿಷ್ಣುವು ನೃಸಿಂಹ ರೂಪತಾಳಿ ಜಗತ್ಕಲ್ಯಾಣ ಮಾಡಿ, ಶಾಂತನಾಗದೆ ಜಗತ್ಸಂಹಾರ ಕಾರ್ಯದಲ್ಲಿ ತೊಡಗಿದನು. ಆದುದ ರಿಂದ ಅವನನ್ನು ಆವರಿಸಿದ್ದ ಮಾಯೆಯನ್ನು ಸಂಹರಿಸಿದೆನೇ ವಿನಹ ನರಸಿಂಹನ ಆತ್ಮವನ್ನಲ್ಲ. ಆದುದರಿಂದ ಅವನ ನಿಗ್ರಹದಿಂದ ಅವನಿಗೆ ಯಾವ ಕಳಂಕವೂ ನ್ಯೂನತೆಯೂ ಇಲ್ಲವಾದ್ದರಿಂದ ನನ್ನ ಭಕ್ತರಾದ ನೀವೆಲ್ಲರೂ, ನನ್ನ ಭಕ್ತರಲ್ಲೆಲ್ಲಾ ಶ್ರೇಷ್ಠನೂ, ಶಾಪಾನುಗ್ರಹಶಕ್ತಿಯುಳ್ಳವನೂ, ಆದ ವಿಷ್ಣುವನ್ನು ಅಭೇದ ಬುದ್ಧಿಯಿಂದ ಪೂಜಿಸಿ, ಪ್ರಾರ್ಥಿಸಿ, ಅವನಿಂದ ನಿಮ್ಮ ನಿಮ್ಮ ಇಷ್ಟಾರ್ಥಗಳನ್ನು ಪಡೆಯಿರಿ ಎಂದು ಆದೇಶ ನೀಡಿ ಅಂತರ್ಧಾನ ನಾದನು.

ನಂತರ ಕೃತಾರ್ಥರಾದ ಬ್ರಹ್ಮ ಇಂದ್ರಾದಿ ದೇವತೆಗಳು ಪರಶಿವನನ್ನು ಕುರಿತು,

ಬ್ರಹ್ಮವಿಷ್ಣ್ವಿಂದ್ರಚಂದ್ರಾದಿಸುರಾಃ ಸರ್ವೇ ಮಹರ್ಷಯಃ ।
ದಿತಿಜಾದ್ಯಾಃ ಸಂಪ್ರಸೂತಾಸ್ತ್ವತ್ತಸ್ಸರ್ವೇ ಮಹೇಶ್ವರ ॥
(ಶಿ॰ಪು. 12-24)
ಬ್ರಹ್ಮವಿಷ್ಣುಮಹೇಂದ್ರಾಂಶ್ಚ ಸೂರ್ಯಗಂಧರ್ವಾನಸುರಾನ್ಸುರಾನ್ ।
ತ್ವಂ ವೈ ಸೃಜಸಿ ಪಾಸ್ಯತ್ತಿ ತ್ವಮೇವ ಸಕಲೇಶ್ವರ ॥ (12-25)
ಯತೋ ಹರಸಿ ಸಂಸಾರಂ ಹರ ಇತ್ಯುಚ್ಯತೇ ಬುಧೈಃ ।
ನಿಗೃಹೀತೋ ಹರಿರ್ಯಸ್ಮಾದ್ಧರ ಇತ್ಯುಚ್ಯತೇ ಬುಧೈಃ ॥ (11-26)
ಯತೋ ಬಿಭರ್ಷಿ ಸಕಲಂ ವಿಭಜ್ಯ ತನುಮಷ್ಟಧಾ ।
ಅತೋಽಸ್ಮಾನ್ಪಾಹಿ ಭಗವನ್ಸುರಾನ್ವಾನ್ಯೈ ರಭೀಪ್ಸಿತೈಃ ॥ (12–27)
ದೀನಬಂಧುರ್ದಯಾಸಿಂಧುರದ್ಭುತೋಽತಿಪರಾತ್ಮದೃಕ್ ।
ಪ್ರಾಜ್ಞೋ ವಿರಾಡ್ವಿಭುಸ್ಸತ್ಯಃ ಸಚ್ಚಿದಾನಂದಲಕ್ಷಣಃ ॥ (12_29)

ಹೇ ಮಹೇಶ,ಬ್ರಹ್ಮ,ವಿಷ್ಣು, ಇಂದ್ರ ಚಂದ್ರ ಮೊದಲಾದ ದೇವತೆಗಳೂ, ಮಹರ್ಷಿಗಳೂ,ದೈತ್ಯ-ಮಾನವರೂ, ಎಲ್ಲರೂ ನಿನ್ನ ದೆಸೆಯಿಂದಲೇ ಹುಟ್ಟಿರುವರು. ಇವರೆಲ್ಲರನ್ನೂ ನೀನೇ ಪಾಲಿಸುವೆ, ನೀನೇ ಸಂಹರಿಸುವೆ. ನೀನು ಸಂಸಾರವನ್ನೂ, ಹರಿಯನ್ನೂ ನಿಗ್ರಹಿಸಿದುದರಿಂದ ನಿನ್ನನ್ನು 'ಹರ' ನೆಂದು ಕರೆಯುವರು.

ಯಸ್ಮಾದಂಬರವಾಯುವಹ್ನಿಜಲಭೂದಿಕ್ಚಂದ್ರಸೂರ್ಯಾ-ಕ್ಷಯೋ । ಹ್ಯಾಸನ್ ಸರ್ವಸುರೇಂದ್ರಪೂಜಿತಪದಾಂಭೋಜಸ್ಯ ಶಂಭೋರ್ವಪುಃ । ಏತೇಭ್ಯೋಽಸ್ತಿ ನ ಚಾನ್ಯವಸ್ತು ಜಗತೀತ್ಯಾಮ್ನಾಯಮಾಗ್ರಾಜತೇ । ತಸ್ಮಾತ್ಸಂಶೃಣು ಭೂಪತೇ ಶಿವಮಯಂ ಬ್ರಹ್ಮಾಂಡಜಾತಂ ತ್ವಿದಂ ॥ (ಶಿವಾಧಿಕ್ಯ)

ಆಕಾಶ-ವಾಯು-ಅಗ್ನಿ, ಜಲ-ಭೂಮಿ, ದಿಕ್ಕು-ಚಂದ್ರ-ಸೂರ್ಯ ಇವು ಎಂಟು ಪರಶಿವನಾದ ನಿನ್ನ ದೇಹಗಳಾದವು. ಇವುಗಳನ್ನು ಬಿಟ್ಟು, ಬೇರೆ ಯಾವ ವಸ್ತುವೂ ಜಗತ್ತಿನಲ್ಲಿಲ್ಲ. ಆದಕಾರಣ ಈ ಬ್ರಹ್ಮಾಂಡ ಸಮೂಹವೆಲ್ಲಾ ಶಿವಮಯವಾಗಿರುವುದು.

ಸರ್ವಭೂತಾಂತರಾತ್ಮಾಸೌ ಮಹಾದೇವೋ ಮಹೇಶ್ವರಃ ।
ಮೂರ್ತ್ಯಷ್ಟಕಂ ಸಮಾಶ್ರಿತ್ಯ ಬಿಭರ್ತೀದಂ ಚರಾಚರಂ ॥

ನಿನ್ನ ದೇಹವನ್ನು ಎಂಟು ಭಾಗಗಳಾಗಿ ವಿಂಗಡಿಸಿ, ಚರಾಚರಾತ್ಮಕವಾದ ಈ ಪ್ರಪಂಚವನ್ನೆಲ್ಲಾ ಧರಿಸಿರುವೆ. ಆದುದರಿಂದ ನೀನು ಮಹಾಪುರುಷನು. ಸರ್ವೇಶ್ವರನು, ಸರ್ವಜೀವಿಗಳ ಆತ್ಮದಲ್ಲಿ ನೆಲೆಸಿರುವವನು, ವಿಕಾರದೂರನು, ಸತ್ಪುರುಷರಿಗೆಲ್ಲಾ ನೀನೊಬ್ಬನೇ ಗತಿಯು, ಮತಿಯು, ನೀನೇ ಪರಬ್ರಹ್ಮನು, ನೀನೇ ಅನಾಥರಕ್ಷಕನು, ಪಶುಪತಿಯು, ಪ್ರಾಜ್ಞನು, ಅದ್ಭುತ ಲೀಲೆಯುಳ್ಳವನು, ವ್ಯಾಪಕನು, ವಿರಾಟ್ಪುರುಷನು, ತ್ರಿಕಾಲಾಬಾಧಿತನು ಎಂದು ವಿಧವಿಧವಾಗಿ ಸ್ತೋತ್ರ ಮಾಡುತ್ತಾ ಕೃತಾರ್ಥರಾದೆವೆಂದು ಸಂತೋಷದಿಂದ ತಮ್ಮ ತಮ್ಮ ಲೋಕಗಳಿಗೆ ಹೋದರು.

ಫಲಶ್ರುತಿ

ಯಃಪಠೇಚ್ಛೃಣುಯಾದ್ವಾಪಿ ನಿಷ್ಕಾಮೋಽಮೃತಮೈಶ್ವರಂ ।
ರುದ್ರಲೋಕಂ ಸಮಾಸಾದ್ಯ ರುದ್ರಸ್ಯಾನುಚರೋ ಭವೇತ್ ॥ (12–46)
ರುದ್ರಲೋಕಮನುಪ್ರಾಪ್ಯ ರುದ್ರೇಣ ಸಹ ಮೋದತೇ ।
ತತಸ್ಸಾಯುಜ್ಯಮಾಪ್ನೋತಿ ಶಿವಸ್ಯ ಕೃಪಯಾ ಮುನೇ ॥ (12–47)

ಯಾರು ವೇದಸಾರವನ್ನೊಳಗೊಂಡ ಈ ಶ್ರೇಷ್ಠ ಉಪಾಖ್ಯಾನವನ್ನು ಭಕ್ತಿಯಿಂದ ಓದುವರೋ ಅಥವಾ ಕೇಳುವರೋ ಅವರ ಇಷ್ಟಾರ್ಥಗಳೆಲ್ಲಾ ಸಿದ್ಧಿಸುವುವು. ಯಶಸ್ಸೂ ಆಯುಸ್ಸೂ ಹೆಚ್ಚುವುದು. ವಿಘ್ನಗಳೂ, ರೋಗಗಳೂ, ನಿವಾರಣೆಯಾಗುವುವು. ಅಪಮೃತ್ಯು ನಿವಾರಣೆಯಾಗಿ, ಶತೃಗಳು ನಾಶಹೊಂದಿ, ಬುದ್ಧಿಯು ವೃದ್ಧಿಹೊಂದಿ, ಅವರಲ್ಲಿ ಒಂಭತ್ತು ವಿಧವಾದ ಭಕ್ತಿಯೂ ಬೆಳೆದು ನಿರ್ಮಲಜ್ಞಾನವಂಕುರಿಸುವುದು. ಅವರಲ್ಲಿ ಶಿವನು ಸನ್ನಿಹಿತವಾಗಿರುವನು. ನಿಷ್ಕಾಮವಾಗಿ ಈ ಪುಣ್ಯ ಚರಿತ್ರೆಯನ್ನು ಭಕ್ತಿಯಿಂದ ಕೇಳಿದವರು ಶಿವಲೋಕದಲ್ಲಿ ಶಿವನನುಚರರಾಗಿ, ಕೊನೆಗೆ ಶಿವಸಾಯುಜ್ಯವನ್ನು ಹೊಂದುವರು.

॥ ಶಿವಂ ಭೂಯಾತ್ ॥

ತೃತೀಯ ತರಂಗ

ವೀರೇಶನಿಂದ ಹನುಮಂತನಿಗೆ ಶಿವದೀಕ್ಷೆ

ಸಾರಾಂಶ :

ದಕ್ಷಯಜ್ಞದ ನಂತರ ವೀರಭದ್ರನು ಭದ್ರಕಾಳಿಯೊಡನೆ ಗಣಪದವಿಯನ್ನು ಪಡೆದು ಸುಖದಿಂದಿದ್ದನು.

ಇತ್ತ ವಿಷ್ಣುವು ಭೃಗು ಹಾಗೂ ನಂದೀಶ್ವರನ ಶಾಪದಿಂದ, ದಶರಥನ ಪುತ್ರನಾಗಿ ಜನಿಸಿ, ರಾವಣಾದಿ ರಾಕ್ಷಸರನ್ನು ಶಿವಾನುಗ್ರಹದಿಂಥ ಸಂಹರಿಸಿ, ಸೀತೆಯೊಡನೆಯೂ, ಸಕಲದೇವತೆಗಳೊಡನೆಯೂ ಗಂಧಮಾದನ ಪರ್ವತದ ತಪ್ಪಲಿನಲ್ಲಿ ಒಂದು ಶಿವಲಿಂಗವನ್ನು ಪ್ರತಿಷ್ಠೆ ಮಾಡಿ, ನಂತರ ಹನುಮಾದಿಗಳೊಡನೆ ಅಯೋಧ್ಯೆಗೆ ಹಿಂದಿರುಗುವನು.

ನಂತರ ಹಿರಿಯರ ಸಲಹೆಯಂತೆ, ಹದಿನಾಲ್ಕು ವರ್ಷಗಳ ವನವಾಸ ಕಾಲದಲ್ಲಿ, ರಾವಣಾದಿ ರಾಕ್ಷಸರನ್ನು ಕೊಂದು, ವಿಜಯಿಯಾಗಿ ಹಿಂದಿರುಗಿದ ಸವಿನೆನಪಿಗಾಗಿ ವಿಜಯೋತ್ಸವವನ್ನು ಏರ್ಪಡಿಸಿ, ಶಿವನನ್ನು ಆರಾಧಿಸಿ, ತದಂಗವಾಗಿ ಎಲ್ಲ ಪುರಪ್ರಮುಖರಿಗೂ, ಸಾಮಂತರಿಗೂ, ಸನ್ಮಾನಗಳನ್ನು ನೀಡಿದನು. ಮಯಕ್ಕೆ ನಾರದರು ಬರಲು, ಅವರನ್ನು ಪೂಜಿಸಿ, ಸತ್ಕರಿಸಿದನು. ರಾಮನ ಕೋರಿಕೆಯಂತೆ, ರಾಮನ ಜಯಕ್ಕೆ ಮುಖ್ಯ ಕಾರಣನಾದ ಹನುಮಂತನ ಪವಿತ್ರ ಚರಿತ್ರೆಯನ್ನೂ ಮಹಿಮೆಯನ್ನೂ ರಾಮನಿಗೆ ತಿಳಿಸಿ, ಹನುಮನಿಗೆ ಇಷ್ಟವಾದ ಸನ್ಮಾನವನ್ನು ನೀಡಬೇಕೆಂದು ಸಲಹೆ ಮಾಡಿ, ನಾರದರು ಅಲ್ಲಿಂದ ಹೊರಟು ಹನುಮಂತನನ್ನು ಕಂಡು, ರಾಮನು ಅವನಿಗೆ ನೀಡುವ ಸನ್ಮಾನ ಸಮಾರಂಭದಲ್ಲಿ, ರಾಮನಿಂದ ಶಿವಸಾಯುಜ್ಯ ಪದವಿಯನ್ನು ಬೇಡುವಂತೆ ಸಲಹೆ ಮಾಡಿ ಹೊರಡುವರು.

ನಂತರ, ಅಗಸ್ತ್ಯಾದಿ ಮಹರ್ಷಿಗಳು ರಾಮನನ್ನು ಕಂಡು ಆಶೀರ್ವದಿಸಿ ರಾಮನಿಗೆ ಹನುಮಂತನ ಪವಿತ್ರ ಚರಿತ್ರೆಯನ್ನು ತಿಳಿಸುವರು. ರಾಮನು ಅರಣ್ಯದಲ್ಲಿ ತಾನು ಮಾಡಿದ ಶಿವಾರಾಧನೆ, ಶಿವನ ಅನುಗ್ರಹ, ಹನುಮಾದಿಗಳ ಸಹಾಯ, ರಾವಣಾದಿಗಳ ಸಂಹಾರ, ಇತ್ಯಾದಿ ಎಲ್ಲಾ ವಿವರಗಳನ್ನೂ ಅಗಸ್ತ್ಯರಿಗೆ ಅರಿಕೆ ಮಾಡುವನು.

ನಂತರ ಹನುಮಂತನನ್ನು ಸಭೆಗೆ ಆಹ್ವಾನಿಸಿ, ಅವನಿಗೆ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿ, ತನ್ನಲ್ಲಿರುವ ವಸ್ತುಗಳಲ್ಲೆಲ್ಲಾ ಶ್ರೇಷ್ಠವಾದ ರತ್ನಹಾರವನ್ನು ಅವನಿಗೆ ಸನ್ಮಾನವಾಗಿ ನೀಡುವನು. ಶಿವಜ್ಞಾನ ಸಂಪನ್ನನೂ, ಬ್ರಹ್ಮಚಾರಿಯೂ, ವಿರಕ್ತನೂ ಆದ ಹನುಮಂತನು ಆ ಸನ್ಮಾನವನ್ನು ನಿರಾಕರಿಸಿ ರಾಮನಿಗೆ ಆ ರತ್ನಕ್ಕೆ ಸಮಾನವಾದ ರತ್ನಗಳ ರಾಶಿಯನ್ನೇ ಸಮುದ್ರದಿಂದ ತಂದು ಕೊಟ್ಟು ಹೊರಡುವನು. ರಾಮ – ಹನುಮಂತರಿಗೆ ಸಂವಾದ ನಡೆದ ನಂತರ ಅವರೆಲ್ಲರ ಅನುಮತಿಯನ್ನು ಪಡೆದು ಹನುಮಂತನು ಕೈಲಾಸಕ್ಕೆ ತೆರಳುವನು. ನಂದೀಶ್ವರನು ಬ್ರಹ್ಮಹತ್ಯಾದೋಷಯುಕ್ತನೂ, ಗುರು ಕೊಟ್ಟ ಲಿಂಗವಿಲ್ಲದ ಭವಿಯೂ ಆದ ಹನುಮಂತನನ್ನು ತಡೆದು, ವೀರಭದ್ರನನ್ನು ಆಶ್ರಯಿಸಿ ಶಿವದೀಕ್ಷೆಯನ್ನು ಪಡೆದು ಬರುವಂತೆ ಸಲಹೆ ಮಾಡುವನು ಮತ್ತು ರುದ್ರದೇಹದಿಂದ ಉಗಮಿಸಿದ ನರ್ಮದಾ ನದಿಯ ಬಳಿ ತಪಸ್ಸನ್ನಾಚರಿಸಿ ಶಿವನ ಅನುಗ್ರಹದಿಂದ ಅವನಿಗುಂಟಾಗಿರುವ ಬ್ರಹ್ಮಹತ್ಯಾ ದೋಷವನ್ನು ನಿವಾರಿಸಿಕೊಳ್ಳುವಂತೆ ಹೇಳಿದನು. ಅದರಂತೆ ಹನುಮಂತನು ಶಿವನನ್ನು ಮೆಚ್ಚಿಸಿ ಬ್ರಹ್ಮಹತ್ಯಾದೋಷದಿಂದ ಮುಕ್ತನಾದನು.

ಅಲ್ಲಿಂದ ಹನುಮಂತನು ನಾರದರ ಸಹಾಯದಿಂದ ವೀರಭದ್ರನನ್ನು ಕಂಡು, ಅವನ ಅನುಗ್ರಹದಿಂದ, ಶಿವದೀಕ್ಷೆಯನ್ನು ಪಡೆದು, ಲಿಂಗಾಂಗಸಾಮರಸ್ಯದ ಉಪದೇಶ ಹೊಂದಿ, ಶಿವಾರಾಧನೆಯಲ್ಲಿ ಕಾಲ ಕಳೆಯುತ್ತಿದ್ದನು. ಒಮ್ಮೆ ಗೌತಮರ ಆಶ್ರಮಕ್ಕೆ ತ್ರಿಮೂರ್ತಿಗಳು ಆಗಮಿಸಿರುವ ವಿಷಯವನ್ನು ತಿಳಿದು, ಅಲ್ಲಿಗೆ ಹೋಗಿ, ಆ ದೇವತೆಗಳ ಮುಂದೆ ಆನಂದ ಹಾಗೂ ಭಕ್ತಿ ಪರವಶನಾಗಿ ತನ್ನ ಸುಮಧುರ ಕಂಠದಿಂದ ಗಾನಮಾಡುವನು. ಅವನ ಗಾನಕ್ಕೆ ಮನಸೋತ ಶಿವನು ಹನುಮಂತನನ್ನು ಕೈಲಾಸಕ್ಕೆ ಬರುವಂತೆ ಆಹ್ವಾನಿಸುವನು. ಶಿವನಿಂದ ತನಗೊದಗಿದ ಅತಿ ದುರ್ಲಭವಾದ ಅನುಗ್ರಹಕ್ಕೆ ತಲೆಬಾಗಿ ಭಕ್ತಿ ಪರವಶತೆಯಿಂದ ಶಿವ-ಶಿವೆಯರನ್ನು ತನ್ನ ಹೆಗಲ ಮೇಲೆ ಕೂಡಿಸಿಕೊಂಡು ಕೈಲಾಸಕ್ಕೆ ಹೋಗಿ ತನ್ನ ಗಾನವನ್ನು ಮುಂದುವರಿಸುವನು. ಅಷ್ಟರಲ್ಲಿ ತನ್ನ ಗುರುವು ನಿಯಮಿಸಿದ್ದ ಲಿಂಗಪೂಜಾಸಮಯವು ಸಮೀಪಿಸಲು ತನ್ನ ಗಾನವನ್ನು ನಿಲ್ಲಿಸಿ, ಶಿವನ ಹಿತೋಕ್ತಿಗೆ ಕಿವಿಗೊಡದೆ ಅಲ್ಲಿಂದ ಸ್ವಸ್ಥಾನಕ್ಕೆ ತೆರಳಿ ಲಿಂಗಪೂಜೆ ಮಾಡಲುಪಕ್ರಮಿಸಿದನು. ಇತ್ತ ಹನುಮಂತನ

ಅವಿಧೇಯತೆಯಿಂದ ಕುಪಿತನಾದ ಶಂಕರನು ಹನುಮಂತನ ಲಿಂಗವನ್ನು ಮಾಯ ಮಾಡುವನು. ಹನುಮಂತನು ಪೂಜಾ ಸಿದ್ಧತೆಗಳನ್ನು ಮುಗಿಸಿ, ಸಜ್ಜಿಗೆಯನ್ನು ತೆಗೆದು ಆದರಲ್ಲಿ ಲಿಂಗವಿಲ್ಲದಿರುವುದನ್ನು ಕಂಡು ಅತ್ಯಂತ ದುಃಖದಿಂದ ಗುರುವು ಬೋಧಿಸಿದ್ದ ಧರ್ಮಾಕ್ಕನುಗುಣವಾಗಿ ಲಿಂಗಬಾಹಿರವಾದ ತನ್ನ ಕಾಯವನ್ನು ತ್ಯಜಿಸುವುದಾಗಿ ನಿಶ್ಚಯಿಸಿ, ತುಂಗಾತೀರಕ್ಕೆ ಹೋಗಿ ಕೊನೆಯ ಬಾರಿಗೆ ತನ್ನ ಗುರುವನ್ನು ಧ್ಯಾನಿಸತೊಡಗುವನು. ತನ್ನ ಪರಮ ಭಕ್ತನಾದ ಹನುಮಂತನ ಸ್ಥಿತಿಯನ್ನು ತಿಳಿದ ವೀರಭದ್ರನು ಕೂಡಲೇ ಅವನಿಗೆ ದರ್ಶನವಿತ್ತು, ಅವನ ಪ್ರಾಣತ್ಯಾಗಕ್ಕೆ ಕಾರಣವನ್ನು ತಿಳಿದು, ಅತ್ಯಂತ ಕೋಪಾವಿಷ್ಟನಾಗಿ, ತನ್ನ ಕಿಡಿಗಣ್ಣಿಗೆ ಹನುಮಂತನ ಲಿಂಗವನ್ನು ಎಲ್ಲಿದ್ದರೂ ತರುವಂತೆ ಆಜ್ಞೆ ಮಾಡಿ ಕಳುಹುವನು. ಅದು ಮೂರು ಲೋಕಗಳನ್ನೂ ದಹಿಸುತ್ತಾ ಶಿವನ ಬಳಿಗೆ ತೆರಳುವುದು. ಆಗ ಶಿವನು ಗಿರಿಜೆಯ ಸಲಹೆಯಂತೆ ಹನುಮಂತನ ಗುರು ಭಕ್ತಿಗೆ ಮೆಚ್ಚಿ, ವೀರಭದ್ರನ ಕಿಡಿಗಣ್ಣನ್ನು ಶಾಂತ ಗೊಳಿಸಿ, ಹನುಮಂತನನ್ನು ಕರೆಸಿ ಅವನ ಲಿಂಗವನ್ನು ತನ್ನ ಅಮೃತ ಹಸ್ತದಿಂದಲೇ ಅವನಿಗೆ ಕೊಟ್ಟು ಅವನ ಗುರುನಿಷ್ಠೆಗೆ ಮೆಚ್ಚಿ ಅವನ ರೋಮ ರೋಮಗಳೂ ಲಿಂಗಮಯವಾಗುವಂತೆ ವರವನ್ನಿತ್ತು, ಅವನಿಗೆ ಗಣಪದವಿಯನ್ನು ಕರುಣಿಸಿದನು.

[ಮೇಲಿನ ಕಥಾ ಭಾಗವು, ಭಗವಾನ್ ವ್ಯಾಸರಚಿತ, ಗಣೇಶ ಪುರಾಣ, ಭಾಗ-4, ಶಿವರಹಸ್ಯ, – ತೃತೀಯಾಂಶ, ಸ್ಕಾಂದಪುರಾಣ, 2-3-5–ಶಿವ ಪುರಾಣ, ಶಿವಗೀತೆ, ಮಹಾಭಾರತ, ಶ್ರೀಮದುತ್ತರ ರಾಮಾಯಣ, ಲಿಂಗಧಾರಣಚಂದ್ರಿಕೆ, 'ವೀರಭದ್ರನಿಂದ ಹನುಮಂತನಿಗೆ ಲಿಂಗಧಾರಣ' ಎಂಬ ನಾಟಕ ಗ್ರಂಥ, ಮಾರುತಿ ಭಕ್ತಿ ದರ್ಪಣ, ವೀರಭದ್ರನ ವಚನಗಳು, ಶ್ರೀ ವೀರಭದ್ರೇಶ್ವರ ಪುರಾಣ, ವಾಯು ಪುರಾಣ, ಮಾರುತಿ ಪುರಾಣ ಮುಂತಾದ ಪವಿತ್ರ ಹಾಗೂ ಸನಾತನ ಧರ್ಮ ಗ್ರಂಥಗಳ ಆಧಾರದ ಮೇಲೆ ರೂಪಿಸಲಾಗಿದೆ].

ಆಂಜನೇಯನ (ಹನುಮಂತನ) ಜನ್ಮ ರಹಸ್ಯ :

....ಸುಮೇರುರ್ನಾಮ ಪರ್ವತಃ ।
ಯತ್ರ ರಾಜ್ಯಂ ಪ್ರಶಾಸ್ತ್ಯಸ್ಯ ಕೇಸರೀ ನಾಮ ವೈ ಪಿತಾ ॥
ತಸ್ಯ ಭಾರ್ಯಾ ಬಭೂವೈಷಾ ಹ್ಯಂಜನೇತಿ ಪ್ರತಿಶ್ರುತಾ ।
ಜನಯಾಮಾಸ ತಸ್ಯಾಂ ವೈ ವಾಯುರಾತ್ಮಜಮುತ್ತಮಮ್ ॥

ಒಮ್ಮೆ, ಪುಂಜಕಸ್ಥಲೀ ಎಂಬ ಅಪ್ಸರೆಯು ಶಾಪದಿಂದ ವಾನರ ಜನ್ಮ ಪಡೆದ 'ಕುಂಜರ' ನೆಂಬುವನು, ಪರಶಿವನನ್ನು ಕುರಿತು ಪುತ್ರಪ್ರಾಪ್ತಿಗಾಗಿ ತಪಸ್ಸುಮಾಡುವನು.

ವಿಶ್ರುತಾ ಸರ್ವಲೋಕೇಷು ಪುತ್ರೀ ತವ ಭವಿಷ್ಯತಿ ।
ತಸ್ಯಾಃ ಪುತ್ರೋ ಮಹಾಬಾಹುಸ್ತವ ಪ್ರೀತಿಂ ಕರಿಷ್ಯತಿ ॥

(ಸ್ಕಾ. 1, ಅ. 39-8)

ಅವನ ತಪಸ್ಸಿಗೆ ಮೆಚ್ಚಿದ ಶಿವನು ಅವನಿಗೆ ಓರ್ವ ಪುತ್ರಿಯು ಜನಿಸುವುದಾಗಿಯೂ, ಅವಳ ಗರ್ಭದಲ್ಲಿ ತನ್ನಂಶದ ಓರ್ವ ಪ್ರತಾಪಶಾಲಿಯಾದ ಪುತ್ರನು ಜನಿಸುವನೆಂದೂ ಹೇಳಿ ಅಂತರ್ಧಾನನಾದನು.

ಹಿಂದೆ ಪರಬ್ರಹ್ಮನು ಸರ್ವಾಂಗ ಸುಂದರಿಯಾದ ಅಹಲ್ಯೆ ಎಂಬ ಕನ್ಯೆಯನ್ನು ಸೃಷ್ಟಿಸಿ, ಅವಳನ್ನು ಗೌತಮರಿಗೆ ವಿವಾಹ ಮಾಡಿಕೊಟ್ಟನು. ಅವಳ ಗರ್ಭದಲ್ಲಿ 'ಅಂಜನ' ಎಂಬ ಪುತ್ರಿಯು ಜನಿಸಿದಳು. ಗೌತಮರು ಆ ಮಗುವನ್ನು ಕುಂಜರನೆಂಬುವನ ವಶಕ್ಕೆ ಒಪ್ಪಿಸಿ ತಾವು ತಪಸ್ಸಿಗೆ ತೆರಳಿದರು. ಅಂಜನಿಯು ಕುಂಜರನೇ ತನ್ನ ತಂದೆಯೆಂದೂ, ಅವನ ಪತ್ನಿ ವಿಂಧ್ಯಾವಳಿಯನ್ನೇ ತನ್ನ ತಾಯಿಯೆಂದೂ ಭಾವಿಸಿ ಬೆಳೆಯುತ್ತಿದ್ದಳು.

ಅದೇ ಸಮಯದಲ್ಲಿ ಸುಮೇರು ಗಿರಿಯಲ್ಲಿ 'ಕೇಸರಿ' ಎಂಬ ವಾನರ ಶ್ರೇಷ್ಠನು ಅರವತ್ತು ಸಾವಿರ ವಾನರರಿಗೆ ರಾಜನಾಗಿದ್ದನು. ಒಮ್ಮೆ ಅವನು ದೇವತೆಗಳ ಪ್ರಾರ್ಥನೆಯಂತೆ ಶಂಭಸಾಧನನೆಂಬ ರಾಕ್ಷಸನನ್ನು ಸಂಹರಿಸಿ, ದೇವತೆಗಳಿಗೂ, ಋಷಿಗಳಿಗೂ, ಒದಗಿದ್ದ ಆಪತ್ತನ್ನು ಪರಿಹರಿಸಿದನು. ಆಗ ದೇವತೆಗಳು ಪ್ರಸನ್ನರಾಗಿ, ಅವನಿಗೆ ಕೃತಜ್ಞತಾಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸಿ, ನಂತರ ಅವನಿಗೆ ಶೀಘ್ರದಲ್ಲಿಯೇ ಕಲ್ಯಾಣವಾಗುವಂತೆ ಹರಸಿ

ಭರು. ಇತ್ತ ಅಂಜನಿಯು ಪ್ರಾಪ್ತವಯಸ್ಕಳಾಗಿ, ಸಂಭಾವಿತಳೂ, ಲೋಕ ಸುಂದರಿಯೂ ಆಗಿ ಪ್ರಸಿದ್ಧಿ ಪಡೆದಳು. ಕುಂಜರನ ಇಂಥಾ ಸುರೂಪಿಯೂ, ಸಂಭಾವಿತಳೂ ಆದ ಪುತ್ರಿಗೆ ಅನುರೂಪನಾದ ವರನನ್ನು ಹುಡುಕಲು ಸಕಲ ಏರ್ಪಾಟುಗಳನ್ನೂ ಮಾಡಿದನು. ಅಷ್ಟರಲ್ಲಿ, ಕೇಸರಿಯು, ಅಂಜನಳ ರೂಪು ಲಾವಣ್ಯಗಳನ್ನೂ ಶ್ರೇಷ್ಠ ಸಂಸ್ಕೃತಿಯನ್ನೂ ತನ್ನ ಅನುಚರರಿಂದ ತಿಳಿದು, ಅವಳನ್ನು ವಿವಾಹವಾಗುವುದಾಗಿ ಮನಸ್ಸಿನಲ್ಲಿ ನಿಶ್ಚಯಿಸಿದನು. ನಂತರ ತನ್ನ ಆಪ್ತರೊಡನೆ, ಕುಂಜರನನ್ನು ಕಂಡು, ವಿವಾಹದ ವಿಷಯವನ್ನು ಪ್ರಸ್ತಾಪಿಸಿ, ಅಂಜನಿಯನ್ನು ತನಗೆ ವಿವಾಹಮಾಡಿಕೊಡುವಂತೆ ಕೇಳಿದನು. ಕೇಸರಿಯ ಪ್ರತಾಪ, ಸದ್ಗುಣಗಳನ್ನು ಅರಿತ ಕುಂಜರನು ಸಮ್ಮತಿ ನೀಡಿ ಅಂಜನಿಯ ವಿವಾಹವನ್ನು ಸಂಭ್ರಮದಿಂದ ನಡೆಸಿದನು. “ ಅತಿ ಚತುರ ಕೇಸರಿ ಎನಿಪ್ಪವಂ, ಸುತೆಯ ಕರವಿಡಿಯಲ್ಕೆ ಯೋಗ್ಯನೆಂದು, ಪರಿಣಯವ ನಡೆಸಿದಂ ” (ಮಾರುತಿ ಭಕ್ತಿದರ್ಪಣ). ಆದರೆ ಅಂಜನಿಗೆ ಅನೇಕ ಕಾಲ ಸಂತಾನವಾಗಲಿಲ್ಲ. ಅವಳು ಬಂಜೆತನದಿಂದ ಬೇಸತ್ತು, ಅತ್ಯಂತ ದುಃಖಿತಳಾಗಿ, ಚಿಂತಿಸ ತೊಡಗಿದಳು.

ಸಂತಾನ ಪ್ರಾಪ್ತಿಗಾಗಿ ಹಗಲಿರುಳೂ ಚಿಂತಿಸುತ್ತಿದ್ದ ಅಂಜನಿಯ ದುಃಖ ವನ್ನು ಅರಿತು ವಾಯುವು ಅವಳಿಗೆ ದರ್ಶನವಿತ್ತು ಎಲೈ ಅಂಜನ ! ಹೀಗೇಕೆ ಕಳೆಗುಂದಿದ ಮುಖವುಳ್ಳವಳಾಗಿ ಚಿಂತಿಸುತ್ತಿರುವೇ ? ಎಂದು ಕೇಳಿದನು, ಆಗ, ಎಲೈ ವಾಯುದೇವನೇ ! ನನ್ನ ಕಲ್ಯಾಣವಾಗಿ ಎಷ್ಟೋ ವರ್ಷಗಳು ಗತಿಸಿ ದರೂ ನನಗೆ ಸಂತಾನ ಪ್ರಾಪ್ತವಾಗಲಿಲ್ಲ. ‘ ಅಪುತ್ರಸ್ಯ ಗತಿರ್ನಾಸ್ತಿ ’ ಎಂಬ ಶಾಸ್ತ್ರೋಕ್ತಿಯು ನನ್ನನ್ನು ಬಾಧಿಸುತ್ತಿದೆ. ಇದು ನನ್ನ ಚಿಂತೆಗೆ ಕಾರಣ ಎಂದು ತಿಳಿಸಿದಳು. ಆಗ ಅಂಜನಿಯ ಮನೋಭೀಷ್ಟವನ್ನರಿತು ಎಲೈ, ಅಂಜನ ನೀನು ಮಹಾಶಿವಭಕ್ತಳು. ಶಿವನೇ ನಿಮ್ಮ ಕುಲದೈವ. ಆ ಶಿವನೇ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನು. ಅವನ ಅನುಗ್ರಹದಿಂದಲೇ ಈ ಚರಾಚರವೆಲ್ಲಾ ಕರ್ತವ್ಯೋನ್ಮುಖವಾಗಿದೆ. ಅವನ ಕೃಪೆಯಿಂದಲೇ ನಿನ್ನ ಮನೋರಥವು ಸಿದ್ಧಿಸಬೇಕಾಗಿದೆ. ಅವನು ದಯಾಮಯನು, ಭಕ್ತವತ್ಸಲನು, ಭಕ್ತರ ಇಷ್ಟಾರ್ಥಗಳನ್ನು ಅನುಗ್ರಹಿಸುವುದೇ ಅವನಿಗೆ ಪ್ರಿಯವಾದ ಕಾರ್ಯ. ಆದ್ದರಿಂದ ನೀನು, ಮಿಂದು ಶುಚಿರ್ಭೂತಳಾಗಿ, ಒಂದು ಪವಿತ್ರ ಸ್ಥಳದಲ್ಲಿ, ನಿನ್ನ ಎಲ್ಲಾ ಪ್ರಾಪಂಚಿಕ ವ್ಯವಹಾರಗಳನ್ನೂ ತ್ಯಜಿಸಿ, ಇಂದ್ರಿಯ ನಿಗ್ರಹ ಮಾಡಿ,

ಶಾಂತಚಿತ್ತಳಾಗಿ, ಸ್ಥಿರಮನಸ್ಸಿನಿಂದ, ಆ ಉಮಾಮಾಹೇಶ್ವರರ ಮಂಗಳ ಸ್ವರೂಪವನ್ನು ನಿನ್ನ ಹೃತ್ಕಮಲದಲ್ಲಿ ಆವಾಹನೆ ಮಾಡಿಕೊಂಡು, ಅನ್ನ ಆಹಾರಾದಿಗಳನ್ನು ತ್ಯಜಿಸಿ, ತಪಸ್ಸನ್ನು ಮಾಡು. ನಿನ್ನ ತಪಸ್ಸಿನ ಫಲವಾಗಿ ಶಿವದರ್ಶನ ಭಾಗ್ಯ ಲಭಿಸುವುದು. ಹಿಂದೆ ನಿನ್ನ ತಂದೆಯಾದ ಕುಂಜರನಿಗೆ ದೇವತೆಗಳು ನಿನ್ನ ಗರ್ಭದಲ್ಲಿ ಶಿವತೇಜೋರೂಪಿಯಾದ ಓರ್ವ ಪುತ್ರನು ಜನಿಸುವುದಾಗಿ ಅನುಗ್ರಹಿಸಿರುವರು. ದೇವತೆಗಳ ವಾಕ್ಯವು ಎಂದಿಗೂ ಸುಳ್ಳಾಗಲಾರದು. ಅದೂ ಅಲ್ಲದೆ ಒಮ್ಮೆ ಮಹಾ ಪರಾಕ್ರಮಶಾಲಿಯೂ, ಶ್ರೇಷ್ಠ ಶಿವಭಕ್ತನೂ, ಬ್ರಾಹ್ಮಣೋತ್ತಮನೂ, ಆದ ಪೌಲಸ್ತ್ಯನು ಕೈಲಾಸಕ್ಕೆ ಹೋದನು. ಕೈಲಾಸ ದ್ವಾರದಲ್ಲಿದ್ದ ದ್ವಿತೀಯ ಶಂಭುವಾದ ನಂದೀಶ್ವರನನ್ನು ಕಂಡು ಕಪಿಯೆಂದು ಹಂಗಿಸಿ ನಕ್ಕನು. ಮಹಾ ಕುಪಿತನಾದ ನಂದಿಯು, ಎಲೈ ಮದಾಂಧನಾದ ರಾವಣನೇ! ಕೇಳು, ನೀನು ನನ್ನನ್ನು ಕಪಿಯೆಂದು ನಿಂದಿಸಿರುವುದರಿಂದ, ಶೀಘ್ರದಲ್ಲಿಯೇ ನಿನ್ನ ಅಭೇದ್ಯವೂ, ಸಾಗರ ಮಧ್ಯ ದಲ್ಲಿದ್ದು ದುರ್ಗಮವಾದುದೂ ಆದ ಲಂಕಾನಗರಿಯು, ಓರ್ವ ಕಪಿವೀರ ನಿಂದಲೇ ನಾಶವಾಗಿ, ಅವನಿಂದಲೇ ನಿನ್ನ ಗರ್ವಭಂಗವಾಗುವುದು ಎಂದು ಶಪಿಸಿದನು. ಅಲ್ಲದೆ, ವನವಾಸದಲ್ಲಿರುವ ವಿಷ್ಣುವಿನ ಅವತಾರಿಯಾದ ಶ್ರೀರಾಮಚಂದ್ರನು, ಸೀತಾ ವಿರಹ ವ್ಯಥೆಯಿಂದ, ಶಿವನನ್ನು ಕುರಿತು ತಪಸ್ಸನ್ನಾಚರಿಸಿದನು. ಆಗ ಶಿವನು ದರ್ಶನ ನೀಡಿ ಎಲೈ ರಾಮನೇ! ನೀನು ನಿಶ್ಚಿಂತೆಯಿಂದಿರು. ಕಿಷ್ಕಿಂಧೆಯಲ್ಲಿ ದೇವತೆಗಳು ವಾನರಶ್ರೇಷ್ಠರಾಗಿ ಅವತರಿಸಿರುವರು. ಅವರು, ನನ್ನ ಅಂಶದಿಂದ ಅವತರಿಸುವ ಓರ್ವ ವೀರನನ್ನು ಕೂಡಿ ನಿನಗೆ ಸಹಾಯ ಮಾಡಿ, ನಿನಗೆ ಸೀತೆಯನ್ನೂ, ಜಯಶ್ರೀಯನ್ನೂ ದೊರಕಿಸಿಕೊಡುವರೆಂದು ಅನುಗ್ರಹಿಸಿರುವನು. ಆದುದರಿಂದ, ನಿನ್ನ ಗರ್ಭ ದಲ್ಲಿ ಆ ಶಿವಾಂಶಸಂಭೂತನಾದ ಪ್ರತಾಪಶಾಲಿ ಪುತ್ರನು ಜನಿಸಿ ಶ್ರೀರಾಮನಿಗೆ ಸಹಾಯಮಾಡುವನು ಎಂದು ಹೇಳಿ ಅದೃಶ್ಯನಾದನು.

ಅಂಜನಿಯ ತಪಸ್ಸು :

ಅಂಜನಿಯು ಘೋರ ತಪಸ್ಸನ್ನಾಚರಿಸುತ್ತಿರಲು, ಅವಳ ತಪೋ ಜ್ವಾಲೆಯು ಲೋಕವನ್ನೇ ದಹಿಸುತ್ತಿರಲು ಶಿವನು ವಾಯುವನ್ನು ಅವಳ ಬಳಿಗೆ ಕಳುಹಿದನು.

ಶೈವಂ ಘೋರಂ ತಪಶ್ಚಕ್ರೇ ಪುತ್ರಾರ್ಥಂ ತು ಸುದುಷ್ಕರಂ ।
ಪಾರ್ವತೀಸಹಿತಃ ಶಂಭುರ್ವೃಷಭೋಪರಿ ಸಂಸ್ಥಿತಃ ॥

(ಸ್ಕಾಂದ. 1 ವೈಷ್ಣವ–ಅಧ್ಯಾಯ 5–40)

ಆಂಜನೇಯನ ಜನನ :

ಒಮ್ಮೆ ಭಸ್ಮಾಸುರನ ಸಂಹಾರ ಕಾಲದಲ್ಲಿ, ವಿಷ್ಣುವು ತ್ರಿಪುರಗಳನ್ನೂ ಮರುಳು ಮಾಡುವಂಥಾ 'ಮೋಹಿನೀ' ರೂಪವನ್ನು ಧರಿಸಿದನು.

(ಶತರುದ್ರೀಯ)

ಏತಸ್ಮಿನ್ಸಮಯೇ ಶಂಭುರದ್ಭುತೋತಿಕರಃ ಪ್ರಭುಃ ।
ದರ್ಶಯನ್ ಮೋಹಿನೀರೂಪಂ ವಿಷ್ಣೋಸ್ಸ ಹಿ ವಸದ್ಗುಣಃ ॥

(ಶಿ.ಪು. ಭಾ. 7, 20–3)

ಚಕ್ರೇ ಸ್ವಂ ಕ್ಷುಭಿತಂ ಶಂಭುಃ ಕಾಮಬಾಣಹತೋ ಯಥಾ ।
ಸ್ವಂ ವೀರ್ಯಂ ಪಾತಯಾಮಾಸ ರಾಮಕಾರ್ಯಾರ್ಥಮೀಶ್ವರಃ॥

(20–4)

ಆ ಮೋಹಿನೀ ರೂಪವನ್ನು ಕಂಡು ಮೋಹಿತನಾದ ಶಂಕರನು, ಮುಂದೆ ಶ್ರೀರಾಮನ ಕಾರ್ಯಸಿದ್ಧಿಗಾಗಿ, ತನ್ನ ಊರ್ಧ್ವರೇತಸ್ಸನ್ನು ಹೊರಗೆಡಹಿದನು. ಸಪ್ತಋಷಿಗಳು ಶಿವನಿಂದ ಪ್ರೇರಿತರಾಗಿ ಅದನ್ನು ಸಂರಕ್ಷಿಸುತ್ತಿದ್ದರು. ಅದರ ತೀಕ್ಷ್ಣತೆಯನ್ನು ಅವರೂ ಸಹಿಸಲಾರದೆ ಅದನ್ನು ವಾಯುವಿಗೆ ಕೊಟ್ಟರು. ವಾಯುವು ಅದನ್ನು ತನ್ನಲ್ಲಿ ಜಾಗ್ರತಗೊಳಿಸಿದನು.

ತೈರ್ಗೌತಮಸುತಾಯಾಂ ತದ್ವೀರ್ಯಂ ಶಂಭೋರ್ಮಹರ್ಷಿಭಿಃ ।
ಕರ್ಣದ್ವಾರಾ ತಥಾಂಜನ್ಯಾಂ ರಾಮಕಾರ್ಯಾರ್ಥಮಾಹಿತಂ ॥

(ಶಿ.ಪು. ಭಾಗ 7, 20–6)

ಇತ್ತ ಅಂಜನಿಯ ತಪೋಜ್ವಾಲೆಯು ದೇವಲೋಕವನ್ನೆಲ್ಲಾ ಆವರಿಸಿ ಸುಡುತ್ತಿರಲು, ಅವರೆಲ್ಲಾ ಸೇರಿ, ಶಿವನನ್ನು ಮರೆಹೊಕ್ಕು ರಕ್ಷಣೆಗಾಗಿ ಪ್ರಾರ್ಥಿಸಿದರು. ಆಗ ಕರುಣಾಮಯನೂ, ಭಕ್ತವತ್ಸಲನೂ, ಸರ್ವೇಶ್ವರನೂ ಆಪದ್ಬಂಧುವೂ ಆದ ಶಂಕರನು, ಎಲೈ ದೇವತೆಗಳಿರಾ, ನಾನು ಅಂಜನಳ ಇಷ್ಟಾರ್ಥವನ್ನು ನೆರವೇರಿಸಿ ನಿಮ್ಮ ಕಷ್ಟವನ್ನು ಪರಿಹರಿಸುವೆನೆಂದು ಅಭಯ ನೀಡಿದನು. ನಂತರ ವಾಯುವನ್ನು ಕುರಿತು ಎಲೈ ವಾಯುವೇ ನಿನ್ನಲ್ಲಿರುವ ಶಿವತೇಜಸ್ಸನ್ನು ಅಂಜನಿಗೆ ಅನುಗ್ರಹಿಸೆಂದು ಆಜ್ಞೆಮಾಡಿ, ಅಂತರ್ಧಾನನಾದನು. ಆಗ ವಾಯುವು ಭಕ್ತಿಯಿಂದ ವಂದಿಸಿ, ಶಿವನ ಸಂದೇಶದಂತೆ

ತಪಸ್ಸನ್ನಾಚರಿಸುತ್ತಿದ್ದ ಅಂಜನಿಯ ಕರ್ಣದಲ್ಲಿ ಪ್ರವೇಶಿಸಿ, ತನ್ನಲ್ಲಿದ್ದ ಶಿವ ತೇಜಸ್ಸನ್ನು ಅಂಜನಿಯ ಗರ್ಭದಲ್ಲಿ ಸ್ಥಾಪಿಸಿದನು. (ಗಣೇಶಪುರಾಣ ಭಾ-1)

ಇದರಿಂದ ಮನೋವಿಕಾರಹೊಂದಿದ ಅಂಜನಿಯು ಭಯದಿಂದಲೂ, ಕೋಪದಿಂದಲೂ, ಪರಿತಪಿಸುತ್ತಿರಲು, ವಾಯುವು ಅವಳಿಗೆ ದರ್ಶನ ನೀಡಿ ಎಲೈ ಅಂಜನ ಶಿವನ ಆದೇಶದಂತೆ ಇದುವರೆವಿಗೂ ನನ್ನ ರಕ್ಷಣೆಯಲ್ಲಿದ್ದ ಶಿವ ತೇಜಸ್ಸನ್ನು ನಾನೇ ನಿನ್ನ ಗರ್ಭದಲ್ಲಿ ಸ್ಥಾಪಿಸಿರುವೆನು. ಚಿಂತಿಸಬೇಡ. ನಾನು ಹಿಂದೆಯೇ ತಿಳಿಸಿದಂತೆ ನೀನು ಲೋಕೈಕವೀರನೂ, ಶಿವತೇಜಸ್ವಿಯೂ ಆದ ಮಗನನ್ನು ಪಡೆಯುವೆ. ಅವನು ಶ್ರೀರಾಮನಿಗೆ ಸಹಾಯಕನಾಗುವನು ಎಂದು ಹೇಳಿ ಹೊರಟುಹೋದನು.

ಕೆಲಕಾಲದ ನಂತರ ಅಂಜನಿಯು ಗರ್ಭದಲ್ಲಿ ಚೈತ್ರಮಾಸದ, ಶುಕ್ಲ ಪಕ್ಷದ, ಹುಣ್ಣಿಮೆಯ ದಿನ, ಶುಭಮುಹೂರ್ತದಲ್ಲಿ ದೇವದುಂದುಭಿಗಳು ಮೊಳಗುತ್ತಿರಲು, ಗಂಧರ್ವರು ಪುಷ್ಪವೃಷ್ಟಿಗರೆಯುತ್ತಿರಲು, ಸೂರ್ಯನ ಪ್ರಕಾಶಕ್ಕೆ ಸಮಾನವಾದ ಶಿವತೇಜಸ್ಸುಳ್ಳ ಒಂದು ಗಂಡು ಮಗುವು ಜನಿಸಿತು.

ಆ ಪುತ್ರನು ಜನಿಸುವಾಗಲೇ ನವರತ್ನ ಖಚಿತವಾದ ಕಿರೀಟದಿಂದಲೂ, ವಜ್ರದ ಕರ್ಣಾಭರಣದಿಂದಲೂ, ಭುಜ ಕಿರೀಟಗಳಿಂದಲೂ, ವಜ್ರಾಯುಧಕ್ಕೆ ಸಮಾನವಾದ ಗದೆಯಿಂದಲೂ, ಕೂಡಿ ಪ್ರಕಾಶಿಸುತ್ತಿದ್ದನು. ಇಂಥಾ ಶಿವ ತೇಜಸ್ಕನಾದ ಮಗುವನ್ನು ನೋಡಿ ವಾನರ ಕುಲವೆಲ್ಲಾ ಆನಂದದಿಂದ, ಇದು ಕಾರಣಿಕ ಶಿಶುವೆಂದು ಹೆಮ್ಮೆಪಡುತ್ತಿದ್ದರು.

ತತಶ್ಚ ಸಮಯೇ ತಸ್ಮಾದ್ಧನೂಮಾನಿತಿ ನಾಮಭಾಕ್ ।
ಶಂಭುರ್ಜಜ್ಞೇ ಕಪಿತನುರ್ಮಹಾಬಲಪರಾಕ್ರಮಃ ॥ (ಶಿ.ಪು. 20-7)

ಆಂಜನೇಯನ ಬಾಲ್ಯ :

ಕೆಲಕಾಲದ ಮೇಲೆ ಅವನಿಗೆ ಆಂಜನೇಯನೆಂದು ಹೆಸರಿಸಿದರು. ಅವನು ಒಮ್ಮೆ ಪೂರ್ವದಿಕ್ಕಿನಲ್ಲಿ ಉದಯಿಸುತ್ತಿದ್ದ ರವಿಯನ್ನು ಹಣ್ಣೆಂದು ಭ್ರಮಿಸಿ ಗಗನಕ್ಕೆ ಹಾರಿ ಅವನನ್ನು ಹಿಡಿದು ತಿಂದನು. ಕೂಡಲೇ ಲೋಕವೆಲ್ಲಾ ಗಾಢಾಂಧಕಾರದಲ್ಲಿ ಮುಳುಗಿತು.

ಹನೂಮಾನ್ಸ ಕಪೀಶಾನಃ ಶಿಶುರೇವ ಮಹಾಬಲಃ ।
ರವಿಬಿಂಬಂ ಬಭಕ್ಷಾಶು ಜ್ಞಾತ್ವಾ ಲಘುಫಲಂ ಪ್ರಗೇ॥ (ಶಿ.ಪು. 20-8)

ಇದನ್ನು ಕಂಡ ಇಂದ್ರನು ತನ್ನ ಗದೆಯಿಂದ ಆಂಜನೇಯನ ಮುಖಕ್ಕೆ ಹೊಡೆದನು. ಗದಾಪ್ರಹಾರದಿಂದ ನೊಂದ ಆಂಜನೇಯನು ಭೂಮಿಗೆ ಬಿದ್ದು ಮೂರ್ಛೆಹೋದನು. ತನ್ನ ಮಗನಿಗಾದ ಅವಸ್ಥೆಯನ್ನು ಕಂಡ ವಾಯುವು ಕೂಡಲೇ ಆಂಜನೇಯನನ್ನು ಎತ್ತಿಕೊಂಡು ಮಹಾಕಾಲ ವನಕ್ಕೆ ಹೋಗಿ ಅಲ್ಲಿದ್ದ ಶಿವಲಿಂಗದ ಬಳಿ ಅವನನ್ನು ಇರಿಸಿ ಭಕ್ತಿಯಿಂದ ಪ್ರಾರ್ಥಿಸಿದನು. ಲಿಂಗಸ್ಪರ್ಶವಾದೊಡನೆಯೇ ಆಂಜನೇಯನು ಎಚ್ಚೆತ್ತು ಮುಂದಿದ್ದ ಲಿಂಗಕ್ಕೆ ವಂದಿಸಿ ಪ್ರಾರ್ಥಿಸತೊಡಗಿದನು. ಇದನ್ನು ಕಂಡ ವಾಯುವು ಅತ್ಯಾನಂದ ಭರಿತನಾಗಿ ಶಿವನನ್ನು ನಾನಾಬಗೆಯಿಂದ ಸ್ತೋತ್ರಮಾಡಿದನು. ಕೂಡಲೇ ಆ ಸ್ಥಳಕ್ಕೆ ಹರಿ-ಬ್ರಹ್ಮ-ಇಂದ್ರಾದಿ ದೇವತೆಗಳು ಆಗಮಿಸಿ, ಶಿವನನ್ನು ಭಕ್ತಿ ಭಾವದಿಂದ ಪ್ರಾರ್ಥಿಸಿದರು. ಅವರೆಲ್ಲರಿಗೂ ದರ್ಶನವಿತ್ತ ಶಂಕರನು, ಎಲೈ ಹನುಮಂತನೇ! ಯಾವ ಆಯುಧದಿಂದಲೂ ನಿನಗೆ ಮರಣವಾಗದಿರಲಿ ನೀನು ಅಜೇಯನೂ, ಚಿರಂಜೀವಿಯೂ, ಅರಿಭಯಂಕರನೂ, ಮಿತ್ರರಿಗೆ ಅಭಯಪ್ರದನೂ, ಶ್ರೀರಾಮನಿಗೆ ಪ್ರಿಯನಾದವನೂ ಆಗೆಂದು ಹರಸಿದನು.

ಆಯುಧಾನಾಂ ಹಿ ಸರ್ವೇಷಾಮವಧ್ಯೋಽಯಂ ಭವಿಷ್ಯತಿ ।
ಅಜರಶ್ಚಾಮರಶ್ಚೈವ ಭವಿಷ್ಯತಿ ನ ಸಂಶಯಃ ॥ (ಸ್ಕಾಂ. 5. 79-35)

ಅಮಿತ್ರಭಯದೋ ಹ್ಯೇಷ ಮಿತ್ರಾಣಾಂ ಅಭಯಪ್ರದಃ ।
ಅಜೇಯೋ ಭವಿತಾ ಯುದ್ಧೇ ಲಿಂಗೇನೋಕ್ತಂ ಪುನಃ ಪುನಃ ॥
(79–36)

ನಂತರ ಆ ಮಗುವನ್ನು ಇಂದ್ರನು ಹನುಮಂತನೆಂದು ಕರೆದನು. ವರುಣನು ಮರಣವಿಲ್ಲದಂತೆ ವರ ನೀಡಿದನು. ಯಮನು ದಂಡದಿಂದ ಅವಧ್ಯತ್ವವನ್ನೂ, ಕುಬೇರನು ಆರೋಗ್ಯಭಾಗ್ಯವನ್ನೂ, ಸೂರ್ಯನು ತೇಜಸ್ಸನ್ನೂ, ವಾಯುವು ವೇಗವನ್ನೂ, ಕಿನ್ನರರು ಸ್ವರಯುಕ್ತವಾದ ಗಾನ ವಿದ್ಯೆಯನ್ನೂ ಅನುಗ್ರಹಿಸಿ ಅಂತರ್ಧಾನರಾದರು. ನಂತರ ವಾಯುವು ಹನುಮಂತನನ್ನು ಅಂಜನಿಯ ಬಳಿಗೆ ಕರೆದೊಯ್ದು ಶಿವಕೃಪೆಯಿಂದ ಆಂಜನೇಯನಿಗೆ ಲಭಿಸಿದ ವರಗಳ ವಿವರವನ್ನು ಹೇಳಿದನು. ಅಂಜನಿಯು ಶಿವನನ್ನು ನಾನಾವಿಧವಾಗಿ ಸ್ತೋತ್ರಮಾಡಿ ಕೊಂಡಾಡಿದಳು.

ಹನುವಂತನ ವಿದ್ಯಾಭ್ಯಾಸ :

ನಂತರ ಹನುಮಂತ ತನ್ನ ಮಾತಾಪಿತೃಗಳ ಸಲಹೆಯಂತೆ ಸೂರ್ಯ ದೇವನ ಬಳಿಗೆ ಹೋಗಿ ಸಕಲ ವೇದವೇದಾಂತಶಾಸ್ತ್ರಾದಿಗಳನ್ನೂ ಕಲಿತು ಪಾರಂಗತನಾದನು.

ತದಾಜ್ಞಯಾ ತತೋ ಧೀರಸ್ಸರ್ವವಿದ್ಯಾಮಯತ್ನತಃ ।
ಸೂರ್ಯಾತ್ಪಪಾಠ ಸ ಕಪಿರ್ಗತ್ವಾ ನಿತ್ಯಂ ತದಂತಿಕಂ ॥

(ಶಿ.ಪು. 7. 20–11)


ಹೀಗೆ ಸಕಲ ಕಲಾಪೂರ್ಣನಾಗಿ ನಿರುಪಮಜ್ಞಾನವನ್ನು ಪಡೆದು, ವೈರಾಗ್ಯನಿಧಿಯಾಗಿ, ಪರಶಿವನ ತೇಜೋವಿಶೇಷದಿಂದ ಬ್ರಹ್ಮಚರ್ಯವ್ರತಿಯಾಗಿ ವಿರಾಜಿಸುತ್ತಿದ್ದನು.

ಸುಗ್ರೀವನ ಸಖ್ಯ :

ನಂತರ ಹನುಮಂತನು ತನ್ನ ಮಾತಾಪಿತೃಗಳ ಹಾಗೂ ಸೂರ್ಯ ದೇವನ ಅನುಜ್ಞೆ ಪಡೆದು, ಸೂರ್ಯನ ಅಂಶದಿಂದ ಜನಿಸಿದ್ದ ಸುಗ್ರೀವನ ಬಳಿಗೆ ಹೋದನು. ಇವನ ಪ್ರತಿಭೆಯನ್ನು ಗುರುತಿಸಿದ ಸುಗ್ರೀವನು ಹನುಮಂತನನ್ನು ತನ್ನ ಹನ್ನೆರಡು ಜನ ಮಂತ್ರಿಗಳಲ್ಲಿ ಒಬ್ಬನನ್ನಾಗಿ ಸ್ವೀಕರಿಸಿ ಮಂತ್ರಿಮಂಡಲಕ್ಕೆ ಸೇರಿಸಿಕೊಂಡನು. (ಬ್ರಹ್ಮಾಂಡಪುರಾಣ–ಭಾಗ 3)

ಕೆಲಕಾಲದ ಮೇಲೆ, ರಾಮನಿಗೂ ಸುಗ್ರೀವನಿಗೂ ಸಖ್ಯವೇರ್ಪಡಿಸಿ, ಸೀತೆಯನ್ನು ಹುಡುಕಿ, ಸಮುದ್ರಕ್ಕೆ ಸೇತುವೆಯನ್ನು ನಿರ್ಮಾಣಮಾಡಿ, ವಿಭೀಷಣನಿಗೂ ರಾಮನಿಗೂ ಸಖ್ಯವೇರ್ಪಡಿಸಿ, ಲಕ್ಷ್ಮಣನಿಗೆ ಜೀವದಾನ ಮಾಡಿ, ರಾಮನು ಯುದ್ಧದಲ್ಲಿ ಜಯಗಳಿಸಲು ಸಹಾಯ ಮಾಡಿ, ಸೀತಾ, ರಾಮ, ಲಕ್ಷ್ಮಣರೊಡನೆ ರಾಮೇಶ್ವರದಲ್ಲಿ ಬ್ರಹ್ಮಹತ್ಯಾ ದೋಷ ಪರಿಹಾರಾರ್ಥವಾಗಿ ಎಲ್ಲರೊಡನೆ ಶಿವಲಿಂಗಗಳನ್ನು ಪ್ರತಿಷ್ಠಿಸಿ ಶಿವನನ್ನು ಪೂಜಿಸಿ, ನಂತರ ಅಯೋಧ್ಯೆಗೆ ಅವರೊಡನೆ ಹಿಂದಿರುಗಿದನು.

ತತಸ್ತದಾಜ್ಞಯಾ ವೀರಸ್ಸಿಂಧೌ ಸೇತುಮಬಂಧಯತ್ ।
ವಾನರೈಸ್ಸ ಸಮಾನೀಯ ಬಹೂನ್ಗಿರಿವರಾನ್ಬಲೀ ॥ (ಶಿ.ಪು. 20–28)



ರಾಮನಿಗೆ ಶಿವಾನುಗ್ರಹ ಮತ್ತು
ರಾಮೇಶ್ವರದಲ್ಲಿ ಶ್ರೀರಾಮಲಿಂಗೇಶ್ವರಾದಿಪ್ರತಿಷ್ಠಾಪನೆ

ಗತ್ವಾ ತತ್ರ ತತೋ ರಾಮಸ್ತ ತರ್ಕಾಮೋ ಯಥಾ ತತಃ ।
ಶಿವಲಿಂಗಂ ಸಮಾನರ್ಚ ಪ್ರತಿಷ್ಠಾಪ್ಯ ಜಯೋಪ್ಸಯಾ ॥ (20_29)
ತತಃ ಸೀತಾಂ ಸಮಾಸಾಧ್ಯ ಸಮಂ ವಾನರಪುಂಗವೈಃ ।
ರಾಮೋಽಪ್ಯಯೋಧ್ಯಾಮಾಯಾತೋ ಭರತೇನ ಕೃತೋತ್ಸವಃ ॥
(ಸ್ಕಾಂದ. 84_4)

ಅಯೋಧ್ಯೆಯಲ್ಲಿ ವಿಜಯೋತ್ಸವ :

ಹೀಗೆ ಶ್ರೀರಾಮನು ವಿಜಯಿಯಾಗಿ ಅಯೋಧ್ಯೆಗೆ ಹಿಂದಿರುಗಿದ ಸುದ್ದಿಯು ವಾಯುವೇಗದಿಂದ ರಾಜ್ಯದಲ್ಲೆಲ್ಲಾ ಹರಡಿತು. ಅದನ್ನು ಕೇಳಿದ ಅಗಸ್ತ್ಯರು ತಮ್ಮ ಋಷಿ ಸಮೂಹದೊಡನೆ ರಾಮನನ್ನು ಕಂಡರು. ರಾಮನು ಅವರನ್ನು ಸತ್ಕರಿಸಿ ಪೂಜಿಸಿದನು. ರಾಮನ ಆತಿಥ್ಯದಿಂದ ಪ್ರಸನ್ನರಾದ ಅಗಸ್ತ್ಯರು, ರಾಮಭದ್ರ! ನೀನು ರಾವಣಾದಿ ರಾಕ್ಷಸರನ್ನೆಲ್ಲಾ ಸಂಹರಿಸಿ, ವಿಜಯಿಯಾಗಿ ಹಿಂದಿರುಗಿದುದು ಎಲ್ಲರಿಗೂ ಆನಂದವನ್ನು ತಂದಿದೆ. ಶಿವಾಂಶಸಂಭೂತನೂ, ಚಿರಂಜೀವಿಯೂ ಆದ ಹನುಮಂತನನ್ನು ಸಕಲ ದೇವತೆಗಳೂ ಸದಾ ಕಾಪಾಡುತ್ತಿರಲಿ ಎಂದು ಹೇಳಿದರು. ಅದನ್ನು ಕೇಳಿದ ರಾಮನು, ಅಗಸ್ತ್ಯರೇ! ಯುದ್ಧದಲ್ಲಿ ಜೀವದ ಹಂಗು ತೊರೆದು ರಾಕ್ಷಸರನ್ನು ಸಂಹರಿಸಿ, ವಿಜಯಿಗಳಾಗಿ ಬಂದಿರುವ ನನ್ನನ್ನೂ, ನನ್ನ ತಮ್ಮ ಲಕ್ಷ್ಮಣನನ್ನೂ ಶ್ಲಾಘಿಸದೆ ಆ ವಾನರನನ್ನು ಏನು ಕಾರಣ ಪ್ರಶಂಸಿಸುತ್ತಿರುವಿರಿ? ಎಂದು ಕೇಳಿದನು.

ಅಗಸ್ತ್ಯರಿಂದ ಹನುಮಂತನ ಪ್ರಶಂಸೆ :

ಅದಕ್ಕೆ ಅಗಸ್ತ್ಯರು ಎಲೈ ರಾಮಚಂದ್ರನೇ ನಾವು ಸತ್ಯವನ್ನೇ ನುಡಿದೆವು. ಈ ವಾನರ ಶ್ರೇಷ್ಠನಿಗೆ ಸಮಾನವಾದ ಪರಾಕ್ರಮ ಉಳ್ಳವರು ಈ ಮೂರು ಲೋಕಗಳಲ್ಲಿಯೂ ಇಲ್ಲ.

ಅಥೋಚುಃ ಸತ್ಯಮೇವೈತತ್ಕಾರಣಂ ವಾನರೋತ್ತಮೇ ।
ನತ್ವಸ್ಯ ಸದೃಶೋ ವೀರ್ಯೇ ವಿದ್ಯತೇ ಭುವನತ್ರಯೇ ॥
(ಸ್ಕಾಂದ 5, 79_10)
ಚಿರಂಜೀವತು ದೀರ್ಘಾಯುರ್ವಾನರೋ ಹನುಮಾನ್ಸದಾ ।
ಅಂಜನೀಗರ್ಭಸಂಭೂತೋ ರುದ್ರಾಂಶೋ ಹಿ ಧರಾತಲೇ ॥(79_6)

ಸೀತಾನ್ವೇಷಣ ಕಾರ್ಯದಲ್ಲಿಯೂ, ಸೇತುಬಂಧನ ಕಾರ್ಯದಲ್ಲಿಯೂ, ಲಂಕಾದಹನ ಕಾರ್ಯದಲ್ಲಿಯೂ, ಲಕ್ಷ್ಮಣನಿಗೆ ಪ್ರಾಣದಾನ ಮಾಡಿದ ಕಾರ್ಯದಲ್ಲಿಯೂ, ಹನುಮಂತನು ಮಾಡಿದ ಸಾಹಸಕ್ಕೆ ಸಮಾನವಾದ ಸಾಹಸ ಕಾರ್ಯವನ್ನು, ಹರಿ, ಬ್ರಹ್ಮ, ಇಂದ್ರ, ಯಮ ಇವರುಗಳೂ ಸಹ ಎಂದೂ ಮಾಡಿಲ್ಲವೆಂದು ನಮ್ಮ ಅಭಿಪ್ರಾಯ. ಅವನ ಅಂಥ ಸಾಹಸ ಕಾರ್ಯವನ್ನು ನಾವು ಎಲ್ಲಿಯೂ ಕಂಡಿಲ್ಲ ಕೇಳಿಯೂ ಇಲ್ಲ ಎಂದು ಹೇಳಿದರು.

ನ ಕಾಲಸ್ಯ ನ ಶಕ್ರಸ್ಯ ನ ವಿಷ್ಣೋರ್ವಿತ್ತಪಸ್ಯ ವಾ ।
ಶ್ರೂಯಂತೇ ತಾನಿ ಕರ್ಮಾಣಿ ಯಾದೃಶಾನಿ ಹನೂಮತಃ ॥

(ಶ್ರೀಮದುತ್ತರ ರಾಮಾಯಣ) (ಸ್ಕಾಂದ 5, 79-15)

ಅಗಸ್ತ್ಯರಿಗೆ ರಾಮನ ವಿವರಣೆ :

ಆಗ ರಾಮನು, ಮುನಿವರ್ಯರೇ ಹನುಮಂತನ ಶಕ್ತಿಸಾಮರ್ಥ್ಯಗಳನ್ನು ನಾನು ಕಣ್ಣಾರೆ ನೋಡಿರುವೆನು. ಅವನ ಸಾಹಸದಿಂದಲೇ ನಾನು ಲಂಕೆಯನ್ನು ದಾಟಿ, ಸೀತೆಯನ್ನೂ, ಲಕ್ಷ್ಮಣನನ್ನೂ, ವಿಜಯವನ್ನೂ, ರಾಜ್ಯವನ್ನೂ, ಮಿತ್ರರನ್ನೂ, ಬಂಧುಗಳನ್ನೂ, ಪಡೆದೆನು. ಅವನೂ ನನಗೆ ಪರಮ ಮಿತ್ರನು, ಆಪ್ತನು, ಅವನನ್ನು ನನ್ನ ಕಿರಿಯ ಸಹೋದರನೆಂದೇ ಭಾವಿಸಿರುವೆನು. ನನಗುಂಟಾದ, ಜಯ, ಕೀರ್ತಿ ಗೌರವಗಳೆಲ್ಲವೂ ನ್ಯಾಯವಾಗಿ ಹನುಮಂತನಿಗೇ ಸಲ್ಲತಕ್ಕವುಗಳು. ಆದರೆ ಹನುಮಂತನೇ ಆಂಜನೇಯನೆಂದು ನಾನು ಗುರುತಿಸದಾದೆ. ಪೂಜ್ಯರೆ ! ಈ ವಿಜಯಕ್ಕೆ ನೀವೂ ಹೆಚ್ಚು ಕಾರಣರೆಂಬುದನ್ನು ಮರೆತಿಲ್ಲ. ಸೀತಾಪಹರಣವಾದಮೇಲೆ ಅತಿ ದುಃಖಿಯೂ, ನಿರಾಶನೂ, ಸೀತೆಯನ್ನು ಶತೃವಿನ ಬಂಧನದಿಂದ ಬಿಡಿಸಲಸಮರ್ಥನೂ ಆಗಿ ಜೀವನದಲ್ಲಿ ವಿರಕ್ತಿಹೊಂದಿ ಪ್ರಾಣತ್ಯಾಗ ಮಾಡಬೇಕೆಂದು ನಿರ್ಧರಿಸಿದಾಗ ತಾವು ಅನಿರೀಕ್ಷಿತವಾಗಿ ದರ್ಶನ ನೀಡಿ, ನನಗೆ ಅನೇಕ ಬಗೆಯಿಂದ ಸಮಾಧಾನ ಹೇಳಿದಿರಿ. ಅಲ್ಲದೆ ನನಗೆ ಪರಮಪವಿತ್ರವೂ, ಶಿವಪ್ರೀತಿಕರವೂ ಆದ 'ವಿರಜಾದೀಕ್ಷೆ'ಯನ್ನು ನೀಡಿ, ಅದರ ಅನುಷ್ಠಾನದಿಂದ ಶೈವ ತೇಜಸ್ಸನ್ನು ಪಡೆಯುವ ವಿಧಾನವನ್ನೂ ಉಪದೇಶಮಾಡಿದಿರಿ. ಮತ್ತು ಶೈವತೇಜಸ್ಸಿನಿಂದಲ್ಲದೆ ಮಹಾ ಶಿವಭಕ್ತನೂ ಪೌಲಸ್ತ್ಯನೂ ಆದ ರಾವಣನನ್ನು ಸಂಹರಿಸಲಾಗದೆಂದೂ ತಿಳಿಸಿದಿರಿ.

ತದಾ ವಿಯೋಗದುಃಖೇನ ಪ್ರಲಪನ್ನಾಸ ರಾಘವಃ ।
ಮೋಕ್ತುನ್ಮೈಚ್ಛತ್ತತಃ ಪ್ರಾಣಾ ಸಾನುಜೋ ರಘುನಂದನಃ ॥
(ಶಿ.ಗೀ. 2, 3–4)

ಲೋಪಾಮುದ್ರಾಪತಿಜ್ಞಾತ್ವಾ ತಸ್ಯ ಸನ್ನಿಧಿಮಾಗಮತ್ ।
ಅತಸ್ತ್ವಾಂ ದೀಕ್ಷಯಿಷ್ಯಾಮಿ ವಿರಜಾಗಮಮಾಶ್ರಿತಃ ।
ತೇನ ಮಾರ್ಗೇಣ ಮರ್ತ್ಯತ್ವಂ ಹಿತ್ವಾ ತೇಜೋಮಯೋ ಭವ ॥
(ಶಿ.ಗೀ. 3–16)

ಯೇನ ಹತ್ವಾ ರಣೇ ಶತ್ರೂನ್ ಸರ್ವಾನ್ಕಾಮಾನವಾಪ್ಸ್ಯಸಿ ।
ಭುಕ್ತ್ವಾ ಭೂಮಂಡಲಂ ಚಾಂತೇ ಶಿವಸಾಯುಜ್ಯಮಾಪ್ಸ್ಯಸಿ ॥
(3–17)

ಅಲ್ಲದೆ ನನಗೆ ಶಿವನ ಅನುಗ್ರಹ ಲಭಿಸುವುದೆಂದೂ, ಅದರಿಂದ ನಾನು ರಾವಣನನ್ನು ಜಯಿಸುವೆನೆಂದೂ ಭವಿಷ್ಯವನ್ನು ನುಡಿದು ಆಶೀರ್ವದಿಸಿದಿರಿ. ಈ ನಿಮ್ಮ ಆಶೀರ್ವಾದದ ಪ್ರಭಾವದಿಂದಲೇ ನಾನು ಜಯಗಳಿಸಿ ಕೀರ್ತಿಶಾಲಿಯಾಗಿ ಹಿಂದಿರುಗಿದೆನು. ನೀವು ಅರಣ್ಯದಿಂದ ನಿರ್ಗಮಿಸಿದ ಮೇಲೆ ನಾನು ನಿಮ್ಮ ಉಪದೇಶದಂತೆಯೇ ಎಲ್ಲಾ ವ್ರತಗಳನ್ನೂ ಭಕ್ತಿಶ್ರದ್ಧೆಗಳಿಂದ ಆಚರಿಸಿದೆನು. ನೀವು ನೀಡಿದ ವಿರಜಾ ವ್ರತವನ್ನು ಹೇಗೆ ಆಚರಿಸಿದೆ, ಅದರಿಂದ ನನಗೆ ನಲಭಿಸಿದ ಫಲಗಳಾವುವು, ಇತ್ಯಾದಿ ವಿವರಗಳನ್ನು ತಮ್ಮಲ್ಲಿ ನಿವೇದಿಸಬೇಕಾದ್ದು ನನ್ನ ಆದ್ಯ ಕರ್ತವ್ಯ.

ರಾಮನ ತಪಸ್ಸು :

ಎಲೈ ಪೂಜ್ಯರೇ ಕೇಳಿ ನಾನು ಗೋದಾವರೀ ತೀರಕ್ಕೆ ಹೋಗಿ ಅಲ್ಲಿ ನೀವು ಹೇಳಿದಂತೆ ಒಂದು ಶಿವಲಿಂಗವನ್ನು ಸ್ಥಾಪಿಸಿದೆನು. ನಂತರ ಮಿಂದು ಶುಚಿರ್ಭೂತನಾಗಿ, ಭಸ್ಮರುದ್ರಾಕ್ಷಿಗಳನ್ನು ಧರಿಸಿ, ಆ ಲಿಂಗವನ್ನು ಅನನ್ಯ ಭಕ್ತಿಯಿಂದ ಪೂಜಿಸಿದೆನು. ನಂತರ ಭಸ್ಮದ ಮೇಲೆ ವ್ಯಾಘ್ರಚರ್ಮವನ್ನು ಹಾಸಿ, ಅದರ ಮೇಲೆ ಪದ್ಮಾಸನಾಸೀನನಾಗಿ, ಹಗಲೂ ರಾತ್ರಿಯೂ, ಎಡಬಿಡದೆ ನಾಲ್ಕು ತಿಂಗಳ ಪರ್ಯಂತ ಮನಸ್ಸಿನಲ್ಲಿ ಶಿವ ಸಹಸ್ರನಾಮವನ್ನು ಜಪಿಸತೊಡಗಿದೆನು.

ಶಿವಲಿಂಗಂ ಪ್ರತಿಷ್ಠಾಪ್ಯ ಕೃತ್ವಾ ದೀಕ್ಷಾಂ ಯಥಾವಿಧಿ ।
ಭೂತಿಭೂಷಿತಸರ್ವಾಂಗೋ ರುದ್ರಾಕ್ಷಾಭರಣೈರ್ಯುತಃ ॥
(ಶಿವಗೀತೆ. 4-2)
ಭಸ್ಮಚ್ಛನ್ನೋ ಭಸ್ಮಶಾಯೀ ವ್ಯಾಘ್ರಚರ್ಮಾಸನೇ ಸ್ಥಿತಃ ।
ನಾಮ್ನಾಂ ಸಹಸ್ರಂ ಪ್ರಜಪನ್ನಕ್ತಂದಿವಮನನ್ಯಧೀಃ ॥ (4-4)

ಹೀಗೆ ವಿರಜಾವ್ರತವನ್ನು ಆಚರಿಸುತ್ತಾ ಮೊದಲನೇ ತಿಂಗಳು ಹಣ್ಣನ್ನೂ, ಎರಡನೇ ತಿಂಗಳು ಪರ್ಣವನ್ನೂ, ಮೂರನೆ ತಿಂಗಳು ನೀರನ್ನೂ, ನಾಲ್ಕನೇ ತಿಂಗಳು ವಾಯುವನ್ನೂ ಸೇವಿಸುತ್ತಾ, ಇಂದ್ರಿಯ ವ್ಯಾಪಾರಗಳನ್ನೆಲ್ಲಾ ತ್ಯಜಿಸಿ, ತದೇಕಚಿತ್ತದಿಂದ ಶಿವಧ್ಯಾನ ಮಾಡುತ್ತಾ ಲಿಂಗದಲ್ಲಿಯೇ ದೃಷ್ಟಿ ಹಾಗೂ ಮನಸ್ಸುಗಳನ್ನು ಸ್ಥಿರಗೊಳಿಸಿ, ಹೃದಯ ಕಮಲದಲ್ಲಿ ಅರ್ಧನಾರೀಶ್ವರನಾದ ಚಂದ್ರಶೇಖರನ ಮೂರ್ತಿಯನ್ನು ಆಹ್ವಾನಿಸಿ ಸ್ಥಿರಗೊಳಿಸಿದೆನು.

ಶಾಂತೋದಾಂತಃ ಪ್ರಸನ್ನಾತ್ಮಾ ಧ್ಯಾಯನ್ನೇವಂ ಮಹೇಶ್ವರಂ ।
ಹೃತ್ಪಂಕಜೇ ಸಮಾಸೀನಮುಮಾದೇಹಾರ್ಧಧಾರಿಣಂ ॥ (4-6)

ಶಿವಮಾಯೆ :

ಹೀಗಿರಲು ಒಂದು ದಿನ, ಆಕಾಶದಲ್ಲಿ ಕಣ್ಣು ಕುರುಡು ಮಾಡುವಂಥಾ ಒಂದು ದಿವ್ಯ ತೇಜಸ್ಸು ಕಂಡಿತು. ಅದನ್ನು ನಾನು ರಾಕ್ಷಸ ಮಾಯೆಯೆಂದು ಭ್ರಮಿಸಿ, ನನ್ನಲ್ಲಿದ್ದ ದಿವ್ಯಾಸ್ತ್ರಗಳನ್ನೆಲ್ಲಾ ಪ್ರಯೋಗಿಸಿ ಬಳಲಿದೆ. ಅಲ್ಲದೆ, ವಿಷ್ಣುಚಕ್ರ, ಕಾಲಚಕ್ರ, ಮಹಾಚಕ್ರ, ವೈಷ್ಣವಾಸ್ತ್ರ ಇವುಗಳನ್ನೆಲ್ಲಾ ಪ್ರಯೋಗಿಸಿದೆನು. ಅವೆಲ್ಲಾ, ಆ ತೇಜಸ್ಸಿನಲ್ಲಿಯೇ ಅದೃಶ್ಯವಾದವು. ಆಗ ನಾನು ಅತ್ಯಂತ ಭೀತನೂ, ನಿರಾಯುಧನೂ ಆಗಿ, ಮೊಣಕಾಲೂರಿ ಅನನ್ಯ ಭಕ್ತಿಯಿಂದ ಶಂಕರನನ್ನು ಮರೆಹೊಕ್ಕು, ಅವನನ್ನು ಧ್ಯಾನಿಸ ತೊಡಗಿದೆನು.

ಶಿವದರ್ಶನ :

ಕೆಲ ಕಾಲದ ಮೇಲೆ ಆ ತೇಜಸ್ಸು ಅದೃಶ್ಯವಾಗಿ, ಆ ಸ್ಥಳದಲ್ಲಿ ಸದಾ ಶಿವನ ಮೂರ್ತಿಯು ಗೋಚರಿಸಿತು. ಕೋಟಿಸೂರ್ಯಪ್ರಕಾಶವುಳ್ಳವನೂ, ಚಂದ್ರಧರನೂ, ತ್ರಿಶೂಲಧರನೂ, ತ್ರಿನೇತ್ರನೂ, ಪಂಚಮುಖವುಳ್ಳವನೂ, ಗಿರಿಜಾ ಸಮೇತನೂ, ಆದ ಮಹಾದೇವನ ಶಾಂತಮೂರ್ತಿಯು ನನಗೆ ದರ್ಶನ ನೀಡಿತು. ನಾನು ಕೂಡಲೇ ಅನನ್ಯ ಭಕ್ತಿ ಭಾವದಿಂದ, ಶಂಕರನಿಗೆ ದೀರ್ಘ

ದಂಡನಮಸ್ಕಾರ ಮಾಡಿ, ಆನಂದಾಶ್ರುಗಳು ಆವನ ಪಾದವನ್ನು ಅಭಿಷೇಕಿಸುತ್ತಿರಲು, ಅವನನ್ನು ನಾನಾ ಬಗೆಯಿಂದ ಸ್ತೋತ್ರ ಮಾಡ ತೊಡಗಿದೆನು.

ಶಿವಾನುಗ್ರಹ :

ಆಗ ಭಕ್ತವತ್ಸಲನಾದ ಶಂಕರನು ಗಿರಿಜೆಯೊಡಗೂಡಿ ಎಲೈ ರಘುನಂದನಾ ! ನಿನ್ನ ಭಕ್ತಿಗೆ ಮೆಚ್ಚಿರುವೆನೆಂದು ಹೇಳಿ, ನನ್ನನ್ನು ತನ್ನ ರಥದಲ್ಲಿ ಕೂಡಿಸಿಕೊಂಡು, ವಿಧಿವತ್ತಾಗಿ ದಿವ್ಯಧನುಸ್ಸನ್ನು ಅಕ್ಷಯ ಬತ್ತಳಿಕೆಯೊಡನೆ ಅನುಗ್ರಹಿಸಿದನು.

ಅಥ ದಿವ್ಯಂ ಧನುಸ್ತಸ್ಮೈ ದದೌ ತೂಣೀರಮಕ್ಷಯಂ ।
ಮಹಾ ಪಾಶುಪತಂ ನಾಮ ದಿವ್ಯಮಸ್ತ್ರಂ ದದೌ ತತಃ ॥
(ಶಿ. ಗೀತೆ 13_14)

ಉಕ್ತಶ್ಚ ತೇನ ರಾಮೋಽಪಿ ಸಾದರಂ ಚಂದ್ರಮೌಳಿನಾ ।

ಎಲೈ ಪೂಜ್ಯರೇ, ನಂತರ ಶಂಕರನು ದೇವತೆಗಳ ಕಡೆ ವೀಕ್ಷಿಸಲು, ಅದರ ಇಂಗಿತವನ್ನರಿತು ದೇವತೆಗಳೆಲ್ಲಾ ತಮ್ಮ ತಮ್ಮ ದಿವ್ಯಾಸ್ತ್ರಗಳನ್ನು ಕರುಣಿಸಿದರು. ನಂತರ ಶಂಕರನು ನನ್ನನ್ನು ಕುರಿತು, ಎಲೈ ರಾಮಭದ್ರಾ ! ರಾಕ್ಷಸರಿಗೆ ಈಗ ಅವಸಾನಕಾಲ ಪ್ರಾಪ್ತವಾಗಿದೆ. ನೀನು ರಾವಣನ ಪ್ರತಾಪಕ್ಕೆ ಹೆದರುತ್ತಿರುವೆ. ನೀನು ಹೆದರುವ ಕಾರಣವಿಲ್ಲ. ಅವನು ನಾಶವಾಗುವ ಸಮಯ ಸನ್ನಿಹಿತವಾಗಿದೆ. ಕಿಷ್ಕಿಂಧೆಯಲ್ಲಿ ಅನೇಕ ಶೂರರು ನನ್ನ ಅಂಶದಿಂದ ಉದ್ಭವಿಸಿ ಅಪ್ರತಿಮ ಪರಾಕ್ರಮಶಾಲಿಯಾದ ಹನುಮನ ಮುಂದಾಳುತ್ವದಲ್ಲಿ ನಿನಗೆ ಎಲ್ಲಾ ವಿಧವಾದ ಸಹಾಯವನ್ನೂ ನೀಡುವರು. ನೀನು ನಿಮಿತ್ತ ಮಾತ್ರವಾಗಿ ರಾಕ್ಷಸಸಂಹಾರಕಾರ್ಯಕ್ಕೆ ತೊಡಗು. ನಿನಗೆ ನನ್ನ ಅನುಗ್ರಹದಿಂದ ವಿಜಯಶ್ರೀಯೂ, ಯಶಸ್ಸೂ ಲಭಿಸುವುವು ಎಂದು ಆಶೀರ್ವದಿಸಿ, ನಂತರ ನನ್ನ ಪ್ರಾರ್ಥನೆಯನ್ನು ಮನ್ನಿಸಿ, ನನಗೆ ಎಲ್ಲಾ ಸಂದೇಹಗಳೂ ನಿವೃತ್ತಿಯಾಗುವ ರೀತಿಯಲ್ಲಿ ತತ್ವಜ್ಞಾನಾಮೃತವನ್ನು ಅನುಗ್ರಹಿಸಿ ಅಂತರ್ಧಾನನಾದನು.

ಅಥವಾ ಕಿಂ ಬಹೂಕ್ತೇನ ಮಯ್ಯೈವೋತ್ಪಾದಿತಂ ಜಗತ್ ।
ಮಯ್ಯೈವ ಪಾಲ್ಯತೇ ನಿತ್ಯಂ ಮಯಾ ಸಂಹ್ರಿಯತೇಽಪಿ ಚ ॥
(ಶಿ. ಗೀ. 5_28)

ಅಹಮೇಕೋ ಜಗನ್ಮೃತ್ಯುರ್ಮೃತ್ಯೋರಪಿ ಮಹೀಪತೇ ||
ಗ್ರಸೇಽಹಮೇವ ಸಕಲಂ ಜಗದೇತಚ್ಚರಾಚರಂ || (5-29)
ಮಮ ವಕ್ತ್ರಗತಾಸ್ಸರ್ವೇ ರಾಕ್ಷಸಾ ಯುದ್ಧದುರ್ಮದಾಃ |
ನಿಮಿತ್ತಮಾತ್ರಂ ತ್ವಂ ಭೂಯಾಃ ಕೀರ್ತಿಮಾಪ್ಸ್ಯಸಿ ಸಂಗರೇ ||
(5-30)
ಕಿಷ್ಕಿಂಧಾನಗರೇ ರಾಮ ದೇವಾನಾಮಂಶಸಂಭವಾಃ |
ವಾನರಾ ಬಹವೋ ಜಾತಾ ದುರ್ಜಯಾ ಬಲವತ್ತರಾಃ |
ಸಾಹಾಯ್ಯಂ ತೇ ಕರಿಷ್ಯಂತಿ ತೈರ್ಬಧ್ವಾ ಚ ಪಯೋನಿಧಿಂ ||
(ಶಿ. ಗೀ. 5-24.25)

ಹೀಗೆ ಶಿವನ ಸಂಪೂರ್ಣ ಕೃಪಾಶೀರ್ವಾದ ಬಲದಿಂದ ಉತ್ಸಾಹಗೊಂಡು, ಹನುಮಂತನ ಸಹಾಯದಿಂದ, ರಾವಣಾದಿ ರಾಕ್ಷಸರನ್ನು ನಿರಾಯಾಸವಾಗಿ ಸಂಹರಿಸಿ, ಅಯೋಧ್ಯೆಗೆ ಹಿಂದಿರುಗಿದೆನು ಇದೆಲ್ಲಾ ನಿಮ್ಮ ಆಶೀರ್ವಾದದ ಪ್ರಭಾವವೇ ಎಂದು ವಿವರಿಸಿದನು.

ಕೈಲಾಸದಿಂದ ನಾರದರ ಆಗಮನ :

ನಾರದರು ಕೈಲಾಸಕ್ಕೆ ಶಂಕರನ ದರ್ಶನಾರ್ಥವಾಗಿ ಹೋಗಿ, ಗಿರಿಜಾ ಸಮೇತನಾಗಿದ್ದ ಶಂಕರನನ್ನು ಮಾತ್ರ ವಂದಿಸಿದರು. ಕುಪಿತಳಾದ ಗಿರಿಜೆಯು ಎಲೈ ನಾರದರೆ, ಶಿವನ ಅರ್ಧಾಂಗಿಯಾದ ನನ್ನನ್ನು ನೀವು ಏನು ಕಾರಣ ವಂದಿಸದೆ ಅಪರಾಧಿಯಾದಿರಿ ? ಎಂದು ಕೇಳಲು, ಆಗ ನಾರದರು ಭಯದಿಂದ ದೇವಿಗೆ ಭಕ್ತಿಯಿಂದ ವಂದಿಸಿ, ತನ್ನ ಅಪರಾಧವನ್ನು ಮನ್ನಿಸಬೇಕೆಂದು ಪ್ರಾರ್ಥಿಸಿದರು. ಆಗ ಜಗನ್ಮಾತೆಯಾದ ಗಿರಿಜೆಯು ಎಲೈ ನಾರದರೆ ! ನಿನ್ನ ತಪ್ಪಿಗೆ ಪ್ರಾಯಶ್ಚಿತ್ತ ರೂಪವಾಗಿ ನೀವು ಭೂಲೋಕದಲ್ಲಿ ನಿಮಗೆ ಪ್ರಿಯವಾದ ಒಂದು ಕಲಹವನ್ನು ಏರ್ಪಡಿಸಿ, ಅದರ ಮೂಲಕ ಭಕ್ತನಿಗೆ, ಶಿವನಿಗಿಂತಾ ಗುರುವೇ ಅಧಿಕನು ಎಂಬ ವೀರಶೈವ ಧರ್ಮಸಿದ್ಧಾಂತವನ್ನು ನಿದರ್ಶನದಿಂದ ಲೋಕಕ್ಕೆ ಪ್ರಚಾರಪಡಿಸಬೇಕೆಂದು ಸಲಹೆಮಾಡುವಳು. ಆಗ ನಾರದರು ದೇವಿಯ ಇಂಗಿತವನ್ನು ಅರಿತು, ಜಗಜ್ಜನನೀ ! ನಿನ್ನ ಅಭೀಷ್ಟವನ್ನು ಶಿರಸಾವಹಿಸಿ ನೆರವೇರಿಸುವೆನೆಂದು ವಾಗ್ದಾನ ಮಾಡಿ ದೇವಿಯ ಆಶೀರ್ವಾದವನ್ನು ಪಡೆದು ಅಲ್ಲಿಂದ ನೇರವಾಗಿ ಅಯೋಧ್ಯೆಗೆ

ಕಿರಿಳುವರು. ಇತ್ತ ರಾಮನು ಶಿವನ ಉತ್ಸವಾದಿಗಳೆಲ್ಲಾ ಆದನಂತರ ಪುರ ಪ್ರಮುಖರಿಗೂ, ಸಾಮಂತ ರಾಜರಿಗೂ, ಸೂಕ್ತ ಬಹುಮಾನಗಳನ್ನು ನೀಡಿ ಸುಖಾಸೀನನಾಗಿದ್ದನು.

ಕಲಹಕ್ಕೆ ನಾಂದಿ :

ಅದೇ ವೇಳೆಗೆ ನಾರದರು ಆಗಮಿಸಲು, ರಾಮನು ಅವರಿಗೆ ಸಾಂಗವಾಗಿ ಅತಿಥಿ ಸೇವೆಯನ್ನು ಮಾಡಿದನು.

ಆಗ ನಾರದರು ರಾಮನ ವಿಜಯಕ್ಕೆ ತಮ್ಮ ಆನಂದವನ್ನು ವ್ಯಕ್ತ ಪಡಿಸಿ ಇಂತೆಂದರು. ಎಲೈ ರಘುವೀರ! ನಿನ್ನ ವಿಜಯಕ್ಕೆ ಮುಖ್ಯ ಕಾರಣನೂ, ನಿನ್ನ ನೆಚ್ಚಿನ ಆತ್ಮೀಯನೂ, ಮಹಾ ಶಿವಭಕ್ತನೂ, ಬ್ರಹ್ಮ ಚಾರಿಯೂ, ವಿರಕ್ತನೂ, ಆದ ಹನುಮಂತನನ್ನು ನೀನು ಈ ಸಂದರ್ಭದಲ್ಲಿ ಸೂಕ್ತ ಸನ್ಮಾನದಿಂದ ಗೌರವಿಸುವುದು ಸೂಕ್ತವೆಂದು ಸೂಚಿಸಿದನು. ರಾಮನು ನಾರದರ ಸಲಹೆಗೆ ಆನಂದದಿಂದ ಒಪ್ಪಿದನು. ನಂತರ, ಅವರು ಹನುಮಂತನ ಬಳಿಗೆ ಹೋಗಿ, ಎಲೈ ಹನುಮಂತನೇ! ರಾಮನು ನಿನಗೆ ಶ್ರೇಷ್ಠ ಬಹುಮಾನವನ್ನು ನೀಡಿ ಸತ್ಕರಿಸಬೇಕೆಂದಿರುವನು. ನೀನು ನಿಸ್ಸಂಕೋಚವಾಗಿ ನಿನಗೆ ಬೇಕಾದುದನ್ನು ಕೇಳಿ ಪಡೆದುಕೋ. ನೀನು ರಾಮನಿಗೆ ಮಾಡಿದ ಸಹಾಯವನ್ನು ಎಷ್ಟು ಪ್ರಶಂಸಿಸಿದರೂ ಅಲ್ಪವೇ! ಆದುದರಿಂದ ಅವನು ನಿನಗೆ ಶ್ರೇಷ್ಠತಮವಾದ ಸನ್ಮಾನವನ್ನೇ ಮಾಡುವನು ಎಂದು ತಿಳಿಸಿದನು.

ಅದಕ್ಕೆ ಹನುಮಂತನು, ತ್ರಿಲೋಕಸಂಚಾರಿಗಳೂ, ದಿವ್ಯದೃಷ್ಟಿಯುಳ್ಳ ವರೂ ಆದ ನಿಮಗೆ ನಾನು ಹೇಳುವುದೇನಿದೆ? ನನ್ನ ಸ್ವಭಾವವು ನಿಮಗೆ ಚೆನ್ನಾಗಿಯೇ ತಿಳಿದಿದೆ. ಬ್ರಹ್ಮಚಾರಿಯೂ, ಶಿವಾರಾಧಕನೂ, ಆದ ನಾನು ಶಿವಸಾನ್ನಿಧ್ಯವಲ್ಲದೆ ಬೇರೆ ಏನನ್ನೂ ಬಯಸುವವನಲ್ಲವೆಂಬುದನ್ನು ತಿಳಿದೂ ನೀವು ನನ್ನನ್ನು ಈ ಪ್ರಾಪಂಚಿಕವಸ್ತುಗಳನ್ನು ಬಯಸಲು ಏಕೆ ಪ್ರೇರೇಪಿಸುತ್ತಿರು ವಿರಿ? ಎಂದೂ ಕೇಳಿದನು. ಅದಕ್ಕೆ ನಾರದರು ಎಲೈ ವೈರಾಗ್ಯಮೂರ್ತಿಯಾದ ಹನುಮಂತನೇ! ನಿನ್ನ ಸ್ವಭಾವ ಶೀಲಗಳು ನನಗೆ ಚೆನ್ನಾಗಿ ತಿಳಿದಿವೆ. ರಾಮ ನಿಂದ ಅನಿತ್ಯವಸ್ತುಗಳನ್ನು ಕೇಳಿ ಪಡೆ ಯೆಂದು ನಾನು ಹೇಳುತ್ತಿಲ್ಲ. ಅವನ ಆಹ್ವಾನವನ್ನು ಅಂಗೀಕರಿಸಿ ಸಭೆಗೆ ಹೋಗು. ಅಲ್ಲಿ ನಿನಗೆ ಪ್ರಿಯವಾದ ಶಿವ

ಸಾಯುಜ್ಯ ಪದವಿಯನ್ನು ಕರುಣಿಸೆಂದು ಕೇಳು ಎಂದು ತಿಳಿಸಿದನು. ಅದಕ್ಕೆ ಹನುಮಂತನು ಹಾಗೆಯೇ ಮಾಡುವುದಾಗಿ ಒಪ್ಪಿಗೆ ನೀಡಿದನು. ತನ್ನ ಸಂಕಲ್ಪವು ನೆರವೇರಿತೆಂದು ಆನಂದದಿಂದ ಕಲಹಪ್ರಿಯ ನಾರದರು ಅಲ್ಲಿಂದ ತೆರಳಿದರು. ಇತ್ತ ಸೀತೆ ಮತ್ತು ಲಕ್ಷ್ಮಣರೂ ಹನುಮಂತನ ಸಾಹಸಗಳನ್ನು ವರ್ಣಿಸಿ ಅವನಿಗೆ ಸರ್ವಶ್ರೇಷ್ಠ ಬಹುಮಾನವನ್ನು ನೀಡಬೇಕೆಂದು ರಾಮನಲ್ಲಿ ಅರಿಕೆಮಾಡಿಕೊಂಡರು.

ಹನುಮಂತನಿಗೆ ರಾಮನ ಸನ್ಮಾನ :

ಅದರಂತೆಯೇ ರಾಮನು ಹನುಮಂತನಿಗೆ ಮರುದಿನವೇ ಆಹ್ವಾನವನ್ನು ಕಳುಹಿಸಿದನು. ಹನುಮಂತನು ರಾಮನ ಆಹ್ವಾನವನ್ನು ಮನ್ನಿಸಿ. ನಾರದರ ಸಲಹೆಯಂತೆ ರಾಮನ ಸಭೆಗೆ ಬಂದನು. ರಾಮನು ಹನುಮಂತನಿಗೆ ಅಭೂತ ಪೂರ್ವ ಸ್ವಾಗತ ನೀಡಿ, ಅವನನ್ನು ಆಲಿಂಗಿಸಿ. ಪ್ರಿಯ ಬಂಧುವೇ! ನೀನೇ ನನ್ನ ಸರ್ವಸ್ವವು. ನಿನ್ನ ಉಪಕೃತಿಯನ್ನು ನಾನೆಂದಿಗೂ ಮರೆಯುವಂತಿಲ್ಲ. ನೀನು ಪ್ರಾಣಾಪಾಯಕರವಾದ ಗಂಡಾಂತರಗಳನ್ನೂ ಲೆಕ್ಕಿಸದೆ, ಅವಿಶ್ರಾಂತವಾಗಿ ಶ್ರಮಿಸಿ, ನನಗೆ ಸರ್ವ ವಿಧವಾದ ಜಯ ಹಾಗೂ ಕೀರ್ತಿಯನ್ನು ಗಳಿಸಿ ಕೊಟ್ಟಿರುವೆ.

ನಿನ್ನ ಸಹಾಯವಿಲ್ಲದೆ ಮಹಾಶಿವ ಭಕ್ತನೂ, ಬ್ರಾಹ್ಮಣ ಶ್ರೇಷ್ಠನೂ, ಅಜೇಯನೂ, ಆದ ರಾವಣನನ್ನು ಕೊಂದು ಸೀತೆಯನ್ನು ಅವನ ಬಂಧನದಿಂದ ಬಿಡಿಸಿ, ತರುವುದು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ, ರಾವಣನ ಶಕ್ತ್ಯಾಯುಧದಿಂದ ಮರಣಾವಸ್ಥೆಯಲ್ಲಿದ್ದ ನನ್ನ ಪ್ರಿಯ ಸೋದರ ಲಕ್ಷ್ಮಣನನ್ನು ಉಳಿಸಲೂ ಸಾಧ್ಯವಾಗುತ್ತಿರಲಿಲ್ಲ : ನೀನು ಶಿವಾಂಶ ಸಂಭೂತನೆಂದೂ, ಅಜೇಯನೆಂದೂ, ಚಿರಂಜೀವಿಯೆಂದೂ, ಅಂಜನೀಸುತನೆಂದೂ, ಈಗ ತಾನೆ ಪೂಜ್ಯ ಅಗಸ್ತ್ಯರಿಂದ ಕೇಳಿ ಮಹದಾನಂದವಾಯಿತು. ನಿನ್ನ ಸ್ನೇಹವು ನನಗೆ ಎಲ್ಲಕ್ಕಿಂತಲೂ ಪ್ರಿಯವಾದುದು. ಇಂಥವನಿಗೆ ಯಾವ ರೀತಿ ಸನ್ಮಾನ ಮಾಡಬೇಕೆಂಬುದೇ ನನಗೊಂದು ಸಮಸ್ಯೆಯಾಗಿದೆ. ಆದರೂ ಉಪಕಾರಸ್ಮರಣೆಯಿಲ್ಲದೆ ಕೃತಘ್ನನೆಂದೆನಿಸಿಕೊಳ್ಳಲು ಇಷ್ಟ ಪಡಲಾರೆ. ಆದುದರಿಂದ ನನ್ನಲ್ಲಿರುವ ವಸ್ತುಗಳಲ್ಲೆಲ್ಲಾ ಶ್ರೇಷ್ಠವಾದುದೂ, ಯಾವಾಗಲೂ ಜಾನಕಿಯ ಕಂಠದಲ್ಲಿ ಶೋಭಿಸುತ್ತಿರುವುದೂ ಆದ ಈ ರತ್ನ ಹಾರವನ್ನು ಸ್ವೀಕರಿ

ಸಿಂದು ಆ ರತ್ನಹಾರವನ್ನು ಹನುಮಂತನಿಗೆ ಸಭಿಕರೆಲ್ಲಾ ಜಯಕಾರ ಮಾಡು ತ್ತಿರಲು, ಕೊಟ್ಟನು.

ಮಾರುತಿಯ ಆತ್ಮಜ್ಞಾನ :

ಹನುಮಂತನು ಯಾವ ಪ್ರತಿ ಕ್ರಿಯೆಯನ್ನೂ ವ್ಯಕ್ತ ಪಡಿಸದೆ, ಅದನ್ನು ತೆಗೆದು ಕೊಂಡು ಹಿಂದೆ ಮುಂದೆ ತಿರುಗಿಸಿ ನೋಡಿ, ತುಚ್ಛ ಭಾವನೆ ಯಿಂದ ಅದನ್ನು ರಾಮನಿಗೇ ಹಿಂದಿರುಗಿಸಿ, ರಾಮನನ್ನು ಕುರಿತು, ಪ್ರಭು ರಾಮಚಂದ್ರಾ! ನಾನು ಶಿವನಾಣತಿಯಂತೆ, ರಾಕ್ಷಸರ ಸಂಹಾರ ಕಾರ್ಯದಲ್ಲಿ ನಿನಗೆ ನೆರವಾದೆನೇ ವಿನಹ ಯಾವ ಪ್ರತಿಫಲಾಪೇಕ್ಷೆಯಿಂದಲೂ ಅಲ್ಲ. ನನ್ನ ವಿದ್ಯಾಗುರುವಾದ ಸೂರ್ಯದೇವನು, ಆತ್ಮಜ್ಞಾನವನ್ನು ಬೋಧಿಸುವಾಗ ಹೀಗೆ ಹೇಳಿರುವನು—ಶಾಸ್ತ್ರಗಳಲ್ಲಿ ಸತ್ವಾದಿಗುಣಗಳ ಸಂಬಂಧವಿಲ್ಲದವನಾ ಗಿಯೂ, ಅನಂತ ಕಲ್ಯಾಣ ಗುಣಗಳಿಂದ ಪರಿಪೂರ್ಣನಾಗಿಯೂ, ಎಲ್ಲೆ ಯಿಲ್ಲದ ಸ್ವರೂಪ ಸ್ವಭಾವಗಳುಳ್ಳವನಾಗಿಯೂ ಇರುವ ಆ ಪರಮಾತ್ಮನಲ್ಲಿ ನಿಶ್ಚಲವಾದ ಭಕ್ತಿ, ಅದನ್ನು ಬಿಟ್ಟು ಇತರ ವಸ್ತುಗಳಲ್ಲಿ ವಿರಕ್ತಿ ಇವೆರಡು ಮಾತ್ರವೇ ಮುಕ್ತಿ ಸಾಧಕವಾದ ಉಪಾಯಗಳೆಂದು ನಿರ್ಣಯಿಸಲ್ಪಟ್ಟಿರು ವುದು. ಈ ಭಕ್ತಿ ವೈರಾಗ್ಯಗಳೆರಡನ್ನೂ ಸಾಧಿಸುವ ಪರಿಯನ್ನು ಹೀಗೆ ವಿವರಿಸಿರುವನು. ಅರ್ಥಕಾಮಗಳನ್ನೇ ಪುರುಷಾರ್ಥಗಳೆಂದು ತಿಳಿದು ಅದರಲ್ಲಿ ಬಿದ್ದು ನರಳುವ ಸಂಸಾರಿಗಳ ಸಹವಾಸವನ್ನು ನಿಶ್ಶೇಷವಾಗಿ ಬಿಟ್ಟುಬಿಡುವುದು, ಅಂತಹ ಸಂಸಾರಿಗಳು ನೀಡತಕ್ಕ ಅರ್ಥಕಾಮಗಳಲ್ಲಿ ಆಸೆಯಿಡಬಾರದು. ತತ್ವಾನ್ವೇಷಣೆಯಲ್ಲಿ ಆಸಕ್ತಿವಹಿಸುವುದು. ಆಚಾರ್ಯನು ಉಪದೇಶಿಸಿರುವ ಆತ್ಮಯೋಗವನ್ನು ಮನನ ಮಾಡಿ, ಭಕ್ತಿಶ್ರದ್ಧೆಗಳಿಂದ ಅನುಷ್ಠಿಸುವುದು. ನೈಮಿತ್ತಿಕವಾದ ನಿತ್ಯ ಕರ್ಮಗಳನ್ನು ಭಗವದಾರಾಧನ ರೂಪವಾಗಿಯೇ ಆಚರಿಸುವುದು. ಆತ್ಮಸಂಧಾನವೊಂದನ್ನೇ ಅನುಸಂಧಾನ ಮಾಡುತ್ತಿರುವ ಭಗವದ್ಭಕ್ತರ ನಡತೆಯನ್ನು ಅನುಸರಿಸುವುದು. ಆತ್ಮಸ್ವರೂಪವನ್ನೂ, ಭಗವದಾರಾಧನೆಯನ್ನೂ ಅನುಸಂಧಾನ ಮಾಡುವುದರಲ್ಲಿ ಹೊರತು ಇತರ ವಿಷಯ ಸುಖಕ್ಕೆ ಮನಸ್ಸನ್ನು ಹರಿಯ ಬಿಡದಿರುವುದು.

ಈ ಕಾರ್ಯಗಳಿಂದ ಆತ್ಮವಲ್ಲದ ಇತರ ವಸ್ತುಗಳಲ್ಲಿ ವಿರಕ್ತಿಯೂ, ಪರಮಾತ್ಮ ಶಿವನಲ್ಲಿ ಭಕ್ತಿಯೂ, ಶೀಘ್ರದಲ್ಲಿ ಉಂಟಾಗುವುವು. ಯಾವಾಗ

ಮನುಷ್ಯನಿಗೆ ಇಂಥಾ ಭಕ್ತಿವೈರಾಗ್ಯ ಲಭಿಸುವುದೋ ಆಗ ಆಚಾರ್ಯಾನುಗ್ರಹಕ್ಕೆ ಪಾತ್ರನಾಗಿ, ಆ ಭಕ್ತಿವೈರಾಗ್ಯಗಳ ಬಲದಿಂದ ಪಂಚಭೂತಾತ್ಮಕವಾದ ಶರೀರವನ್ನೂ, ಈ ಶರೀರಕ್ಕೆ ಬೀಜದಂತಿರುವ ಅವಿದ್ಯೆಯನ್ನೂ, ಬೆಂಕಿಯು ತನಗೆ ಉತ್ಪತ್ತಿಸ್ಥಾನವಾದ ಸೌದೆಯನ್ನು ಭಸ್ಮಮಾಡುವಂತೆ, ದಹಿಸಿಬಿಡುವನು. ನಂತರ ದೇಹ ಗುಣಗಳಾದ ರಾಗದ್ವೇಷಾದಿಗಳೇನನ್ನೂ ಕಾಣಲಾರನು. ದೇಹೇಂದ್ರಿಯಾದಿಗಳಲ್ಲಿ ಅಭಿಮಾನವೆಂಬ ವಾಸನೆಯಿರುವವರೆಗೆ ಮಾತ್ರ ದೇಹೇಂದ್ರಿಯಗಳ ಬೇರೆ ಬೇರೆಯಾದ ಭೋಗ ಸ್ಥಾನಾದಿಗಳು ಕಾಣುತ್ತಿರುವುವು. ವಾಸನೆಯುಳಿದಕೂಡಲೇ ಅವೆಲ್ಲವೂ ನಷ್ಟವಾಗಿ ಹೋಗುವುವು. ಶಬ್ದಾದಿ ವಿಷಯಗಳನ್ನು ಚಿಂತಿಸಿದರೆ, ಅವು ಇಂದ್ರಿಯಗಳನ್ನು ಸೆಳೆಯುವುವು. ಆ ಇಂದ್ರಿಯಗಳು ಮನಸ್ಸನ್ನು ಆಕರ್ಷಿಸುವುವು. ಆ ಮನಸ್ಸು ಪರಮ ಪುರುಷಾರ್ಥವನ್ನು ತಿಳಿಯಬೇಕೆಂಬ ಬುದ್ಧಿಯನ್ನು ಕಳೆದುಕೊಂಡು, ಶಬ್ದಾದಿ ವಿಷಯಗಳಲ್ಲಿ ಪ್ರವರ್ತಿಸಿ, ದುರ್ಬಲವಾಗಿ ನಿಜ ಜ್ಞಾನವಿಲ್ಲದೆ ಕೆಡುವುದು. ಇದರಿಂದ ಆತ್ಮ-ಪರಮಾತ್ಮ ಸ್ವರೂಪದ ನಿಜಸ್ಥಿತಿಯನ್ನು ತಿಳಿಯಲಾಗುವುದಿಲ್ಲ. ಹೀಗೆ ತನ್ನ ಸ್ಥಿತಿಯನ್ನೇ ತಾನು ತಿಳಿಯಲಾರದೆ, ಬೇರೆ ಶಬ್ದಾದಿ ವಿಷಯಗಳನ್ನು ಪ್ರೀತಿಸುವುದಕ್ಕಿಂತಾ ಬೇರೊಂದು ಅನರ್ಥವಿಲ್ಲ. ಶಬ್ದಾದಿ ವಿಷಯಗಳ ಕಡೆಗೆ ಮನಸ್ಸನ್ನು ಪ್ರೇರೇಪಿಸುವುದೇ ಇಂದ್ರಿಯಗಳ ಸ್ವಭಾವವು. ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳಲಾರದೆ, ತಾನೇ ಅವುಗಳಲ್ಲಿ ಆತುರಪಟ್ಟರೆ, ಅಂತಹ ಮನುಷ್ಯನಿಗೆ ಧರ್ಮಾರ್ಥಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಯಾವುದೂ ಸಿದ್ಧಿಸಲಾರದು. ಆ ಶಬ್ದಾದಿ ವಿಷಯಗಳ ಚಿಂತೆ ಇದ್ದಾಗ ಮನುಷ್ಯನ ಮನಸ್ಸು ಶಾಸ್ತ್ರಜ್ಞಾನದಿಂದಲೂ, ಭಗವದುಪಾಸನರೂಪವಾದ ಜ್ಞಾನದಿಂದಲೂ, ದೂರವಾಗಿ ಭ್ರಷ್ಟವಾಗಿ ಜಡತ್ವವನ್ನು ಹೊಂದುವುದು. ಆದುದರಿಂದ ಇಂಥಾ ಅನರ್ಥ ಕಾರಣವಾದ ಅವಿದ್ಯೆಯಿಂದ ಬಿಡುಗಡೆ ಹೊಂದಬೇಕೆಂಬ ಅಪೇಕ್ಷೆಯುಳ್ಳವನು, ಮೊದಲು ವಿಷಯಾಭಿಲಾಷೆಯನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಈ ನಾಲ್ಕು ಪುರುಷಾರ್ಥಗಳಲ್ಲಿ ಶಿವಸಾಯುಜ್ಯವೆಂಬ ಮೋಕ್ಷವೇ ಎಂದೆಂದಿಗೂ ನಾಶವಿಲ್ಲದ ಪುರುಷಾರ್ಥವೆಂದು ಜ್ಞಾನಿಗಳ ಅಭಿಮತ. ಉಳಿದ ಧರ್ಮ, ಅರ್ಥ, ಕಾಮವೆಂಬ ಪುರುಷಾರ್ಥಗಳಿಗೂ ಕಾಲ ಭಯವುಂಟು.

ಆದುದರಿಂದ ಅವು ಅಶಾಶ್ವತವಾದವುಗಳು. ಹರಿಬ್ರಹ್ಮಾದಿ ಮೊದಲಾಗಿ ಕ್ರಿಮಿ ಕೀಟಗಳವರೆಗಿರುವ ಉತ್ಕೃಷ್ಟಾಪಕೃಷ್ಟಗಳೆಂದು ವಿಭಜಿಸಲ್ಪಟ್ಟ ಸಮಸ್ತ ಪದಾರ್ಥಗಳೂ, ಸತ್ವಾದಿ ಗುಣಗಳ ಹೆಚ್ಚು ಕಡಿಮೆಯಿಂದಲೇ ಸೃಷ್ಟಿಸಲ್ಪಟ್ಟಿ ರುವುವು. ಇಂತಹ ಸೃಷ್ಟಿಗೊಳಪಟ್ಟ ಎಲ್ಲಾ ವಸ್ತುಗಳೂ ಪ್ರಳಯಕಾಲ ದಲ್ಲಿ ನಶಿಸುವುವು. ಕಾಲರೂಪಿಯಾದ ಪರಮೇಶ್ವರನು ಆಗಾಗ ಅವುಗಳನ್ನು ನಾಶಗೊಳಿಸುವುದರಿಂದ ಅವು ಅನಿತ್ಯವೂ, ಅಶಾಶ್ವತವೂ ಆದವುಗಳು.

ಪರಮಾತ್ಮನು ಜೀವಾತ್ಮನಲ್ಲಿ ಸೇರಿದ್ದರೂ, ಅವನಿಗೆ ಜೀವಗತವಾದ ದೋಷಗಳು ತಗುಲಲಾರವು. ಆತನು ನಿತ್ಯ ಮುಕ್ತನು. ಅವನಿಗೆ ಸಹಜ ವಾಗಿ ಪ್ರಕೃತಿ ಸಂಬಂಧವಿಲ್ಲದಿದ್ದರೂ, ಜೀವನಿಗೆ ಕರ್ಮಸಂಬಂಧದಿಂದುಂಟಾದ ಆ ಪ್ರಕೃತಿ ವಿಕಾರಗಳೇ ಅವನಲ್ಲಿಯೂ ತೋರುವುವು. ಎಲ್ಲವನ್ನೂ ಬ್ರಹ್ಮಾ ತ್ಮಕವೆಂದು ತಿಳಿದ ಜಿತೇಂದ್ರಿಯರು, ಪರಮಾತ್ಮನ ಪಾದಾರವಿಂದಗಳನ್ನೇ ಆಶ್ರಯಿಸುವರು. ಅದರಿಂದ ತಮ್ಮ ಮನಸ್ಸಿಗೆ ಅಂಟಿರುವ ಕರ್ಮವಾಸನೆ ಗಳನ್ನು ದೂರಮಾಡಿ ಕೊಳ್ಳುವರು. ಈ ಸಂಸಾರವೆಂಬ ಮಹಾಭಯಂಕರ ವಾದ ಸಾಗರವನ್ನು ದಾಟುವುದು ಅತಿ ಪ್ರಯಾಸ. ಸರ್ವೇಶ್ವರನೆಂಬ ಹಡಗಿನ ಸಹಾಯವಿಲ್ಲದೆ ಅದನ್ನು ಯಾರೂ ದಾಟಲಾರರು. ಆದುದರಿಂದ ಹನುಮಂತ ನೇ! ಲೋಕದಲ್ಲಿ ಸಮಸ್ತ ಚೇತನರಿಗೂ, ದುರ್ಲಭವಾದ ಆ ಪರಮೇಶ್ವರನ ಪಾದಾರವಿಂದಗಳನ್ನೇ ನೀನೂ ನಾವೆಯಾಗಿ ಮಾಡಿಕೊಂಡು, ದಾಟಲ ಸಾಧ್ಯವಾದ ಈ ಸಂಸಾರ ಸಾಗರವನ್ನು ದಾಟಿ, ಶಿವಸಾಯುಜ್ಯರೂಪ ಮೋಕ್ಷವನ್ನು ಹೊಂದು—ಎಂದು ನನಗೆ ಉಪದೇಶಿಸಿರುವನು.

ಅಲ್ಲದೆ ರಾಮಚಂದ್ರನೇ! ನೀನಾದರೋ ರಾಕ್ಷಸರ ಸಂಹಾರ ಮಾಡ ಲೆಂದೇ ಶಿವಾನುಗ್ರಹದಿಂದ ಅವತರಿಸಿರುವ ಶ್ರೀ ವಿಷ್ಣುವೆಂದು ತಿಳಿದಿರುವೆನು. ತ್ರಿಮೂರ್ತಿಗಳಲ್ಲಿ ಒಬ್ಬನೂ, ರಕ್ಷಕನೂ, ಆದ ನಿನ್ನಿಂದ ನಾನು ಅನಿತ್ಯ ಹಾಗೂ, ಜನನ ಮರಣಕ್ಕೆ ಹೇತುವಾದ ಇಂಥಾ ನಶ್ವರ ವಸ್ತುಗಳನ್ನು ಬಯಸಿದರೆ ಲೋಕವು ನನ್ನನ್ನೂ ಮೂರ್ಖನೆಂದು ಕರೆಯುವುದಿಲ್ಲವೇ? ಶಿವಸಾಪೇಕ್ಷತ್ವದ ತೃಷೆಯು ನನ್ನನ್ನು ಬಾಧಿಸುತ್ತಿದೆ. ಮತ್ತೇನೂ ನನ್ನ ತೃಷೆಯನ್ನು ಹಿಂಗಿಸದು, (ತುಲಸೀ ರಾಮಾಯಣ, ಮಾರುತಿ ಭಕ್ತಿ ದರ್ಪಣ) ಆದುದರಿಂದ ನಿನಗೆ ನನ್ನಲ್ಲಿ ಸಹಜವಾದ ಪ್ರೇಮವಿದ್ದರೆ ನನಗೆ ಶಿವ

ಸಾಯುಜ್ಯವನ್ನು ಕರುಣಿಸು ಎಂದು ಪ್ರಾರ್ಥಿಸಿದನು. ರಾಮನಾದರೋ ಹನುಮಂತನ ಮಾತನ್ನು ಕೇಳಿ ಚಕಿತನಾಗಿ ಸುಮ್ಮನೆ ನಿಂತಿರಲು, ಹನುಮಂತನು ಮತ್ತೆ ! ರಾಮಚಂದ್ರ ! ಅದಲ್ಲದೆ ನೀನು ಮೂರು ಲೋಕಗಳ ಅಧಿಪತ್ಯವನ್ನಾಗಲೀ, ಇಂದ್ರ ಪದವಿಯನ್ನಾಗಲೀ, ಬ್ರಹ್ಮಪಟ್ಟವನ್ನಾಗಲೀ ಕರುಣಿಸಿದರೂ ನಾನು ಅದನ್ನು ಅಂಗೀಕರಿಸಲಾರೆ. ಏಕೆಂದರೆ ಅವೆಲ್ಲಾ ಅನಿತ್ಯವಾದವುಗಳು. ಪ್ರಳಯ ಕಾಲದಲ್ಲಿ ರುದ್ರನಿಂದ ನಾಶ ಹೊಂದಿಸಲ್ಪಡು ವುವು ಎಂದು ಹೇಳಿದನು.

ಆಗ ರಾಮನು, ಹನುಮಂತನ ಅಧ್ಯಾತ್ಮ ಜ್ಞಾನದ ಆಳವನ್ನು ಅರಿತು ನಾಚಿ, ಅವನನ್ನು ಮನಸ್ಸಿನಲ್ಲಿಯೇ ಅಭಿನಂದಿಸಿ, ಹೊರಗೆ ಅಸಹಜವಾದ ಕೋಪವನ್ನು ವ್ಯಕ್ತಪಡಿಸುತ್ತಾ ಎಲೈ ವೀರಹನುಮಂತನೆ ! ನಿನಗೆ, ಪ್ರಪಂಚ ದಲ್ಲಿ ಯಾರಿಗೂ ಪಡೆಯಲು ಸಾಧ್ಯವಾಗದುದೂ, ಅತ್ಯಂತ ಶ್ರೇಷ್ಠವಾದುದೂ, ಆದ ರತ್ನಹಾರವನ್ನು ಕೊಟ್ಟರೂ, ಅದರ ಬೆಲೆಯನ್ನು ಅರಿಯದೆ, ನಿನ್ನ ಕಪಿ ಸ್ವಭಾವಕ್ಕೆ ಅನುಗುಣವಾಗಿ, ವರ್ತಿಸಿರುವೆ ಎಂದು ಅಸಮಾಧಾನದಿಂದ ನುಡಿ ದನು. ಆಗ ಹನುಮಂತನಿಗೂ ರಾಮನಿಗೂ ವಾದ ವಿವಾದಗಳು ನಡೆದು, ಕೊನೆಗೆ ಹನುಮಂತನು, ರಾಮಚಂದ್ರಾ ? ನೀನಿತ್ತಿರುವ ರತ್ನಹಾರದ ಬೆಲೆ ನನಗೆ ತಿಳಿಯದೆಂದು ಹೇಳುತ್ತಿರುವೆಯಲ್ಲವೇ ! ಅದರ ಬೆಲೆಯೆಷ್ಟೆಂಬುದನ್ನು ಈಗಲೇ ನಿನಗೆ ತೋರಿಸುವೆನೆಂದು ಹೇಳಿ ಅಲ್ಲಿಂದ ಅದೃಶ್ಯನಾದನು.

ಸೀತೆಯ ಸಲಹೆ :

ರಾಮ–ಹನುಮಂತರ ಮಧ್ಯೆ ನಡೆದ ಸಂವಾದವನ್ನು ಕೇಳುತ್ತಿದ್ದ ಲಕ್ಷ್ಮಣ–ಸೀತೆ ಮತ್ತು ಇತರ ಸಭಿಕರೆಲ್ಲರೂ ಆಶ್ಚರ್ಯದಿಂದ ಚಕಿತರಾಗಿ ವ್ಯಥೆಯಿಂದ ಮೌನವಾಗಿದ್ದರು. ಆಗ ಧೈರ್ಯದಿಂದ ಸೀತೆಯು ರಾಮನನ್ನು ಕುರಿತು, ನಾಥ ! ನಮ್ಮ ವಿಜಯಕ್ಕೆ ಕಾರಣನೂ, ಶಿವಾಂಶ ಸಂಭೂತನೂ, ಮಹಾವೈರಾಗ್ಯ ಮೂರ್ತಿಯೂ ಆದ ಹನುಮಂತನನ್ನು ಹೀಗೆ ನಿಂದಿಸಿ ಕಪಿ ಯೆಂದು ಹೀಯಾಳಿಸಿದುದು ಧರ್ಮಸಮ್ಮತವಲ್ಲ. ಇಷ್ಟು ಬೇಗ ಅವನು ಮಾಡಿರುವ ಅನಂತ ಮಹಾ ಉಪಕಾರಗಳನ್ನು ನೀವು ಮರೆಯಬಹುದೇ? ಹನುಮಂತನ ವಿಚಾರದಲ್ಲಿ ನೀವು ಯಾವ ಕಾರಣದಿಂದಲೂ ಕುಪಿತರಾಗ ಬಾರದು ; ನಿಷ್ಠುರ ವಾಕ್ಯಗಳನ್ನಾಡಿ ಅವನ ಮನಸ್ಸನ್ನು ನೋಯಿಸ

ಬಾರದು ; ಶಾಂತರಾಗಿ ಅವನನ್ನು ಕರೆಯಿಸಿ ತೃಪ್ತಿಪಡಿಸಿರೆಂದು ವಿನಯದಿಂದ ಪ್ರಾರ್ಥಿಸಿ ಮತ್ತೆ ಎಲೈ ಸ್ವಾಮಿಯೇ ! ರಾಕ್ಷಸರ ಸಂಹಾರ ಕಾರ್ಯದಲ್ಲಿ ಈ ಮಾರುತಿಯು, ದೇವಾನುದೇವತೆಗಳೂ ಆಶ್ಚರ್ಯವಾಗುವಂಥಾ ಅದ್ಭುತ ಸಾಹಸಗಳನ್ನು ತೋರಿ ದುರುಳ ರಾವಣನ ವಧೆಗೆ ಮುಖ್ಯ ಕಾರಣನಾಗಿರುವ ನೆಂದು ಅನೇಕರ ಬಾಯಿಂದ ಕೇಳಿ ತಿಳಿದಿರುವೆನು.

ತಥಾಭಿಷಿಚ್ಯ ರಾಜಾನಂ ಲಂಕಾಯಾಂ ಚ ವಿಭೀಷಣಂ ।
ಕಪಿಸೇನಾವೃತೋ ರಾಮೋ ಗಂಧಮಾಧನಮನ್ವಗಾತ್ ॥

(ಸ್ಕಾಂದ–1 ಸೇತು 44.59)

ಪುಷ್ಪಕದಲ್ಲಿ ನಾವು ವಿಭೀಷಣ ಹಾಗೂ ವಾನರ ಶ್ರೇಷ್ಠರೊಡನೆ ಗಂಧ ಮಾದನ ಪರ್ವತಕ್ಕೆ ಹೋದೆವು. ಆಗ ನೀನು ಮುನಿಶ್ರೇಷ್ಠರನ್ನು ಕುರಿತು,

ತಸ್ಯ ಮೇ ನಿಷ್ಕೃತಿಂ ಬ್ರೂತ ಪೌಲಸ್ತ್ಯವಧಜಸ್ಯ ಹಿ ।
ಯತ್ಕೃತ್ವಾ ತೇನ ಪಾಪೇನ ಮುಚ್ಯೇऽಹಂ ಮುನಿಪುಂಗವಾಃ ॥

(44–86)

ಎಲೈ ಪೂಜ್ಯ ಮುನಿಪುಂಗವರೇ, ಮಹಾಶಿವಭಕ್ತನೂ, ಬ್ರಾಹ್ಮಣನೂ ಆದ ಪೌಲಸ್ತ್ಯನನ್ನು ಕೊಂದಿರುವುದರಿಂದ ಬ್ರಹ್ಮಹತ್ಯಾದೋಷಕ್ಕೊಳಗಾಗಿ ರುವೆನು. ಅದನ್ನು ಹೋಗಲಾಡಿಸಿಕೊಳ್ಳುವ ಉಪಾಯವನ್ನು ದಯಮಾಡಿ ತಿಳಿಸಿರಿ ಎಂದು ಪ್ರಾರ್ಥಿಸಿದೆ.

ಗಂಧಮಾದನಶೃಂಗೇऽಸ್ಮಿನ್ಮಹಾಪುಣ್ಯೇ ವಿಮುಕ್ತಿದೇ ।
ಶಿವಲಿಂಗಪ್ರತಿಷ್ಠಾಂ ತ್ವಂ ಲೋಕಸಂಗ್ರಹಕಾಮ್ಯಯಾ ॥ (44–88)
ಕುರು ರಾಮ ದಶಗ್ರೀವವಧದೋಷಾಪನುತಯೇ ।
ಲಿಂಗಸ್ಥಾಪನಜಂ ಪುಣ್ಯಂ ಚತುರ್ವರ್ಕ್ಯೋऽಪಿ ಭಾಷಣಂ ॥ (44.89)

ಆಗ ಮುನಿವರ್ಯರು, ಗಂಧಮಾದನ ಪರ್ವತ ಶಿಖರದಲ್ಲಿ ಒಂದು ಶಿವ ಲಿಂಗವನ್ನು ಪ್ರತಿಷ್ಠೆ ಮಾಡಿದರೆ ಹತ್ಯಾ ದೋಷ ಪರಿಹಾರವಾಗುವುದೆಂದು ಹೇಳಿದರು. ಆಗ ನೀನು ಮಹದಾನಂದ ಹೊಂದಿ, ಕೈಲಾಸದಿಂದ ಶಿವಲಿಂಗ ತರಲು, ಬೇರೆಯಾರಿಗೂ ಶಕ್ಯವಿಲ್ಲದುದನ್ನು ಮನಗಂಡು, ಮಾರುತಿಯನ್ನು ಕುರಿತು, ಎಲೈ ಬಂಧುವೇ ! ಈ ಕೆಲಸವು ನಿನ್ನಿಂದಲ್ಲದೆ ಯಾರಿಂದಲೂ ಸಾಧ್ಯವಾಗುವಂತಿಲ್ಲ. ನೀನೊಬ್ಬನೇ ನನಗೆ ದಿಕ್ಕು. ಆದುದರಿಂದ ಅನ್ಯಥಾ

ಭಾವಿಸದೆ ಈ ಮಹೋಪಕಾರವನ್ನು ಮಾಡೆಂದು ಕೇಳಿದೆ. ಮಾರುತಿಯು ಹಿಂದು ಮುಂದು ನೋಡದೆ, ನಾವೆಲ್ಲರೂ ನೋಡುತ್ತಿದ್ದಂತೆಯೇ ಕೈಲಾಸದ ಕಡೆಗೆ ಹಾರಿದನು. ಲಿಂಗಪ್ರತಿಷ್ಠಾಕಾಲಕ್ಕೆ ಮಾರುತಿಯು ಬರದಿರಲು, ಮುನಿಗಳು ನಿನ್ನನ್ನು ಕುರಿತು,

"ಮಾ ವಿಲಂಬಂ ಕುರುಷ್ವಾತೋ ಲಿಂಗಸ್ಥಾಪನಕರ್ಮಣಿ ।
ರಾಮಚಂದ್ರ ಮಹಾಭಾಗ ಕರುಣಾಪೂರ್ಣ ವಿಗ್ರಹ ॥ (44-94)

ರಾಮಭದ್ರಾ, ಶುಭಲಗ್ನ ಮೀರುತ್ತಿರುವುದು. ನೀನು ಕೂಡಲೇ ಲಿಂಗ ಪ್ರತಿಷ್ಠೆಯನ್ನು ಮಾಡೆಂದು ಆದೇಶ ನೀಡಿದರು. ಆಗ, ನಿನ್ನ ಇಚ್ಛೆಯಂತೆ ನಾನು ಒಂದು ಮರಳಿನ ಲಿಂಗವನ್ನು, ಪಾರ್ವತೀಪರಮೇಶ್ವರರನ್ನು ಮನಸಾ ಧ್ಯಾನಿಸುತ್ತಾ, ನಿರ್ಮಿಸಿದೆನು. ಆಗ ನಾವೆಲ್ಲರೂ ಕೂಡಿ, ವಿಧ್ಯುಕ್ತವಾಗಿ, ಆ ಶಿವಲಿಂಗವನ್ನು ಜ್ಯೇಷ್ಠಮಾಸ, ಶುಕ್ಲಪಕ್ಷ, ದಶಮೀ, ಬುಧವಾರ, ಹಸ್ತಾನಕ್ಷತ್ರ, ಅಮೃತಘಳಿಗೆ, ವ್ಯತೀಪಾತದಲ್ಲಿ, ಚಂದ್ರನು ಕನ್ಯಾರಾಶಿಯಲ್ಲಿಯೂ, ರವಿಯು, ವೃಷಭರಾಶಿಯಲ್ಲಿಯೂ ಇರುವ ದಶ ಯೋಗದಲ್ಲಿ, ಗಂಧಮಾದನ ಪರ್ವತದ ತಪ್ಪಲಿನಲ್ಲಿ ಪ್ರತಿಷ್ಠೆ ಮಾಡಿದೆವು. ದೇವದುಂದುಭಿಗಳು ಮೊಳಗಿದವು ಕಿನ್ನರರು ಪುಷ್ಪ ವೃಷ್ಟಿಗರೆದರು. ವೇದ ಘೋಷವನ್ನು ವಂದಿಮಾಗಧರು ಮಾಡುತ್ತಿರಲು, ಅದು ನಭೋಮಂಡಲವನ್ನೆಲ್ಲಾ ಆವರಿಸಿ, ಅತಿಮಂಗಳ ಕರವಾಗಿ ಕಂಡಿತು. ಆಗ ನಾವೆಲ್ಲರೂ ಆ ಶಿವಲಿಂಗದ ಮುಂದೆ ಮಂಡಿ ಯೂರಿ, ಅಂಜಲಿ ಬದ್ಧರಾಗಿ ಕುಳಿತು, ಅನನ್ಯ ಭಕ್ತಿಭಾವದಿಂದ, ಸರ್ವೇಶ್ವರನೂ, ಭಕ್ತವತ್ಸಲನೂ, ಅನಾಥನಾಥನೂ, ಚಂದ್ರಮೌಳಿಯೂ, ಗೌರೀ ಪತಿಯೂ, ಆದ ಶಂಕರನನ್ನು ಪ್ರಾರ್ಥಿಸಿದೆವು. ಕೂಡಲೇ ಶಂಕರನು,

ಲಿಂಗಸ್ಥಃ ಸ ಮಹಾದೇವಃ ಪಾರ್ವತ್ಯಾ ಸಹ ಶಂಕರಃ ।
ಪ್ರತ್ಯಕ್ಷಮೇವ ಭಗವಾನ್ದತ್ತವಾನ್ವರಮುತ್ತಮಂ ॥ (44-111)

ಜಗನ್ಮಾತೆ ಪಾರ್ವತೀ ಸಮೇತನಾಗಿ ದರ್ಶನ ನೀಡಿ, ನಮಗೆಲ್ಲಾ ಉತ್ತಮವಾದ ವರಗಳನ್ನು ಅನುಗ್ರಹಿಸಿ, ಹರಸಿದನು. ಆಗ ನೀನು ಶಿವ-ಶಿವೆಯರನ್ನು ಅನನ್ಯ ಭಕ್ತಿ ಭಾವದಿಂದ ಸ್ತುತಿಸಿ, ಶಿವನ ಪ್ರೀತ್ಯರ್ಥವಾಗಿ, ನೀನು ಮಹದಾನಂದದಿಂದ,

ಷ್ಠಾದಾದೇವಂ ಹಿ ರಾಮಾಯ ವರಂ ದೇವೋಽಂಬಿಕಾಪತಿಃ ।
ತದಗ್ರೇ ನಂದಿಕೇಶಂ ಚ ಸ್ಥಾಪಯಾಮಾಸ ರಾಘವಃ ॥ (44–115)

ಪಾರ್ವತೀ-ಪರಮೇಶ್ವರರ ಸಮಕ್ಷಮದಲ್ಲಿಯೇ ದ್ವಿತೀಯ ಶಂಭುವಾದ ನಂದಿಕೇಶ್ವರನ ವಿಗ್ರಹವನ್ನೂ ಭಕ್ತಿಭಾವದಿಂದ ಪ್ರತಿಷ್ಠಾಪಿಸಿದೆ. ಇದರಿಂದ ಸುಪ್ರೀತನಾದ ಶಂಕರನು ಮತ್ತೆ ನಮ್ಮನ್ನೆಲ್ಲಾ ಹರಸಿ, ಅಂತರ್ಧಾನನಾದನು.

ಅಷ್ಟರಲ್ಲಿ, ಮಾರುತಿಯು ಕೈಲಾಸ ಪರ್ವತದಲ್ಲಿ ಪರಶಿವನನ್ನು ಕುರಿತು ತಪಸ್ಸನ್ನಾಚರಿಸಿ, ಶಿವನಕೃಪೆಯಿಂದ ಶಿವಲಿಂಗವನ್ನು ಪಡೆದು ಶೀಘ್ರದಿಂದ ಬಂದನು. ಆದರೆ ತಾನು ಅಷ್ಟು ಕಷ್ಟಪಟ್ಟು ಶಿವಲಿಂಗ ತರುವುದರೊಳಗಾಗಿಯೇ ಇಲ್ಲಿ ಶಿವಲಿಂಗಪ್ರತಿಷ್ಠೆಯಾಗಿರುವುದನ್ನು ಕಂಡು ಅತ್ಯಂತ ದುಃಖದಿಂದ ನಿನ್ನನ್ನು ಕುರಿತು, ಹೇ ರಾಮಚಂದ್ರನೇ !

ದುರ್ಜಾತೋಽಹಂ ವೃಥಾ ರಾಮ ಲೋಕಃ ಕ್ಲೇಶಾಯ ಕೇವಲಂ।
ಖಿನ್ನೋಽಸ್ಮಿ ಬಹುಶೋ ದೇವ ರಾಕ್ಷಸೈಃ ಕ್ರೂರಕರ್ಮಿಭಿಃ ॥
(45-5)
ಖಿನ್ನೋಽಸ್ಮಿ ಸೇವಯಾ ಪೂರ್ವಂ ಯುದ್ಧೇನಾಪಿ ತತೋಽಧಿಕಂ ।
ಅನಂತಂ ದುಃಖಮಧುನಾ ಯತೋ ಮಾಮವಮನ್ಯಸೇ ॥
(45–7)
ಸುಗ್ರೀವೇಣ ಚ ಭಾರ್ಯಾರ್ಥಂ ರಾಜ್ಯಾರ್ಥಂ ರಾಕ್ಷಸೇನ ಚ ।
ರಾವಣಾವರಜೇನ ತ್ವಂ ಸೇವಿತೋಽಸಿ ರಘೂದ್ವಹ ॥ (45–8)
ಮಯಾ ನಿರ್ಹೇತುಕಂ ರಾಮ ಸೇವಿತೋಽಸಿ ಮಹಾಮತೇ ।
ವಾನರಾಣಾಮನೇಕೇಷು ತ್ವಯಾಜ್ಞಪ್ತೋಽಹಮದ್ಯ ವೈ ॥(45–9)

ಈ ಪ್ರಪಂಚದಲ್ಲಿ ಕೇವಲ ಕಷ್ಟಪಡುವುದಕ್ಕೋಸ್ಕರವಾಗಿಯೇ ಈ ದುಷ್ಟಜನ್ಮವನ್ನೆತ್ತಿರುವೆನು. ಮೊದಲೇ ನಿನ್ನ ಸೇವೆಯಿಂದ ನನಗೆ ಅಪಾರ ದುಃಖವಾಯಿತು. ನಂತರ ಕಠಿಣರಾದ ರಾಕ್ಷಸರಿಂದ ಮತ್ತೂ ಹೆಚ್ಚಿನ ವ್ಯಥೆಗೀಡಾಗಿರುವೆನು. ಯುದ್ಧದಲ್ಲಂತೂ, ಹೇಳಲಾರದ ಕಷ್ಟಕಾರ್ಪಣ್ಯಗಳನ್ನನುಭವಿಸಿದೆನು. ಈಗಲಾದರೋ ನೀನು ನನಗೆಸಗಿದ ಈ ಅಪಮಾನದಿಂದ ವರ್ಣಿಸಲಶಕ್ಯವಾದ ದುಃಖವನ್ನನುಭವಿಸಬೇಕಾಯಿತು. ರಾಘವೇಂದ್ರನೇ ಸುಗ್ರೀ

ವನು ಪತ್ನಿ ಹಾಗೂ ರಾಜ್ಯಲೋಭದಿಂದ ನಿನ್ನನ್ನು ಸೇವಿಸಿದನು. ದಾನವೇಶ್ವರನಾದ ವಿಭೀಷಣನಾದರೋ ರಾಜ್ಯದ ವ್ಯಾಮೋಹದಿಂದ ನಿನ್ನನ್ನು ಸೇವಿಸಿದನು. ಆದರೆ ನಾನು ಕೇವಲ ಶಿವನಾಣತಿಯಂತೆ, ದುಷ್ಟ ರಾಕ್ಷಸರನ್ನು ಸಂಹರಿಸಿ, ಲೋಕಕ್ಕೆ ಕಲ್ಯಾಣವಾಗಲೆಂಬ ಸದುದ್ದೇಶದಿಂದ ನಿನಗೆ ಸಹಾಯ ಮಾಡಿದೆನಲ್ಲದೆ, ಯಾವ ಸ್ವಪ್ರಯೋಜನಕ್ಕಾಗಲೀ ಮತ್ತಾವ ಪ್ರತಿಫಲಾಪೇಕ್ಷೆಯಿಂದಲಾಗಲೀ ನಿನ್ನನ್ನು ಸೇವಿಸಲಿಲ್ಲ. ಎಂದು ಹೇಳಿ ಅತ್ಯಂತ ದುಃಖಿತನೂ, ಅಪಮಾನದಿಂದ ಕ್ರುದ್ಧನೂ ಆಗಿ, ಅವಿವೇಕದಿಂದ ಪರಾಪರ ಯೋಚನೆಯೇ ಇಲ್ಲದೆ, ನೀನು ಸ್ಥಾಪಿಸಿದ್ದ ಲಿಂಗವನ್ನು ಕೀಳಲುಪಕ್ರಮಿಸಿ, ವಿಫಲನಾಗಿ, ಮತ್ತೂ ಕೋಪಗೊಂಡು ತನ್ನ ಬಾಲವನ್ನು ಶಿವಲಿಂಗಕ್ಕೆ ಸುತ್ತಿ ಮೇಲಕ್ಕೆ ಹಾರಿ ತನ್ನ ಶಕ್ತಿಯನ್ನೆಲ್ಲಾ ಪ್ರಯೋಗಿಸಿ, ಕೀಳಲು, ಶಿವದ್ರೋಹದಿಂದ ತಾಡಿತನಾಗಿ, ಲಿಂಗದಿಂದ ಎರಡು ಮೈಲಿಗಳ ಅಂತರದಲ್ಲಿ ಮೂಗು ಬಾಯಿಗಳಲ್ಲಿ ರಕ್ತವನ್ನು ಕಾರುತ್ತಾ ಮೂರ್ಛಿತನಾಗಿ ಬಿದ್ದನು. ಆಗ ನಾವೆಲ್ಲರೂ ಆಶ್ಚರ್ಯ ಭಯಗಳಿಂದ ಕೂಡಿದವರಾಗಿ ಅಲ್ಲಿಗೆ ಧಾವಿಸಿದೆವು.

ಆರೋಪ್ಯಾಂಕಂ ಸ್ವಪಾಣಿಭ್ಯಾಮಾಮಮರ್ಶ ಕಲೇವರಂ ।
ವಿಮುಂಚನ್ನೇತ್ರಜಂ ವಾರಿ ವಾಯುಜಂ ಚಾಬ್ರವೀದ್ದ್ವಿಜಾಃ ॥
(45-90)

ರಕ್ತದ ಮಡುವಿನಲ್ಲಿ ನಿಶ್ಚೇಷ್ಟಿತನಾಗಿ ಬಿದ್ದಿದ್ದ ಹನುಮಂತನನ್ನು ನೋಡಿ ತಡೆಯಲಾರದ ದುಃಖದಿಂದ ನೀನು ಕೂಡಲೇ ಆ ಹನುಮಂತನ ಶರೀರವನ್ನು ಎತ್ತಿ ನಿನ್ನ ತೊಡೆಯ ಮೇಲಿರಿಸಿಕೊಂಡು, ಅವನ ಅಂಗಾಂಗಗಳನ್ನೆಲ್ಲಾ ಕಡು ಪ್ರೇಮದಿಂದ ಸವರುತ್ತಾ, ಧಾರಾಕಾರವಾಗಿ ನಿನ್ನ ಕಣ್ಣುಗಳಿಂದ ಸುರಿಯುತ್ತಿದ್ದ ಕಂಬನಿಯಿಂದ ಅವನ ಮೈಯೆಲ್ಲಾ ನೆನೆಯುತ್ತಿರಲು, ದುಃಖದಿಂದ ಕಂಠವು ಉಬ್ಬಿ ಮಾತೇ ಹೊರಡದಿರಲು, ಅತಿ ಪ್ರಯಾಸದಿಂದ, ಹನುಮಂತನ ಮುಖವನ್ನು ಸವರುತ್ತಾ,

ತ್ವಾಂ ದೃಷ್ಟ್ವಾ ಪಿತರಂ ಬಂಧೂನ್ಕೌಸಲ್ಯಾಂ ಜನನೀಮಪಿ ।
ನ ಸ್ಮರಾಮೋ ವಯಂ ಸರ್ವಾನ್ಮೇ ತ್ವಯೋಪಕೃತಂ ಬಹು ॥
(46-2)

ಎಲೈ ಪ್ರಿಯ ಬಂಧು ಮಾರುತಿಯೇ ನೀನು ನನಗೆ ಮಾಡಿರುವ ಉಪಕಾರಗಳು ವರ್ಣಿಸಲಸದಳವಾದವು. "ಶೇಷಸ್ಯ ಋಣಿನೋ ವಯಂ" (ವಾ. ರಾಮಾಯಣ ಮೂಲ) ನಾನು ನಿನಗೆ ಚಿರಋಣಿ, ಅಷ್ಟೇ ಏಕೆ, ಸೀತೆ ಹಾಗೂ ನನ್ನ ತಮ್ಮ ಲಕ್ಷ್ಮಣರೂ ನಿನಗೆ ಚಿರ ಋಣಿಗಳು. ನಮ್ಮ ಪ್ರಾಣಗಳನ್ನುಳಿಸಿದೆ, ಸೀತೆಯನ್ನು ಕಂಡು ಧೈರ್ಯ ನೀಡಿ ಆಕೆಯ ಪ್ರಾಣವನ್ನೂ ಉಳಿಸಿದೆ, ಯುದ್ಧದಲ್ಲಿ ಅಜೇಯರಾದ ರಾಕ್ಷಸರನೇಕರನ್ನು ನೀನೇ ಸಂಹರಿಸಿ, ಯುದ್ಧದಲ್ಲಿ ಜಯ ಗಳಿಸಿ ಕೊಟ್ಟೆ. ಯುದ್ಧದಲ್ಲಿ ವಿಜಯಿಯಾದವನು ನೀನೇ ಆದರೂ ನೆಪಮಾತ್ರಕ್ಕೆ ಆ ಜಯುವನ್ನು ನನಗೆ ನೀಡಿರುವೆ. ಈ ಸ್ಥಿತಿಯಲ್ಲಿ ನಿನ್ನನ್ನು ನೋಡಿದರೆ, ನಿನ್ನ ಸ್ಮರಣೆಯಲ್ಲದೆ, ನನ್ನ ಪೂಜ್ಯ ತಂದೆ, ತಾಯಿಯಾದ ಕೌಸಲ್ಯೆ, ಬಂಧುಗಳ ನೆನಪೇ ನನಗೆ ಬೇಡವಾಗಿದೆ.

ಅಹಂ ಪ್ರಾಣಾನ್ಪರಿತ್ಯಕ್ಷ್ಯೇ ಮೃತೋಽಸಿ ಯದಿ ವಾಯುಜ ।
ಸೀತಯಾ ಮಮ ಕಿಂ ಕಾರ್ಯಂ ಲಕ್ಷ್ಮಣೇನಾನುಜೇನ ವಾ ॥
(45-15)

ಭರತೇನಾಪಿ ಕಿಂ ಕಾರ್ಯಂ ಶತ್ರುಘ್ನೇನ ಪ್ರಿಯಾಪಿ ವಾ ।
ರಾಜ್ಯೇನಾಪಿ ನ ಮೇ ಕಾರ್ಯಂ ಪರೇತಸ್ತ್ವಂ ಕಪೇ ಯದಿ ॥
(45–26)

ನೀನೇನಾದರೂ, ನಿಜವಾಗಿಯೂ ಮಡಿದರೆ, ನಾನು ಬದುಕಿರಲಾರೆ. ನನ್ನ ಅಸುವನ್ನು ಈಗಲೇ ನೀಗುವೆನು. ಏಕೆಂದರೆ ನೀನಿಲ್ಲದೆ, ಸೀತೆಯಿಂದ ನನಗೇನಾಗಬೇಕು ? ತಮ್ಮ ಲಕ್ಷ್ಮಣನಿಂದೇನು ಪ್ರಯೋಜನ ? ಭರತ ಶತ್ರುಘ್ನರಿಂದೇನು ? ನನಗೆ ಶುಭವಾಗಿ ಏನಾಗಬೇಕಾಗಿದೆ ? ನಿನ್ನಿಂದಲೇ ಲಭ್ಯವಾದ ಈ ಸಂಪತ್ತು-ರಾಜ್ಯಗಳಿಂದ ನನಗೇನಾಗಬೇಕಾಗಿದೆ ?

ಇತಿ ಪಶ್ಯನ್ಮುಖಂ ತಸ್ಯ ನಿರ್ವಾಕ್ಯಂ ರಘುನಂದನಃ ।
ಪ್ರರುದನ್ನಶ್ರುಜಾಲೇನ ಸೇಚಯಾಮಾಸ ವಾಯುಜಂ ॥
(45–24)

ಎಂದು ನೀನು ಅತ್ಯಂತ ದುಃಖದಿಂದ ಕಣ್ಣೀರಿಡುತ್ತಾ, ಹನುಮಂತನಿಗಾಗಿ ಎಲ್ಲಾ ಭೋಗ, ಭಾಗ್ಯ, ಬಂಧುಗಳನ್ನೆಲ್ಲಾ ತ್ಯಜಿಸಿ, ವಿರಕ್ತಿ ತಾಳಲಿಲ್ಲವೇ ? ಆದರೆ ಆ ಆತ್ಮೀಯತೆ, ಪ್ರೇಮಗಳೆಲ್ಲಾ ಈಗ ಎಲ್ಲಿ ಹೋದವು ?

ಈ ಎಲ್ಲಾ ಕಾರಣಗಳಿಂದಲೂ, ಹೇ ರಾಮಭದ್ರಾ, ಮಹಿಮನೂ, ಪರೋಪಕಾರಿಯೂ, ನಿರ್ಲಿಪ್ತನೂ ಆದ ಪರಮೇಶ್ವರನ ಕೃಪೆಯಿಂದಲೂ, ನಿನ್ನ ಪವಿತ್ರ ದೇಹಸ್ಪರ್ಶ ಹಾಗೂ ಆಶೀರ್ವಾದದಿಂದಲೂ, ಹನುಮಂತನು ಕೆಲಕಾಲದ ಮೇಲೆ ಎಚ್ಚೆತ್ತನು. ಆಗ ನಿನ್ನ ಆನಂದಕ್ಕೆ ಪಾರವೇ ಇಲ್ಲ. ಎಲ್ಲರೂ ತಮ್ಮ ಪ್ರಾಣವೇ ಬಂದಿತೋ ಎನ್ನುವಂತೆ ಸಂತೋಷದಿಂದ ಜಯಕಾರ ಮಾಡುತ್ತಾ ಕುಣಿದಾಡಿದರು.

ನೇದಂ ಲಿಂಗಂ ಸಮುದ್ಧರ್ತುಂ ಶಕ್ಯತೇ ಸ್ಥಾಪಿತಂ ಮಯಾ |
ಮಹಾದೇವಾಪರಾಧೇನ ಪತಿತೋಽಸ್ಯದ್ಯ ಮೂರ್ಛಿತಃ || (45_66)
ಇತಃಪರಂ ಮಾ ಕ್ರಿಯತಾಂ ದ್ರೋಹಃ ಸಾಂಬಸ್ಯ ಶೂಲಿನಃ |
ಅದ್ಯಾರಭ್ಯ ತ್ವಿದಂ ಕುಂಡಂ ತವ ನಾಮ್ನಾ ಜಗತ್ತ್ರಯೇ || (45.67)

ಆಗ, ನೀನು, ಎಲೈ ಮಾರುತಿ, ನಮ್ಮೆಲ್ಲ ಪುಣ್ಯವಿಶೇಷದಿಂದ ನೀನು ಮರಳಿ ಜೀವಿಸಿದೆ. ನಾನು ಸ್ಥಾಪಿಸಿದ ಲಿಂಗವನ್ನು ಬ್ರಹ್ಮ–ವಿಷ್ಣು –ಇಂದ್ರಾದಿಗಳಾರೂ ಕೀಳಲಾರರು. ನೀನು ಅದನ್ನು ಕೀಳಲು ಪ್ರಯತ್ನಿಸಿ, ಶಿವಾಪರಾಧದಿಂದ ಮೂರ್ಛಿತನಾದೆ. ಇತಃಪರ ಇಂಥಾ ಶಿವಾಪರಾಧವನ್ನು ಮಾಡಬೇಡ. ನೀನು ಬಿದ್ದ ಜಾಗದಲ್ಲಿ 'ಹನುಮತ್ಕುಂಡ'ವೆಂಬ ಪವಿತ್ರ ಕುಂಡವು ಮೂರು ಲೋಕಗಳಲ್ಲಿಯೂ ಪ್ರಸಿದ್ಧಿ ಪಡೆದು, ಅದರಲ್ಲಿ ಮಿಂದವರ ಪಾಪಗಳೆಲ್ಲಾ ಪರಿಹಾರವಾಗಿ ಶಿವಕೃಪೆ ದೊರೆಯಲಿ ಎಂದು ಹೇಳಿ, ಹನುಮಂತನನ್ನು ಆನಂದದಿಂದ ಆಲಿಂಗಿಸಿ ಕೊಂಡು ಮೈ ಮರೆಯಲಿಲ್ಲವೇ ? ನಂತರ ನಮ್ಮೆಲ್ಲರ ಹೆಸರಿನಲ್ಲಿಯೂ ಒಂದೊಂದು ಲಿಂಗದಂತೆ, ಹನ್ನೊಂದು ಶಿವಲಿಂಗಗಳನ್ನು, ನಿನ್ನ ಇಚ್ಛೆಯಂತೆ ಪ್ರತಿಷ್ಠೆ ಮಾಡಿ, ಮನಸಾ ಆರಾಧಿಸಿ ಎಲ್ಲರೂ ಅಯೋಧ್ಯೆಗೆ ಹಿಂತಿರುಗಿದೆವು. ಇಂಥಾ ಮಹಾತ್ಮನೂ, ಸದ್ಗುಣ ಭರಿತನೂ, ಶಿವತೇಜೋರೂಪನೂ ಆದ ಈ ಮಾರುತಿಯು ಈಗ ಎಲ್ಲಿ ಹೋಗಿರುವನೆಂದು ಹುಡುಕಿಸಿ, ಕರೆತರಿಸಿ, ಅವನ ಇಚ್ಛೆಯಂತೆ ಅವನಿಗೆ ಪ್ರಿಯವಾದ ಸನ್ಮಾನ ನೀಡುವುದು- ಎಂದಳು.

ಸೀತಾ ಮಾತೆಯ ಮಾತನ್ನು ಕೇಳಿದ ಲಕ್ಷ್ಮಣನೂ ಧೈರ್ಯ ತಂದುಕೊಂಡು, ಅಗ್ರಜಾ ! ಸೀತಾಮಾತೆಯು ಹೇಳಿದ ಮಾತುಗಳೆಲ್ಲಾ ಸತ್ಯವಾದವುಗಳೇ ? ಹನುಮಂತನನ್ನು ಹೀಗೆ ತುಚ್ಛ ಭಾವನೆಯಿಂದ ಕಾಣುವುದರಿಂದ

ನನ್ನ ಕೀರ್ತಿಗೆ ಕಳಂಕ ಬಾರದಿರುದಷ್ಟೇ ಅಲ್ಲದೆ, ಇದು ಕೃತಜ್ಞತೆಯ ಲಕ್ಷಣವೆನಿಸುವುದಿಲ್ಲವೇ? ಸರ್ವಜ್ಞನಾದ ನಿನಗೆ ವಿವೇಕ ಹೇಳುವ ಸಾಮರ್ಥ್ಯ ನನಗಿಲ್ಲ. ಆದರೂ ಕರ್ತವ್ಯದ ದೃಷ್ಟಿಯಿಂದ, ಮಾರುತಿಯ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವೆನು. ಎಲೈ ರಾಮಭದ್ರಾ! ವಾಯು ಸುತನು ನಮಗೆ ಮಾಡಿರುವ ಅನಂತಾನಂತ ಮಹೋಪಕಾರಗಳನ್ನು ಮರೆ ಯುವಂತಿಲ್ಲ. ಹಿಂದೆ ಸೀತಾಮಾತೆಯನ್ನು ಎಲ್ಲೆಲ್ಲೂ ಹುಡುಕಿ, ಎಲ್ಲಿಯೂ, ಆಕೆಯ ಸುಳಿವೇ ಸಿಗದೆ, ಅನ್ವೇಷಣೆಗಾಗಿ ಹೋಗಿದ್ದ ವಾನರರು ಹಿಂದಿರುಗಲು ಅದನ್ನು ಕೇಳಿದ ನಾವೀರ್ವರೂ ಅತ್ಯಂತ ನಿರಾಶರಾಗಿ ಶೋಕಿಸತೊಡಗಿದೆವು. ಆಗ ಈ ಹನುಮಂತನು ಹದಿನಾಲ್ಕು ಲೋಕಗಳಲ್ಲಿ ಯಾರಿಗೂ ಪ್ರವೇಶಿಸಲ ಸಾಧ್ಯವಾದ ಲಂಕೆಗೆ ತೆರಳಿ, ತನ್ನ ಜೀವದ ಹಂಗನ್ನು ತೊರೆದು, ಸೀತಾಮಾತೆ ಯನ್ನು ಕಂಡು ಅರ್ಧಲಂಕೆಯನ್ನು ಭಸ್ಮಮಾಡಿ, ಆ ಸುವಾರ್ತೆಯನ್ನೂ, ಸೀತಾಮಾತೆಯ ಚೂಡಾಮಣಿಯನ್ನೂ ತಂದು ನಿನಗೆ ಒಪ್ಪಿಸಿದಾಗ, ನೀನು ಹನುಮಂತನನ್ನು ಆಲಿಂಗಿಸಿಕೊಂಡು, ಮಹೋಪಕಾರ ಮಾಡಿದ ಈ ಮಹಾ ತ್ಮನಾದ ಅವನನ್ನು ಮತ್ತೆ ಮತ್ತೆ ಆಲಿಂಗಿಸಿಕೊಂಡು ಸ್ವಲ್ಪ ಹೊತ್ತಿನವರೆಗೆ ಮೈಮರೆತಿದ್ದೆಯಲ್ಲವೇ!

ಏಷ ಸರ್ವಸ್ವಭೂತಸ್ತು ಪರಿಷ್ವಂಗೋ ಹನೂಮತಃ ।
ಮಯಾ ಕಾಲಮಿಮಂ ಪ್ರಾಪ್ಯ ದತ್ತಶ್ಚಾಸ್ತು ಮಹಾತ್ಮನಃ ॥
(ರಾ.ಯು.ಕಾಂಡ ಸ್ವರ್ಗ 1–14)

ಇತ್ಯುಕ್ತ್ವಾ ಪ್ರೀತಿಹೃಷ್ಟಾಂಗೋ ರಾಮಸ್ತಂ ಪರಿಷಸ್ವಜೇ ।
ಹನೂಮಂತಂ ಮಹಾತ್ಮಾನಂ ಕೃತಕಾರ್ಯಮುಪಾಗತಂ ॥
(1.15)

ಮತ್ತೆ ಇಂದ್ರಜಿತುವಿನ ಅಸ್ತ್ರದಿಂದ ನಾವಿಬ್ಬರೂ ಮತ್ತು ಸುಗ್ರೀವನೂ ಮೂರ್ಛೆ ಬಿದ್ದಾಗ ಹನುಮಂತನು ತನ್ನ ಪ್ರಾಣದ ಮೇಲಿನ ಆಸೆಯನ್ನೂ ಸಹ ತೊರೆದು, ಸುಗ್ರೀವನ ಅಣತಿಯಂತೆ, ಕಾಂಚನಮಯವೂ, ಅತ್ಯು ನ್ನತವೂ ಆದ ಋಷಭವೆಂಬ ಗಿರಿಶಿಖರಕ್ಕೂ, ಕೈಲಾಸ ಶಿಖರಕ್ಕೂ ಮಧ್ಯೆ ಇರುವ ಓಷಧಿಪರ್ವತಕ್ಕೆ ಹೋಗಿ, ಮೃತ ಸಂಜೀವಿನಿಯನ್ನುಳ್ಳ ಆ ಪರ್ವತ ವನ್ನೇ ಹೊತ್ತು ತಂದನು. ಆ ಮಹೌಷಧಿಗಳ ಗಂಧವನ್ನಾಘ್ರಾಣಿಸಿ

ದೊಡನೆಯೇ ನಾವೂ ಹಾಗೂ ಹತರಾಗಿದ್ದ ಕಪಿಸೇನೆಯೆಲ್ಲಾ ಮತ್ತೆ ಎದ್ದು ಕುಳಿತೆವು. ಹನುಮಂತನ ಈ ಸಾಹಸ ಕಾರ್ಯ ಮಾಡಬಲ್ಲ ಪರಾಕ್ರಮಿಗಳು ಈ ಹದಿನಾಲ್ಕು ಲೋಕಗಳಲ್ಲಿ ಯಾರು ಇಲ್ಲ. ಅವನಿಲ್ಲದೆ ಮಹೌಷಧಿಗಳನ್ನು ಯಾರೂ ತರುತ್ತಲೂ ಇರಲಿಲ್ಲ. ನಾವೆಲ್ಲಾ ಮರಳಿ ಎಚ್ಚೆತ್ತುಕೊಳ್ಳುತ್ತಲೂ ಇರಲಿಲ್ಲ

ರಾಮಂಚ ಸಂಖ್ಯೇ ಸಹಲಕ್ಷ್ಮಣೇನ ।
ವಿಷಾದಯಿತ್ವಾ ಸಹಸಾ ವಿವೇಶ ॥ (ರಾ॰ಯು. ಉ. ಸರ್ಗ. 74–74)

ಭ್ರಾತರಂ ನಿಹತಂ ದೃಷ್ಟ್ವಾ ಲಕ್ಷ್ಮಣಂ ರಣಪಾಂಸುಷು ।
ಕಿಂ ಮೇ ರಾಜ್ಯೇನ ಕಿಂ ಪ್ರಾಣೈರ್ಯುದ್ಧೇ ಕಾರ್ಯಂ ನ ವಿದ್ಯತೇ ॥ (ರಾ.ಯು. ಉ. ಸರ್ಗ. 102.11)

ಯತ್ರಾಯಂ ನಿಪತಃ ಶೇತೇ ರಣಮೂರ್ಧನಿ ಲಕ್ಷ್ಮಣಃ ।
ದೇಶೇ ದೇಶೇ ಕಲತ್ರಾಣಿ ದೇಶೇ ದೇಶೇ ಚ ಬಾಂಧವಾಃ ॥
(102–12)

ತಂ ತು ದೇಶಂ ನ ಪಶ್ಯಾಮಿ ಯತ್ರ ಭ್ರಾತಾ ಸಹೋದರಃ ।
ಕಿನ್ನು ರಾಜ್ಯೇನ ದುರ್ಧರ್ಷ ಲಕ್ಷ್ಮಣೇನ ವಿನಾ ಮಮ ॥
(102–13)

ಇನ್ನೊಮ್ಮೆ ರಾವಣನ ಅಷ್ಟಘಂಟಾ ಶಕ್ತಿಯಿಂದ ನಾನು ಗತ ಪ್ರಾಣನಾಗಿ ರಕ್ತದ ಮಡುವಿನಲ್ಲಿ ಬಿದ್ದಿರುವುದನ್ನು ಕಂಡು ನೀನು ಅತ್ಯಂತ ದುಃಖದಿಂದ, ಇನ್ನು ನನಗೆ ಯುದ್ಧವೇ ಬೇಕಿಲ್ಲ. ಜೀವಿತವೇ ಬೇಡವಾಗಿದೆ ; ಸೀತೆಯಿಂದ ನನಗೇನಾಗಬೇಕು ? ಧೂಳಿಯಲ್ಲಿ ಹೊರಳಾಡುವ ತಮ್ಮನಾದ ಲಕ್ಷ್ಮಣನನ್ನು ನೋಡಿದ ಮೇಲೆ, ನನಗೆ ರಾಜ್ಯದಿಂದೇನು ? ಪ್ರಾಣದಿಂದೇನು ಯುದ್ಧದಿಂದ ಆಗ ಬೇಕಾದ್ದು ಏನೂ ಉಳಿದಿಲ್ಲ. ಈ ಯುದ್ಧದಲ್ಲಿ ಲಕ್ಷ್ಮಣನು ಹತನಾಗಿ ಮಲಗಿ ಬಿಟ್ಟನಲ್ಲ. ಯಾವ ದೇಶದಲ್ಲಾದರೂ, ಮಡದಿಯರು ದೊರಕಬಹುದು ಬಂಧುಗಳು ಲಭಿಸಬಹುದು, ಆದರೆ ಒಡಹುಟ್ಟಿದ ತಮ್ಮನು ದೊರಕಲಾರನು, ಎಂದು ನಾನಾ ವಿಧವಾಗಿ ಪ್ರಲಾಪಿಸುತ್ತಾ ವಿರಕ್ತಿ ಹೊಂದಿದ್ದಾಗ, ಈ ಹನುಮಂತನು, ಸುಷೇಣನ ಕೋರಿಕೆಯಂತೆ ಮತ್ತೆ ಹಿಮಾಲಯಕ್ಕೆ ತೆರಳಿ, ಸಂಜೀವಿನಿ ಮೂಲಿಕೆಯನ್ನು ಶೀಘ್ರದಿಂದ ತರಲು, ಸುಷೇಣನು

ಆ ಮೂಲಿಕೆಯ ರಸವನ್ನು ನನ್ನ ಮೂಗಿನಲ್ಲಿ ಹಿಂಡಲು ನಾನು ಕೂಡಲೇ ಎದ್ದು ಕುಳಿತೆನು. ಈ ಹನುಮಂತನಿಲ್ಲದಿದ್ದರೆ ನಾನು ಮತ್ತೆ ಬದುಕುತ್ತಿದ್ದನೇ? ಆದುದರಿಂದ ಈ ಎಲ್ಲಾ ಮಹೋಪಕಾರಗಳನ್ನೂ ನಾವು ಮರೆಯಬಹುದೇ? ಎಂದು ಹೇಳಿ ಸುಮ್ಮನಾದನು.

ಇತ್ತ ಹನುಮಂತನು ರಾಮನ ಸಭೆಯಿಂದ ಅಂತರ್ಧಾನನಾಗಿ ದಕ್ಷಿಣ ಸಮುದ್ರದ ಬಳಿಗೆ ಹೋಗಿ ಅತ್ಯಂತ ದುಃಖದಿಂದ, ಎಲೈ ಗಿರಿಜಾರಮಣನೆ, ಮಹಾಪಾಪಿಯಾದ ನನಗೆ ರಾಮನಿಂದಲೂ ಸಹಿಸಲಸಾಧ್ಯವಾದ ಮಾನ ಭಂಗವಾಯಿತು. ನನ್ನ ಸರ್ವಸ್ವವನ್ನೂ ಯಾರ ಶ್ರೇಯಸ್ಸಿಗಾಗಿಯೂ, ಪ್ರಾಣರಕ್ಷಣೆಗಾಗಿಯೂ, ಜಯಪ್ರಾಪ್ತಿಗಾಗಿಯೂ, ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ತ್ಯಾಗಮಾಡಿದ್ದೆನೋ, ಅಂಥಾ ರಾಮನಿಂದಲೇ ನನಗಿಂಥಾ ತೇಜೋವಧೆಯಾದ ಮೇಲೆ, ನನಗೆ ಈ ಪ್ರಪಂಚದಿಂದಾಗಲೀ, ಈ ಬಲ ಪರಾಕ್ರಮಗಳಿಂದಾಗಲೀ ನೀನು ಮತ್ತು ಸಕಲ ದೇವತೆಗಳೂ, ಅನುಗ್ರಹಿಸಿರುವ ಅನುಪಮವಾದ ವರಗಳಿಂದಾಗಲೀ ಆಗಬೇಕಾದ ಪ್ರಯೋಜನವು ಯಾವುದೂ ಇಲ್ಲ. ನನ್ನ ಬಾಳು ನಿರರ್ಥಕವಾಯಿತು. ಈಗ ನನಗೆ ಉಳಿದಿರುವ ಏಕಮಾತ್ರ ಕಾರ್ಯವೆಂದರೆ, ಈ ನನ್ನ ಎಲ್ಲಾ ಸಾಧನೆಗಳ ಫಲದಿಂದಾಗಿ, ರಾಮನಿತ್ತ ರತ್ನವು ಅಶಾಶ್ವತವೂ, ಕ್ಷಣಿಕವೂ ಆದ ವಸ್ತುವೆಂದು ರಾಮನಿಗೆ ನಿದರ್ಶನದಿಂದ ತೋರಿಸುವುದು. ಎಲೈ ಶಂಕರಾ, ಗಂಗಾಧರಾ, ನಿನ್ನನ್ನೇ ನಂಬಿರುವ ನಿನ್ನ ಭಕ್ತನ ಈ ಒಂದು ಕೋರಿಕೆಯನ್ನಾದರೂ ನೆರವೇರಿಸಿ ಕಾಪಾಡು-ಎಂದು ಕಣ್ಣುಗಳನ್ನು ಮುಚ್ಚಿ ಧ್ಯಾನಾಸಕ್ತನಾದನು. ತತ್ ಕ್ಷಣದಲ್ಲಿಯೇ ಸಮುದ್ರದ ಮಧ್ಯದಿಂದ, ಕೋಟಿ ಸೂರ್ಯಪ್ರಕಾಶಮಾನವಾದ ಒಂದು ದಿವ್ಯಜ್ಯೋತಿಯು, ಹನುಮಂತನ ಕಣ್ಣುಗಳನ್ನು ತಾಕಿದಂತಾಗಲು, ಚಕಿತನಾದ ಹನುಮಂತನು ಕಣ್ಣುಗಳನ್ನು ಬಿಟ್ಟು ನೋಡಲಾಗಿ, ಆ ಸಮುದ್ರದ ನೀರೆಲ್ಲಾ ಬತ್ತಿ ಅದರ ಸ್ಥಳದಲ್ಲಿ ದಿವ್ಯ ಪ್ರಕಾಶಮಾನದಿಂದ ಸೂರ್ಯನ ತೇಜಸ್ಸನ್ನೇ ನಾಚಿಸುವಂಥಾ ಪ್ರಭೆಯಿಂದ ಕೂಡಿದ ದಿವ್ಯರತ್ನಗಳ ರಾಶಿಯೇ ಅವನ ಕಣ್ಣಿಗೆ ಗೋಚರಿಸಿತು. ಆ ದಿವ್ಯ ದೃಶ್ಯವನ್ನು ಕಂಡ ಹನುಮಂತನು ತನ್ನ ಕಣ್ಣುಗಳನ್ನೇ ನಂಬದಾದನು. ಹೀಗೆ ಚಕಿತನಾದ ಮಾರುತಿಯು ಯೋಚನಾಮಗ್ನನಾಗಿರಲು, ಅವನಿಗೆ, ಎಲೈ ಪವನಸುತನೇ,

ನಿನ್ನ ದುಃಖ ನಿವಾರಣೆಗಾಗಿಯೂ, ಹಾಗೂ ಇಷ್ಟಾರ್ಥ ಸಿದ್ಧಿಗಾಗಿಯೂ, ಈ ರತ್ನ ರಾಶಿಯನ್ನಿತ್ತಿರುವೆನು–ಎಂಬ ಅಶರೀರವಾಣಿಯು ಕೇಳಿಸಿತು. ಅದನ್ನು ಕೇಳಿದ ಮಾರುತಿಗೆ ಆದ ಆನಂದಕ್ಕೆ ಮೇರೆಯೇ ಇಲ್ಲವಾಯಿತು. ಆಗ ಅವನು ಮೊಣಕಾಲನ್ನೂರಿ ಹೇ ದಯಾಮಯನಾದ ಶಂಕರನೇ, ನಿನ್ನ ಅದ್ಭುತ ಲೀಲೆಯನ್ನು ವರ್ಣಿಸಲು ಹರಿಬ್ರಹ್ಮರಿಗೂ ಅಶಕ್ಯವೆಂದ ಮೇಲೆ ನನ್ನಂಥ ಅಲ್ಪನಿಂದ ಅದು ಸಾಧ್ಯವೇ? ನೀನು ಇದೇ ರೀತಿ ಹಿಂದೆ ಅನೇಕ ವೇಳೆ ನನ್ನನ್ನು ಅನುಗ್ರಹಿಸಿರುವೆ. ನೀನು ಭಕ್ತಪರಾಧೀನ. ನಿನ್ನ ಭಕ್ತರನ್ನು ನಿನ್ನಂತೆಯೇ ಭಾವಿಸಿ ಸದಾ ಅವರನ್ನು ರಕ್ಷಿಸಿ, ಅನುಗ್ರಹಿಸುವುದೇ ನಿನ್ನ ವ್ರತ. ಹೀಗಿದ್ದರೂ, ಅಜ್ಞಾನಿಯಾದ ನಾನು, ಮೋಕ್ಷಾಪೇಕ್ಷೆಯಿಂದ, ಈ ಅಳಿವ ಅಲ್ಪ ಮಾನವರನ್ನು ಆಶ್ರಯಿಸಿ ವೃಥಾ ದುಃಖ ಭಾಗಿಯಾಗಿರುವೆನು. ಈ ನನ್ನ ಅವಿವೇಕದಿಂದ ನನಗೇ ನಾಚಿಕೆಯಾಗಿದೆ. ಹೇ ಶಂಕರನೇ ಕೇಳು, ಇತಃಪರ ನಾನು ಈ ಕ್ಷಣಿಕವೂ, ನಾಶ ಹೊಂದುವವೂ ಆದ ವಸ್ತುವನ್ನಾಗಲೀ, ಜನರ ಮರಣಗಳಿಗೀಡಾಗುವ ಯಾವ ಜೀವಿಯನ್ನಾಗಲೀ, ಕಡೆಗಣ್ಣಿನಿಂದ ಕೂಡ ನೋಡಲಾರೆನು. ಹೇ ದಯಾಮಯನೇ, ನನ್ನ ಯಾವ ಪಾಪದ ಫಲದಿಂದಲೋ, ಅಥವಾ ಮಹಾತ್ಮರ ಶಾಪದಿಂದಲೋ ನನ್ನ ಶಕ್ತಿ ಸಾಮರ್ಥ್ಯಗಳೇ ನನಗೆ ತಿಳಿಯದಂತಾಗಿ, ನಾನಾ ವಿಧವಾದ ವ್ಯರ್ಥಕಾರ್ಯಗಳಲ್ಲಿ ನನ್ನ ಆಯುಷ್ಯವನ್ನೆಲ್ಲಾ ವ್ಯಯಿಸಿದೆನು. ತ್ರಿಜಗದೊಡೆಯನೂ, ಸೃಷ್ಟಿಸ್ಥಿತಿ ಲಯಕರ್ತನೂ, ತ್ರಿಮೂರ್ತಿಗಳಿಗೂ ಕರ್ತನೂ, ಸರ್ವಸಮರ್ಥನೂ, ಅನಾಥನಾಥನೂ, ಭಕ್ತಪರಾಧೀನನೂ, ಆದ ನಿನ್ನ ಅದ್ಭುತ ಶಕ್ತಿಯನ್ನು ಅರಿತೂ ನಿನ್ನನ್ನಾಶ್ರಯಿಸದೆ, ಕೇವಲ ನಿನ್ನ ಕಿಂಕರರನ್ನು ಆಶ್ರಯಿಸಿದ್ದಕ್ಕೆ ತಕ್ಕ ಪ್ರಾಯಶ್ಚಿತ್ತವಾಯಿತು. ಹೇ ಶಂಭೋ ನೀನೇ ನನಗೆ ತಂದೆ, ತಾಯಿ, ಗುರು, ದೈವ, ಮನಸ್ಸು, ಕಣ್ಣು, ಬಂಧು. ಹಿತೈಷಿಯಾಗಿ ಸರ್ವಸ್ವವೂ ನೀನೇ ಆಗಿರುವೆ. ಜಗನ್ಮಾತೆಯಾದ ಗಿರಿಜೆಯೇ ನನ್ನ ಮಾತೆ. ಎಂದು ಪ್ರತಿಜ್ಞೆ ಮಾಡಿ ಕ್ಷಣಮಾತ್ರದಲ್ಲಿ ಸಮುದ್ರಕ್ಕೆ ಹಾರಿದನು. ಅತ್ಯಾಶ್ಚರ್ಯ! ಸಮುದ್ರದ ಜಲರಾಶಿಯೆಲ್ಲಾ ರತ್ನ ರಾಶಿಯಾಗಿದ್ದಿತು. ಅತ್ಯಂತ ಆನಂದದಿಂದ ಹನುಮಂತನು ತನ್ನ ರೋಮ ರೋಮಗಳಲ್ಲಿಯೂ, ಆ ಅನರ್ಘ್ಯ ರತ್ನಗಳನ್ನು ತುಂಬಿಕೊಂಡು, ಅತ್ಯಂತ ಕೃತಜ್ಞ

ಶೆಯಿಂದ ಶಂಕರನ ಧ್ಯಾನ ಮಾಡುತ್ತಾ, ನೇರವಾಗಿ, ಶಿವನಾಮ ಭಜನೆ ಮಾಡುತ್ತಲೇ ಮತ್ತೆ ರಾಮನ ಸಭೆಯನ್ನು ಪ್ರವೇಶ ಮಾಡಿದನು.

ಹೀಗೆ ಶಿವನಾಮ ಕೀರ್ತನೆ ಮಾಡುತ್ತಾ, ತೇಜೋರೂಪಿಯಾದ ಹನುಮಂತನು, ಅನಿರೀಕ್ಷಿತವಾಗಿ ಸಭೆಯನ್ನು ಪ್ರವೇಶಿದನು. ಸಭೆಯವರೆಲ್ಲರೂ ಆನಂದಪರವಶರಾಗಿ ಜಯಕಾರ ಮಾಡಿದರು. ಆಗ ಹನುಮಂತನು ರಾಮನನ್ನು ಕುರಿತು ಎಲೈ ರಾಮನೇ, ಒಮ್ಮೆ ಭಕ್ತಿಯಿಂದ ಪ್ರಾರ್ಥಿಸಿದ್ದಕ್ಕೆ ಭಕ್ತವತ್ಸಲನೂ, ಸರ್ವೇಶ್ವರನೂ ಆದ ಶಂಕರನು, ರತ್ನಸಾಗರವನ್ನೇ ಕರುಣಿಸಿದನು. ಅವನ ಕೃಪೆಯಿಂದ ಪ್ರಾಪ್ತವಾದ ಕೆಲವನ್ನು ನಿನಗಾಗಿ ತಂದಿರುವೆನೆಂದು, ಅವನ ಮುಂದೆ, ತನ್ನ ರೋಮ ರೋಮಗಳಲ್ಲಡಗಿದ್ದ ಶ್ರೇಷ್ಠ ರತ್ನಗಳನ್ನು ರಾಶಿ ರಾಶಿಯಾಗಿ ಸುರಿದನು. ನಂತರ ರಾಮಚಂದ್ರನೇ, ನನ್ನ ಸೇವೆಗೆ ಪ್ರತಿಫಲವಾಗಿ, ಮೂರು ಲೋಕಗಳಲ್ಲಿಯೇ ಸರ್ವಶ್ರೇಷ್ಠವೂ, ದೇವಾನು ದೇವತೆಗಳಿಗೂ ಅತ್ಯಂತ ದುರ್ಲಭವೂ ಆದುದೆಂದು ಪ್ರಶಂಸಿಸಿ, ನೀನು ನನಗೆ ಅನುಗ್ರಹಿಸಿದ ಒಂದು ರತ್ನಕ್ಕೆ ಪ್ರತಿಯಾಗಿ, ಅದಕ್ಕಿಂತಲೂ ಸರ್ವವಿಧದಲ್ಲಿಯೂ ಶ್ರೇಷ್ಠವಾದ ರತ್ನಗಳ ರಾಶಿಯನ್ನೇ ಸ್ವೀಕರಿಸಿ ತೃಪ್ತನಾಗು. ಈಗಲಾದರೂ, ನಿನ್ನ ರತ್ನದ ಮೌಲ್ಯವೇನೆಂಬುದು ನಿನಗೆ ವೇದ್ಯವಾಗಿರಬೇಕಲ್ಲವೇ ? ಎಂದು ದೂರದಲ್ಲಿ ರಾಮನ ಮುಖವನ್ನೇ ನೋಡುತ್ತಾ ನಿಂತನು.

ರಾಮನ ಪರಾಭವ :

ಅದನ್ನೆಲ್ಲಾ ನೋಡುತ್ತಿದ್ದ ರಾಮನಿಗೆ ದಿಕ್ಕೇ ತೋಚದಂತಾಗಿ ಬಾಯಿಂದ ಮಾತೇ ಹೊರಡದಾದವು. ಕೃತಜ್ಞತಾ ಪೂರ್ವಕವಾದ ಆನಂದ ಬಾಷ್ಪಗಳು ಧಾರಾಕಾರವಾಗಿ ಸುರಿಯುತ್ತಿರಲು, ಚಿತ್ತಸ್ಥೈರ್ಯದಿಂದ, ಎಲೈ ಮಹಿಮಾನ್ವಿತನಾದ ಹನುಮಂತನೇ, ಅಪಜಯದ ರುಚಿಯನ್ನೇ ಅರಿಯದ ರಾಘವನು ನಿನ್ನಿಂದ ಇಂದು ಪರಾಭವ ಹೊಂದಿರುವನು. ನಾನು, ಅತ್ಯಾನಂದದಿಂದಲೂ, ಹೆಮ್ಮೆಯಿಂದಲೂ, ನನ್ನ ಪರಾಭವವನ್ನು ಅಂಗೀಕರಿಸಿರುವೆನು. ಪರವಿದ್ಯಾವಿಶಾರದನಾದ ಬಂಧುವೇ, ನನ್ನ ಬಾಲ್ಯದಲ್ಲಿ, ವಸಿಷ್ಠರಿಂದಲೂ, ವನವಾಸಕಾಲದಲ್ಲಿ ಪೂಜ್ಯ ಅಗಸ್ತ್ಯರಿಂದಲೂ, ನಂತರ ನನ್ನ ತಪಸ್ಸಿನ ಫಲವಾಗಿ ದರ್ಶನ ನೀಡಿದ ಉಮಾಸಹಿತ ಮಾಹೇಶ್ವರನಿಂದಲೂ, ಸವಿಸ್ತಾರವಾಗಿ, ಜೀವಾತ್ಮ-ಪರಮಾತ್ಮರಿಗಿರುವ ಸಾಮ್ಯ, ಪ್ರಕೃತಿಗೆ ಅಧೀನನಾದ

ಜೀವನು ಅನುಭವಿಸಬೇಕಾದ ಅವಸ್ಥೆಗಳು, ಸ್ವಾಭಿಮಾನದಿಂದೊದಗುವ ಹಾನಿ, ವೈರಾಗ್ಯ ಲಕ್ಷಣ, ಭಕ್ತಿಯ ಹಿರಿಮೆ, ಮುಂತಾದ ತತ್ವಾರ್ಥಗಳ ಬಗ್ಗೆ ಮಹೋಪದೇಶ ಹೊಂದಿರುವೆನು. ಆದರೂ, ಈ ಘಟನೆಯು, ನನ್ನ ಆಧ್ಯಾತ್ಮ ಜ್ಞಾನದ ಅಪರಿಪೂರ್ಣತೆಯನ್ನು ಎತ್ತಿ ತೋರಿಸುತ್ತಿದೆ. ಎಲೈ ಮಾರುತಿಯೇ, ಹರಿ–ಬ್ರಹ್ಮ–ಇಂದ್ರಾದಿ ದೇವತೆಗಳಿಗೂ ದುರ್ಲಭವಾದ ಈ ದಿವ್ಯ ರತ್ನರಾಶಿಯನ್ನೇ ಶಿವನಕೃಪೆಯೆಂದು ಪಡೆದು ನನ್ನ ಮುಂದೆ ಸುರಿದಿರುವೆ. ನಿನ್ನ ಪವಿತ್ರ ಹಾಗೂ ಅನುಪಮವಾದ ನಿಜಸ್ವರೂಪದ ಅರಿವೇ ನನಗೆ ಇಲ್ಲ ದಂತಾಗಿದೆ. ಇದೆಲ್ಲಾ ಶಿವಮಾಯೆಯಲ್ಲದೆ ಬೇರೆಯಲ್ಲ. ಎಂದು ಪೌನತಾಳ ಲು, ಸೀತೆಯು, ನಾಥ ! ಶ್ರೀ ರಾಮಚಂದ್ರನೇ, ಈ ಶಿವಭಕ್ತಶಿಖಾಮಣಿ ಯಾದ ಹನುಮಂತನು ಪ್ರತಿಸೃಷ್ಟಿಮಾಡಲೂ ಸಮರ್ಥನು. ಇಂಥ ಮಹಾ ನುಭಾವನನ್ನು ನಿಂದಿಸಿ ಅಪರಾಧ ಮಾಡಿದಂತಾಯಿತು. ಇನ್ನು ನಿಧಾನಿಸ ಬೇಡ, ಕೂಡಲೇ ಈ ಭಾಗವತೋತ್ತಮನನ್ನು ವಿಹಿತ ರೀತಿಯಿಂದ ಸಂತೈಸು ಎಂದು ಅರಿಕೆ ಮಾಡಿದಳು.

ನಂತರ ಲಕ್ಷ್ಮಣನು, ಎಲೈ ರಾಮ ಪ್ರಭು, ಮಂಗಲಕರವೂ, ಮೋಕ್ಷ ಪ್ರದವೂ, ಆದ ಹನುಮಂತನ ಶಿವತತ್ವಾಪೇಕ್ಷೆಯನ್ನು ಮನ್ನಿಸದೆ, ಅವನನ್ನು ಜರಿದುದು ನಮ್ಮ ಪೂರ್ವದ ಪಾತಕವಲ್ಲದೆ ಬೇರೆಯಿಲ್ಲ. ಶಿವಭಕ್ತನಾದ ಹನುಮಂತನನ್ನು ಜರೆದಿರುವುದರಿಂದ ಶಿವನಿಗೂ ದ್ರೋಹವೆಸಗಿದಂತಾಯಿತು. ಇದು ನಮ್ಮ ದುರ್ದೈವವಲ್ಲದೆ ಬೇರೆಯಿಲ್ಲ. ಮಹಾನುಭಾವನಾದ ಹನುಮಂತನ ಶಿವಭಕ್ತಿಪ್ರದರ್ಶನದಿಂದ, ನಮ್ಮ ಮನಸ್ಸಿನಲ್ಲಿ ಬೇರೂರಿದ್ದ ಅನಿತ್ಯವಸ್ತುಗಳ ಭೋಗಾಭಿಲಾಷೆಯೆಂಬ ಗಾಢಾಂಧಕಾರವು ಪರಿಹರಿಸಲ್ಪಟ್ಟು ಜ್ಞಾನೋದಯ ವಾಯಿತು. ಆದುದರಿಂದ ಹನುಮಂತನನ್ನು ದೈನ್ಯತೆಯಿಂದ ಸಂತೈಸುವುದೇ ಶ್ರೇಯಸ್ಕರವು ಎಂದು ಸೂಚಿಸಿ ಸುಮ್ಮನಾದನು. ಸೀತೆಯ ಹಾಗೂ ಸಹೋದರ ನಾದ ಲಕ್ಷ್ಮಣನ ಯುಕ್ತವಾದ ಅಭಿಪ್ರಾಯಗಳನ್ನು ತಿಳಿದು, ತನ್ನ ಅನುಚಿತ ಕಾರ್ಯಕ್ಕಾಗಿ ನಾಚಿ, ಅತ್ಯಂತ ವ್ಯಸನದಿಂದ ಮೇಲು ಧ್ವನಿಯಿಂದ, ಎಲೈ ಭಕ್ತನಿಧಿಯೂ, ಜ್ಞಾನನಿಧಿಯೂ ಆದ ಹನುಮಂತನೇ, ತೃಣ ಸಮಾನವಾದ ವಸ್ತುವಿನ ಮಮಕಾರದಿಂದ ನಿನ್ನ ಪವಿತ್ರ ವ್ಯಕ್ತಿತ್ವವನ್ನು ಅರಿಯಲಸಮರ್ಥ ನಾಗಿ, ನಿನ್ನನ್ನು ಧಿಕ್ಕರಿಸಿ, ರಘುಕುಲದ ಧವಳ ಕೀರ್ತಿಗೆ ಕಳಂಕ ತಂದಂತಾ

ಯಿತು. ಅರಿಷಡ್ವರ್ಗಗಳಿಗಾಗಿ, ನಿಜತತ್ವಜ್ಞಾನವನ್ನು ಕ್ಷಣಕಾಲ ಮರೆತು ನಿನ್ನ ಮನಸ್ಸನ್ನು ನೋಯಿಸಿದುದರಿಂದ ಇಷ್ಟೆಲ್ಲಾ ಅನರ್ಥಕ್ಕೆ ಕಾರಣನಾದೆನು. ಪ್ರಿಯಬಂಧುವೇ ಇನ್ನೂ ನನ್ನನ್ನು ಧಿಕ್ಕರಿಸಿ, ಶಿವದ್ವೇಷಿಯನ್ನಾಗಿಯೂ ನಿರಂತರವಾದ ಶೋಕ ಕೂಪದಲ್ಲಿ ಕೊಳೆಯುವವನನ್ನಾಗಿಯೂ, ಮಾಡಬೇಡ. ಇದೇ ನಿನ್ನಲ್ಲಿ ನಾನು ವಿನಯದಿಂದ ಮಾಡುವ ಪ್ರಾರ್ಥನೆ. ನನ್ನ ಪ್ರಾರ್ಥನೆಯನ್ನು ಉಪೇಕ್ಷಿಸಬೇಡ. ಅಲ್ಲದೆ ನನ್ನ ಪ್ರಾರಬ್ಧ ಕರ್ಮದ ಫಲವಾಗಿ ನಾನು ಇಂಥಾ ಅವಿವೇಕಪೂರ್ಣವಾದ ವ್ಯವಹಾರದಲ್ಲಿ ತೊಡಗಿದೆನು. ಇದು ವಿಧಿವಿಲಾಸ ಸರ್ವೇಶ್ವರನೂ, ಸರ್ವರಕ್ಷಕನೂ, ತ್ರಿಶೂಲಧರನೂ, ಸರ್ವಾಂತರ್ಯಾಮಿಯೂ, ಸೀತಾವಿರಹವ್ಯಥೆಯಿಂದ ದಗ್ಧನಾಗುತ್ತಿದ್ದ ನನಗೆ ದರ್ಶನ ನೀಡಿ, ಅಭಯವಿತ್ತು, ಶೈವತೇಜದಿಂದ ಕೂಡಿದ ಪಾಶುಪತ ಧನುಸ್ಸು ಹಾಗೂ ಅಕ್ಷಯ ಬತ್ತಳಿಕೆಯನ್ನು ಅನುಗ್ರಹಿಸಿ, ವಿಜಯಿಯಾಗೆಂದು ಆಶೀರ್ವದಿಸಿ, ನನ್ನ ಮತ್ತು ನನ್ನ ವಂಶದ ಕೀರ್ತಿಗೆ ಮೂಲಕಾರಣನಾದ ಶಂಕರನನ್ನು ಇಂಥಾ ವಿಜಯೋತ್ಸವ ಸಂದರ್ಭದಲ್ಲಿ ಕೃತಘ್ನತಾ ಭಾವದಿಂದ ಉಪೇಕ್ಷಿಸಿದ್ದಕ್ಕೆ ತಕ್ಕ ಪ್ರಾಯಶ್ಚಿತ್ತವಾಯಿತು. ಹೇ ಮಹಿಮನೇ ನಿನ್ನ ಕೃಪೆಯಿಂದ ನನ್ನ ಅಜ್ಞಾನ ದೂರವಾಗಿ, ಶಿವತತ್ವಜ್ಞಾನಜ್ಯೋತಿಯು ಮತ್ತೆ ನನ್ನಲ್ಲಿ ಪ್ರಜ್ವಲಿಸುವಂತಾಯಿತು.

ಹೀಗೆ ಹೇಳಿ ಗಂಭೀರದಿಂದ ತನ್ನ ಮುಖವನ್ನೇ ಅವಲೋಕಿಸುತ್ತಿದ್ದ ಹನುಮಂತನನ್ನುದ್ದೇಶಿಸಿ, ಎಲೈ ಮಹಾತ್ಮನಾದ ಹನುಮಂತನೇ ನೀನಾದರೋ ಅಧ್ಯಾತ್ಮ ಜ್ಞಾನದ ಸ್ವರೂಪವೇ ಆಗಿರುವೆ. ಎಂದು ಆವೇಶದಿಂದ ಹನುಮಂತನನ್ನು ಬರಸೆಳೆದು, ಆಲಿಂಗಿಸಿಕೊಂಡು, ಪರತತ್ವ ನಿಧಿಯಾದ ಹನುಮಂತನೇ ನಿನ್ನ ಅಧ್ಯಾತ್ಮ ಜ್ಞಾನವೆಂಬ ದಿವ್ಯಾಸ್ತ್ರದಿಂದ ನನ್ನ ಅಜ್ಞಾನವನ್ನು ಪರಿಹರಿಸಿ ವಿಜಯಿಯಾಗಿರುವೆ. ಇಗೋ ನಿನಗೆ ಭಕ್ತಿಪೂರ್ವಕವಾದ ಅನಂತ ವಂದನೆಗಳು. ಈ ಚರಿತ್ರಾರ್ಹವಾದ ಪವಿತ್ರ ಘಟನೆಯು, ನನ್ನ ಸ್ಮೃತಿಯಲ್ಲಿ ಸದಾ ಸ್ಥಿರವಾಗಿ ನೆಲೆಸಿರುವುದು. ನೀನು ರುದ್ರಾಂಶಸಂಭೂತನೂ, ಶಿವಭಕ್ತಾಗ್ರೇಸರನೂ, ಅಸಮಾನ ವೀರನೂ, ಮಹಾ ವೈರಾಗ್ಯಮೂರ್ತಿಯೂ, ಎಂಬುದನ್ನು ಅಜ್ಞಾನವಶಾತ್ ಕ್ಷಣಕಾಲ ಮರೆತು ನಿನ್ನನ್ನು ನಿಂದಿಸಿ ಇಂಥಾ ವಿಪತ್ತಿಗೀಡಾದೆನು. ಆದರೂ ಇದರಿಂದ ನನ್ನಲ್ಲಿ ಶಿವತತ್ವದರಿವು ಜಾಗ್ರತಿ

ಹೊಂದಿ, ಅಜ್ಞಾನ ತೊಲಗಿ, ಮಹದುಪಕಾರವೇ ಆಯಿತು. ಇದು ನನ್ನ ಸೌಭಾಗ್ಯವೇ ಸರಿ. ಇನ್ನು ನೀನು ನನ್ನನ್ನು ಪರೀಕ್ಷಿಸಬೇಡ. ಎಲೈ ಹನುಮಂತನೇ, ನೀನು ಬಯಸಿದ ಮೋಕ್ಷವನ್ನು ಕರುಣಿಸಲು, ನಾನು ಸಮರ್ಥನಲ್ಲ. ನನಗೂ, ನಿನಗೂ, ಅಷ್ಟೇ ಏಕೆ ಹರಿ-ಬ್ರಹ್ಮಾದಿ ಸಕಲ ದೇವಮಾನವರಿಗೂ, ಮುಕ್ತಿಯನ್ನು ಕರುಣಿಸುವ ಸಮರ್ಥನು ಆ ಶಂಕರನೊಬ್ಬನೇ. ಮೇಲಾಗಿ ನಾನು ಕ್ಷತ್ರಿಯನು, ಜಗದ್ರಕ್ಷಕನು. ಬೇಕಾದರೆ ಮೂರು ಲೋಕಗಳನ್ನೂ ಕ್ಷಣಾರ್ಧದಲ್ಲಿ ಜಯಿಸಿ ನಿನಗೆ ಕೊಡುವೆನು. ನಿನಗೆ ಮೋಕ್ಷವನ್ನು ನಾನೆಂತು ಕರುಣಿಸಲಿ? ನೀನು ಅದನ್ನು ಪಡೆಯಬೇಕಾದರೆ, ಸಮರ್ಥನಾದ ಸದ್ಗುರುವನ್ನು ಆಶ್ರಯಿಸಿ, ಅವನ ಅನುಗ್ರಹದಿಂದ, ಉಪದೇಶ ಹಾಗೂ, ದೀಕ್ಷೆಯನ್ನು ಪಡೆದು ಮೋಕ್ಷವನ್ನು ಪಡೆ ನಿನ್ನ ಇಷ್ಟಾರ್ಥವು ಸಿದ್ಧಿಸುವುದರಲ್ಲಿ ಸಂಶಯವಿಲ್ಲ ಸರ್ವೇಶ್ವರನೂ, ದಯಾಮಯನೂ, ಆದ ಶಂಕರನು ನಿನಗೆ, ನಾಶರಹಿತವೂ, ಜನನ ಮರಣ ದೂರವೂ ಆದ ಶಿವಸಾಯುಜ್ಯವನ್ನು ಕರುಣಿಸಲಿ, ಎಂದು ಹರಸುತ್ತಾ, ಕಣ್ಣುಗಳಲ್ಲಿ ಆನಂದಭಾಷ್ಪಗಳು ಉದುರುತ್ತಿರಲು ಹನುಮಂತನ ಮುಖವನ್ನೇ ಅವಲೋಕಿಸುತ್ತ ನಿಂತನು. ಇದನ್ನೆಲ್ಲಾ ನೋಡುತ್ತಿದ್ದ ಸೀತೆ ಲಕ್ಷ್ಮಣಾದಿಗಳು ಅತ್ಯಂತ ಖಿನ್ನಮನಸ್ಕರಾಗಿ ಕೃತಜ್ಞತಾ ಭಾವದಿಂದ ಮಾರುತಿಯನ್ನು ವಂದಿಸಿದರು. ಇದನ್ನೆಲ್ಲಾ ಗಮನಿಸಿದ ಹನುಮಂತನು ಭಕ್ತಿಪೂರ್ವಕವಾಗಿ ಶ್ರೀರಾಮನಿಗೂ ಸೀತಾ ಲಕ್ಷ್ಮಣರಿಗೂ ವಂದಿಸಿ, ಪ್ರಭು ರಾಮಚಂದ್ರಾ! ನಮ್ಮ ಮೈತ್ರಿಯು ಸ್ಥಿರವಾಗಿರಲಿ. ನಿನ್ನ ದಿವ್ಯಮೂರ್ತಿಯನ್ನು ನಾನು ಸದಾ ಧ್ಯಾನಿಸುತ್ತಿರುವೆನು ಎಂದು ಹೇಳಿ ಅಲ್ಲಿಂದ ಕ್ಷಣಾರ್ಧದಲ್ಲಿ ಅದೃಶ್ಯನಾದನು. ಎಲ್ಲರೂ ಅಗಲುವಿಕೆಯಿಂದುಂಟಾದ ದುಃಖದಿಂದ, ಕಣ್ಮರೆಯಾದ ಆತ್ಮೀಯನೂ, ಸದ್ಗುಣಾಭರಣನೂ, ಶಾಂತನೂ, ಶಿವಾಂಶಸಂಭೂತನೂ ಆದ ಹನುಮಂತನ ಗುಣಗಾನ ಮಾಡುತ್ತಾ ತಮ್ಮ ತಮ್ಮ ನಿವಾಸಗಳಿಗೆ ತೆರಳಿದರು.

ಹನುಮಂತನು ಕೈಲಾಸಕ್ಕೆ :

ಅಲ್ಲಿಂದ ಹನುಮಂತನು, ನೇರವಾಗಿ ಕೈಲಾಸಕ್ಕೆ ಹೋದನು. ದ್ವಾರದಲ್ಲಿದ್ದ ದ್ವಿತೀಯ ಶಂಭುವಾದ ನಂದೀಶ್ವರನು, ಹನುಮಂತನನ್ನು ತಡೆದನು. ಆಗ ಹನುಮಂತನು ಚಕಿತನಾಗಿ ಎಲೈ ದ್ವಿತೀಯ ಶಂಭುವೇ!

ಶಿವಾಂಶಸಂಭೂತನಾದವನಿಗೆ ಶಿವದರ್ಶನಮಾಡಲು ಅನುಮತಿಯಿಲ್ಲವೆ? ನೀನು ಏನುಕಾರಣ ನನ್ನನ್ನು ಹೀಗೆ ತಡೆಯುವೆ? ಎಂದು ವಿನಯದಿಂದ ಕೇಳಿದನು.

ನಂದಿನಾಥ ಹರಂ ಪೃಚ್ಛ ಪಾತಕಸ್ಯೋಪಶಾಂತಿದಂ ।
ಪಾಪೋऽಹಂ ಪ್ಲವಗೋ ಯಸ್ಮಾತ್ಸಂಜಾತಃ ಕಾರಣಾಂತರಾತ್ ॥
(ಸ್ಕಾಂದ 83-76)

ನಂದೀಶ್ವರನು, ಎಲೈ ಹನುಮಂತನೇ! ನೀನು ಗುರುವಿನಿಂದ ಅನುಗೃಹೀತವಾದ ಇಷ್ಟಲಿಂಗವನ್ನು ಧರಿಸಿಲ್ಲ. ಎರಡನೆಯದಾಗಿ ನೀನು ಶಿವಭಕ್ತರಾದ ಅನೇಕ ರಾಕ್ಷಸರನ್ನು ಸಂಹರಿಸಿರುವುದರಿಂದ ನಿನಗೆ ಬ್ರಹ್ಮಹತ್ಯಾದೋಷವು ಪ್ರಾಪ್ತವಾಗಿರುವುದು. ಆದುದರಿಂದ ನೀನು ಭೂಲೋಕದಲ್ಲಿ, ಶ್ರೀರುದ್ರನ ದೇಹದಿಂದ ಉಗಮಿಸಿದ ನರ್ಮದೆಯ ತೀರದಲ್ಲಿ, ಶಿವನನ್ನು ಕುರಿತು ತಪಸ್ಸು ಮಾಡಿ, ಶಿವನ ಕೃಪೆಯಿಂದ ಹತ್ಯಾದೋಷದಿಂದ ಬಿಡುಗಡೆ ಹೊಂದು.

ಕೈಲಾಸಾಖ್ಯಂ ಗತಃ ಶೈಲಂ ಪ್ರಣಾಮಾಯ ಮಹೇಶಿತುಃ ।
ತಿಷ್ಠ ತಿಷ್ಠೇತ್ಯಸೌ ಪ್ರೋಕ್ತೋ ನಂದಿನಾ ವಾನರೋತ್ತಮಃ ॥
(ಸ್ಕಾಂ 73-14)

ಬ್ರಹ್ಮ ಹತ್ಯಾಯುತಸ್ತ್ವಂ ಚ ರಾಕ್ಷಸಾನಾಂ ವಧೇನ ಹಿ ।
ಭೈರವಸ್ಯ ಸಭಾ ನೂನಂ ನ ದ್ರಷ್ಟವ್ಯಾ ತ್ವಯಾ ಕಪೇ ॥
(ಸ್ಕಾ. 73-15)

ಈ ಎರಡು ಕಾರಣಗಳಿಂದ ನೀನು ಶಂಕರನ ದರ್ಶನ ಮಾಡಲು ಸಾಧ್ಯವಿಲ್ಲ. ಇದು ಇಲ್ಲಿಯ ನಿಯಮ. ಈ ನಿಯಮವನ್ನು ಉಲ್ಲಂಘಿಸಲು ಯಾರಿಗೂ ಸಾಧ್ಯವಿಲ್ಲ ಎಂದು ತಿಳಿಸಿದನು.

ನಂದಿಯ ಸಲಹೆ :

ಆಗ ಹನುಮಂತನು ಅತ್ಯಂತ ದುಃಖದಿಂದ ನಂದೀಶ್ವರನನ್ನು ಕುರಿತು ಎಲೈ ದ್ವಿತೀಯ ಶಂಭುವೆ! ಈಗ ನಾನು ಅನಾಥನಾದೆನು. ನನ್ನ ಜನ್ಮ ನಿರರ್ಥಕವಾಯಿತು. ನನ್ನ ಮಹದಾಸೆ ಮಣ್ಣು ಪಾಲಾಯಿತು. ಈಗ ನನ್ನನ್ನು ರಕ್ಷಿಸುವವರಾರು? ನನಗೆ ಶಿವದೀಕ್ಷೆಯನ್ನು ನೀಡುವ ಸಮರ್ಥ ಸದ್ಗುರುವು ಯಾರು? ಈ ವಿಷಯವಾಗಿ ನೀನೇ ನನಗೆ ಸೂಕ್ತ ಮಾರ್ಗ

ಧರ್ಶನನೀಡಿ, ಕಾಪಾಡ ಬೇಕೆಂದು ದೈನ್ಯದಿಂದ ಪ್ರಾರ್ಥಿಸಿದನು. ಆಗ ನಂದೀಶ್ವರನು ಹನುಮಂತನ ಸ್ಥಿತಿಯನ್ನು ಕಂಡು ಕನಿಕರ ಗೊಂಡು ಎಲೈ ವೀರನೆ! ಹಂಪೆಯ ಉತ್ತರ ದಿಕ್ಕಿನಲ್ಲಿ ಹೇಮಕೂಟವೆಂಬ ಪರ್ವತವಿರುವುದು. ಅದರ ತಪ್ಪಲಿನ ಪ್ರಶಾಂತ ಪ್ರದೇಶದಲ್ಲಿ, ಶಿವನ ಫಾಲನೇತ್ರೋದ್ಭವನೂ, ದಕ್ಷಯಜ್ಞಾರಿಯೂ, ನೃಸಿಂಹನನ್ನು ನಿಗ್ರಹಿಸಿದವನೂ, ಪ್ರಳಯಕಾರಕನೂ, ತ್ರಿಮೂರ್ತಿಗಳಿಗೂ ಅಜೇಯನೂ ಆದ ಶ್ರೀವೀರಭದ್ರನು ಗಣಪದವಿಯನ್ನು ಪಡೆದು ಶಿವಧ್ಯಾನ ಯೋಗದಲ್ಲಿರುವನು. ಆತನು ಕರುಣಾಳುವು ಮತ್ತು ಪರತತ್ವವಿಶಾರದನು. ನೀನು ನಾರದರ ಸಹಾಯದಿಂದ, ಆ ವೀರಭದ್ರನನ್ನು ಆಶ್ರಯಿಸಿದರೆ ನಿನ್ನ ಮನೋರಥವು ಈಡೇರುವುದೆಂದು ತಿಳಿಸಿದನು. ಇದನ್ನು ಕೇಳಿ ಸಮಾಧಾನ ಹೊಂದಿದ ಹನುಮಂತನು, ನಂದೀಶ್ವರನಿಗೆ ನಮಸ್ಕರಿಸಿ ಅವನ ಅನುಮತಿ ಪಡೆದು, ನರ್ಮದಾ ತೀರಕ್ಕೆ ಹೋದನು. ಅಲ್ಲಿ ಶಿವನನ್ನು ಕುರಿತು ಅನೇಕ ವರ್ಷಗಳ ಕಾಲ ತಪಸ್ಸನ್ನಾಚರಿಸಿದನು.

ಶಿವಾನುಗ್ರಹ :

ಅವನ ತಪಸ್ಸಿಗೆ ಪ್ರಸನ್ನನಾದ ಶಂಕರನು ಎಲೈ ವತ್ಸ, ಹನುಮಂತಾ! ನರ್ಮದಾ ತೀರ್ಥ ಮಾಹಾತ್ಮ್ಯೆಯಿಂದಲೂ, ಧರ್ಮಯೋಗದಿಂದಲೂ. ನನ್ನ ಪವಿತ್ರ ಮೂರ್ತಿಯ ದರ್ಶನ ಭಾಗ್ಯದಿಂದಲೂ ನಿನ್ನ ಹತ್ಯಾ ದೋಷವು ಭಸ್ಮವಾಗಿದೆ.

ನರ್ಮದಾತೀರ್ಥಮಾಹಾತ್ಮ್ಯಾದ್ಧರ್ಮಯೋಗಪ್ರಭಾವತಃ ।
ಮನ್ಮೂರ್ತಿದರ್ಶನಾತ್ ಪುತ್ರ ನಿಷ್ಪಾಪೋಽಸಿ ನ ಸಂಶಯಃ ॥

(ಸ್ಕಾಂದ 73-28)

ಎಂದು ಹೇಳಿ ವಾನರೋತ್ತಮನೇ ನೀನು ಇನ್ನು ಮುಂದೆ, ಹನುಮಾನ್, ಅಂಜನೀಸುತ, ವಾಯುಪುತ್ರ, ಮಹಾಬಲಿ, ರಾಮೇಷ್ಟ, ಫಾಲ್ಗುನ, ಗೋತ್ರ, ಪಿಂಗಾಕ್ಷ, ಅಮಿತವಿಕ್ರಮ, ಉದಧಿಕ್ರಮ, ಶ್ರೀಷ್ಠ, ದಶಗ್ರೀವದರ್ಪಹರ, ಲಕ್ಷ್ಮಣಪ್ರಾಣದಾತ, ಸೀತಾಶೋಕನಿವರ್ತಕ, ಎಂಬ ಹೆಸರುಗಳಿಂದ ಮೂರು ಲೋಕಗಳಲ್ಲಿಯೂ ಪ್ರಸಿದ್ಧನಾಗು. ನರ್ಮದಾ ನದಿಯ ದಕ್ಷಿಣ ದಡದಲ್ಲಿ, ಸೋಮನಾಥನ ಬಳಿ ಅತ್ಯಂತ ಮಂಗಳಕರವಾದ ತೀರ್ಥವಿರುವುದು. ಅದರಲ್ಲಿ

ನೀನು ಮಿಂದು ಪುನೀತನಾಗು. ಆ ಕ್ಷೇತ್ರವು ನಿನ್ನ ಹೆಸರಿನಿಂದ ಪ್ರಸಿದ್ಧವಾಗಲಿ ಎಂದು ಅವನನ್ನು ಆಲಿಂಗಿಸಿ ಆ ಕ್ಷೇತ್ರದಲ್ಲಿಯೇ ನೆಲೆಸಿದನು.

ಕಪಿಮಾಲಿಂಗಯಾಮಾಸ ವರಂ ತಸ್ಮೈ ಪ್ರದತ್ತವಾನ್ ।
ಅದ್ಯ ಪ್ರಭೃತಿ ತೇ ತೀರ್ಥಂ ಭವಿಷ್ಯತಿ ನ ಸಂಶಯಃ ॥

(ಸ್ಕಾಂಡ. ಭಾಗ 5, ಅಧ್ಯಾಯ 84_16)

ಕಪಿತೀರ್ಥಂ ತತೋ ಜಾತಂ ತಸ್ಥೌ ತತ್ರ ಸ್ವಯಂ ಹರಃ ।
ಹನೂಮಂತೇಶ್ವರೋ ನಾಮ್ನಾ ಸರ್ವಹತ್ಯಾಹರಸ್ತದಾ ॥ (84_17)

ಆಗ ಹನುಮಂತನು ಶಂಕರನನ್ನು ನಾನಾ ವಿಧದಿಂದ ಸ್ತೋತ್ರಮಾಡಿ ಸಾಷ್ಟಾಂಗನಮಸ್ಕಾರಮಾಡಿ ಕಪಿತೀರ್ಥದಲ್ಲಿ ಸ್ನಾನಮಾಡಿ, ಶಿವನನ್ನು ಪೂಜಿಸಿ, ಹಂಪೆಯ ಕಡೆಗೆ ತೆರಳಿದನು. ಆ ಕ್ಷೇತ್ರವು ಸಕಲ ಪಾಪಗಳನ್ನು ಪರಿಹರಿಸುವ ಹನುಮಂತೇಶ್ವರ ಕ್ಷೇತ್ರವೆಂದು ಹೆಸರು ಪಡೆಯಿತು. ಬಳಿಕ ಆಂಜನೇಯನು ರಾಮನನ್ನು ನೋಡಲಿಕ್ಕಾಗಿ ಅಯೋಧ್ಯೆಗೆ ಹೋಗಿ, ಕುಶಲ ಪ್ರಶ್ನೆಯಾದ ಮೇಲೆ ತನಗೆ ಹತ್ಯಾ ವಿಮೋಚನೆಯಾದ ವಿವರಗಳನ್ನೆಲ್ಲಾ ರಾಮನಿಗೆ ಸಾಂಗವಾಗಿ ತಿಳಿಸಿದನು.

ಹನೂಮಾನಪ್ಯಯೋಧ್ಯಾಯಾಂ ರಾಮಂ ದ್ರಷ್ಟುಮಥಾಗಮತ್ ।
ಚಕಾರ ಕುಶಲಪ್ರಶ್ನಂ ಸ್ವರೂಪಂ ಚ ನ್ಯವೇದಯತ್ ॥

(ಸ್ಕಾಂ 84_20)

ಆಗ ರಾಮನು, ಎಲೈ ಮಿತ್ರನೇ, ನನ್ನ ಕಾರ್ಯವನ್ನು ಮಾಡಿದ ನಿನಗೆ ಪಾಪವುಂಟಾದರೆ, ನಾನೂ ಪಾಪಿಯು. ಆದುದರಿಂದ ನಾನೂ ತಪಸ್ಸು ಮಾಡುವೆನೆಂದು ಹೇಳಿ ನರ್ಮದಾ ತೀರದಲ್ಲಿ ಲಕ್ಷ್ಮಣನೊಡಗೂಡಿ, ಇಪ್ಪತ್ತು ನಾಲ್ಕು ವರ್ಷಗಳ ಕಾಲ ತಪಸ್ಸು ಮಾಡಿದನು.

ತತ್ರೈವ ದಕ್ಷಿಣೇ ಕೂಲೇ ರೇವಾಯಾಃ ಪಾಪಹಾರಿಣಿ ।
ಚತುರ್ವಿಂಶತಿ ವರ್ಷಾಣಿ ತಪಸ್ತೇಪೇಽಥ ರಾಘವಃ ॥

(ಸ್ಕಾಂ 84_22)

ಪ್ರಭಾವಾತ್ತಸ್ಯ ತಪಸೋ ರೇವಾತೀರೇ ಮಹಾಮತೀ ।
ನಿಷ್ಪಾಪತಾಂ ತದಾವೀರೌ ಜಗ್ಮತೂ ರಾಮಲಕ್ಷ್ಮಣೌ ॥ (84_24)

ತತೋವರಂ ದದೌ ದೇವೋ ರಾಮಕೀರ್ತ್ಯಭಿವೃದ್ಧಯೇ ।
ಚತುರ್ವಿಂಶತಿತಮೇ ವರ್ಷೇ ರಾಮೋ ನಿಷ್ಪಾಪತಾಂ ಗತಃ ॥

(84–28)

ಬಳಿಕ ಅವರ ತಪಸ್ಸಿಗೆ ಪ್ರಸನ್ನನಾದ ಶಂಕರನು, ಆ ತೀರ್ಥಕ್ಕೆ ಒಂದು ತನ್ನ ಕಲೆಗಳನ್ನು ಅಲ್ಲಿ ಸ್ಥಾಪಿಸಿ, ರಾಮನ ಕೀರ್ತಿ ಬೆಳಗಲೆಂದು ವರಗಳನ್ನಿತ್ತು ಅಂತರ್ಧಾನನಾದನು. ಹೀಗೆ ರಾಮಲಕ್ಷ್ಮಣರೂ ನರ್ಮದಾ ತೀರದಲ್ಲಿ ಶಿವಲಿಂಗಗಳನ್ನು ಪ್ರತಿಷ್ಠಿಸಿ, ಶಿವಾನುಗ್ರಹದಿಂದ, ಇಪ್ಪತ್ತು ನಾಲ್ಕು ವರ್ಷಗಳ ಶಿವಾರಾಧನೆ, ಮತ್ತು ತಪಸ್ಸಿನ ಫಲದಿಂದ ಪಾಪರಹಿತರಾಗಿ, ಅಯೋಧ್ಯೆಗೆ ಹಿಂದಿರುಗಿದರು.

ನಾರದರ ದರ್ಶನ :

ಹೀಗೆ ಶಿವ ಕೃಪೆಯಿಂದ ಹತ್ಯಾದೋಷದಿಂದ ಮುಕ್ತನಾದ ಹನುಮಂತನು ವೃದ್ಧಿಹೊಂದಿದ ತೇಜಸ್ಸುಳ್ಳವನಾಗಿ, ತಪಸ್ಸಿಗಾಗಿ ಹೊರಟ ರಾಮನಿಂದ ಬೀಳ್ಕೊಂಡ ಬಳಿಕ ಗುರುವನ್ನರಸುತ್ತಾ ಹಂಪೆಯ ಕಡೆಗೆ ನಡೆದನು. ಶಿವಾನುಗ್ರಹವುಳ್ಳವರಿಗೆ ಯಾವುದು ತಾನೇ ದುರ್ಲಭ ? ಮಾರ್ಗದಲ್ಲಿಯೇ ಧರ್ಮಕರ್ಮಸಂಯೋಗದಿಂದ ನಾರದರ ದರ್ಶನವೂ ಹನುಮಂತನಿಗೆ ಲಭಿಸಿತು. ಕೂಡಲೇ ಹನುಮಂತನು ಅತ್ಯಾನಂದದಿಂದ ನಾರದರಿಗೆ ವಂದಿಸಿ ಅತಿಥಿ ಸೇವೆ ಮಾಡಿ ತೃಪ್ತಿಗೊಳಿಸಿದನು. ಪ್ರಸನ್ನರಾದ ನಾರದರು, ಎಲೈ ವೀರಾಗ್ರೇಸರನೆ, ನಿನಗೆ ಸಮನಪ್ಪ ಭಾಗ್ಯಶಾಲಿಗಳು ಈ ಮೂರು ಲೋಕಗಳಲ್ಲಿ ಯಾರೂ ಇಲ್ಲ, ಆದರೂ ನಿನ್ನನ್ನು ಯಾವುದೋ ಒಂದು ಪ್ರಬಲ ಚಿಂತೆ ಬಾಧಿಸುತ್ತಿದೆ. ಚಿಂತಿಸ ಬೇಡ. ನಿನ್ನ ಮನೋಭೀಷ್ಟವು ಸಿದ್ಧಿಸುವ ಶುಭಕಾಲವು ಸನ್ನಿಹಿತವಾಗಿದೆ.

ಅದೋ ನೋಡು ! ಅಲ್ಲಿ ಕಾಣುತ್ತಿರುವುದೇ ಹೇಮಕೂಟ ಪರ್ವತ. ಅದರ ತಪ್ಪಲಿನ ಪ್ರಶಾಂತ ಹಾಗೂ ಮನಮೋಹಕವಾದ ಪ್ರಕೃತಿ ದೇವಿಯ ಮಡಿಲಿನಂತಿರುವ ರಮ್ಯ ಸ್ಥಳದಲ್ಲಿಯೇ, ಶಿವನಣುಗನೂ, ಮಂಗಳಕರನೂ, ಶಿಷ್ಟರಕ್ಷಕನೂ, ಕರುಣಾಳುವೂ, ಆದ ಶ್ರೀ ವೀರೇಶನು ಧ್ಯಾನಸಮಾಧಿಯಲ್ಲಿರುವನು. ಆವನೇ ನಿನಗೆ ದೀಕ್ಷಾಗುರುವೂ, ಮೋಕ್ಷಗುರುವೂ ಆಗಲು.

ಸಮರ್ಥನು. ನೀನು ಅವನನ್ನು ಆಶ್ರಯಿಸಿ, ಅವನನ್ನು ಪ್ರಸನ್ನ ಗೊಳಿಸಿ ಕೊಂಡರೆ, ನಿನ್ನ ಇಷ್ಟಾರ್ಥವು ಲಭಿಸುವುದರಲ್ಲಿ ಯಾವ ಸಂಶಯವೂ ಇಲ್ಲ. ಸದ್ಗುರುವಿಗಿಂತ ಅಧಿಕವಾದ ವಸ್ತು ಮೂರು ಲೋಕಗಳಲ್ಲಿ ಯಾವುದೂ ಇಲ್ಲ.

ಎಲೈ ವಾಯುಸುತನೇ ಕೇಳು, ಯಾವ ವಿದ್ಯೆಯೇ ಆಗಲಿ ಗುರು ಮುಖದಿಂದಲೇ ಬರಬೇಕು. ಆದುದರಿಂದ ಗುರುವಿಗೆ ಹೆಚ್ಚಿನ ಸ್ಥಾನವುಂಟು. ಏಕೆಂದರೆ, ಆ ಗುರುವು, ವೇದಾಂತಾಗಮೋಪನಿಷತ್ತುಗಳನ್ನು ಆಳವಾಗಿ ಅಭ್ಯಸಿಸಿ ಅನುಭಾವಿಯಾಗಿರುವನು. ಅಲ್ಲದೆ, ಅವನು ಗುರುಕುಲಪ್ರಸೂತನೂ ಆಗಿರುವನು. ಆಚಾರನಿಷ್ಠನಾಗಿ, ಶಮದಮಾದಿಗುಣಗಳಿಂದ ಕೂಡಿದವನೂ, ಕರುಣಾಮೂರ್ತಿಯೂ, ಶಾಂತನೂ, ಆಗಿರುವನು. ಗುರುವೇ ಸಾಕ್ಷಾತ್ ಶಿವನು, ಮಂತ್ರವು, ನೇತ್ರವು, ವೇದ, ದೈವ, ಮನಸ್ಸು, ಸತ್ವ, ಗತಿ, ಮತಿ, ಮತ್ತು ಶಿಷ್ಯನ ಸರ್ವಸ್ವವೂ ಗುರುವೇ ಆಗಿರುವನು. ವೇದ, ಆಗಮ, ಉಪನಿಷತ್ತು, ಶ್ರುತಿ, ಸ್ಮೃತಿ, ಮೊದಲಾದ ಪ್ರವಿತ್ರ ಗ್ರಂಥಗಳು ಏಕಕಂಠದಿಂದ "ನಗುರೋರಧಿಕಂ" ಎಂದು ಸಾರುತ್ತಿವೆ. ಆದುದರಿಂದ ಎಲೈ ವಾಯುಪುತ್ರನೇ, ನಾನು ವಿವರಿಸಿದ ಎಲ್ಲಾ ಶ್ರೇಷ್ಠ ಗುಣಗಳೂ ಶ್ರೀವೀರಭದ್ರನಲ್ಲಿ ಸ್ವಭಾವಜನ್ಯವಾಗಿಯೇ ರೂಪುಗೊಂಡಿವೆ. ನಿನಗೆ ಅವನೇ ಸೂಕ್ತ ಸದ್ಗುರುವು. ಅವನು ಮಂಗಳಸ್ವರೂಪನು, ಭಕ್ತವತ್ಸಲನು ಮತ್ತು ಕರುಣಾನಿಧಿಯು. ನೀನು ನಿಸ್ಸಂಕೋಚದಿಂದ ಅವನನ್ನು ಆಶ್ರಯಿಸು. ಶಿವನ ಕೃಪೆಯಿಂದ ನಿನ್ನ ಇಷ್ಟಾರ್ಥಸಿದ್ಧಿಸುವುದು ಎಂದು ಹರಸಿ, ಅಂತರ್ಧಾನನಾದನು.

ಹೀಗೆ ನಾರದರಿಂದ ತನ್ನ ಗುರುವಿನ ಹಿರಿಮೆಯನ್ನು ತಿಳಿದು ಅತ್ಯಂತ ಆನಂದದಿಂದ ಉತ್ತೇಜಿತನಾಗಿ, ಮಾರುತಿಯು, ಹೇಮಕೂಟ ಪರ್ವತದ ತಪ್ಪಲಿಗೆ ಹೋದನು. ಅಲ್ಲಿ ತನ್ನ ತಪಸ್ಸಿಗೆ ಪ್ರಶಾಂತವಾದ ಸ್ಥಲವನ್ನು ಹುಡುಕಿ, ತಪಸ್ಸಿನ ಸಿದ್ಧತೆಗಳನ್ನೆಲ್ಲಾ ಮುಗಿಸಿ, ಪವಿತ್ರ ತುಂಗಭದ್ರಾ ಜಲದಲ್ಲಿ ಮಿಂದು ಶುಚಿರ್ಭೂತನಾಗಿ, ಭೂಗತನಾಗಿ ಶಿವಧ್ಯಾನ ಮಾಡಿ ನಂತರ ನಾರದರು ವರ್ಣಿಸಿದ ಶ್ರೀ ವೀರಭದ್ರನ ರೂಪವನ್ನು ತನ್ನ ಹೃತ್ಕಮಲದಲ್ಲಿ ಸಂಸ್ಥಾಪಿಸಿ, ಪದ್ಮಾಸನಾರೂಢನಾಗಿ, ಬಾಹ್ಯೇಂದ್ರಿಯ ವ್ಯಾಪಾರಗಳ

ನ್ನೆಲ್ಲಾ ನಿಗ್ರಹಿಸಿ, ಏಕಾಗ್ರತೆಯಿಂದ ಅನೇಕ ಕಾಲ ಅನ್ನಾಹಾರಗಳನ್ನೂ ತೊರೆದು ತಪಸ್ಸನ್ನಾಚರಿಸಿದನು. ಅನೇಕಕಾಲದ ಮೇಲೆ ಕೋಟಿ ಸೂರ್ಯ ಪ್ರಕಾಶಮಾನನೂ, ಚತುರ್ಭುಜನೂ, ಭಸ್ಮರುದ್ರಾಕ್ಷಧರನೂ, ಶಾಂತ ಮೂರ್ತಿಯೂ, ಆದ ವೀರಭದ್ರನು ಹನುಮಂತನಿಗೆ ದರ್ಶನ ನೀಡಿದನು. ಆಗ ಹನುಮಂತನಿಗೆ ಆದ ಆನಂದಕ್ಕೆ ಮಿತಿಯೇ ಇಲ್ಲವಾಯಿತು. ತನ್ನ ಕಣ್ಣನ್ನೇ ತಾನು ನಂಬದಾದನು. ಆಗ ಅವನು ಆ ದಿವ್ಯ ಮೂರ್ತಿಯ ಪಾದಾರವಿಂದ ಗಳಿಗೆ ಸಾಷ್ಟಾಂಗವೆರಗಿ, ಎಲೈ ಶಿವರೂಪಿಯಾದ ವೀರೇಶನೇ! ನಿನಗೆ ಅನಂತಾನಂತ ನಮಸ್ಕಾರಗಳು. ಎಲೈ ಸ್ವಾಮಿಯೆ! ಅತಿ ದೀನಾವಸ್ಥೆಯ ಲ್ಲಿರುವ ನನ್ನ ಪ್ರಾರ್ಥನೆಯನ್ನು ಕೃಪೆಮಾಡಿ ಲಾಲಿಸು. ನಾನು ಅಂಜನಾಸುತ ಹನುಮಂತನು, ಮಹಾಶಿವಭಕ್ತನು. ನನ್ನನ್ನು ರುದ್ರಾಂಶಸಂಭೂತನೆಂದೂ, ವಾಯುಪುತ್ರನೆಂದೂ ಕರೆಯುವರು. ನಾನು ಹುಟ್ಟಿದಾರಭ್ಯ, ಯಾವ ಲೌಕಿಕ ಸುಖಗಳನ್ನೂ ಬಯಸಿದವನಲ್ಲ. ಆಜನ್ಮಬ್ರಹ್ಮಚಾರಿಯು. ಸೂರ್ಯನಿಂದ ಸಕಲ ವಿದ್ಯೆಗಳನ್ನೂ ಕಲಿತಿರುವೆನು. ವಿಷ್ಣುವಿನ ಅವತಾರ ವೆಂದು ಹೇಳಲಾದ ಶ್ರೀರಾಮಚಂದ್ರನ ಸಖ್ಯ ಬೆಳೆಸಿದೆನು. ನಂತರ ಶಿವನ ಅಣತಿಯಂತೆ, ರಾವಣಸಂಹಾರ ಕಾರ್ಯದಲ್ಲಿ ರಾಮನಿಗೆ ನನ್ನ ಸೇವೆ ಸಲ್ಲಿಸಿದೆನು. ರಾಮನು ಅದಕ್ಕೆ ಪ್ರತಿಫಲವಾಗಿ ತನ್ನ ಶ್ರೇಷ್ಠ ರತ್ನ ಹಾರವನ್ನು ನನಗೆ ಕೊಟ್ಟನು. ಅಂಥಾ ಅನಿತ್ಯ ವಸ್ತುಗಳಲ್ಲಿ ನನಗೆ ಆಸಕ್ತಿಯಿಲ್ಲದುದ ರಿಂದ ಅದಕ್ಕೆ ಬದಲಾಗಿ, ಶಿವಸಾಯುಜ್ಯ ಪದವಿಯನ್ನು ಕರುಣಿಸೆಂದು ಕೇಳಿ ದೆನು. ಆಗ ರಾಮನು, ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿ, ಅದನ್ನು ಪಡೆಯಲು, ಸದ್ಗುರುವನ್ನು ಆಶ್ರಯಿಸುವಂತೆ ತಿಳಿಸಿದನು. ಆಗ ನಾನು ನಿರಾಶೆಯಿಂದ, ಶಿವದರ್ಶನಾರ್ಥವಾಗಿ ಕೈಲಾಸಕ್ಕೆ ತೆರಳಿದೆನು. ಆದರೆ, ಬ್ರಹ್ಮಹತ್ಯಾದೋಷಿಯೂ, ಗುರುದತ್ತಲಿಂಗರಹಿತನೂ ಆದ ನನ್ನನ್ನು ನಂದೀ ಶ್ವರನು ತಡೆದನು. ಅವನ ಆದೇಶದಂತೆ ನಾನು ನರ್ಮದಾ ತೀರದಲ್ಲಿ ತಪಗೈದು ಶಿವಕೃಪೆಯಿಂದ ಹತ್ಯಾದೋಷದಿಂದ ಪಾರಾಗಿ ಇಲ್ಲಿಗೆ ಬಂದೆನು. ಎಲೈ ಗುರು ವರೇಣ್ಯನೇ! ಕೃಪೆಮಾಡಿ, ನನಗೆ ದೀಕ್ಷಾಪೂರ್ವಕ ಶಿವಲಿಂಗವನ್ನು ಕರು ಣಿಸಿ, ಲಿಂಗಾಂಗಸಾಮರಸ್ಯತತ್ವವನ್ನು ಉಪದೇಶಿಸಿ, ಶಿವಸಾಯುಜ್ಯ ಸುಖ ವನ್ನು ಕರುಣಿಸೆಂದು ಪ್ರಾರ್ಥಿಸಿದನು.

ವೀರೇಶನ ಅಭಯ :

ಆಗ ರುದ್ರಾಂಶಸಂಭೂತನೂ, ತೇಜೋಮಯನೂ, ಸಕಲ ವಿದ್ಯಾ ಪಾರಂಗತನೂ, ಭಕ್ತಾಗ್ರಣಿಯೂ, ವಿನಯ ಸಂಪನ್ನನೂ ಆದ ಹನುಮಂತನ ಪ್ರಾರ್ಥನೆಯಿಂದ ಪ್ರಸನ್ನನಾದ ವೀರೇಶನು, ಎಲೈ ಗುರುಪುತ್ರನೇ ! ನಿನ್ನನ್ನು ಕಂಡು ನನಗೆ ಅತ್ಯಾನಂದವಾಗಿದೆ. ನಿನ್ನ ವ್ಯಕ್ತಿತ್ವವು ಅಸದೃಶವಾದುದು. ನೀನು ಸುಸಂಸ್ಕೃತನು. ಮೇಲಾಗಿ ವೈರಾಗ್ಯ ಮೂರ್ತಿಯು. ನಿನಗೆ ಹೆಚ್ಚಿನ ಸಂಸ್ಕಾರದ ಅವಶ್ಯಕತೆಯಿರುವುದಿಲ್ಲ. ಆದರೂ, ಯಾವ ವಿದ್ಯೆಯೇ ಆಗಲಿ, ಸಿದ್ಧಿಯೇ ಆಗಲಿ, ಗುರೂಪದೇಶ ಮತ್ತು ಅನುಗ್ರಹವಿಲ್ಲದೆ ಫಲಿಸಲಾರವು. ಮೂರುಲೋಕಗಳಲ್ಲಿಯೂ, ಗುರುವಿಗೆ ಸಮಾನವಾದ ವಸ್ತು ಬೇರೊಂದಿಲ್ಲ. ಈ ದೃಷ್ಟಿಯಿಂದ, ಮೋಕ್ಷಾಪೇಕ್ಷಿಯೂ, ಅನಿತ್ಯ ವಸ್ತುಗಳ ಬಗ್ಗೆ ವಿರಕ್ತಿಭಾವ ಹೊಂದಿರುವವನೂ, ಆಶಾದೂರನೂ, ಸ್ಥಿತಪ್ರಜ್ಞನೂ ಆದ ನಿನಗೆ, ಸಾಂಪ್ರದಾಯಿಕವಾಗಿ, ಆನಂದದಿಂದಲೇ ಶಿವದೀಕ್ಷೆಯನ್ನು ನೀಡಿ ವೇದೋಕ್ತ ರೀತಿಯಿಂದ ಲಿಂಗವನ್ನು ಅನುಗ್ರಹಿಸುವೆನು ಎಂದು ಹೇಳಿದನು.

ಇದನ್ನು ಕೇಳುತ್ತಿದ್ದ ಹನುಮಂತನ ಕಣ್ಣುಗಳಿಂದ ಆನಂದಬಾಷ್ಪಗಳು ಒಂದೇಸಮನೆ ಸ್ರವಿಸುತ್ತಿದ್ದವು. ಆಗ ಅವನು ವೀರಭದ್ರನ ಪಾದಾರವಿಂದಗಳಿಗೆ ಮತ್ತೆ ನಮಸ್ಕಾರ ಮಾಡಿ, ಹೇ ಗುರುದೇವ ! ನಾನು ಧನ್ಯನಾದೆ. ನನ್ನ ಜನ್ಮ ಇಂದಿಗೆ ಸಾರ್ಥಕವಾಯಿತು. ನನ್ನ ಏಕೈಕ ಅಭೀಷ್ಟವನ್ನು ಈಡೇರಿಸುವುದಾಗಿ ನನ್ನನ್ನು ಅನುಗ್ರಹಿಸಿ ಕೃತಾರ್ಥನನ್ನಾಗಿ ಮಾಡಿರುವೆ. ನನಗೆ ನೀನೇ ಇಂದಿನಿಂದ ಗುರು, ಇಷ್ಟದೈವ, ಪುಣ್ಯಕ್ಷೇತ್ರ, ಮಂತ್ರ, ಜ್ಞಾನ, ವೇದ, ಆಗಮ, ಇಹ-ಪರ, ತಂದೆ, ತಾಯಿ ಸರ್ವಸ್ವವೂ ನೀನೇ ಆಗಿರುವೆ. ನಾನು ಇನ್ನು ಮುಂದೆ ತ್ರಿಮೂರ್ತಿಗಳನ್ನೂ ಸಹ ಆಶ್ರಯಿಸಬೇಕಾಗಿಲ್ಲ. ನಿನ್ನ ಪಾದಾರವಿಂದಗಳ ಸೇವೆಯಲ್ಲದೆ ಮತ್ತಾವುದನ್ನೂ ಮನಸ್ಸಿನಲ್ಲಿಯೂ ಬಯಸೆನು. ಇದೇ ನನ್ನ ಪ್ರತಿಜ್ಞೆ. ಎಂದು ವಿಧವಿಧವಾಗಿ ಸ್ತುತಿಸಿದನು.

ಅವನ ಪ್ರಾರ್ಥನೆಯಿಂದ ಪ್ರಸನ್ನನಾದ ವೀರಭದ್ರನು, ಹನುಮಂತನನ್ನು ಕುರಿತು, ಪ್ರಿಯ ಹನುಮಂತ ! ನಿನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿರುವೆನು. ಏಕೆಂದರೆ ಗುರು-ಶಿಷ್ಯಸಂಬಂಧವಿಲ್ಲದೆ ಯಾವ ತತ್ತ್ವವನ್ನೂ ಅರಿಯ

ಲಾಗದು. ಅರಿತರೂ ಅದು ಫಲಕಾರಿಯಾಗಲಾರದು. ನಿನಗೆ ದೀಕ್ಷಾ ಸಂಸ್ಕಾರವನ್ನು ನೀಡುವ ಮುನ್ನ ಕೆಲ ಗಹನವೂ, ಪವಿತ್ರವೂ, ಅತ್ಯಗತ್ಯವೂ ಆದ ತಾತ್ವಿಕ ವಿಷಯಗಳನ್ನು ಉಪದೇಶಿಸುವೆನು. ನೀನು ಸ್ಥಿರಮನಸ್ಸಿನಿಂದ ಕೇಳುವವನಾಗು ಎಂದು ಹೇಳಿ, ನಂತರ, ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರ ಹೇಯ ಸ್ಥಲ, ಇವುಗಳ ಸ್ವರೂಪವನ್ನು ಸೂಕ್ಷ್ಮವಾಗಿ ವಿವರಿಸಿದನು. ನಂತರ, ಜೀವನಿಗೂ, ಶಿವನಿಗೂ ಇರುವ ಸಾಮ್ಯವನ್ನೂ, ಪಂಚಭೂತಾತ್ಮಕವಾದ ಜಡದೇಹ ಹಾಗೂ ಪ್ರಕೃತಿಯ ಸ್ವರೂಪ, ಪ್ರಕೃತಿರೂಪಾದ ಮಾಯೆಯನ್ನು ನಿಗ್ರಹಿಸುವ ವಿಧಾನ, ಮುಂತಾದ ಗಹನ ವಿಚಾರಗಳನ್ನು ಪರಿಣಾಮಕಾರಿಯಾಗಿ ಉಪದೇಶಮಾಡಿದನು.

ಹನುಮಂತನ ಸಂದೇಹ ನಿವೃತ್ತಿ :

ಅನಂತರ ಹನುಮಂತನು ವಿನೀತಭಾವದಿಂದ ಕೈಮುಗಿದು, ಹೇ ಸದ್ಗುರುವೇ! ನೀನು ಈವರಿವಿಗೂ, ಉಪದೇಶಿಸಿದ ವಿಚಾರಗಳು ಯಾವ ಧರ್ಮಕ್ಕೆ ಸಂಬಂಧಿಸಿದವು? ಸಾಕ್ಷಾತ್ ಪರಮೇಶ್ವರನನ್ನೇ ಪೂಜಿಸುತ್ತಿರುವಾಗ, ಮತ್ತೆ ಈ ಲಿಂಗಪೂಜೆಯ ಅವಶ್ಯಕತೆಯಾದರೂ ಏನು? ಲಿಂಗದ ಹಿರಿಮೆ, ಅದರ ಪೂಜೆಯಿಂದ ಲಭಿಸುವ ಫಲಗಳಾದರೂ ಯಾವುವು? ಪ್ರಪಂಚದ ಧರ್ಮಗಳಲ್ಲೆಲ್ಲಾ ಶ್ರೇಷ್ಠ ಧರ್ಮವಾವುದು? ಮೋಕ್ಷ ಪಡೆಯಲು ಅದನ್ನು ಅನುಷ್ಠಾನಮಾಡುವ ವಿಧಾನ ಮತ್ತು ನಿಯಮಗಳಾವುವು? ಇತ್ಯಾದಿ ವಿಷಯಗಳನ್ನು ಸುಲಭ ರೀತಿಯಲ್ಲಿ ಉಪದೇಶಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡೆಂದು ಪ್ರಾರ್ಥಿಸಿದನು.

ಆಗ ವೀರೇಶನು, ಹನುಮಂತನನ್ನುದ್ದೇಶಿಸಿ, ಧನ್ಯ, ಧನ್ಯ, ಮಾರುತಿ, ನಿನಗೆ ಯೋಗ್ಯವಾದ ವಿಚಾರಗಳನ್ನೇ ಕೇಳಿರುವೆ. ನಿನ್ನ ಪ್ರಶ್ನೆಗಳಿಂದಲೇ ನೀನು ಸುಸಂಸ್ಕೃತನೂ, ವೈರಾಗ್ಯಮೂರ್ತಿಯೂ, ಪರತತ್ವಾಕಾಂಕ್ಷಿಯೂ ಆಗಿರುವೆ ಎಂದು ಸ್ಪಷ್ಟವಾಗುವುದು. ನೀನು ಕಾರಣಿಕ ಪುರುಷನು. ಮೇಲಾಗಿ ಮೋಕ್ಷಾಪೇಕ್ಷೆಯುಳ್ಳ ಭಾಗವತನು. ಆದುದರಿಂದ ನೀನು ನನ್ನ ಪೂರ್ಣಾನುಗ್ರಹಕ್ಕೆ ಸರ್ವವಿಧದಿಂದಲೂ ಅರ್ಹನಾಗಿರುವೆ. ಸದ್ಗುರುವಿನ ಕೃಪಾಶೀರ್ವಾದದಿಂದ ಪಡೆದ ವಿದ್ಯೆಯೇ ಶ್ರೇಷ್ಠವೂ, ಫಲಕಾರಿಯೂ, ಪವಿತ್ರವೂ, ಆದುದು. ಈ ಕಾರಣದಿಂದ, ನಾನೇ ಗುರುರೂಪದಿಂದ, ಸಂಕ್ಷಿಪ್ತ

ರೀತಿಯಲ್ಲಿ ದೀಕ್ಷೆ ನೀಡಿ, ಇಷ್ಟಲಿಂಗವನ್ನು ಅನುಗ್ರಹಿಸಿ, ಶಿವಧರ್ಮ ತತ್ತ್ವೋಪದೇಶ ನೀಡುವೆನು. ನೀನು ಶಾಂತಚಿತ್ತದಿಂದ ಕೇಳೆಂದು ಹೇಳಲುಪಕ್ರಮಿಸಿದನು.

ವೀರಶೈವ ಧರ್ಮದ ಹಿರಿಮೆ :

ಎಲೈ ಗುರುಪುತ್ರನೇ! ವಿಶ್ವಧರ್ಮಗಳಲ್ಲಿ ಶ್ರೇಷ್ಠವಾದುದಾವುದೆಂದು ಕೇಳಿದೆಯಲ್ಲವೇ ಕೇಳು, ವಿಶ್ವದ ಧರ್ಮಗಳಲ್ಲೆಲ್ಲಾ "ನ ವೀರಶೈವ ಸದೃಶಂ ಮತಮಸ್ತಿ ಜಗತ್ತ್ರಯೇ" ಎಂಬ ಆಗಮೋಕ್ತಿಯಂತೆ, ವೀರಶೈವ ಧರ್ಮವೇ ಎಲ್ಲಾ ಧರ್ಮಗಳಿಗೂ, ರತ್ನಪ್ರಾಯವಾದುದು. ಈ ಧರ್ಮವನ್ನು ವಿಶ್ವಧರ್ಮವೆಂದು ಕರೆಯಲಾಗಿದೆ. ಇದು ಪರಮೇಶ್ವರನಿಂದ ಪರಮೇಶ್ವರಿಗೂ, ಸ್ಕಂದನಿಗೂ, ನಂದಿಗೂ, ನಂತರ ನನಗೂ ಉಪದೇಶಿಸಲ್ಪಟ್ಟಿದೆ. ಈ ಧರ್ಮವು ಅನಾದಿಯಾದುದು. ರುದ್ರ–ಶಿವನೇ ಈ ಧರ್ಮದ ಪ್ರಥಮಾಚಾರ್ಯನು. ಇದು ಬ್ರಹ್ಮನ ಪ್ರಾಕೃತ ಸೃಷ್ಟಿಗಿಂತಲೂ ಹಿಂದಿನದು. ಅಂದರೆ ಹರಿ–ಬ್ರಹ್ಮ–ಇಂದ್ರಾದಿ ದೇವತೆಗಳಿಗಿಂತಾ ಅನಾದಿಯಾದುದೆಂದು ಭಾವ. ಇದನ್ನು ಭೂಲೋಕದಲ್ಲಿ ನನ್ನ ನಂತರ, ಪರಮೇಶ್ವರನ ಪಂಚಮುಖಗಳಿಂದ ಉದ್ಭವಿಸಿದ ರೇಣುಕಾದಿ ಪಂಚಗಣಾಧೀಶ್ವರರು ಪ್ರತಿ ಯುಗದ ಆದಿಯಲ್ಲಿಯೂ ಸ್ಥಾಪಿಸಿ ಪ್ರಚುರಗೊಳಿಸುತ್ತಾರೆ. ಯಾವ ಧರ್ಮವೇ ಆಗಲಿ, ಸಂಸ್ಕೃತಿಯೇ ಆಗಲಿ, ರಾಜ್ಯವೇ ಆಗಲಿ, ಜನಾಂಗವೇ ಆಗಲಿ, ಕಾಲಗತಿಯಿಂದ ಕ್ಷೀಣಗತಿಯನ್ನೈದುವುದು ಸಹಜ. ಆಗ ಶಿವನಾಣತಿಯಂತೆ ಗಣಾಧೀಶ್ವರರು ಭೂಲೋಕದಲ್ಲಿ ಮಾನವರೂಪದಿಂದ ಅವತರಿಸಿ, ಮತ್ತೆ ಅದನ್ನು ಚೇತನಗೊಳಿಸುವರು.

ಈ ಕ್ರಮವು ಎಷ್ಟೋ ಕಲ್ಪಗಳಿಂದಲೂ ಅನೂಚಾನವಾಗಿ ನಡೆದು ಬಂದಿದೆ; ಮುಂದೆಯೂ ನಡೆಯುತ್ತಾ ಪ್ರಲಯ ಕಾಲದಲ್ಲಿಯೂ, ಅದರ ನಂತರವೂ ನಾಶವಿಲ್ಲದೆ ಇರುವುದು. ಅಂದರೆ ಪರಬ್ರಹ್ಮ ಶಿವನ ಸೃಷ್ಟಿ ಎಲ್ಲಿಯವರೆಗೆ ಇರುವುದೋ ಅಲ್ಲಿಯವರಿವಿಗೂ ಈ ಪವಿತ್ರಧರ್ಮವು ಇರುವುದು ಮತ್ತೆ ಸ್ಥಾಪಿಸಲ್ಪಡುವುದು. ಅಂದರೆ ಈ ವೀರಶೈವ ಧರ್ಮಕ್ಕೆ ಎಂದೂ ಚ್ಯುತಿಯೇ ಇಲ್ಲವೆಂದು ಭಾವ. ಈ ಧರ್ಮವು ಶಿವ–ಜೀವ–ಜಗತ್ತು (ಪ್ರಕೃತಿ) ಎಂಬ ಮೂರು ತತ್ತ್ವಗಳನ್ನು ಅಂಗೀಕರಿಸಿದೆ. ಶಿವ ಅಂದರೆ ಮಹಾ ಚೈತನ್ಯ,

ಸದಾಶಿವ. ಅವನು ಎಲ್ಲಾ ಜೀವಿಗಳ ಹೃತ್ಕಮಲದಲ್ಲಿ ಅಗೋಚರನಾಗಿ ನಿರ್ಲಿಪ್ತಾವಸ್ಥೆಯಲ್ಲಿ ನೆಲೆಸಿರುವನು.

ಜೀವನು ಆ ಚೈತನ್ಯದ ಅಂಶನು. ಆದರೆ ಜೀವನು ತನ್ನ ಪ್ರಾರಬ್ಧ ಕರ್ಮಕ್ಕನುಗುಣವಾಗಿ ಪ್ರಕೃತಿ, ಅಂದರೆ, ಅವಿದ್ಯೆ ಮಾಯೆಯ ಸಂಪರ್ಕ ದಿಂದ, ತಾನು, ಚೈತನ್ಯದ ಪ್ರತೀಕವೆಂಬುದನ್ನು ಮರೆತು, ಕ್ರಮೇಣ ಅಹಂಕಾರ ಮಮಕಾರಗಳಿಗೆ ಬಲಿಯಾಗಿ, ತಾನೇ ಬ್ರಹ್ಮನೆಂಬ ಅವಿದ್ಯಾರೂಪವಾದ ಅಜ್ಞಾನದಲ್ಲಿ ಸಿಲುಕಿ, ಜನನ ಮರಣಗಳಿಗೆ ತುತ್ತಾಗುತ್ತಾ, ಅನೇಕ ಕಾಲ ಬಳಲುತ್ತಿರುವನು. ಪ್ರಕೃತಿ ರೂಪವೇ ಈ ಪಾಂಚಭೌತಿಕವಾದ ಶರೀರ. ಈ ಶರೀರವೇ ಚೈತನ್ಯದ ಪ್ರತೀಕವಾದ ಜೀವನ ವಾಸಸ್ಥಾನ. ಈ ಜೀವಾತ್ಮ ನಲ್ಲಿ ಪರಬ್ರಹ್ಮನೂ, ಚೇತನ ಸ್ವರೂಪನೂ, ಸೃಷ್ಟಿ ಸ್ಥಿತಿ ಲಯಗಳಿಗೆ ಕಾರ ಣನೂ ಆದ ಪರಮಾತ್ಮನು, ಅವನಿಗೆ (ಜೀವನಿಗೆ) ಅರಿವಿಲ್ಲದೆಯೇ ಸದಾ ನೆಲೆಸಿ, ಸದಾ ತನ್ನಂಶನಾದ ಜೀವನ ಉದ್ಧಾರಕ್ಕೆ ಪ್ರಯತ್ನ ಪಡುವನು. ಅಂದರೆ ಚೈತನ್ಯ ಸ್ವರೂಪನಾದ ಒಬ್ಬ ಪರಮಾತ್ಮನೇ ತನ್ನ ಲೀಲಾವಿನೋದ ಕ್ಕಾಗಿ ತನ್ನಲ್ಲಡಗಿದ್ದ ಶಕ್ತಿಯಿಂದ ಜೀವನನ್ನು ಕಲ್ಪಿಸಿ, ಅವನೊಳಗೆ ತಾನೂ ಗುಪ್ತವಾಗಿ ನೆಲೆಸಿ ಲಿಂಗನೆನಿಸಿದ ಆ ಪರಬ್ರಹ್ಮನು ಅಂಗನೆನಿಸಿದ ಜೀವನಿಂದ ಸೇವಾಕೈಂಕರ್ಯ ಯುಕ್ತವಾದ ನಾನಾ ವಿಧವಾದ ಸೇವೆಗಳನ್ನು ಸ್ವೀಕರಿಸು ತ್ತಿರುವನು.

ಹೀಗೆ ಚೈತನ್ಯದ ಪ್ರತೀಕವಾದ ಜೀವನು, ಮಾಯಾಸಂಬಂಧದಿಂದ, ಚೈತನ್ಯ ಸ್ವರೂಪನಾದ ಪರಮಾತ್ಮನನ್ನು, ಸಂಪೂರ್ಣವಾಗಿ ಮರೆತು, ಅಹಂಕಾರ ಮಮಕಾರಗಳಿಂದ ತಾನೇ ಸ್ವತಂತ್ರನೆಂದೂ, ಸರ್ವೇಶನೆಂದೂ, ಭ್ರಮಿಸಿ, ತನ್ನ ಜೀವನದ ಗುರಿಯನ್ನೇ ಮರೆತು, ಜನನ ಮರಣಕ್ಕೆ ತುತ್ತಾಗಿ, ನರಳುತ್ತಿರುವನು. ಇಂಥಾ ಜೀವನು, ಮತ್ತೆ ಶಿವೋಪಾಸನ ಕ್ರಮದಿಂದ, ನಿಜಜ್ಞಾನವನ್ನು ಪಡೆದು, ಆದರಿಂದ, ಶಿವನ ಸರ್ವಜ್ಞತ್ವಾದಿಗುಣಗಳನ್ನೂ ಮೈಗೂಡಿಸಿ ಕೊಂಡು, ಶಿವಸ್ವರೂಪನೇ ತಾನೆಂದು ಅರಿತು, ಆ ಪರಬ್ರಹ್ಮ ಚೈತನ್ಯನಲ್ಲಿ ಸಾಮರಸ್ಯವನ್ನು ಪಡೆಯುವಂತೆ ಮಾಡುವುದೇ ಈ ವೀರಶೈವ ಸಿದ್ಧಾಂತದ ಮುಖ್ಯಧ್ಯೇಯ ಮತ್ತು ರಹಸ್ಯ. ಈ ಸಿದ್ಧಾಂತವನ್ನು, ಶಿವಾ ದ್ವೈತ, ದ್ವೈತಾದ್ವೈತ ಎಂದು ನಾನಾ ಹೆಸರುಗಳಿಂದ ಕರೆಯುವರು.

ಇದರಲ್ಲಿ, ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲವೆಂಬ ಮೂರು ಬಗೆಯ ವಿಭಾಗಗಳಿರುವುವು.

ಎಲೈ ವಾಯುಸುತನೇ ಏಕಾಗ್ರಚಿತ್ತದಿಂದ ಕೇಳು—ಈ ಸಿದ್ಧಾಂತದ ಸಾರವೇನೆಂದರೆ,

ವಿ (ವೀ) ಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿಕಾ ।
ತಸ್ಯಾಂ ರಮಂತೇ ಯೇ ಶೈವಾಃ ವೀರಶೈವಾಸ್ತುತೇ ಮತಾಃ ॥

(ಸಿ. ಶಿ. 5–15)

ಎಂಬ ರೇಣುಕಾಗಸ್ತ್ಯ ಗೀತೋಕ್ತಿಯಂತೆಯೂ,

ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ
ವಿನ್ಯಸ್ಯ ತಲ್ಲೀನಮನಃಪ್ರಚಾರಃ ।
ಬಾಹ್ಯಕ್ರಿಯಾಸಂಕುಲನಿಃಸ್ಪೃಹಾತ್ಮಾ
ಸಂಪೂಜಯತ್ಯಂಗ ಸ ವೀರಶೈವಃ ॥ (ಸ್ಕಾಂದ–ಶಂಕರಸಂಹಿತೆ)

ಎಂಬ ಸ್ಕಾಂದಪುರಾಣೋಕ್ತಿಯಂತೆಯೂ, 'ವೀ' ಶಬ್ದಕ್ಕೆ ಲಿಂಗಾಂಗ ಸಾಮರಸ್ಯವನ್ನು ಬೋಧಿಸುವ ವಿದ್ಯೆಯೆಂದು ಭಾವ. 'ರ' ಶಬ್ದಕ್ಕೆ, ಯಾವಾತನು, ತನ್ನ ಹಸ್ತಪೀಠದಲ್ಲಿ, ಗುರುದತ್ತವಾದ ಇಷ್ಟಲಿಂಗವನ್ನು ಇಟ್ಟುಕೊಂಡು, ಆ ಲಿಂಗದಲ್ಲಿಯೇ ತನ್ನ ಮನಸ್ಸನ್ನು ನೆಲೆಗೊಳಿಸಿ, ಬಾಹ್ಯಕ್ರಿಯೆಗಳನ್ನೆಲ್ಲವನ್ನೂ ಆ ಲಿಂಗದಲ್ಲಿ ಅಡಗಿಸಿ, ಅಂದರೆ ಲಯಗೊಳಿಸಿ, ನಾ–ನೀನೆಂಬ ಭೇದವನ್ನಳಿದು, ಮೈಮರೆತು ಪೂಜೆಮಾಡುವನೆಂದು ಭಾವ. ಹೀಗೆ, ಶಿವನೇ ಲಿಂಗ, ಲಿಂಗವೇ ಆತ್ಮಪ್ರಗತಿಯ ಕುರುಹು. ಇಂಥಹ ಇಷ್ಟಲಿಂಗವೇ ಮಹಾಚೈತನ್ಯ, ಈ ಚೈತನ್ಯವೇ ವಿಶ್ವ. ಈ ಇಷ್ಟಲಿಂಗದ ಆರಾಧನೆಯ ಮುಖಾಂತರ ಅಂಗದ ಗುಣಗಳಳಿದು, ಆದರಿಂದಲೇ ಭೇದವಳಿದು, ಅಂಗನೇ ಸತಿ, ಲಿಂಗವೇ ಪತಿ ಎಂಬ ಭಾವವಳವಟ್ಟು, ದೇಹ–ಇಂದ್ರಿಯ–ಮನಸ್ಸು–ಪ್ರಾಣ ಇವೆಲ್ಲವೂ ಲಿಂಗತತ್ವವೆಂದೇ ಗ್ರಹಿಸಿ, ಎಲ್ಲಾ ಕ್ರಿಯೆಗಳನ್ನೂ, ಶಿವಾರ್ಪಣ ಬುದ್ಧಿಯಿಂದ ಆಚರಿಸುತ್ತಾ, ಅಮಿತವಾದ 'ಶಿವಾನಂದಯೋಗ'ದಲ್ಲಿ ನಿರತನಾಗಿ ಲಿಂಗಾಂಗ ಸಾಮರಸ್ಯಹೊಂದುವುದು. ಇದೇ ಮೋಕ್ಷ, ಇದೇ ಶಿವಸಾಯುಜ್ಯ. ಇದೇ 'ವೀರ-ಶೈವ'ದ ಮರ್ಮ ಎಂದು ವೀರೇಶನು ಸಂಗ್ರಹವಾಗಿ ಉಪದೇಶಿಸಿದನು.

ಲಿಂಗಾಧಾರಣೆ :

ನಂತರ ಶ್ರೀ ವೀರೇಶನೇ ದೀಕ್ಷಾಚಾರ್ಯನಾಗಿ, ಲಿಂಗಧಾರಣಕ್ಕೆ ಪೂರ್ವಭಾವಿಯಾಗಿ, ಆಚರಿಸಬೇಕಾದ ಪಂಚಕಲಶ ಸ್ಥಾಪನಾದಿ ಎಲ್ಲಾ ವಿಧ್ಯುಕ್ತ ಕ್ರಮಗಳನ್ನೂ, ಸೂಕ್ಷ್ಮ ರೀತಿಯಿಂದ ಮುಗಿಸಿ, ಶುಚಿರ್ಭೂತನಾಗಿ, ಭಸ್ಮ ರುದ್ರಾಕ್ಷ ಭೂಷಿತನಾಗಿ, ಏಕಾಗ್ರಚಿತ್ತದಿಂದ, ಅಂಜಲಿ ಬದ್ಧನಾಗಿ, ವೀರೇಶನ ಪಾದದ ಬಳಿ ಕುಳಿತಿದ್ದ ಹನುಮಂತನನ್ನು ಕೃಪಾ ದೃಷ್ಟಿಯಿಂದ ನೋಡಿ ಆಶೀರ್ವದಿಸಿದನು. ನಂತರ ಅವನ ಜ್ಞಾನ ಜ್ಯೋತಿಯನ್ನು ಆವರಿಸಿದ್ದ, ಕಾರ್ಮಿಕ ಮಾಯಾ ಆಣವವೆಂಬ ಮೂರು ಮಲಗಳನ್ನೂ ನೀಗಿಸಿ, ಅವುಗಳ ಸ್ಥಳದಲ್ಲಿ ಅಂದರೆ, ಸ್ಥೂಲ, ಸೂಕ್ಷ್ಮ, ಕಾರಣವೆಂಬ ಶರೀರ ಭಾಗಗಳಲ್ಲಿ, ಕ್ರಮವಾಗಿ, ಇಷ್ಟ ಪ್ರಾಣ ಭಾವ ಲಿಂಗಗಳನ್ನು ಸ್ಥಾಪಿಸಿ, ಅವನನ್ನು ಲಿಂಗ ಶರೀರಿಯಾಗಿ ಮಾಡಿದನು. ನಂತರ ತನ್ನ ಅಮೃತ ಹಸ್ತವನ್ನು ಹನುಮಂತನ ಮಸ್ತಕದ ಮೇಲೆ ಇರಿಸಿ, ಅವನ ಶಿರೋಭಾಗದ 'ಸಹಸ್ರಾರ' ಕಮಲದಲ್ಲಿ ಸುಪ್ತವಾಗಿದ್ದ, ಚೈತನ್ಯ ರೂಪವಾದ ಚಿತ್ಕಲೆಯನ್ನು, ಜಾಗ್ರತಗೊಳಿಸಿ, ತನ್ನ ಭಾವ, ಮನ, ದೃಷ್ಟಿಗಳಿಂದ ಹೊರ ತೆಗೆದು, ಆರುಹಿನ ಕುರುಹಾದ ಅದನ್ನು ಇಷ್ಟಲಿಂಗದಲ್ಲಿ ನೆಲೆ ಗೊಳಿಸಿ, ಆ ಲಿಂಗವನ್ನು ಅವನ ವಾಮ ಹಸ್ತದಲ್ಲಿ ಸ್ಥಾಪಿಸಿದನು. ನಂತರ ಎಲೈ ಮಾರುತಿಯೇ ! 'ಲೀಯತೇ ಗಮ್ಯತೇ ಯತ್ರ ಜಗದೇತತ್ ಚರಾಚರಂ । ತದೇವ ಪರಮಂ ಲಿಂಗಮಿತ್ಯಾಹುಸ್ತತ್ವದರ್ಶಿನಃ', ಎಂಬ ಆಗಮೋಕ್ತಿಯಂತೆಯೂ, ಊರ್ಧ್ವಾಯ ನಮಃ । ಊರ್ಧ್ವಲಿಂಗಾಯ ನಮಃ । ಎಂಬ ನಾರಾಯಣೋಪನಿಷದ್ವಾಕ್ಯದಂತೆಯೂ ಈ ಲಿಂಗವೇ ಪರಮೇಶ್ವರನ ಕುರುಹೆಂಬುದು ದೃಢವಾಗುವುದು. ಸತ್ಯಜ್ಞಾನ ಸಂಪನ್ನರಿಗೆ ಇಂಥಹ ಮಹತ್ತರವಾದ ಬಹಿರ್ಲಿಂಗಾರಾಧನೆಯೇ ಶ್ರೇಷ್ಠವಾದುದು. ಎಲೈ ವಾಯುಸುತನೇ! ಕೇಳು ವೀರಶೈವತತ್ವವನ್ನು ಸಾಧಿಸುವುದು ಅತಿ ಕಷ್ಟಕರವಾದ ಕೆಲಸ. ಸಿಡಿಲನ್ನಾದರೂ, ಹಿಡಿಯಬಹುದು, ಕಡುಕೋಪದಿಂದ ಘರ್ಜಿಸುವ ವ್ಯಾಘ್ರನನ್ನಾದರೂ ಹಿಡಿಯಬಹುದು, ಛಲವಾಂತ ಕಾಳಸರ್ಪನ ತಲೆಯ ಮಾಣಿಕ್ಯವನ್ನಾದರೂ ಹಿಡಿಯಬಹುದು, ಆದರೆ ಈ ವೀರಶೈವ ಸಿದ್ಧಾಂತ ಸಾಧನೆಯು ಅತಿ ಕಷ್ಟತರವಾದುದು. ಆದರೆ ಸಿದ್ಧಿ ಸಿದರೆ ಈ ಜನ್ಮದಲ್ಲಿಯೇ ಮುಕ್ತಿಪ್ರದ.

ಆದುದರಿಂದ ನೀನು ಏಕಾಗ್ರಚಿತ್ತದಿಂದ ಕೇಳು. ಮೊದಲಿಗೆ ಈ ತತ್ವದ ಅಂಗವಾದ ಅಷ್ಟಾವರಣಗಳ ಹಿರಿಮೆಯನ್ನು ಉಪದೇಶಿಸುವೆನು ಎಂದು ಹೇಳತೊಡಗಿದನು.

ಗುರು :

ಗುರುವೇ ಶಿವನು, ಶಿವನೇ ಗುರುವು. ಅವರಲ್ಲಿ ಅಭೇದ ಭಾವವಳವಡಬೇಕು. " ನಗುರೋರಧಿಕಂ " ಎಂಬ ಶ್ರುತಿವಾಕ್ಯದಂತೆ ಗುರುವಿಗಿಂತ ಅಧಿಕವಾದುದು ಯಾವುದೂ ಇಲ್ಲ. ಈ ಭವಸಾಗರವನ್ನು ದಾಂಟಲು, ಗುರುಚರಣವೆಂಬ ದೋಣಿಯೇ ಆಧಾರ. ಗುರುವಚನವೇ ವೇದ, ಗುರುಸನ್ನಿಧಿಯೇ ಸಕಲ ತೀರ್ಥಂಗಳು, ಗುರುವೇ ಇಹದ ಸೌಖ್ಯಕ್ಕೂ, ಪರದ ಪ್ರಾಪ್ತಿಗೂ ಕಾರಣನು. ಗುರುವೇ ಸಾಕ್ಷಾತ್ ಪರಬ್ರಹ್ಮ ಮತ್ತು ಸರ್ವಸ್ವ.

ಲಿಂಗ :

ಪರಬ್ರಹ್ಮ ಸದಾಶಿವನು, ಸತ್ವಗುಣ ಪ್ರಧಾನನಾಗಿ ಮಹಾವಿಷ್ಣುವೆನಿಸಿ, ಸಮಸ್ತ ಲೋಕಗಳನ್ನು ರಕ್ಷಿಸುವನು. ರಜೋಗುಣ ದೇಹದಿಂದ ಬ್ರಹ್ಮನೆನಿಸಿ ಸಮಸ್ತ ಲೋಕಗಳನ್ನು ಸೃಷ್ಟಿಸುವನು. ತಮೋಗುಣ ಶರೀರದಿಂದ, ರುದ್ರನೆನಿಸಿ ಸಮಸ್ತ ಲೋಕಗಳನ್ನೂ ಸಂಹರಿಸುವನು. ಆದರೂ ಅವನು ಈ ಮೂರು ಗುಣಗಳಿಗೂ ಅತೀತನು. ಜ್ಞಾನಸ್ವರೂಪನಾಗಿಯೂ ನಿರ್ಮಲನಾಗಿಯೂ ಇರುವನು. ಈ ಅಪ್ರಮೇಯನಾದ ಶಿವನೇ ತನ್ನ ಮೂರ್ತಿಸ್ವರೂಪ ಭೇದದಿಂದಲೇ, ಬ್ರಹ್ಮ, ವಿಷ್ಣು, ರುದ್ರ, ಮಹೇಶ್ವರ, ಸದಾಶಿವ ಎಂಬ ನಾಮಗಳಿಂದ ಕರೆಯಲ್ಪಡುವನು. ಇವನೇ ಚಿಜ್ಜ್ಯೋತಿ ಸ್ವರೂಪನು. ಈ ಇಂತಹ ಪರಬ್ರಹ್ಮ ವಿಶ್ವಸ್ವರೂಪಿ ಪರಶಿವನ ಪ್ರತೀಕವೇ ಈ ಲಿಂಗ. ಆದ್ದರಿಂದ ವಿಶ್ವದ ಸಂಕೇತವೇ ಈ ಲಿಂಗ. ಈ ಚರಾಚರಾತ್ಮಕವಾದ ಜಗತ್ತು, ಲಿಂಗದಿಂದಲೇ ಹುಟ್ಟಿ, ಲಿಂಗದಲ್ಲಿಯೇ ಪ್ರತಿಬಿಂಬಿಸಿ, ಲಿಂಗದಲ್ಲಿಯೇ ಲಯಿಸುವುದರಿಂದ, ಈ ಲಿಂಗಕ್ಕಿಂತಲೂ ಶ್ರೇಷ್ಠವಾದ ತತ್ವವು ಬೇರೆ ಯಾವುದೂ ಇಲ್ಲ. ಈ ಲಿಂಗವು ಸಚ್ಚಿದಾನಂದರೂಪವೂ, ದೋಷರಹಿತವೂ, ನಾಶರಹಿತವೂ, ಮಾಯಾರಹಿತವೂ, ತ್ರಿಗುಣಾತೀತವೂ ಸಾಕ್ಷಾತ್ ಶಿವಸ್ವರೂಪವೂ ವಿಶ್ವದ ಪ್ರತೀಕವೂ ಆಗಿರುವುದು.

ವೇದಾಗಮಗಳು ಹೇಳಿರುವಂತೆ, ಈ ಲಿಂಗವು ಚೈತನ್ಯರೂಪದಿಂದ ಸಕಲ ಪ್ರಾಣಿಗಳ ಮೂಲಾಧಾರ ಚಕ್ರದಲ್ಲಿಯೂ, ಹೃದಯಕಮಲದಲ್ಲಿಯೂ ಭ್ರೂಮಧ್ಯದಲ್ಲಿಯೂ ಸದಾ ಪ್ರಕಾಶಿಸುತ್ತಿರುವುದು. ಅಲ್ಲದೆ ಪ್ರಕೃತಿರೂಪಾದ ಶಕ್ತಿಯೇ ಪೀಠವೆನಿಸುವುದು. ಪರಶಿವನೇ ಲಿಂಗವೆನಿಸುವನು. ಈ ಶಿವ-ಶಕ್ತಿಯರ ಅವಿನಾಭಾವವೇ ಲಿಂಗವು. ಈ ಜಗತ್ತೆಲ್ಲಾ ಲಿಂಗಮಯವಾಗಿದೆ. 'ಅಮೃತಸ್ಯ ದೇವಧಾರಣೋ ಭೂಯಾಸಂ । ಯೋ ರುದ್ರೋ ವಿಶ್ವಾ ಭುವನಾ ವಿವೇಶ' ಎಂಬ ಇಂತಹ ಶ್ರುತಿವಾಕ್ಯಗಳು, ಶಿವನನ್ನು ಸರ್ವಾಂತರ್ಯಾಮಿ, ಪಂಚಭೂತಾತ್ಮಕನೆಂದು ಸಾರುತ್ತಿವೆ. ಈ ಪವಿತ್ರ ಲಿಂಗವನ್ನು ಹರಿ-ಬ್ರಹ್ಮ-ಇಂದ್ರರೇ ಮೊದಲಾದ ಸಕಲ ದೇವತೆಗಳೂ, ಗೌತಮಾದಿ ಮುನಿ ಶ್ರೇಷ್ಠರೂ, ಸದಾ ತಮ್ಮ ತಮ್ಮ ಉತ್ತಮಾಂಗಗಳಲ್ಲಿ ಧರಿಸಿ ಆರಾಧಿಸುತ್ತಿರುವರು. ಅಷ್ಟೇ ಅಲ್ಲದೆ, ಲಕ್ಷ್ಮೀ, ಸರಸ್ವತಿಯೇ ಮೊದಲಾದ ದೇವಿಯರೂ ಸದಾ ಲಿಂಗಗಳನ್ನು ಧರಿಸಿ ಆರಾಧಿಸುತ್ತಿರುವರು. ಈ ಲಿಂಗವೇ, ಇಷ್ಟ, ಪ್ರಾಣ, ಭಾವವೆಂಬ ಮೂರು ವಿಧವಾಗಿ ಲಿಂಗಾಂಗಿಯ ಶರೀರದಲ್ಲಿರುವುದು. ಆದುದರಿಂದ ಈ ಲಿಂಗವನ್ನು ಸದಾ ಉತ್ತಮಾಂಗದಲ್ಲಿ ಧರಿಸಿ, ಆರಾಧಿಸುತ್ತಿರಬೇಕು. ಯಾವ ಕಾರಣದಿಂದಲೇ ಆಗಲಿ, ಈ ಲಿಂಗವನ್ನು ಕ್ಷಣಕಾಲವಾದರೂ ಅಗಲಿರಬಾರದು. ಈ ಇಷ್ಟಲಿಂಗವೇನಾದರೂ, ಕಳೆದುಹೋದಪಕ್ಷದಲ್ಲಿ, ಲಿಂಗರಹಿತವಾದ ಶರೀರವನ್ನು ತ್ಯಜಿಸಬೇಕೆಂದು ವೇದಪ್ರಾಮಾಣ್ಯವಿರುವುದು. ಆದುದರಿಂದ, ಹನುಮಂತನೇ ಈ ಲಿಂಗವು ಪ್ರಾಣಕ್ಕಿಂತ ಮುಖ್ಯವಾದುದು.

ಜಂಗಮ :

ಶಿವಾಗಮಗಳು ಸಾರುವಂತೆ, ಲಿಂಗಮುಖವೇ ಜಂಗಮವು. ಜಂಗಮನೇ ಶಿವನು, ಇವನೇ ಲಿಂಗರೂಪಿಯು. ಜಂಗಮನು, ನಿರ್ಗುಣನು ಹಾಗೂ, ಸುಜ್ಞಾನ ಪರಿಪೂರ್ಣನು, ನಿತ್ಯಾನಂದನು ಸಾಕಾರನು, ಜ್ಞಾನಗೋಚರನು. ಆದುದರಿಂದ, ಗುರು-ಲಿಂಗ-ಜಂಗಮರಲ್ಲಿ ಭೇದವೆಣಿಸುವುದು ಮಹಾ ಪಾಪ. ಜಂಗಮಾರಾಧನೆಯೇ ಶಿವಾರಾಧನೆ ಮತ್ತು ಗುರುವಿನ ಆರಾಧನೆ. ಆದುದರಿಂದ, ಜಂಗಮದರ್ಶನ, ಸೇವೆ ಇವುಗಳೆಲ್ಲಾ ಲಿಂಗರೂಪಿ ಶಿವನಿಗೇ ಅರ್ಪಿತವಾಗುವುವು. 'ಜಂಗಮ' ಎಂದರೆ 'ಶಿವಜ್ಞಾನಸಂಪನ್ನ' ಎಂದರ್ಥ. ಇವನ ಸೇವೆಯಿಂದ ಪೂಜಕನಿಗೂ ಶಿವಜ್ಞಾನ ಸಂಭವಿಸುತ್ತದೆ.

ಭಸ್ಮ :

ಶಂಕರನ ಪಂಚಮುಖಗಳಿಂದವತರಿಸಿದ, ಶೀಲ, ನಂದಾ, ಭದ್ರೆ ಸುರಭಿ, ಸುಶೀಲಗಳೆಂಬ ಪಂಚ ಗೋವುಗಳ ಗೋಮಯದಿಂದ ಶಾಸ್ತ್ರೋಕ್ತವಾಗಿ ತಯಾರಿಸಿದ ಭಸ್ಮವು ಬಹು ಪವಿತ್ರವಾದುದು. ಇದು ಶಿವನ ಶರೀರ ಕಾಂತಿಯ ಪ್ರತೀಕವಾದುದು. ಇದು ವೈರಾಗ್ಯದ ಕುರುಹೂ ಅಹುದು. ಇದನ್ನು ಶರೀರದ ಉತ್ತಮಾಂಗಗಳಲ್ಲಿ ಸದಾ ಧರಿಸಬೇಕು. ಇದನ್ನು ಧರಿಸುವುದರಿಂದ ಭವವು ಪರಿಹಾರವಾಗುವುದು. ಇದನ್ನು ಧರಿಸಿದವರನ್ನು ಭೂತ–ಪ್ರೇತ–ಪಿಶಾಚಗಳಾವುವೂ ಸಮೀಪಿಸಲಾರವು. ಇದು ಶೀತರೋಗಪರಿಹಾರಕ ಮತ್ತು ಸರ್ವವಿಧವಾದ ಆಪತ್ತುಗಳನ್ನೂ ನಿವಾರಿಸುವುದು. ಕೊನೆಗೆ ಶಿವಪದವನ್ನೂ ನೀಡುವುದು. ಆದುದರಿಂದಲೇ ಸಕಲ ದೇವತೆಗಳೂ ಋಷಿಶ್ರೇಷ್ಠರೂ ಭಸ್ಮವನ್ನು ಧರಿಸಿ ಪುನೀತರಾಗಿರುವರು.

ರುದ್ರಾಕ್ಷ :

ಪರಶಿವನು ತ್ರಿಪುರಸಂಹಾರ ಕಾಲದಲ್ಲಿ, ತ್ರಿಪುರಗಳ ಸಮಾವೇಶವಾಗುವ ಸಮಯವನ್ನೇ ದೃಷ್ಟಿಸಿ ನೋಡುತ್ತಿದ್ದಾಗ, ಅವನ ನೇತ್ರ ಕಮಲಗಳಿಂದ ಸಣ್ಣ ಹನಿಗಳು ಉದುರಿದವು. ಆ ಹನಿಗಳೇ ರುದ್ರಾಕ್ಷಗಳೆಂದು ಪ್ರಸಿದ್ಧಿ ಪಡೆದವು. ಇವುಗಳನ್ನು ಶರೀರದಲ್ಲಿ ಧಾರಣೆ ಮಾಡುವುದರಿಂದ ಸಕಲ ಪಾಪಗಳೂ ಪರಿಹಾರವಾಗುವುವು. ಇವು ಶರೀರ ಕಾಂತಿಯನ್ನೂ ಹೆಚ್ಚಿಸುವುವು. ಇದರ ಬಣ್ಣವು ಸುವರ್ಣದ ಬಣ್ಣವನ್ನು ಹೋಲುವುದು. ಇದು ನಾನಾ ಬಗೆಯ ರೋಗಗಳನ್ನೂ ಪರಿಹರಿಸುವುದು. ಇದನ್ನು ಸದಾ ಶರೀರದಲ್ಲಿ ಧರಿಸುವುದರಿಂದ ಕೊನೆಗೆ ರುದ್ರ ಲೋಕ ಪ್ರಾಪ್ತಿಯಾಗುವುದು. ಆದುದರಿಂದಲೇ ಸಕಲ ದೇವತೆಗಳೂ ಯೋಗೀಶ್ವರರೂ ಇದನ್ನು ಸದಾ ಧರಿಸುವರು.

ಮಂತ್ರ :

ಎಲೈ ವಾಯುಪುತ್ರನೇ ! ಸಪ್ತಕೋಟಿ ಮಂತ್ರಗಳಲ್ಲೆಲ್ಲಾ ಶಿವಪಂಚಾಕ್ಷರೀ ಮಂತ್ರವೇ ಶ್ರೇಷ್ಠವಾದುದು.

ಸಪ್ತಕೋಟಿಷು ಮಂತ್ರೇಷು ಮಂತ್ರಃ ಪಂಚಾಕ್ಷರೋ ಮಹಾನ್।
ಬ್ರಹ್ಮವಿಷ್ಣ್ವಾದಿದೇವೇಷು ಯಥಾಶಂಭುರ್ಮಹೇಶ್ವರಃ ॥

ಬ್ರಹ್ಮ ವಿಷ್ಣ್ವಾದಿ ದೇವತೆಗಳಲ್ಲಿ ಶಂಭುವು ಹೇಗೆ ಅಗ್ರಗಣ್ಯನೋ ಹಾಗೆಯೇ ಈ ಪಂಚಾಕ್ಷರೀ ಮಂತ್ರವು ಇತರ ಮಂತ್ರಗಳಲ್ಲೆಲ್ಲಾ ಅಗ್ರಗಣ್ಯ ವಾದುದು. ಈ ಜಗತ್ತೆಲ್ಲಾ ಶಿವನ ಅಧೀನ. ಶಿವನಾದರೋ ಈ ಪವಿತ್ರ ಮಂತ್ರದ ಅಧೀನ. ಈ ಮಂತ್ರವಾದರೋ ಗುರುವಿನ ಅಧೀನ. ಆದುದರಿಂದ ಈ ಮಹಾಮಂತ್ರವನ್ನು ಸದ್ಗುರುವಿನ ಕರುಣೆಯಿಂದಲೇ ಪಡೆಯಬೇಕು.

ಓಂಕಾರದಿಂದ, ನಿಷ್ಕಲ ಶಿವನೂ, ಪಂಚಾಕ್ಷರ ಮಂತ್ರದಿಂದ ಪಂಚ ಬ್ರಹ್ಮಶಿವನೂ, ಬೋಧ್ಯ ರಾಗಿರುವರು. "ಓಂ ನಮಃ ಶಿವಾಯ" ಎಂಬ ಷಡಕ್ಷರೀ ಮಂತ್ರದಲ್ಲಿ ನಿಷ್ಕಲ ಶಿವನ ಶುದ್ಧ ಜ್ಞಾನರೂಪವೂ, ಸಕಲಶಿವನ ಪ್ರಪಂಚ ಸ್ವರೂಪವೂ, ಅಡಗಿರುವುದರಿಂದ, ಜಪಕ್ಕೆ ಷಡಕ್ಷರೀ ಮಂತ್ರವೇ ಶ್ರೇಷ್ಠವಾದುದು. ಓಂಕಾರಸಹಿತವಾದ ಮಂತ್ರವೇ ಉಚ್ಚಾರಣೆಗೆ ವಿಹಿತ ವಾದುದು. ಈ ಮಂತ್ರವನ್ನು ಜಪಿಸಿ ಸಕಲದೇವತೆಗಳೂ, ಋಷಿಗಳೂ, ಸಿದ್ಧ ಸಾಧಕರೂ, ಯೋಗಿಶ್ರೇಷ್ಠರೂ ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆದಿರು ವರು. ಒಮ್ಮೆ ಭಕ್ತಿಯಿಂದ ಈ ಮಹಾಮಂತ್ರವನ್ನು ಜಪಿಸಿದರೂ ಸಕಲ ಪಾಪಗಳೂ ಪರಿಹಾರವಾಗುತ್ತವೆ. ಈ ಮಂತ್ರವನ್ನು, ಶಿವದೇವಾಲಯ ದಲ್ಲಿಯೂ, ನದೀ ತಟಾಕದಲ್ಲಿಯೂ, ಗುರುವಿನ ಸನ್ನಿಧಿಯಲ್ಲಿಯೂ, ಬಿಲ್ವ ವೃಕ್ಷದ ಬುಡದಲ್ಲಿಯೂ, ಭಕ್ತಿಯಿಂದ ಜಪಿಸಿದರೆ ಶಿವಸಾಯುಜ್ಯ ಲಭಿಸುವುದು.

ಶಿವಷಡಕ್ಷರೀ ಮಂತ್ರ :

(ಓಂ–ನಂ–ಮಂ–ಶಿಂ–ವಾಂ–ಯಂ)

(ಓಂನಮಶ್ಶಿವಾಯ)

ಓಂ—ಓಂಕಾರಬಿಂದುಸಂಯುಕ್ತಂ ನಿತ್ಯಂ ಧ್ಯಾಯಂತಿ ಯೋಗಿನಃ ।
ಕಾಮದಂ ಮೋಕ್ಷದಂ ತಸ್ಮೈ ಓಂಕಾರಾಯ ನಮೋ ನಮಃ ॥

ನಂ—ನಮಂತಿ ಋಷಯೋ ದೇವಾ ನಮಂತ್ಯಪ್ಸರಸಾಂ ಗಣಾಃ ।
ನರಾ ನಮಂತಿ ದೇವೇಶಂ ನಕಾರಾಯ ನಮೋ ನಮಃ ॥

ಮಂ—ಮಹಾದೇವಂ ಮಹಾತ್ಮಾನಂ ಮಹಾಧ್ಯಾನಪರಾಯಣಂ ।
ಮಹಾಪಾಪಹರಂ ವಂದೇ ಮಕಾರಾಯ ನಮೋ ನಮಃ ॥

ಶಿಂ—ಶಿವಂ ಶಾಂತಂ ಜಗನ್ನಾಥಂ ಲೋಕಾನುಗ್ರಹಕಾರಕಂ(ಣಂ) ।
ಶಿವಮೇಕಂ ಪರಂ ವಂದೇ ಶಿಕಾರಾಯ ನಮೋ ನಮಃ ॥

ವಾಂ—ವಾಹನಂ ವೃಷಭೋ ಯಸ್ಯ ವಾಸುಕಿಃ ಕಂಠಭೂಷಣಂ ।
ವಾಮೇ ಶಕ್ತಿಧರಂ ವಂದೇ ವಾಕಾರಾಯ ನಮೋ ನಮಃ ॥

ಯಂ—ಯತ್ರ ಕುತ್ರ ಸ್ಥಿತಂ ದೇವಂ ಸರ್ವವ್ಯಾಪಿನಮೀಶ್ವರಂ ।
ಯಲ್ಲಿಂಗಂ ಪೂಜಯೇನ್ನಿತ್ಯಂ ಯಕಾರಾಯ ನಮೋ ನಮಃ ॥

ಷಡಕ್ಷರಮಿದಂ ಸ್ತೋತ್ರಂ ಯಃ ಪಠೇಚ್ಛಿವಸನ್ನಿಧೌ ।
ಶಿವಲೋಕಮವಾಪ್ನೋತಿ ಶಿವೇನ ಸಹ ಮೋದತೇ ॥

ಯತ್ಕೃತ್ಯಂ ಯನ್ನಕೃತ್ಯಂ ಯದಕೃತ್ಯಂ ಕೃತ್ಯವತ್ತದಾಚರಿತಂ ।
ಉಭಯೋಃ ಪ್ರಾಯಶ್ಚಿತ್ತಂ ಶಿವನಾಮಾಕ್ಷರದ್ವಯೋಚ್ಚರಿತಮ್ ॥

ಶಿವ ಶಿವೇತಿ ಶಿವೇತಿ ಶಿವೇತಿ ವಾ ।
ಭವ ಭವೇತಿ ಭವೇತಿ ಭವೇತಿ ವಾ ॥
ಹರ ಹರೇತಿ ಹರೇತಿ ಹರೇತಿ ವಾ ।
ಭಜ ಮನಃ ಶಿವಮೇವ ನಿರಂತರಮ್ ॥

ಪಾದೋದಕ :

ಇದು ಗುರು ಕರುಣಾಮೃತ ರೂಪದಿಂದ ಗುರುವಿನ ಪಾದಕಮಲಗಳಿಂದ ದೊರೆಯುವುದು. ಇದು ಜ್ಞಾನಾಮೃತವೂ ಹೌದು. ಇದನ್ನು ಭಕ್ತಿಯಿಂದ ಸೇವಿಸುವುದರಿಂದ ಅಜ್ಞಾನವಳಿದು ಸುಜ್ಞಾನವಂಕುರಿಸಿ, ಪರಮವಿರಕ್ತಿ ಲಭಿಸಿ, ಮಾಯಾಪಾಶ ಹರಿದು ಕೊನೆಗೆ ಕೈವಲ್ಯಪದ ಪ್ರಾಪ್ತಿಯಾಗುಗುವುದು. ಗುರು–ಶಿಷ್ಯರ ಅಭೇದದ ಕುರುಹೇ ಈ ಪಾದೋದಕ. ಆದ್ದರಿಂದ ಇದು ಶಿವ–ಜೀವರ ಅಭೇದದ ದ್ಯೋತಕವೂ ಹೌದು.

ಪ್ರಸಾದ :—

ಗುರುಲಿಂಗ ಜಂಗಮರಿಗೆ ನಿವೇದಿಸಿದ ಪದಾರ್ಥವೇ ಪ್ರಸಾದವೆನಿಸುವುದು. ಇದನ್ನು ಸೇವಿಸುವುದರಿಂದ ಪ್ರಸಾದಕಾಯವುಂಟಾಗುವುದು. ಇಂಥಾ ಪ್ರಸಾದಕಾಯ ಪಡೆದವನಿಗೆ ಯಾವ ರೋಗಭಯವಾಗಲಿ, ಮರಣಭಯವಾಗಲೀ ಇರುವುದಿಲ್ಲ. ಪ್ರಸಾದ ತತ್ತ್ವದಾಚರಣೆಯಿಂದ ನಾನು–ನನ್ನದು ಎಂಬ ಭಾವವಳಿದು, ಸಕಲವೂ ಶಿವ ಮತ್ತು ಶಿವನದೆಂಬ ಪವಿತ್ರ ಭಾವವೇರ್ಪಡುವುದು. ಕೊನೆಗೆ ಶಿವಸಾನ್ನಿಧ್ಯಪ್ರಾಪ್ತಿಯಾಗುವುದು. ಇಂಥಾ

ಪ್ರಸಾದನ್ನಲ್ಲದೆ ಬೇರೆ ಯಾವುದನ್ನೂ ಲಿಂಗಾಂಗಿಯಾದವನು ಸೇವಿಸಬಾರದು. ವಾಯುಪುತ್ರಾ, ಇನ್ನು ಪಂಚಾಚಾರಗಳನ್ನು ವಿವರಿಸುವೆನು ಕೇಳು.

ಲಿಂಗಾಚಾರ :

ಶ್ರುತಿಪ್ರಮಾಣವಾಕ್ಯದಂತೆ, ಲಿಂಗವೇ ಪತಿ, ಅಂಗನೇ (ಜೀವನೇ) ಸತಿ. ಸತಿಯಾದವಳು, ಸದಾ ಪತಿಪರಾಯಣೆಯಾಗಿ ಹೇಗೆ ನಿತ್ಯಸುಖ ಪಡೆವಳೋ, ಹಾಗೆಯೇ ಸತಿ ಎಂದೆನಿಸಿದ ಜೀವನು (ಅಂಗ) ಸದಾ ತನ್ನ ಪತಿಯಾದ ಲಿಂಗವನ್ನೇ ಆರಾಧಿಸುತ್ತಾ ಬೇರೆ ಯಾವುದಕ್ಕೂ ಮನಸ್ಸನ್ನು ಹರಿಯಕೊಡಬಾರದು. ಹೀಗೆ ತನು-ಮನ (ಅಂಗ-ಲಿಂಗ) ಗಳ ಏಕತ್ವವನ್ನು ಸಾಧಿಸುತ್ತಾ ಸದಾಲಿಂಗದೇವನ ಆರಾಧನೆ-ಧ್ಯಾನಗಳಲ್ಲಿ ಮನವನ್ನು ನಿಲ್ಲಿಸುವುದೇ ಲಿಂಗಾಚಾರವೆನಿಸುವುದು.

ಸದಾಚಾರ :

ಲಿಂಗಾಂಗಿಯಾದವನು ಸದಾ, ಸದಾಚಾರಸಂಪನ್ನನಾಗಿ, ತ್ರಿಕರಣ ಶುದ್ಧಿಯಿಂದ, ಗುರು ಲಿಂಗ ಜಂಗಮ ಸೇವೆ, ಅತಿಥಿ-ಅಭ್ಯಾಗತರ ಸೇವೆಯಲ್ಲಿ ನಿರತನಾಗಿ, ದುರಾಲೋಚನೆ, ದುಷ್ಕೃತ್ಯಗಳಾಚರಣೆಗಳನ್ನು ತ್ಯಜಿಸಿ, ಅಹಿಂಸಾತತ್ವವನ್ನು ಪಾಲಿಸುತ್ತಾ ಪರರ ಕಷ್ಟಗಳನ್ನು ತನ್ನವೆಂದು ಭಾವಿಸಿ, ಕೈಲಾದ ನೆರವುನೀಡಿ ಸಕಲರಿಗೂ ಹಿತವನ್ನೇ ಬಯಸುತ್ತಾ ಅಸತ್ಯವನ್ನಾಡದೆ, ಪರದ್ರವ್ಯ ಪರಸತಿಯರಿಗೆ ಆಶೆ ಮಾಡದೆ ಜೀವನ ನಡೆಸುವುದೇ ಸದಾಚಾರ.

ಶಿವಾಚಾರ :

ಸದಾ ಸತ್ಯಕಾಯಕವನ್ನಾಚರಿಸುತ್ತಾ, ಎಲ್ಲರಲ್ಲಿಯೂ ಸಮಭಾವನೆ ಹೊಂದಿ ಎಲ್ಲರೂ ಶಿವಸ್ವರೂಪಿಗಳೆಂಬ ಭಾವ ಹೊಂದಿ, ಎಲ್ಲರಲ್ಲಿಯೂ ಸಮಭಾವದಿಂದ ನಡೆಯುತ್ತಿರುವುದೇ ಶಿವಾಚಾರ.

ಗಣಾಚಾರ :

ಸದಾ ನಿಷ್ಠೆಯಿಂದ ಲಿಂಗಾರಾಧನೆ ನಡೆಸುತ್ತಾ, ಗುರುನಿಂದೆ, ಜಂಗಮನಿಂದೆ, ಶಿವನಿಂದೆಗಳನ್ನು ಯಾವಕಾರಣದಿಂದಲೂ ಸೈರಿಸದೆ, ತನ್ನ ಶಿವಧರ್ಮದ ಏಳಿಗೆ ಹಾಗೂ ಪ್ರಚಾರಕಾರ್ಯಗಳಲ್ಲಿ ತನು ಮನ ಧನಗಳನ್ನು ವಿನಿಯೋಗಿಸುತ್ತಾ-ಕೀರ್ತಿ ಗೌರವಗಳನ್ನು ಪಡೆದು ನಡೆಯುವುದೇ ಗಣಾಚಾರ.



ಶ್ರೀ ವೀರೇಶನು ಹನುಮಂತನಿಗೆ ಲಿಂಗದೀಕ್ಷೆನೀಡಿ
ವೀರಶೈವಸಿದ್ಧಾಂತವನ್ನುಪದೇಶಿಸುತ್ತಿರುವುದು

ಭೃತ್ಯಾಚಾರ :

ತ್ರಿಕರಣಶುದ್ಧಿಯಿಂದ, ತನಗಿಂತಲೂ ಕಿರಿಯುವರೂ, ಶಿವಭಕ್ತರಿಗಿಂತ ಹಿರಿಯುವರೂ ಯಾರೂ ಇಲ್ಲವೆಂಬ ಭಾವನೆಯಿಂದ ತನು ಮನ ಧನಗಳನ್ನು ಶಿವಾರ್ಪಣಭಾವದಿಂದ ಅರ್ಪಿಸಿ, ಗುರುಹಿರಿಯರನ್ನು ಸೇವಿಸುತ್ತಿರುವುದೇ ಭೃತ್ಯಾಚಾರ.

ಇನ್ನು ಷಟ್‌ಸ್ಥಲ ಸಿದ್ಧಾಂತವನ್ನು ಉಪದೇಶಿಸುವೆನೆಂದು ಹೇಳಿ, ಮುಂದೆ ಷಟ್‌ಸ್ಥಲಸಿದ್ಧಾಂತವನ್ನು ಹೀಗೆ ಉಪದೇಶ ಮಾಡಿದನು.

ಷಟ್‌ಸ್ಥಲಸಿದ್ಧಾಂತ ನಿರೂಪಣೆ:

ಈ ಸಿದ್ಧಾಂತದಲ್ಲಿ, ಪರಬ್ರಹ್ಮಶಿವನನ್ನು ಸ್ಥಲವೆಂದು ಕರೆಯಲಾಗಿದೆ. ಪರಾತ್ಪರವೆನಿಪ್ಪ ಶಿವತತ್ವವು, ಚರಾಚರದ ಸೃಷ್ಟಿ – ಸ್ಥಿತಿ – ಲಯಗಳಿಗೆ ಸ್ಥಾನವಾಗಿ, ಲಿಂಗವೆನಿಸಿದೆ. ಅದು ಮಹತ್‌ತತ್ವದಿಂದ ಕೂಡಿರುವುದರಿಂದ ಮಹಾಲಿಂಗವಾಯಿತು. ಅದರಿಂದ ಲಿಂಗಷಟ್ಕಗಳು ಜನಿಸಿದವು. ಅವು ಆಚಾರಾದಿಯಾಗಿ ಪ್ರಾಣಸ್ವರೂಪವಾಗಿರುವುವು. ಅವನ್ನೇ ಪಂಡಿತರು **ಲಿಂಗಷಟ್‌ಸ್ಥಲಗಳೆಂದು** ಕರೆಯುವರು. ಅಂಗವೆನಿಸಿದ ಭಕ್ತಾದಿ ಐಕ್ಯದವರೆಗಿನ ಆರು ಸ್ಥಲಗಳು **ಅಂಗಷಟ್‌ಸ್ಥಲಗಳೆನಿಸುವುವು.** ಈ ಲಿಂಗಸ್ಥಲಗಳ ವೃತ್ತಿ ವಿಧಾನವನ್ನು ವಿವರಿಸುವೆನು ಕೇಳು—ಸದಾಚಾರನಿರತನಾಗಿ, ಶಿವಭಕ್ತಿಯಿಂದೊಡಗೂಡಿ, ಗುರುಲಿಂಗ ಜಂಗಮದಲ್ಲಿ ಭೇದವೆಣಿಸದೆ ಅವರಲ್ಲಿ ಅಭೇದ ಭಾವದಿಂದ ನಡೆಯುವವನು ಭಕ್ತನೆನಿಸುವನು (ಭಕ್ತಸ್ಥಲ). ಹೀಗೆ ಭಕ್ತನೆನಿಸಿದವನು, ಪರಧನ ಪರಸ್ತ್ರೀಗಳ ಆಶಾರಹಿತನಾಗಿ ಸದ್ಭಾವದಿಂದ, ಲಿಂಗನಿಷ್ಠೆಯನ್ನು ಬೆಳೆಸಿಕೊಂಡವನಾಗಿ ಮಹೇಶನೆನಿಸುವನು (ಮಾಹೇಶಸ್ಥಲ). ಹೀಗೆ ಮಹೇಶನೆನಿಸಿದವನು, ಶಿವಲಿಂಗಕ್ಕೆ ಅರ್ಪಿಸಿದ ಪ್ರಸಾದದ ಹೊರತು ಮತ್ತೆ ಯಾವುದನ್ನೂ ಸ್ವೀಕರಿಸದೆ ಸದಾ ಲಿಂಗಭರಿತನಾಗಿ ಪ್ರಸಾದಕಾಯದಿಂದಿರುವವನಾಗಿ ಪ್ರಸಾದಿಯೆನಿಸುವನು (ಪ್ರಸಾದಿಸ್ಥಲ). ಇಂಥಾ ಪ್ರಸಾದಿಯು, ತನ್ನ ಕಾಯಗುಣಗಳನ್ನೆಲ್ಲಾ ಲಿಂಗದಲ್ಲಿ ಅಡಗಿಸಿ, ಲಿಂಗವೇ ಪ್ರಾಣವಾಗಿ, ತನ್ನ ಸಕಲ ವ್ಯಾಪಾರಗಳನ್ನೂ ಲಿಂಗಾರ್ಪಣಭಾವದಿಂದ ಅರ್ಪಿಸುತ್ತಾ ಸುಖಾಸುಖಗಳ ಪರಿವೆಯೇ ಇಲ್ಲದೆ ಇರುವವನಾಗಿ ಪ್ರಾಣಲಿಂಗಿಎನಿಸುವನು (ಪ್ರಾಣಲಿಂಗಿಸ್ಥಲ). ಇಂಥಾ ಪ್ರಾಣಲಿಂಗಿಯು, ಅಂಗಸತಿ–ಲಿಂಗಪತಿ

(ಅಥವಾ ಅಂಗ ಸ್ವರೂಪನಾದ ತಾನು ಸತಿ, ಪರಬ್ರಹ್ಮಸ್ವರೂಪವಾದ ಲಿಂಗವೇ ಪತಿ) ಎಂಬ ಸತೀ-ಪತಿ ಭಾವದಿಂದ ಪ್ರಪಂಚದ ಎಲ್ಲಾ ಸುಖದುಃಖಗಳನ್ನೂ ಶಿವಾರ್ಪಣಭಾವದಿಂದ ಅನುಭವಿಸುವವನಾಗಿ ಶರಣನೆನಿಸುವನು (ಶರಣಸ್ಥಲ). ಇಂಥಾ ಶರಣನು ನಾನು-ನೀನೆಂಬ ಭಾವವಳಿದು, ಎಲ್ಲಾ ಭ್ರಾಂತಿಗಳೂ ಅಳಿದು, ನಿರ್ವಾಣಭಾವವೇರ್ಪಟ್ಟು, ಜೀವಾತ್ಮನಾದ ತಾನು, ಪರಮಾತ್ಮನಾದ ಪರಶಿವನಲ್ಲಿ, ನೀರು ನೀರಿನಲ್ಲಿ ಬೆರೆತಂತೆ, ಗಾಳಿ ಗಾಳಿಯಲ್ಲಿ ಬೆರೆತಂತೆ, ಅಗ್ನಿ ಅಗ್ನಿಯಲ್ಲಿ ಬೆರೆತಂತೆ ಅದ್ವೈತಾವಸ್ಥೆಯಿಂದ ಪ್ರಕಾಶಿಸುವವನಾಗಿ ಐಕ್ಯನೆನಿಸುವನು (ಐಕ್ಯಸ್ಥಲ). ಈ ಭಕ್ತಾದಿ ಷಟ್ಕಗಳು, ಆಚಾರಾದಿ ಲಿಂಗಷಟ್ಕದಲ್ಲಿ ಒಂದರೊಳಗೊಂದು ಬೆರೆತುಕೊಂಡಿರುವುವು.

ಹೇಗೆಂದರೆ, ಭಕ್ತಸ್ಥಲವು ಆಚಾರಲಿಂಗದಲ್ಲಿ; ಮಹೇಶಸ್ಥಲವು ಗುರುಲಿಂಗದಲ್ಲಿ; ಪ್ರಸಾದಿಸ್ಥಲವು ಶಿವಲಿಂಗದಲ್ಲಿ; ಪ್ರಾಣಲಿಂಗಿಸ್ಥಲವು ಜಂಗಮಲಿಂಗದಲ್ಲಿ; ಶರಣಸ್ಥಲವು ಪ್ರಸಾದಲಿಂಗದಲ್ಲಿ ಮತ್ತು ಐಕ್ಯಸ್ಥಲವು ಮಹಾಲಿಂಗದಲ್ಲಿ. ಈ ವಿಧದ ಐಕ್ಯಪ್ರಾಪ್ತಿಯೇ ಮುಕ್ತಿ, ಶಿವಜೀವೈಕ್ಯಸಿದ್ಧಿ, ಶಿವಸಾಮರಸ್ಯಪ್ರಾಪ್ತಿ ಇತ್ಯಾದಿ ಎನಿಸುತ್ತದೆ. ಈ ತತ್ತ್ವದ ಅರಿವಿನಿಂದ ಕೂಡಿದ ಅನುಷ್ಠಾನವೇ ಭುಕ್ತಿಮುಕ್ತಿಗೆ ಬೀಜ. ಇದು ಹರಿ–ವಿಧಿಗಳಿಗೂ ನಿಲುಕದ ತತ್ವ. ಇದು ವೇದಾಗಮಪ್ರತಿಪಾದ್ಯವಾದುದು. ಈ ಲಿಂಗವೇ ತನುತ್ರಯಭೇದದಿಂದ, ಲಿಂಗತ್ರಯನೆನಿಸಿ, ಮೂರಾಯಿತು. ನಂತರ, ನಾಸಿಕಾದಿ ಆರು ಇಂದ್ರಿಯಾನುಗತವಾಗಿ ಆಚಾರಾದಿ ಆರು ಲಿಂಗವಾಯಿತು.

ಹೀಗೆ ಭಕ್ತಾನುಗ್ರಹಾರ್ಥವಾಗಿ, ವಿವಿಧ ಬಗೆಯ ರೂಪಗಳನ್ನು ಹೊಂದಿ, ಒಂದೇ ಬಗೆಯಾಗಿರುವ ಈ ಪರಬ್ರಹ್ಮವಸ್ತುವನ್ನು ಅರಿಯುವುದು ಬಹು ಕಷ್ಟ. ಆದುದರಿಂದ. ಇಂಥಾ ಪವಿತ್ರವೂ, ಗಹನವೂ, ಆದ ಷಟ್‌ಸ್ಥಲ ಸಿದ್ಧಾಂತವನ್ನು ಶ್ರದ್ಧಾ–ಭಕ್ತಿಗಳಿಂದ, ಯಾವ ಕಾರಣದಿಂದಲೂ, ನಿಯಮೋಲ್ಲಂಘನೆಗೆ ಎಡೆಗೊಡದೆ ಆಚರಿಸಿ, ಶಿವಯೋಗಸುಖವನ್ನು ಅನುಭವಿಸು. ಈ ತ್ರಿವೇಣೀ ಸಂಗಮ (ಅಂದರೆ, ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್‌ಸ್ಥಲವೇ ಆತ್ಮ ಇಂತಹ ಈ ಮೂರರ ಸಮಾಯೋಗ)ದಿಂದ ಲಭಿಸುವ ಮಹೋನ್ನತ ಪದವಿಯನ್ನೇ ಮೋಕ್ಷವೆಂದು ಹೇಳುವುದು. ಈ ಸಿದ್ಧಾಂತವನ್ನು ಮೈಗೂಡಿಸಿ ಕೊಳ್ಳುವ ವಿಧಾನವೊಂದೇ ಸ್ಥಿರಮನಸ್ಸಿ

ನಿಂದ ಕೂಡಿದ ಲಿಂಗಾರಾಧನೆ, ಮಂತ್ರ ಜಪ, ಲಿಂಗಪ್ರಸಾದ ಸೇವನೆ, ಗುರು ಲಿಂಗ–ಜಂಗಮರ ಸೇವೆಗೆ ತನು ಮನ ಧನಗಳನ್ನು ಅರ್ಪಿಸುವುದು, ಇಂದ್ರಿಯನಿಗ್ರಹ, ಲೌಕಿಕವ್ಯಾಪಾರಗಳನ್ನೆಲ್ಲಾ ಶಿವಾರ್ಪಣ ಭಾವದಿಂದ ಆಚರಿಸುವುದು, ಸತ್ಸಂಗ–ಇವೇ ಮುಖ್ಯ (ಸಾಧನ) ವಿಧಾನಗಳು. ಹೀಗೆ ಶಿವಾನಂದ ಯೋಗವನ್ನು ಮೈಗೂಡಿಸಿಕೊಂಡನಂತರ, ಲಿಂಗಾಂಗಸಾಮರಸ್ಯ ರೂಪವಾದ ಮೋಕ್ಷವನ್ನನುಭವಿಸೆಂದು ಹರಸಿದನು. ಆನಂದಾಶ್ರುಗಳು ಸುರಿಯುತ್ತಿರಲು, ಪರವಶನಾದ ಹನುಮಂತನು ಗುರುವಿನ ಪಾದಾರವಿಂದಗಳಿಗೆ ಪದೇ ಪದೇ ನಮಿಸುತ್ತಾ, ಬಿಗಿದ ಕಂಠದಿಂದ ಎಲೈ ! ಕೃಪಾನಿಧಿಯೇ, ಇಂದಿಗೆ ನನ್ನ ಬಾಳು ಹಸನಾಯಿತು. ನಾನು ಕೃತಾರ್ಥನಾದೆ. ನಿನ್ನ ಉಪದೇಶಾಮೃತದಿಂದ ನನ್ನ ಅಜ್ಞಾನತಿಮಿರವು ನಿರ್ನಾಮವಾಯಿತು. ನನ್ನ ಶೇಷಾಯುಷ್ಯವನ್ನೆಲ್ಲಾ ಶಿವಾರಾಧನೆಯಲ್ಲಿಯೂ, ನಿನ್ನ ಪಾದ ಧ್ಯಾನದಲ್ಲಿಯೂ, ಕಳೆಯುವೆನು ಎಂದು ಹೇಳುತ್ತಿರುವ ಮಾರುತಿಯನ್ನು ಕುರಿತು, ವೀರೇಶನು ಎಲೈ ಪವನಸುತನೇ ! ನಿನ್ನ ಕೀರ್ತಿಯೂ, ಗುರುಭಕ್ತಿಯೂ, ಶಿವಭಾವವೂ, ಮೂರು ಲೋಕಗಳಲ್ಲಿಯೂ ಹರಡಲಿ ಎಂದು ಅನುಗ್ರಹಿಸಿ, ಅಂತರ್ಧಾನನಾದನು.

ಗಾನಕೋವಿದ ಹನುಮಂತ :

ನಂತರ ಹನುಮಂತನು ಅದೇ ಕ್ಷೇತ್ರದಲ್ಲಿ, ಗುರೂಪದೇಶದಂತೆ ಲಿಂಗಾರಾಧನೆಯಲ್ಲಿ ನಿರತನಾದನು. ಹೀಗಿರಲು ಒಮ್ಮೆ ಗೌತಮರ ಆಶ್ರಮದಲ್ಲಿ, ಅವರ ಅತಿಥಿಯಾಗಿದ್ದ ವೃಷಪರ್ವನೆಂಬುವನು, ವಿನಾಕಾರಣವಾಗಿ, ಗೌತಮರ ಪ್ರಿಯ ಶಿಷ್ಯನಾದ, ಶಂಕರಾತ್ಮನನ್ನು ಸಂಹರಿಸಿದನು. ಇದರಿಂದ ದುಃಖಿತರಾದ ಗೌತಮರು, ಯೋಗಬಲದಿಂದ ಅಸುನೀಗಿದರು. ಈ ಅನಾಹುತವನ್ನು ಕಂಡ ಅಹಲ್ಯೆಯು, ಅತ್ಯಂತ ದುಃಖದಿಂದ ಶಿವಧ್ಯಾನದಲ್ಲಿಯೇ ಮೂರ್ಛೆಹೋದಳು. ಭಕ್ತಳ ಸ್ಥಿತಿಯನ್ನರಿತ ಶಂಕರನು, ಹರಿ-ವಿಧಿಗಳೊಡನೆ ದರ್ಶನ ನೀಡಿದನು. ಶಿವದರ್ಶನದಿಂದ ಪ್ರಭಾವಿತಳಾದ ಅಹಲ್ಯೆಯು, ಶಂಕರನನ್ನು ಸ್ತೋತ್ರ ಮಾಡಿ ವಿನಯದಿಂದ ಎಲೈ ದಯಾಮಯನೇ ತಡಮಾಡದೆ ಗುರು ಶಿಷ್ಯರಿಗೆ ಮರಳಿ ಜೀವದಾನ ಮಾಡಿ, ಉದ್ಧರಿಸೆಂದು ಪ್ರಾರ್ಥಿಸಿದಳು. ನಂತರ ಮತ್ತೆ ಶಿವನನ್ನು ಕುರಿತು, ಶಂಕರನೇ, ಯಾವ ಪಾಪದ ಫಲಕ್ಕಾಗಿ ನನಗೆ ಇಂಥಾ ದುಃಸ್ಥಿತಿ ಪ್ರಾಪ್ತವಾಯಿತು ? ಗುರುಶಿಷ್ಯರ

ಜೀವಗಳು ನಿನಗೆ ಅಷ್ಟು ಪ್ರಿಯವಾದುವೇ? ನನ್ನೊಬ್ಬಳ ಬಗ್ಗೆ ನೀನು ನಿರ್ದಯನಾಗಿ ಹೀಗೆ ವರ್ತಿಸಬಹುದೇ? ಎಂದು ಮುಂತಾಗಿ ದುಃಖಿತ ಪ್ತಳಾಗಿ ಶೋಕಿಸುತ್ತಿದ್ದ ಅಹಲ್ಯೆಯನ್ನು ಕುರಿತು, ಶಂಕರನು, ಎಲ್ಬೆ ವತ್ಸೇ! ಜ್ಞಾನಿಯಾದ ನೀನೂ ಪತಿವಿಯೋಗಕ್ಕಾಗಿ ಇಷ್ಟು ವ್ಯಥೆ ಪಡುವುದು ಯುಕ್ತವೇ? ಪಂಚಭೂತಾತ್ಮಕವಾದ ಈ ಜಡ ಶರೀರಕ್ಕೆ ಉಂಟಾಗುವ ಸುಖದುಃಖಗಳು ಆತ್ಮನನ್ನು ಎಂದೂ ಮುಟ್ಟಲಾರವು. ಯಾಕೆಂದು ಕೇಳು ವೆಯಾ, ಆ ಆತ್ಮವು, ಸಚ್ಚಿದಾನಂದಾತ್ಮಕವಾದದ್ದು, ಅದಕ್ಕೆ ಜನನ ಮರಣಾದಿಗಳಿಲ್ಲ. ಸುಖದುಃಖಾದಿಗಳ ಸಂಬಂಧವೂ ಇಲ್ಲ. ಅದು ಯಾವಾ ಗಲೂ, ಸದಾನಂದ ಪರಿಪೂರ್ಣವಾಗಿ ನಿರ್ಲಿಪ್ತತೆಯಿಂದಿರುತ್ತದೆ. ದೇಹವು, ಕೇವಲ ಅಶುಚಿ ವಸ್ತುಗಳಿಂದ ಕೂಡಿದ್ದಾಗಿದೆ. ಲಿಂಗದೇಹಾತ್ಮಕವಾದ ಜೀವವು ದೇಹದಿಂದ ಅಗಲಿದೊಡೆ, ಈ ದೇಹವು ಅಗ್ನಿಯ, ಮಣ್ಣಿನ ಅಥವಾ ನಾಯಿ ಹದ್ದುಗಳ ಆಹಾರವಾಗಿ ನಾಶ ಹೊಂದುವುದು.

ಜಡಃ ಕಿಂ ನು ವಿಜಾನಾತಿ ದೇಹೋಽಯಂ ಪಾಂಚಭೌತಿಕಃ ।
ನಿರ್ಲೇಪಃ ಪರಿಪೂರ್ಣಶ್ಚ ಸಚ್ಚಿದಾನಂದವಿಗ್ರಹಃ ॥ (ಶಿ. ಗೀ 2-6)

ದೇಹೋಽಪಿ ಮಲಪಿಂಡೋಽಯಂ ಮುಕ್ತಜೀವೋ ಜಡಾತ್ಮಕಃ ।
ದಹ್ಯತೇ ವಹ್ನಿನಾ ಕಾಷ್ಠೈಃ ಶಿವಾದ್ಯೈರ್ಭಕ್ಷ್ಯತೇಽಪಿ ವಾ ॥ (2-9)

ನಿತ್ಯನೂ, ಅದ್ವಿತೀಯನೂ, ಆದ ಆತ್ಮನು ಪಂಚಭೂತಗಳ ಸಂಸರ್ಗದಿಂದ ಅನೇಕ ತರದ ದೇಹಗಳನ್ನು ಧರಿಸುತ್ತಾನೆ. ಆ ಎಲ್ಲ ದೇಹಗಳಲ್ಲಿ ಪ್ರಕಾಶಿಸುವ ಆತ್ಮನು ಒಬ್ಬನೇ ಆಗಿದ್ದಾನೆ. ಹೀಗೆ ಆತ್ಮನು ಸರ್ವವ್ಯಾಪಿಯಾಗಿರುವಾಗ ಗಂಡನಾರು? ಹೆಂಡತಿ ಯಾರು? ಬಂಧುಬಳಗದವರಾರು? ಎಂಬುದನ್ನು ಗುರುತಿಸಲಿಕ್ಕಾಗುವುದಿಲ್ಲ. ಆದುದರಿಂದ ಎಲೈ ಅಹಲ್ಯೆ! ಪುರುಷ ರೂಪ ದಿಂದಿದ್ದ ನಿನ್ನ ಪತಿಯ ಕಾಯಕ್ಕಾಗಿ ಚಿಂತಿಸುವುದನ್ನು ಬಿಡು. ಅವನ ಆತ್ಮವು ನನ್ನಲ್ಲಿ ಲೀನವಾಗಿ ನಿತ್ಯ ಸುಖದಿಂದಿರುವುದು ಎಂದು ಹೇಳಿದನು.

ಜಾಯಂತೇ ಯದಿ ಭೂತೇಭ್ಯೋ ದೇಹಿನಃ ಪಾಂಚಭೌತಿಕಾಃ ।
ಆತ್ಮಾ ಯದ್ಯೇಕಲಸ್ತೇಷು ಪರಿಪೂರ್ಣಸ್ಸನಾತನಃ ॥ (ಪ.ಪು.2-18)
ಕಾ ಕಾಂತಾ ತತ್ರ ಕಃ ಕಾಂತಃ ಸರ್ವ ಏವ ಸಹೋದರಾಃ ।
ನಿರ್ಮಿತಾಯಾಂ ಗೃಹಾವಳ್ಯಾಂ ತದವಚ್ಛಿನ್ನತಾಂ ಗತಂ ॥ (2-19)

ಇದನ್ನೆಲ್ಲಾ ಸಾವಧಾನದಿಂದ ಕೇಳುತ್ತಿದ್ದ ಅಹಲ್ಯೆಯು, ಎಲೈ ದಯಾಮಯ ನಾದ ಶಂಕರನೇ ನೀನು ಹೇಳಿದ್ದೆಲ್ಲಾ ಸತ್ಯವು. ನನ್ನ ಪತಿದೇವನ ಆತ್ಮವು ನಿನ್ನಲ್ಲಿ ಲೀನವಾಗಿ ನಿತ್ಯಸುಖದಿಂದಿರುವುದೆಂದು ಅಪ್ಪಣೆಕೊಡಿಸಿದೆಯಲ್ಲವೇ. ಅದನ್ನು ಕೇಳಿ ನನಗೆ ಮಹದಾನಂದವಾಯಿತು. ಆದರೆ ಈ ಪಾಂಚಭೌತಿಕ ವಾದ ನನ್ನ ಶರೀರವಿರುವವರೆವಿಗೂ, ನಾನು ಸ್ತ್ರೀಯೆಂದೇ ಪರಿಗಣಿಸಲ್ಪಡು ವೆನು. ಶಂಕರನ ಭಕ್ತರಿಗೆ, ಇಷ್ಟಲಿಂಗವೆಷ್ಟು ಪ್ರಧಾನವೋ ಸತೀಶಿರೋ ಮಣಿಯಾದವಳಿಗೆ ಪುರುಷನೂ ಅಷ್ಟೇ ಪ್ರಾಧಾನ, ಹಾಗೂ ಸೌಭಾಗ್ಯ ಸೂಚಕ. ಆದುದರಿಂದ, ಎಲೈ ದೇವದೇವನೆ ನನ್ನಲ್ಲಿ ನಿನಗೆ ವಾತ್ಸಲ್ಯವಿರುವು ದಾದರೆ, ಈ ಸ್ತ್ರೀರೂಪವಾದ ನನ್ನ ಆತ್ಮವನ್ನೂ ನಿನ್ನಲ್ಲಿ ಸೇರಿಸಿಕೊ, ಇಲ್ಲ ವಾದರೆ, ನನ್ನ ಪತಿದೇವನ ಪ್ರಾಣವನ್ನು ಅನುಗ್ರಹಿಸೆಂದು ಪ್ರಾರ್ಥಿಸಿದಳು. ಆಗ ಹರಿವಿಧಿಗಳು, ಧನ್ಯೆ ಧನ್ಯೆ ಅಹಲ್ಯೆ, ನಿನ್ನ ಅನುಪಮ ದಿವ್ಯಜ್ಞಾನಕ್ಕೂ, ಸತೀತ್ವಕ್ಕೂ ಅನುಗುಣವಾದ ವರವನ್ನೇ ಕೇಳಿರುವೆ. ಎಲೈ ಶಂಕರನೆ, ಭಕ್ತ ವತ್ಸಲನೇ, ಅನಾಥರಕ್ಷಕನೇ, ಅಹಲ್ಯೆಯ ಯೋಗ್ಯ ಬೇಡಿಕೆಯನ್ನು ಅನುಗ್ರಹಿ ಸೆಂದು ಪ್ರಾರ್ಥಿಸಿದರು.

ಆಗ ಶಂಕರನು, ಪ್ರಸನ್ನ ವದನನಾಗಿ, ಎಲೈ, ಸತೀಶಿರೋಮಣಿಯಾದ ಅಹಲ್ಯೆಯೇ ನಿನ್ನ ಪತಿಭಕ್ತಿಗೂ, ಆಳವಾದ ತತ್ವಜ್ಞಾನಕ್ಕೂ ಮೆಚ್ಚಿದೆನು. ನಿನ್ನ ಕೀರ್ತಿಯು ಮೂರು ಲೋಕಗಳಲ್ಲಿಯೂ ಹರಡಲಿ ಎಂದು ಹೇಳಿ, ತನ್ನಲ್ಲಿ ವಿಲನವಾಗಿದ್ದ ಗೌತಮರ ಮತ್ತು ಅವರ ಶಿಷ್ಯನಾದ ಶಂಕರಾತ್ಮನ ಆತ್ಮಗಳನ್ನು ಮತ್ತೆ ಅವರವರ ಶರೀರಗಳಲ್ಲಿ ಸ್ಥಾಪಿಸಿ, ಅವರಿಗೆ ಜೀವದಾನ ಮಾಡಿದನು. ಹರಿವಿಧಿಗಳೆಲ್ಲಾ ಅತ್ಯಾನಂದದಿಂದ ಶಂಕರನನ್ನು, ಹೇ ಶಂಭುವೇ ! ನಿನ್ನ ಲೀಲೆಗಳನ್ನು ಅರಿಯಲು ಯಾರು ತಾನೇ ಶಕ್ತರು ? ನೀನು ಕೃಪಾಸಾಗರನು, ದಯಾಮಯನು, ಅನಾಥನಾಥನು, ಕರುಣಾಳುವು, ವಿಶ್ವವೇ ನಿನ್ನ ಕುಟುಂಬ. ಎಲ್ಲ ಜೀವಿಗಳನ್ನೂ ತನ್ನಂತೆ ಭಾವಿಸಿ ಸಲಹುವ ದಯಾಮೂರ್ತಿ ನೀನು. ನಿನ್ನನ್ನು ನಂಬಿದವರಿಗೆ ನಿನ್ನನ್ನೇ ಕೊಡುವೆ. ಎಂದು ನಾನಾವಿಧದಿಂದ ಸ್ತೋತ್ರಮಾಡುತ್ತಿರಲು, ಗೌತಮರು ತನ್ನ ಸಮೀಪ ದಲ್ಲಿಯೇ ಇದ್ದ ಶಂಕರನಿಗೆ ಅನನ್ಯ ಭಕ್ತಿ ಹಾಗೂ ಕೃತಜ್ಞತಾಭಾವದಿಂದ ವಂದಿಸಿ ಪ್ರಾರ್ಥಿಸಿದರು. ಆಗ ಅಹಲ್ಯೆಗೆ ಆದ ಆನಂದಕ್ಕೆ ಪಾರವೇ ಇಲ್ಲ

ವಾಯಿತು. ಆವರೀರ್ವರೂ ಶಂಕರನನ್ನು ಕುರಿತು, ಎಲೈ ತಂದೆಯೇ! ಅಲ್ಪನಾದ ನಮ್ಮ ಆಶ್ರಮಕ್ಕೆ ಹರಿ–ವಿಧಿಗಳೊಡನೆ ದಯಮಾಡಿಸಿ, ನನಗೆ ಪ್ರಾಣದಾನ ಮಾಡಿ, ಇಲ್ಲಿರುವ ಎಲ್ಲರಿಗೂ ದರ್ಶನಭಾಗ್ಯ ನೀಡಿ ಕೃತಾರ್ಥರನ್ನಾಗಿ ಮಾಡಿರುವೆ. ಇದರ ನೆನಪಿಗಾಗಿ, ನಾಳೆ ನಿನ್ನ ಆರಾಧನೆಯನ್ನು ನನ್ನ ಮನದಣಿಯುವಂತೆ ಮಾಡಲು ಅನುಮತಿಸಿ ನನ್ನನ್ನು ಉದ್ಧರಿಸೆಂದು ಪ್ರಾರ್ಥಿಸಿದನು. ಅದಕ್ಕೆ ಶಿವನು ಆನಂದದಿಂದ ಸಮ್ಮತಿಸಿದನು. ನಂತರ ಗೌತಮರು ಎಲ್ಲಾ ಋಷಿಗಳನ್ನೂ ಕರೆಸಿ, ಶಿವಾರಾಧನೆಗೆ ಉಚಿತವಾದ ಎಲ್ಲಾ ವ್ಯವಸ್ಥೆಗಳನ್ನೂ ಮಾಡಿದರು. ಈ ವಿಚಾರವು ಆ ಪ್ರಾಂತ್ಯದಲ್ಲೆಲ್ಲಾ ಹರಡಿ, ಹನುಮಂತನೂ ಅಲ್ಲಿಗೆ ಆಗಮಿಸಿದನು. ಶಿವನಿಗೆ ಆನಂದವಾಗುವ ರೀತಿಯಲ್ಲಿ ಷೋಡಶೋಪಚಾರಯುಕ್ತವಾದ ಪೂಜೆ ಹಾಗೂ, ಶಿವಪ್ರಸಾದ ವಿನಿಯೋಗವಾದ ಮೇಲೆ, ನಾರದರು ಶಿವಗೀತೆಗಳನ್ನು ಹಾಡಲಾರಂಭಿಸಿದರು. ಅಲ್ಲಿಯೇ ಕುಳಿತದ್ದ ಹನುಮಂತನೂ, ಶಿವದರ್ಶನಭಾಗ್ಯದಿಂದ, ಆನಂದ ಪರವಶನಾಗಿ ಮೈಮರೆತು, ತನ್ನ ದಿವ್ಯವಾದ ಮಧುರ ಕಂಠದಿಂದ ಗಾನ ಮಾಡಲಾರಂಭಿಸಿದನು. ಅವನ ಗಾನ ಮಾಧುರ್ಯದಿಂದ ಕಿನ್ನರ–ಗಂಧರ್ವರೂ ಕೂಡ ನಾಚಿ ಬೆರಗಾದರು. ಅವನ ಕರ್ಣಾನಂದ ಹಾಗೂ ಬ್ರಹ್ಮಾನಂದದಾಯಕವಾದ ಸುಮಧುರ ಗಾನವನ್ನು, ಅಲ್ಲಿದ್ದ ಹರಿವಿಧಿಗಳೇ ಮೊದಲಾದ ಎಲ್ಲರೂ ಪರವಶರಾಗಿ ಕೇಳುತ್ತಿದ್ದರು. ಗಾನ ಲೋಲನಾದ ಶಂಕರನು, ಪರವಶತೆಯಿಂದ ತನ್ನ ಪಾದಗಳನ್ನು ಹನುಮಂತನ ಅಂಜಲಿಯಲ್ಲಿ ಸ್ಥಾಪಿಸಿದನು. ನಂತರ ತನ್ನ ವರದಹಸ್ತವನ್ನು ಅವನ ತಲೆಯ ಮೇಲಿಟ್ಟು, ಗಾನ ಮಾಧುರ್ಯವನ್ನನುಭವಿಸುತ್ತಾ ಮೈಮರೆತನು. ಅದನ್ನು ಕಂಡ ವಿಷ್ಣುವು ಎಲೈ ಹನುಮಂತನೇ! ನೀನೇ ಧನ್ಯನು. ಮೂರು ಲೋಕಗಳಲ್ಲಿಯೂ, ನಿನಗೆ ಸಮಾನರಾದ ಸುಕೃತಿಗಳು ಯಾರೂ ಇಲ್ಲ. ಸಕಲ ದೇವತೆಗಳಿಗೂ, ಅಗೋಚರವಾದ ಪರಮೇಶ್ವರನ ಪಾದಕಮಲಗಳು, ನಿನ್ನ ಬೊಗಸೆಯಲ್ಲಿ ಸ್ಥಾಪಿಸಲ್ಪಟ್ಟಿರುವುವು. ಶಂಕರನು ಕೇವಲ ಜ್ಞಾನಗೋಚರನು, ವೇದಗಳಿಗೂ, ಅಗಮ್ಯನು. ಎಂದು ಹೇಳಿ, ನಂತರ ವಿಷ್ಣುವು ಶಂಕರನನ್ನು ಕುರಿತು ಎಲೈ ಶಂಭುವೆ! ನಾನು ಸಹಸ್ರ ವರ್ಷಗಳ ಕಾಲ, ಸಹಸ್ರ ಕಮಲಗಳಿಂದ ನಿನ್ನನ್ನು, ಅನನ್ಯ ಭಕ್ತಿಯಿಂದ ಆರಾಧಿಸಿದೆನು. ಆದರೂ ಸಹ, ನನಗೆ ನಿನ್ನ, ಪಾದಾರವಿಂದಗಳ



ಶಿವ ಪಾರ್ವತಿಯರನ್ನು ತನ್ನ ಹೆಗಲಮೇಲೆ ಹೊತ್ತ
ಗಾನವಿಶಾರದ ಮಾರುತಿ

ದರ್ಶನ ಭಾಗ್ಯವು ಲಭಿಸದಾಯಿತು. ಅದು ಇಂದು ಮಾರುತಿಗೆ ನಿನ್ನ ಕೃಪೆ ಯಿಂದ ಲಭಿಸಿತು. ಹನುಮಂತನ ಭಕ್ತಿಯು ಅಸದೃಶವಾದುದು. ಭಕ್ತಿಯಲ್ಲಿ ನಮ್ಮನ್ನೂ ಮೀರಿಸಿರುವನು. ಎಂದು ಹೇಳಿ ನಂತರ ಹನುಮಂತನನ್ನು ಕುರಿತು, ಹನುಮಂತಾ, ನೀನೇ ಧನ್ಯನು. ನಿನ್ನ ಭಕ್ತಿಯಿಂದ ಪರಮೇಶ್ವರ ನನ್ನೇ ಮೆಚ್ಚಿಸಿರುವೆ, ಎಂದು ಪ್ರಶಂಸಿಸಿದನು. (ಸ್ಕಾಂದ ಪುರಾಣದ ಆಧಾರ)

ಕೈಲಾಸಕ್ಕೆ ಮಾರುತಿ :

ಶಿವನು ಮಾರುತಿಯನ್ನು ತನ್ನ ಸಂಗಡ ವೃಷಭಾರೂಢನಾಗಿ, ಗಾನ ಮಾಡುತ್ತಾ ಕೈಲಾಸಕ್ಕೆ ಬರಲು ಆಹ್ವಾನಿಸಿದನು. ಆಗ ಮಾರುತಿಯು, ಹೇ ಶಂಕರಾ ನಾನೆಲ್ಲಿ? ದ್ವಿತೀಯ ಶಂಭುವಾದ ನಂದೀಶ್ವರನೆಲ್ಲಿ? ಅವನ ಪಾದಸೇವಕ ನಾದ ನಾನು ವೃಷಭನ ಮೇಲೆ ಕೂಡುವುದೆಂದರೇನು ? ನೀನು ಕೃಪೆ ಮಾಡಿ ಸಮ್ಮತಿಸುವುದಾದರೆ, ನಿಮ್ಮಿರ್ವರನ್ನೂ ನನ್ನ ಭುಜದ ಮೇಲೆ ಹೊತ್ತು ಕೈಲಾಸಕ್ಕೆ ಕರೆದೊಯ್ಯುವೆನು ಎಂದು ಅನನ್ಯಭಕ್ತಿಯಿಂದ ಪ್ರಾರ್ಥಿಸಿದನು. ದಯಾಮಯನಾದ ಶಂಕರನು ಆನಂದದಿಂದ ಸಮ್ಮತಿಸಿದನು. ಆಗ ಮಾರು ತಿಯು ಆನಂದಾತಿಶಯದಿಂದ ಶಿವ-ಶಿವೆಯರ ಪಾದಾರವಿಂದಗಳಿಗೆ ನಮಸ್ಕರಿಸಿ ಅವರನ್ನು ಹೊತ್ತು ಗಾನ ಮಾಡುತ್ತಾ ಕೈಲಾಸಕ್ಕೆ ತೆರಳಿದನು. ಇದನ್ನು ನೋಡಿದ ದೇವತೆಗಳು ಆಶ್ಚರ್ಯದಿಂದಲೂ, ಮಹದಾನಂದದಿಂದಲೂ ಜಯ ಕಾರ ಮಾಡಿದರು. ಪುಷ್ಪವೃಷ್ಟಿಯಾಯಿತು. ಕೈಲಾಸದಲ್ಲಿ ಗಾನ ಮಾಡು ತ್ತಿರುವಾಗ ಲಿಂಗಪೂಜಾ ವೇಳೆಯು ಸಮೀಪಿಸಲು, ಮಾರುತಿಯು ಅಲ್ಲಿಂದ ಹೊರಡಲು, ಶಿವನ ಅಪ್ಪಣೆಯನ್ನು ಕೇಳಿದನು. ಆಗ ಶಂಕರನು ಎಲೈ ಮಾರುತಿಯೆ ! ಲಿಂಗವೇ ನಾನು, ನನ್ನ ಕುರುಹಾಗಿಯೇ ನೀನು ಲಿಂಗವನ್ನು ಪೂಜಿಸುತ್ತಿರುವೆ. ನಿನ್ನ ಗಾನ ಯಜ್ಞದಿಂದ ನನ್ನನ್ನೇ ಈಗ ತೃಪ್ತಿಪಡಿಸುತ್ತಿ ರುವುದರಿಂದ, ಪ್ರತ್ಯೇಕ ಲಿಂಗಪೂಜೆಗೆ ಅರ್ಥವಿಲ್ಲ. ಆದುದರಿಂದ ನಿನ್ನ ಗಾನ ವನ್ನು ಮುಂದುವರಿಸೆಂದು ತಿಳಿಸಿದನು. 'ನಗುರೋರಧಿಕಂ' ಎಂಬ ಶ್ರುತಿ ವಾಕ್ಯವನ್ನು ಗುರುಮುಖೇನ ತಿಳಿದಿದ್ದ ಮಾರುತಿಯು, ಅವಸರವಾಗಿ ಅಲ್ಲಿಂದ ಅದೃಶ್ಯನಾದನು.

ಶಿವನ ಕೋಪ :

ಹೀಗೆ ತನ್ನ ಆದೇಶವನ್ನು ಲೆಕ್ಕಿಸದೆ, ಗಾನಯಜ್ಞವನ್ನು ಮುಂದುವರಿ ಸದೆ, ಕೈಲಾಸದಿಂದ ಹೊರಟುಹೋದ ಮಾರುತಿಯ ಉದ್ಧಟತನದಿಂದ

ಶಂಕರನಿಗೆ ಕೋಪ ಬಂದಿತು. ಇದನ್ನು ನೋಡುತ್ತಿದ್ದ ಗಿರಿಜೆಯು, ಮುಂದಾಗ ಬಹುದಾದ ಪ್ರಮಾದವನ್ನು ಮನಗಂಡು, ಕುಪಿತನಾದ ಶಂಕರನ ಬಳಿ ಸಾರ್ದುಷ ವಂದಿಸಿ, ಅತ್ಯಂತ ದೈನ್ಯದಿಂದ, ಎಲೈ ಪ್ರಭುವೇ ! ಮಾರುತಿಯು ನಿನ್ನ ಪರಮ ಭಕ್ತ. ಮೇಲಾಗಿ ವೀರೇಶನ ನೆಚ್ಚಿನ ಶಿಷ್ಯ. ಅವನು, ಗುರೂಪ ದೇಶದಂತೆ, ಪೂಜಾ ವೇಳೆ ಸಮೀಪಿಸಲು, ಇಲ್ಲಿಂದ ತೆರಳಿದನು. ಈ ಗುರು-ಮತ್ತು ಲಿಂಗಪೂಜಾನಿಷ್ಠೆಯನ್ನು ಅಪರಾಧವೆಂದು ಪರಿಗಣಿಸಬಹುದೆ ? ಕೃಪೆ ಮಾಡಿ ಸಮಾಧಾನ ತಂದುಕೊಳ್ಳುವಂತೆ ಪ್ರಾರ್ಥಿಸಿದಳು. ಆಗ ಶಂಕರನು ಹನುಮಂತನ ಗುರುಭಕ್ತಿ ಮತ್ತು ಲಿಂಗಪೂಜಾನಿಷ್ಠೆಯನ್ನು ಮೂರು ಲೋಕ ಗಳಿಗೂ ತೋರಬೇಕೆಂದು ಯೋಚಿಸಿ, ಗಿರಿಜೆಯ ಮಾತನ್ನು ಲೆಕ್ಕಿಸದೆ, ಮಾರುತಿಯ ಲಿಂಗವನ್ನು ಅದೃಶ್ಯ ಮಾಡಿಸಿದನು.

ಮಾರುತಿಯ ಮರಣ ಸಿದ್ಧತೆ : ಇತ್ತ ಹನುಮಂತನು ಕೈಲಾಸ ದಿಂದ ನೇರವಾಗಿ, ತನ್ನ ನಿವಾಸಕ್ಕೆ ತೆರಳಿ, ತುಂಗಭದ್ರೆಯಲ್ಲಿ ಮಿಂದು, ಪೂಜಾಸಿದ್ಧತೆ ಮಾಡಿಕೊಂಡು ಲಿಂಗಕ್ಕಾಗಿ ಸಜ್ಜಿಕೆಯನ್ನು ತೆರೆದನು : ಸಜ್ಜಿಕೆಯಲ್ಲಿ ಲಿಂಗವಿಲ್ಲದುದನ್ನು ನೋಡಿ ಭೀತಿ ಆಶ್ಚರ್ಯಗಳಿಂದ ಹೌಹಾರಿ ದನು. ಆಹಾ ಇದೆಂತಹಾ ಪ್ರಮಾದ ! ಗುರುವಿತ್ತ ಲಿಂಗವು ಎನಗರಿವಿಲ್ಲದೆಯೇ ಮಾಯವಾಗಿ, ನನ್ನನ್ನು ಅಲಿಂಗಿಯನ್ನಾಗಿ ಮಾಡಿರುವುದಲ್ಲಾ ! ಹೇ ಗುರು ದೇವ ! ಇದೆಂತಹ ದುರ್ವಿಧಿ ? ಎಂದು ಅತ್ಯಂತ ದುಃಖದಿಂದ ಲಿಂಗಕ್ಕಾಗಿ ಶೋಧನೆ ನಡೆಸಿ, ವಿಫಲನಾದನು. ಅವನಿಗೆ ದಿಕ್ಕೇ ತೋಚದಂತಾಯಿತು. ಇಡೀ ಬ್ರಹ್ಮಾಂಡವನ್ನೇ ಎದುರಿಸಬೇಕಾಗಿ ಬಂದರೂ ಧೃತಿಗೆಡದೆ, ವಿಜೃಂಭಿಸು ವಂಥಾ ಕೆಚ್ಚೆದೆಯ ವೀರಾಗ್ರಣಿ ಈ ಪವನಸುತನು, ಭಯದಿಂದ ಕಂಪಿಸು ತ್ತಿದ್ದ ಶರೀರದೊಡನೆ, ತೇಜೋಹೀನನಾಗಿ, ಮೊಳಕಾಲನ್ನೂರಿ, ಅತ್ಯಂತ ಭಕ್ತಿ ಯಿಂದ, ತನ್ನ ಮನದಲ್ಲಿ, ಶಿವ-ಶಿವೆಯರನ್ನೂ, ತನ್ನ ಗುರುವಾದ ಶ್ರೀ ವೀರೇಶ ನನ್ನೂ, ನೆನೆದು ಧ್ಯಾನಿಸುತ್ತಾ, ಹಾಯ್, ಹಾಯ್, ಶಂಕರನೇ ನನ್ನ ಈ ಕಷ್ಟಭಾಜನವಾದ ದುಷ್ಟಜನ್ಮಕ್ಕೆ ಧಿಕ್ಕಾರ. ಶಂಭುವೇ ನಿನ್ನಂಶದಿಂದ, ಅಂಜನಿಯ ಗರ್ಭಸುಧಾಂಬುಧಿಯಲ್ಲಿ ಜನಿಸಿದೆ. ಬಾಲ್ಯದಲ್ಲಿಯೇ ನಿನ್ನ ದಯೆಯಿಂದ ಸಕಲ ದೇವತೆಗಳಿಂದಲೂ, ಶ್ರೇಷ್ಠ ವರಗಳನ್ನು ಪಡೆದೆನು. ನಂತರ ಸೂರ್ಯದೇವನಿಂದ ಸಕಲ ಶಾಸ್ತ್ರಗಳನ್ನೂ ಅಭ್ಯಸಿಸಿದೆ. ಮತ್ತೆ ನಿನ್ನ

ಇಚ್ಛೆಯಂತೆ ರಾಮ ಸಹಾಯಾರ್ಥವಾಗಿ, ಸುಗ್ರೀವನನ್ನು ಕೂಡಿ, ಸೀತಾನ್ವೇಷಣೆ, ಸೇತುಬಂಧನ, ಯುದ್ಧದಲ್ಲಿ ದುರುಳ ರಕ್ಕಸರ ಸಂಹಾರ, ಲಕ್ಷ್ಮಣ ಹಾಗೂ ರಾಮಚಂದ್ರರ ಮೂರ್ಛಾಪರಿಹಾರ, ಇತ್ಯಾದಿ ಕಾರ್ಯಗಳಲ್ಲಿ ಶಕ್ತಿ ಮೀರಿ ಸೇವೆ ಸಲ್ಲಿಸಿದೆ. ಆದರೂ, ನನ್ನ ಸೇವೆಗೆ ಪ್ರತಿಫಲವಾಗಿ ಏನನ್ನೂ ಬಯಸದೆ, ಕೇವಲ ಮೋಕ್ಷವನ್ನು ಕೇಳಲು, ರಾಮನು, ತನ್ನ ಅಸಹಾಯಕತೆಯನ್ನು ತಿಳಿಸಿ, ನಿನ್ನನ್ನೇ ಮೊರೆಹೊಗುವಂತೆ ಆದೇಶ ನೀಡಿದನು. ಆಗ ನನಗಾದ ದುಃಖಕ್ಕೆ ಮೇರೆಯೇ ಇಲ್ಲವಾಗಿ ಪರಿತಪಿಸಿದೆ. ಹೇ ಶಂಕರನೇ, ನನ್ನಂಥ ನಿರ್ಭಾಗ್ಯರು ಈ ಮೂರು ಲೋಕಗಳಲ್ಲಿಯೂ, ಯಾರೂ ಇರಲಾರರು. ಇಹಪರಗಳೆರಡೂ ನನ್ನ ಪಾಲಿಗೆ ದೂರವಾದವು. ಇಂಥಾ ನಿಷ್ಪ್ರಯೋಜಕನನ್ನು ಹಡೆದ ನನ್ನ ಮಾತೆ ನನ್ನ ಈ ಹೀನಾವಸ್ಥೆಯನ್ನು ಕಂಡರೆ ದುಃಖಾಗ್ನಿಯಲ್ಲಿ ದೇಹತ್ಯಾಗಮಾಡುವುದಂತೂ ಖಂಡಿತ. ನನ್ನ ಜನನಿಯು ಕೇವಲ ನನ್ನ ಶ್ರೇಯೋಭಿವೃದ್ಧಿಗಾಗಿ ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿ, ಹಗಲಿರುಳೂ, ನಿನ್ನನ್ನು ಪ್ರಾರ್ಥಿಸುತ್ತಿರುವಳು. ನಿನ್ನನ್ನೇ ನಂಬಿ, ಯಾವ ವಿಧವಾದ ಲೌಕಿಕ ಭೋಗಗಳನ್ನೂ ಬಯಸದೆ, ಪರೋಪಕಾರಕ್ಕಾಗಿಯೇ ನನ್ನ ಸರ್ವಸ್ವವನ್ನೂ ಮುಡಿಪಾಗಿಟ್ಟು ಶ್ರಮಿಸಿದ್ದಕ್ಕೆ ನನಗೆ ದೊರೆತ ಪ್ರತಿಫಲವಿದೆಯೇ?

ಸದ್ಗುರು ವೀರೇಶನಿಂದ ಅನುಗ್ರಹೀತವಾದ ಶೈವಸಿದ್ಧಾಂತದುಪದೇಶದಂತೆ, ನಾನು, ಕಾಯೇನ ವಾಚಾ ಮನಸಾ, ಸದಾ ನಿನ್ನ ಆರಾಧನೆ, ಜಪ–ತಪಾದಿಗಳಲ್ಲಿಯೇ ಅನುರಕ್ತನಾಗಿರುವೆನು. ಗುರುವು ಉಪದೇಶಿಸಿರುವ ನಿಯಮಗಳನ್ನು ಸ್ವಲ್ಪವೂ ಲೋಪವಿಲ್ಲದಂತೆ, ಯಥಾಶಕ್ತಿಯಿಂದ ಆಚರಿಸುತ್ತಿರುವೆನು. ಮನಸ್ಸಾಕ್ಷಿಯಾಗಿ ಯಾವ ಅಪರಾಧವನ್ನೂ ನಾನು ಎಸಗಿಲ್ಲ. ಹೀಗಿದ್ದರೂ ನನಗೆ ಇಂಥಾ ಸಂಕಟ ಪ್ರಾಪ್ತವಾಗಿರುವುದು ವಿಧಿವಿಲಾಸವಲ್ಲದೆ ಬೇರೆಯಿಲ್ಲ. ಹೇ ಶಂಕರನೇ, ನಿನ್ನ ಸಂಕಲ್ಪಮಾತ್ರದಿಂದಲೇ ಈ ಎಲ್ಲಾ ಚರಾಚರಗಳೂ ತಮ್ಮ ತಮ್ಮ ದೈನಂದಿನ ವ್ಯಾಪಾರಗಳನ್ನು ಅತಿಕ್ರಮಿಸದಂತೆ ನಡೆಯಿಸುತ್ತಿರುವುವು. ಸದ್ಗುರು ವೀರೇಶನು, ಶಿವದೀಕ್ಷೆ ನೀಡುವ ಮುನ್ನವೇ ಶೈವಸಿದ್ಧಾಂತದ ಹಿರಿಮೆಯನ್ನೂ, ಅದನ್ನು ಅರಿತು ಆಚರಿಸುವುದು ದೇವಾನುದೇವತೆಗಳಿಗೂ ದುಸ್ತರವಾದುದೆಂದೂ, ಎಚ್ಚರಿಸಿದ್ದನು.

ನಾನು ಅತಿ ಎಚ್ಚರಿಕೆಯಿಂದ ಅವನ ಉಪದೇಶದಂತೆಯೇ ಅನುಷ್ಠಾನ ಪರ ನಾಗಿದ್ದರೂ, ನನ್ನ ಪ್ರಾರಬ್ಧ ಕರ್ಮದಿಂದ, ಗುರುವು ಅನುಗ್ರಹಿಸಿದ್ದ, ಭುಕ್ತಿಮುಕ್ತಿ ಪ್ರದವೂ, ಶಿವನಪ್ರತೀಕವೂ, ಲಿಂಗಾಂಗ ಸಾಮರಸ್ಯಕ್ಕೆ ಏಕೈಕ ಸಾಧನವೂ, ಇಷ್ಟ, ಪ್ರಾಣ, ಭಾವಗಳ ಸಂಕೇತವೂ ಆದ, ಇಷ್ಟಲಿಂಗವು ಎನಗರಿವಿಲ್ಲದೆಯೇ ನನ್ನ ಶರೀರದ ಮೇಲಿರುವ ಸಜ್ಜಿಕೆಯಿಂದ ಅದೃಶ್ಯ ವಾಗಿದೆ. ಹೇ ಶಂಕರನೇ, ನನ್ನ ಸಂಗ ನಿನಗೆ ಬೇಡವಾಯಿತೇ ? ನನ್ನ ನಡೆ ನಡೆನುಡಿಗಳು ನಿನಗೆ ಹಿಡಿಸದಾದವೇ ? ನನ್ನಲ್ಲಿ ನಿನ್ನ ಮೇಲಿನ ಭಕ್ತಿ ಕುಗ್ಗಿದೆಯೇ ? ಹೇ ಶಂಭುವೇ ಹೀಗೇಕೆ ನನ್ನನ್ನಗಲಿ ಅನಾಥನನ್ನಾಗಿ ಮಾಡಿದೆ ? ಭಕ್ತವತ್ಸಲನೆಂದೂ, ಕರುಣಾಳುವೆಂದೂ, ಅನಾಥನಾಥನೆಂದೂ, ನಿನ್ನನ್ನು ವೇದಾಗಮಶ್ರುತಿ ಸ್ಮೃತಿ ಪುರಾಣಾದಿಗಳು ಸಾರುತ್ತಿರುವ ವಾಕ್ಯವು ಮಿಥ್ಯವಾಯಿತೇ ? ಹೇ ಕರುಣಾಸಿಧೇ, ನಿನ್ನ ಆಜ್ಞೆಯನ್ನುಲ್ಲಂಘಿಸಿ, ಲಿಂಗ ಪೂಜೆಗಾಗಿ ಬಂದುದೇ ನನ್ನ ಅಕ್ಷಮ್ಯ ಅಪರಾಧವಾಯಿತೆ ? ಹಾಗಿದ್ದ ಪಕ್ಷದಲ್ಲಿ 'ನಗುರೋರಧಿಕಂ' ಎಂಬ ಆಗಮೋಕ್ತಿಯ ಅರ್ಥವಾದರೂ ಏನು ? ಗುರೂಪ ದೇಶಕ್ಕೆ ಲೋಪ ತರಬಾರದೆಂಬ ಕೇವಲ ಒಂದೇ ಬಯಕೆಯಿಂದ ನಾನು ಗಾನ ವನ್ನು ನಿಲ್ಲಿಸಿ, ನಿನ್ನ ಸನ್ನಿಧಿಯಿಂದ ಮರಳಿದೆನಲ್ಲದೆ ಮತ್ತಾವ ಲೌಕಿಕ ಕಾರ್ಯ ನಿಮಿತ್ತವಾಗಿಯೂ ಅಲ್ಲವೆಂದು ನಿನ್ನಲ್ಲಿ ಅರಿಕೆ ಮಾಡಿಯೇ ಬಂದೆನ ಲ್ಲವೆ ? ಹೇ ಶಂಕರನೇ ! ಹಿಂದೆ ಇಂದ್ರನ ಗದಾ ಪ್ರಹಾರದಿಂದ ಮೂರ್ಛಿತ ನಾದ ನನ್ನನ್ನು ಅನುಗ್ರಹಿಸಿ, ದರ್ಶನ ನೀಡಿ, ಅನಂತ ವರಗಳನ್ನು ಕರುಣಿ ಸಿದೆ. ಮತ್ತೊಮ್ಮೆ ರಾಮನ ಇಚ್ಛೆಯಂತೆ ಕೈಲಾಸಕ್ಕೆ ಬಂದು ತಪವೆಸಗಿ ಲಿಂಗವನ್ನು ಪ್ರಾರ್ಥಿಸಲು, ದರ್ಶನ ನೀಡಿ ರಾಮನಿಗಾಗಿ ಶಿವಲಿಂಗವನ್ನನು ಗ್ರಹಿಸಿದೆ. ಅಲ್ಲದೆ ನಾನು ಹತ್ಯಾದೋಷ ಪರಿಹಾರಾರ್ಥವಾಗಿ ನರ್ಮದಾ ತೀರದಲ್ಲಿ ತಪಸ್ಸನ್ನಾಚರಿಸಲು, ಪ್ರಸನ್ನನಾಗಿ, ದೋಷವನ್ನು ಪರಿಹರಿಸಿ, ಪುನೀತನನ್ನಾಗಿ ಮಾಡಿದೆ. ಹೀಗೆ ಸದಾ ನಿನ್ನಾರಾಧನೆಯಲ್ಲಿಯೇ ಜೀವಿತವನ್ನು ಸವೆಸುತ್ತಾ ಕೇವಲ ಮೋಕ್ಷಾಪೇಕ್ಷಿಯಾದ ನನ್ನನ್ನು ತೊರೆದು ಅನಾಥ ನನ್ನಾಗಿ ಮಾಡುವುದರಿಂದ ನಿನ್ನ ಕೀರ್ತಿಗೆ ಕುಂದಲ್ಲವೇ ? ಹೇ ದೇವ ದೇವ ಇನ್ನು ವೃಥಾ ಆಲಾಪನೆ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ ಅಲ್ಲದೆ, ಸದ್ಗುರುವು ಬೋಧಿಸಿರುವಂತೆ, ಇಷ್ಟಲಿಂಗವಗಲಿದ ಮೇಲೆ

ಪ್ರಾಣತ್ಯಾಗ ಮಾಡಬೇಕಾದುದು ಪ್ರತಿಯೊಬ್ಬ ವೀರಶೈವನ ಕರ್ತವ್ಯ. ಇನ್ನು ಹೆಚ್ಚು ಕಾಲ ಜೀವಿಸಿರುವುದೂ, ಅಪರಾಧವಾಗಬಹುದು. ಎಂದು ಯೋಚಿಸಿ, ಅನಾಥನಾದ ತನ್ನ ಮೊರೆ ಕೇಳಿ, ಪ್ರಸನ್ನನಾಗಿ, ಗುರು ರೂಪದಿಂದ ದೀಕ್ಷೆ ನೀಡಿ, ಇಷ್ಟಲಿಂಗವನ್ನನುಗ್ರಹಿಸಿ, ಲಿಂಗಾಂಗಸಾಮರಸ್ಯವನ್ನುಪದೇಶಿಸಿದ ಸದ್ಗುರು ವೀರೇಶನನ್ನು ಮನಸ್ಸಿನಲ್ಲಿ ನೆನೆದು ಹೀಗೆ ಪ್ರಾರ್ಥಿಸತೊಡಗಿದನು—ಎಲೈ ಭಕ್ತ ಪರಾಧೀನನೂ, ದಕ್ಷಾರಿಯೂ, ಶಿವನ ಫಾಲನೇತ್ರೋದ್ಭವನೂ, ನರಸಿಂಹಾರಿಯೂ, ಆದ ವೀರೇಶನೇ ! ನೀನು ಹಿಂದೆ ಅನೇಕ ವೇಳೆ ಸುರರು ಹಾಗೂ ಋಷಿ ಪುಂಗವರನ್ನು ನಾನಾ ರೀತಿಯಿಂದ ಹಿಂಸಿಸಿ, ಭಕ್ಷಿಸಿದ್ದ, ಅಜೇಯರೂ, ಭಯಂಕರಾಕಾರ ಉಳ್ಳವರೂ ಆದ ಜ್ವಾಲವ್ಯಾಳಾಸುರ-ಕಾಕೋದರಾಸುರ, ಪಂಚವೇಢ್ರಾಸುರ, ಕದಂಬರಾಸುರರೇ ಮೊದಲಾದ ದುರುಳರಕ್ಕಸರನ್ನು ಸಂಹರಿಸಿ, ಋಷಿಗಳನ್ನೂ ದೇವತೆಗಳನ್ನೂ ರಕ್ಷಿಸಿದೆ. ಈಗ, ನೀನಿತ್ತ ಲಿಂಗ ಮಾಯವಾಗಿ, ನಿನ್ನ ಉಪದೇಶದಂತೆ ಲಿಂಗ ರಹಿತವಾದ ಈ ಶರೀರವನ್ನು ತ್ಯಜಿಸುತ್ತಿರುವೆ. ನಿನ್ನ ಪರಮ ಭಕ್ತನಾದ ನನ್ನ ಮೇಲೆ ನಿನಗೇಕೆ ದಯಬಾರದು ? ಇನ್ನು ಗುರುವಿನಿಂದಲೂ ನಿರಾಕರಿಸಲ್ಪಟ್ಟ ಮತ್ತು ಶಿವಲಿಂಗಕ್ಕೂ ಬೇಡವಾದ ಈ ಶರೀರವನ್ನು ಈ ಕ್ಷಣದಲ್ಲಿಯೇ ತ್ಯಜಿಸುವೆನು ಎಂದು ಪ್ರಾಣಾರ್ಪಣೆಗೆ ಸಿದ್ಧನಾದನು.

ವೀರೇಶ ದರ್ಶನ:

ನಿಜಭಕ್ತರನ್ನು ಸದ್ಗುರುವಾದವನೆಂದಾದರೂ ಕೈಬಿಡುವನೇ ? ಎಂದಿಗೂ ಇಲ್ಲ. ಮರುಕ್ಷಣದಲ್ಲಿಯೇ ಅತ್ಯಂತ ಕೃಷ್ಣ ಸ್ವರೂಪನೂ, ರೌದ್ರರೂಪಿಯೂ, ಶರಣಾಗತರಕ್ಷಕನೂ, ಭಕ್ತಪರಾಧೀನನೂ ಆದ ವೀರೇಶನು ದರ್ಶನನೀಡಿದನು. ಆಗ ಹನುಮಂತನು ಗುರುವಿನ ಪಾದವನ್ನು ಬಿಗಿಯಾಗಿ ಹಿಡಿದು, ಹೇ ಗುರುದೇವ ! ನಾನು ಪಾಪಿಯು; ನೀನು ಅನುಗ್ರಹಿಸಿದ್ದ ಇಷ್ಟಲಿಂಗವು ಎನಗರಿವಿಲ್ಲದೆಯೇ ಮಾಯವಾಗಿದೆ. ಆದುದರಿಂದ ನಿನ್ನ ಉಪದೇಶದಂತೆ ಲಿಂಗರಹಿತವಾದ ಈ ದೇಹವನ್ನು ತ್ಯಜಿಸಲು ನಿರ್ಧರಿಸಿರುವೆನು. ಎಲೈ ಸದ್ಗುರುವೇ ! ಕೊನೆಯಬಾರಿಗೆ ನನ್ನನ್ನು ಆಶೀರ್ವದಿಸು ಎಂದು ಹೇಳಿ ಪ್ರಾಣಾರ್ಪಣೆಗೆ ಸಿದ್ಧನಾಗುತ್ತಿರಲು ಭಕ್ತವತ್ಸಲನಾದ ವೀರಭದ್ರನು, ಎಲೈ ಹನುಮಂತನೇ ! ತಾಳು ದುಡುಕಬೇಡ ಇದರಲ್ಲಿ ನಿನ್ನ ಅಪರಾಧವೇನೂ ಇಲ್ಲ. ನಿನ್ನ ಲಿಂಗವು

ಎಲ್ಲಿದ್ದರೂ ಕ್ಷಣಾರ್ಧದಲ್ಲಿ ತರಿಸುವೆನು ಎಂದು ಸಂತೈಸಿ, ತನ್ನ ಕಿಡಿಗಣ್ಣನ್ನು ಕುರಿತು, ಎಲೈ ನೀನು ಕೂಡಲೇ ಹೋಗಿ ಹನುಮಂತನ ಲಿಂಗವು ಎಲ್ಲಿದ್ದರೂ ಶೋಧಿಸಿ ತೆಗೆದುಕೊಂಡು ಬಾ ಎಂದು ಆಜ್ಞಾಪಿಸಿದನು. ಕೂಡಲೇ ವೀರಭದ್ರನ ಕಿಡಿಗಣ್ಣು ಅಗ್ನಿಜ್ವಾಲೆಗಳನ್ನು ಕಾರುತ್ತಾ ಅಲ್ಲಿಂದ ಹೊರಟು ಮೂರು ಲೋಕಗಳನ್ನೂ ದಹಿಸುತ್ತಾ, ಲಿಂಗಶೋಧನೆಗಾಗಿ ಹೊರಟಿತು.

ಇದನ್ನು ಕಂಡ ದೇವತೆಗಳು ಭಯಭೀತರಾಗಿ ಶಿವನನ್ನು ಮರೆ ಹೊಕ್ಕರು. ಇತ್ತ ತಾಯಿ ಪಾರ್ವತಿಯು, ವೀರಭದ್ರನ ಕಿಡಿಗಣ್ಣಿನಿಂದ ಲೋಕಕ್ಕೆ ಆಗುತ್ತಿರುವ ಅನಾಹುತವನ್ನೂ, ಹನುಮಂತನ ಅಚಲವಾದ ಗುರುಭಕ್ತಿಯನ್ನೂ ಗ್ರಹಿಸಿ, ಪರಶಿವನನ್ನು ಕುರಿತು ಎಲೈ ನಾಥನೇ! ನಾನು ಹಿಂದೆ ಅರಿಕೆ ಮಾಡಿಕೊಂಡರೂ ಕೇಳದೆ ಹನುಮಂತನ ಲಿಂಗವನ್ನು ಮಾಯ ಮಾಡಿರುವೆ. ಆ ಲಿಂಗವನ್ನು ಶೋಧಿಸಿ ತರಲು ಹನುಮಂತನ ಗುರುವಾದ ವೀರೇಶಕುಮಾರನು ತನ್ನ ಕಿಡಿಗಣ್ಣನ್ನೇ ಕಳುಹಿಸಿರುವನು. ಅವನ ಕಿಡಿಗಣ್ಣು ಮೂರು ಲೋಕಗಳನ್ನೆಲ್ಲಾ ದಹಿಸುತ್ತಾ ಬರುತ್ತಿದೆ. ಇನ್ನು ಹೆಚ್ಚು ವಿಳಂಬವಾದರೆ ಸರ್ವನಾಶವಾಗುವುದು ಮತ್ತು ನಿನ್ನ ಹಣೆಗಣ್ಣಿಗೂ, ನಿನ್ನ ಕುಮಾರನ ಹಣೆಗಣ್ಣಿಗೂ ವಿರಸವಾದಲ್ಲಿ ಇಡೀ ಬ್ರಹ್ಮಾಂಡವೇ ನಾಶವಾಗುವುದು. ಆದುದರಿಂದ ಜಗದೀಶನೇ! ಕರುಣಾಳುವೇ, ಭಕ್ತವತ್ಸಲನೇ, ಈ ಕೂಡಲೇ ಹನುಮಂತನ ಲಿಂಗವನ್ನು ಅವನಿಗೆ ಅನುಗ್ರಹಿಸಿ ಲೋಕಕ್ಕೆ ಉಂಟಾಗುತ್ತಿರುವ ಹಾನಿಯನ್ನು ಪರಿಹರಿಸು ಎಂದು ಪ್ರಾರ್ಥಿಸಿದಳು. ಇದನ್ನೆಲ್ಲಾ ಕೇಳಿದ ಶಂಕರನು, ನಸುನಗುತ್ತಾ ಎಲೈ ದೇವಿಯೇ! ಇದೆಲ್ಲಾ ನಿನ್ನಿಂದ ಪ್ರೇರಿತನಾದ ಕಲಹಪ್ರಿಯ ನಾರದರಿಂದ ನಿರ್ದೇಶಿಸಲ್ಪಟ್ಟ ನಾಟಕ. ಅಂತೂ ನಿನ್ನ ಸಂಕಲ್ಪವೇ ನೆರವೇರಿತು. ಇರಲಿ ಈ ನಾಟಕದಲ್ಲಿ ನಾನೂ ಒಂದು ಪಾತ್ರವನ್ನು ನಿರ್ವಹಿಸುವೆನು. ಅದಾವುದೆಂದರೆ ನನ್ನ ಅಂಶದಿಂದ ಹುಟ್ಟಿದ ಹನುಮಂತನ ಗುರುಭಕ್ತಿಯನ್ನೂ, ಲಿಂಗನಿಷ್ಠೆಯನ್ನೂ ಮೂರು ಲೋಕಕ್ಕೂ ತೋರಿಸುವುದೇ ಆಗಿದೆ. ಈ ಉದ್ದೇಶದಿಂದಲೇ ನಾನು ನಿನ್ನ ಸಲಹೆಯನ್ನು ಮನ್ನಿಸದೆ ಈ ಅತಿರೇಕಕ್ಕೆ ಅವಕಾಶ ಮಾಡಿದೆನು. ಇನ್ನು ಚಿಂತಿಸದಿರು ಎಂದು ಹೇಳಿ ತನ್ನ ಲೋಕದ ಕಡೆಗೇ ಧಾವಿಸಿಬರುತ್ತಿದ್ದ ವೀರಭದ್ರನ ಕಿಡಿಗಣ್ಣನ್ನು ನಸುನಗುತ್ತಾ ಶಾಂತಗೊಳಿಸಿ, [illegible] ಹಿಂತಿರುಗಿಸಿದನು.

ಶಿವಕೃಪೆ :

ನಂತರ, ಹನುಮಂತನನ್ನು ಕರೆಸಿ ಎಲೈ ಹನುಮಂತನೇ! ನೀನು, ನನ್ನ ಕಡೆಯ ಪರೀಕ್ಷೆಯಲ್ಲಿಯೂ ಉತ್ತೀರ್ಣನಾಗಿರುವೆ. ನಿನ್ನ ಗುರುಭಕ್ತಿಯು 'ನ ಗುರೋರಧಿಕಂ' ಎಂಬ ಶ್ರುತಿವಾಕ್ಯವನ್ನು ನಿನ್ನ ಈ ಆಚರಣೆಯಿಂದ ಪ್ರಮಾಣೀಕರಿಸಿದೆ; ನಿನ್ನ ಇಷ್ಟಲಿಂಗ ನಿಷ್ಠೆಯನ್ನೂ ಪ್ರಕಟಪಡಿಸಿದೆ. ನಾನು ಸಂತುಷ್ಟನಾಗಿರುವೆನು. ಇಗೋ, ನಿನ್ನ ಇಷ್ಟಲಿಂಗವು ನನ್ನ ಬಳಿಯೇ ಇರುವುದು. ಎಂದು ಅದನ್ನು ತನ್ನ ಅಮೃತಹಸ್ತದಿಂದಲೇ ಅವನಿಗೆ ಕರುಣಿಸಿದನು. ನಂತರ, ಎಲೈ ಹನುಮಂತನೇ! ನಿನಗೆ ಬೇಕಾದ ಮತ್ತೊಂದು ವರವನ್ನು ಬೇಡು ಅನುಗ್ರಹಿಸುವೆನು ಎಂದನು. ಅಷ್ಟರಲ್ಲಿ, ತನ್ನ ಕಿಡಿಗಣ್ಣು ಶಾಂತವಾಗಿ, ಹಿಂದಿರುಗಲು, ವೀರಭದ್ರನು, ಆಶ್ಚರ್ಯದಿಂದ ಕೈಲಾಸಕ್ಕೆ ಧಾವಿಸಿಬಂದನು. ನಂತರ ಶಿವ-ಶಿವೆಯರಿಗೆ ವಂದಿಸುತ್ತಿರುವಾಗ ತನ್ನ ಭಕ್ತ ಹನುಮಂತನು ಲಿಂಗವನ್ನು ಕರಕಮಲದಲ್ಲಿ ಧರಿಸಿರುವುದು ಗೋಚರವಾಯಿತು. ಅದನ್ನು ಕಂಡು ಅತ್ಯಾನಂದ ಹೊಂದಿ, ಶಂಕರನನ್ನು ಕುರಿತು, ಎಲೈ ಪಿತನೇ! ನನ್ನ ಶಿಷ್ಯನ ಪ್ರಾಣರಕ್ಷಣೆಗಾಗಿ, ಅವನ ಲಿಂಗವನ್ನು ತರಲು ನನ್ನ ಕಿಡಿಗಣ್ಣನ್ನು ಕಳುಹಿಸಿದೆನು. ಈ ನನ್ನ ಅಪರಾಧವನ್ನು ಗಣನೆಗೆ ತಾರದೆ, ಮನ್ನಿಸಿ ಸಲಹಬೇಕೆಂದು ಪ್ರಾರ್ಥಿಸಿದನು. ಆಗ ಶಂಕರನು ನಸುನಗೆ ಬೀರುತ್ತಾ ಎಲೈ ವೀರೇಶನೇ! ಇದರಲ್ಲಿ ಯಾರ ಅಪರಾಧವೂ ಇರುವುದಿಲ್ಲ. ಚಿಂತಿಸಬೇಡ. ಎಲ್ಲರೂ ನಿಮ್ಮ ನಿಮ್ಮ ಕರ್ತವ್ಯವನ್ನು, ನಿಷ್ಠೆಯಿಂದ ನೆರವೇರಿಸಿರುವಿರಿ. ಅಂತೂ ಗಿರಿಜೆಯ ಪ್ರೇರಣೆಯಂತೆ, ನಾರದರು ನಿರ್ದೇಶಿಸಿದ ಈ ನಾಟಕವು ಯಶಸ್ವಿಯಾಗಿ ಪರಿಸಮಾಪ್ತಿಗೊಂಡಿತು.

ಎಲೈ ವೀರೇಶನೇ ನೀನು ಹನುಮಂತನಿಗೆ ಒಂದು ಲಿಂಗವನ್ನು ಅನುಗ್ರಹಿಸಿದೆ. ಅವನ ಲಿಂಗ ನಿಷ್ಠೆಗೆ ಮೆಚ್ಚಿ, ನಾನು ಅವನ ರೋಮ ರೋಮಗಳೂ ಲಿಂಗವಾಗುವಂತೆ ಅನುಗ್ರಹಿಸಿರುವೆನು. ಅಲ್ಲದೆ ಅವನಿಗೆ ಗಣ ಪದವಿಯನ್ನೂ ಅನುಗ್ರಹಿಸಿರುವೆನು ಎಂದು ಹೇಳಿದನು. ಇದನ್ನು ಕೇಳಿದ ವೀರಭದ್ರ, ಗಿರಿಜೆ, ಹನುಮಂತ ಮತ್ತು ಅಲ್ಲಿ ನೆರೆದಿದ್ದ ದೇವ ಸಮೂಹವು ಆನಂದದಿಂದ ಜಯಕಾರ ಮಾಡಿ ಶಿವನನ್ನು ನಾನಾ ವಿಧದಿಂದ ಸ್ತೋತ್ರ ಮಾಡಿತು. ದೇವತೆಗಳು ದೇವ ದುಂದುಭಿಯನ್ನು ಮೊಳಗಿಸಿದರು. ಯಕ್ಷರು ಪುಷ್ಪವೃಷ್ಟಿಗರೆದರು. ನಂತರ ಎಲ್ಲರೂ ತಮ್ಮ ತಮ್ಮ ಲೋಕಗಳಿಗೆ ತೆರಳಿದರು.

ಹನುಮಂತನ ಹಿರಿಮೆಯ ಒಂದೆರಡು ಘಟನೆಗಳು :—

ಮಹಾಭಾರತದಲ್ಲಿ ಉಲ್ಲೇಖಿಸಿರುವಂತೆ, ಒಮ್ಮೆ ಧರ್ಮರಾಜನು ರಾಜಸೂಯ ಯಾಗವನ್ನು ಆಚರಿಸಿದನು. ಆಗ ಕೃಷ್ಣನ ಆದೇಶದಂತೆ, ಯಜ್ಞಭಾಗವನ್ನು ಸ್ವೀಕರಿಸಲು, ಶಿವಾಂಶ ಸಂಭೂತನಾದ ಪುರುಷಾಮೃಗವನ್ನು ಕರೆತರಲು ಭೀಮನನ್ನು ಕಳುಹಿಸುವನು. ಅದರಂತೆ ಭೀಮನು ಪುರುಷಾಮೃಗವನ್ನು ಹುಡುಕುತ್ತಾ ಇರುವಾಗ ಹನುಮಂತನ ದರ್ಶನವಾಗುತ್ತದೆ. ಅವರಿಬ್ಬರಿಗೂ ಕೆಲಕಾಲವಾದ ವಿವಾದಗಳು ನಡೆದು ಕೊನೆಗೆ ಇಬ್ಬರಿಗೂ ಇರುವ ನಿಕಟ ಸಂಬಂಧದ ಅರಿವಾಗುವುದು. ಆಗ ಹನುಮಂತನು ಭೀಮನಿಗೆ ಸಹಾಯ ಮಾಡುವೆನೆಂದು ಹೇಳಿ ತನ್ನ ಲಿಂಗರೂಪದ ರೋಮಗಳನ್ನು ಕೊಟ್ಟು ಅದರ ಸಹಾಯದಿಂದ, ಹೇಗೆ ಪುರುಷಾಮೃಗವನ್ನು ಯಾಗಕ್ಕೆ ಕರೆದುಕೊಂಡು ಹೋಗ ಬಹುದೆಂಬುದನ್ನು ವಿವರಿಸಿ ಕಳುಹಿದನು.

ಮತ್ತೊಮ್ಮೆ ದ್ವಾಪರಯುಗದಲ್ಲಿ, ಪರಮ ಶಿವಭಕ್ತನೂ, ಶ್ರೀ ಕೃಷ್ಣನ ವಂಶದ ಮೂಲದ ಪುರುಷನೂ (ಕೃಷ್ಣನಿಗಿಂತ ಎಂಟು ತಲೆ ಹಿಂದಿನವನು) ಆದ ಶ್ರೀಕರನೆಂಬ ಗೊಲ್ಲ ಬಾಲಕನಿಗೆ ಹನುಮಂತನು ದರ್ಶನವಿತ್ತು ಶಿವ ಸಿದ್ಧಾಂತದ ಉಪದೇಶ ಮಾಡಿ ಅವನನ್ನು ಅಲ್ಲಿ ನೆರೆದಿದ್ದ ರಾಜರನ್ನೂ ಅನುಗ್ರಹಿಸಿದನು.

ಏವಮುಕ್ತ್ವಾಂಜನೀಸೂನುಃ ಶಿವರೂಪೋ ಹರೀಶ್ವರಃ ।
ಸರ್ವಾನ್ರಾಜ್ಞಶ್ಚಂದ್ರ ಸೇನಂ ಕೃಪಾದೃಷ್ಟ್ಯಾ ದದರ್ಶ ಹ ॥
(ಶಿ. ಪು. 17–70)

ಅಥ ತಸ್ಮೈ ಶ್ರೀಕರಾಯ ಗೋಪಪುತ್ರಾಯ ಧೀಮತೇ ।
ಉಪಾದಿದೇಶ ಸುಪ್ರೀತ್ಯಾ ಶಿವಾಚಾರಂ ಶಿವಪ್ರಿಯಮ್ । (17–71)

(ಮಹಾಭಾರದ ಸೌಗಂಧಿಕಾಹರಣಪ್ರಸಂಗವನ್ನೂ ಇಲ್ಲಿ ಸ್ಮರಿಸಬಹುದು.)

ಈ ಎಲ್ಲಾ ಪವಿತ್ರಶಾಸ್ತ್ರಗಳ ಪ್ರಮಾಣದಿಂದ, ಹನುಮಂತನಿಗೆ ವೀರಭದ್ರನು ಲಿಂಗಧಾರಣೆಮಾಡಿರುವ ವಿಚಾರವು ನೂರಕ್ಕೆ ನೂರುಪಾಲು ಸತ್ಯವೆಂಬುದು ದೃಢಪಡುವುದು.

ವಿಶೇಷ ವಿಚಾರ :

ಈ ಕಥಾವಸ್ತುವು ವೀರಶೈವದ ಶ್ರೇಷ್ಠತೆ ಹಾಗೂ ಸನಾತನತ್ವದ ಮೇಲೆ ಹೆಚ್ಚು ಬೆಳಕು ಬೀರುತ್ತದೆ.

ಇದರಲ್ಲಿ ಉಲ್ಲೇಖಿಸಿರುವ ಸೈದ್ಧಾಂತಿಕ ವಿಚಾರಗಳನ್ನೆಲ್ಲಾ, ವಿಮರ್ಶಾತ್ಮಕ ದೃಷ್ಟಿಯಿಂದಲೂ ಸಂಶೋಧನಾತ್ಮಕ ಭಾವದಿಂದಲೂ, ನಿಷ್ಪಕ್ಷಪಾತ ಮನೋಭಾವದಿಂದಲೂ ಅವಲೋಕಿಸಿದರೆ, ವೀರಶೈವವು ಅತಿ ಪ್ರಾಚೀನವಾದ ಮಾನವಧರ್ಮವೆಂದೂ, ಇದು ವೇದಾಗಮ ಪ್ರಾಮಾಣ್ಯವುಳ್ಳದ್ದೆಂದೂ ದೃಢವಾಗುವುದು.

"ಯಾ ತೇ ರುದ್ರ ಶಿವಾ ತನೂರಘೋರಾ ಪಾಪಕಾಶಿನೀ" ಎಂಬ ವೇದವಾಕ್ಯದಂತೆಯೂ, ಹರದತ್ತಾಚಾರ್ಯರೂ, ತ್ರಿಲೋಚನ ಶಿವಾಚಾರ್ಯರೂ ರಚಿಸಿರುವ ಭಾಷ್ಯಗಳಲ್ಲಿಯೂ ಸಹ ಶ್ರೀ ರುದ್ರಶಿವನೇ ಅನಾದಿ ವೀರಶೈವನೆಂದು ದೃಢಪಡುವುದು. ಋಕ್-ಯಜುರ್-ಅಥರ್ವಣ ವೇದಗಳಲ್ಲಿಯೂ, ಜಾಬಾಲೋಪನಿಷತ್ತಿನಲ್ಲಿಯೂ, ವೀರಮಾಹೇಶ್ವರ ತಂತ್ರವೇ ಮೊದಲಾದ ಸನಾತನ ಧರ್ಮಗ್ರಂಥಗಳಲ್ಲಿಯೂ, ಶ್ರೀರುದ್ರನೇ ಪ್ರಥಮ ವೀರಶೈವನೆಂದೂ, ಪ್ರತಿಪಾದಿಸಲಾಗಿದೆ. ಅಂದರೆ, ಈ ವೀರಶೈವವು, ಆದಿಸೃಷ್ಟಿಯಿಂದಲೇ ಅಸ್ತಿತ್ವಕ್ಕೆ ಬಂದಿರುವುದೆಂಬುದು ಗಮನಾರ್ಹ.

ಅಂದರೆ ಹರ-ಬ್ರಹ್ಮರಿಗಿಂತಲೂ, ಪೂರ್ವದಲ್ಲಿಯೇ ಶ್ರೀ ರುದ್ರಶಿವನಿಂದ ಈ ಅಪ್ರಾಕೃತವಾದ ವೀರಶೈವ ಧರ್ಮವು ಸಂಸ್ಥಾಪಿಸಲ್ಪಟ್ಟಿರುವುದೆಂದು ಸ್ಪಷ್ಟವಾಗುವುದು.

ಅಲ್ಲದೆ ವೀರಶೈವ ಧರ್ಮವನ್ನು ವಿವರಿಸುವ ಪ್ರಥಮ ಆಧಾರ ಗ್ರಂಥವಾದ ''ಸಿದ್ಧಾಂತಶಿಖಾಮಣಿಯು''

ಮದದ್ವೈತಪರಂ ಶಾಸ್ತ್ರಂ ವೇದವೇದಾಂತಸಮ್ಮತಂ ।
ಸ್ಥಾಪಯಿಷ್ಯಸಿ ಭೂಲೋಕೇ ಸರ್ವೇಷಾಂ ಹಿತಕಾರಕಂ ॥

ಎಂಬ ರೇಣುಕಗೀತಾ ವಾಕ್ಯದಿಂದಲೂ,

ಏತೇ ಯುಗಚತುಷ್ಕೇ ತು ಪಂಚಾರಾಧ್ಯಾ ಯಥಾವಿಧಿ ।
ಮಮ ಲಿಂಗಮುಖೋದ್ಭೂತಾ ಲೋಕವಿಶೃತಕೀರ್ತಯಃ ॥

ಎಂಬ ಸ್ವಯಂಭುವಾಗಮದ ವಾಕ್ಯದಿಂದಲೂ,

ತಸ್ಮಾತ್ತ್ವಸ್ಮಾಚ್ಚ ಗಿರಿಜೇ ಪಂಚಾನನಸಮುದ್ಭವಾಃ ।
ಮದಾದಿಸರ್ವಲೋಕಾನಾಂ ಜಗದ್ಗುರುವಶೋತ್ತಮಾಃ ॥

ಎಂಬೀ ಆಗಮಪ್ರಮಾಣವಾಕ್ಯಗಳಿಂದಲೂ ಯುಗದಾದಿಯಲ್ಲಿ, ಶಿವನ ಪಂಚಮುಖೋದ್ಭವರಾದ ಶ್ರೀಪಂಚಾಚಾರ್ಯರಿಂದ ಶಿವಾದ್ವೈತಪರವಾದ ಈ ವೀರಶೈವಧರ್ಮವು ಭೂಲೋಕದಲ್ಲಿ ಸ್ಥಾಪಿತವಾಗಿ ಪ್ರಚಾರ ಮಾಡಲ್ಪಟ್ಟಿರುವುದೆಂಬ ವಿಚಾರವು, ಸ್ಪಷ್ಟವಾಗುವುದು.

"ಇತಿಹಾಸಃ ಪುರಾವೃತ್ತಂ ಪುರಾಣಂ ಚ ಪುರಾತನಂ" ಎಂಬಂತೆ ಇತಿಹಾಸವೆಂದರೆ ಪೂರ್ವದ ವೃತ್ತಾಂತವು. ಇದನ್ನು ಯಾವ ಕವಿಯೂ, ಕಣ್ಣಿನಿಂದ ನೋಡಿ ಬರೆದಿರುವುದಿಲ್ಲ. ಪುರಾಣವೆಂದರೆ ಪುರಾತನ ಇತಿಹಾಸ ಗ್ರಂಥಗಳು. ಇವುಗಳನ್ನು ಋಷಿಗಳೂ, ತ್ರಿಕಾಲಜ್ಞಾನಿಗಳಾದ ಯೋಗಿಗಳೂ ಬರೆದಿರುವರೆಂಬುದು ಪಂಡಿತರ ಅಭಿಪ್ರಾಯ ಹೀಗೆ ಪುರಾತನ ಗ್ರಂಥಗಳ ಆಧಾರದಿಂದಲೋ, ವೃದ್ಧ ಅನುಭಾವಿಗಳು ತಮ್ಮ ಪ್ರತ್ಯಕ್ಷಾನುಭವದಿಂದ ಹೇಳಿದ ಮಾತುಗಳ ಆಧಾರದಿಂದಲೋ ಇತಿಹಾಸವು ರಚಿಸಲ್ಪಡುವುದು ಸ್ವಾಭಾವಿಕ. ಆದರೆ ಪುರಾಣಗಳಲ್ಲಿ ಅನೇಕ ವಿಷಯಗಳು ಅತಿಯಾದ ಉತ್ಪ್ರೇಕ್ಷೆಗಳಿಂದಾಗಿ ನಂಬಲರ್ಹವಾಗಿ ಕಾಣುವುದಿಲ್ಲ. ತತ್ರಾಪಿ ಈಗಿನ ಜನಾಂಗವು ಪುರಾಣಗಳನ್ನು ನಂಬುವುದು ದಡ್ಡತನವೆಂದೇ ಭಾವಿಸುವರು. ಪಂಡಿತರ ಅಭಿಮತದಂತೆ ಪುರಾಣವು ವೇದದ ಒಂದು ಭಾಗವು.

ಅಥ ಚತ್ವಾರ್ಯುಪಾಂಗಾನಿ ವೇದಾನಾಂ ಸಂಪ್ರಚಕ್ಷತೇ ।
ಧರ್ಮಶಾಸ್ತ್ರಪುರಾಣಂ ಚ ಮೀಮಾಂಸಾ ನ್ಯಾಯವಿಸ್ತರಃ ॥

ಅಂದರೆ, ಧರ್ಮಶಾಸ್ತ್ರ, ಪುರಾಣ, ನ್ಯಾಯ ಮತ್ತು ಮೀಮಾಂಸ ಇವು ವೇದಕ್ಕೆ ನಾಲ್ಕು ಉಪಅಂಗಗಳಾಗಿ ಪರಿಗಣಿಸಲ್ಪಟ್ಟಿವೆ. ಪುರಾಣವೂ, ಒಂದು ಅಂಗವಾಗಿರುವುದರಿಂದ, ಅದು ದಂತಕಥೆ, ನಿರಾಧಾರವಾದುದು ಎಂದು, ಅದನ್ನು ಬಹಿಷ್ಕರಿಸಿದರೆ, ವೇದಾಂಗವೂ, ಒಂದು ಅಂಗವನ್ನು ಕಳೆದು ಕೊಂಡು ಹೀನಾಂಗವಾಗುವುದು. ಇದು ಧರ್ಮ ಸಮ್ಮತವಲ್ಲ.

ಪ್ರಾಚೀನ ಇತಿಹಾಸದ ಅನೇಕ ಗಹನ ವಿಷಯಗಳು ಪುರಾಣಗಳಿಂದಲೇ ಉದ್ಧೃತವಾಗಿ, ಅನುಭವದ ಸಾಕ್ಷಿಯುಳ್ಳವುಗಳೆಂಬುದು ಗಮನಾರ್ಹ. ಭಗವಾನ್ ವೇದವ್ಯಾಸ ರಚಿತವಾದ, ಪದ್ಮಪುರಾಣ, ಲಿಂಗಪುರಾಣ, ಶಿವಪುರಾಣ, ಸ್ಕಾಂದಪುರಾಣ ಮತ್ತು ಆಗಮ ಉಪನಿಷತ್ತುಗಳಲ್ಲಿ ಉಲ್ಲೇಖಿಸಿರುವಂತೆ ಹರಿಬ್ರಹ್ಮಾದಿದೇವತೆಗಳೂ, ಗೌತಮಾದಿ ಋಷಿಶ್ರೇಷ್ಠರೂ, ತಮ್ಮ

ತಮ್ಮ ಉತ್ತಮಾಂಗಗಳಲ್ಲಿ ಲಿಂಗವನ್ನು ಧರಿಸಿ ಆರಾಧಿಸಿ, ತಮ್ಮ ತಮ್ಮ ಇಷ್ಟಾರ್ಥಗಳನ್ನು, ಪಡೆದಿರುವರು.

ಬ್ರಹ್ಮವಿಷ್ಣ್ವಾದಯೋ ದೇವಾ ಮುನಯೋ ಗೌತಮಾದಯಃ ।
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ ॥

ಈ ವಿಷಯವು, ಅಂದರೆ ಲಿಂಗಧಾರಣವಿಚಾರವು, ಲಿಂಗಧಾರಣ ಚಂದ್ರಿಕೆ, ಸಿದ್ಧಾಂತಶಿಖೋಪನಿಷತ್ತು, ವೀರಲೈಂಗ್ಯೋಪನಿಷತ್ತು, ವಾತುಲಾಗಮ, ಪಾರಮೇಶ್ವರಾಗಮ, ವೀರಾಗಮ, ಸೂಕ್ಷ್ಮಾಗಮ, ಗೌತಮ ಶ್ರುತಿ, ಹಾರೀತ ಸ್ಮೃತಿ, ರಾಮಾಯಣ, ಮಹಾಭಾರತ ಮೊದಲಾದ ಸನಾತನ ಧರ್ಮಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇದರಿಂದ ಭಾರತವು ಶೈವದರ್ಶನದ ಆಗರವೆಂದೂ, ವೀರಶೈವವು ಅತಿ ಪ್ರಾಚೀನವಾದುದೆಂದೂ ದೃಢಪಡುವುದು. ಅನೇಕ ಪುಣ್ಯಕ್ಷೇತ್ರಗಳಲ್ಲಿ. ಅಂದರೆ ಗವಿಪುರದ ಉದ್ಭಾನ ವೀರಭದ್ರದೇವಾಲಯದ ಆವರಣದಲ್ಲಿ ಲಿಂಗಧಾರಿ ಹನುಮಂತನ ವಿಗ್ರಹವಿರುವುದರಿಂದಲೂ, ಮಾಧ್ವ ಕ್ಷೇತ್ರವೆಂದು ಹೆಸರಾಗಿರುವ, ಮಂತ್ರಾಲಯ ಕ್ಷೇತ್ರದಲ್ಲಿ ಶ್ರೀರಾಘವೇಂದ್ರರಾಯರ ಬೃಂದಾವನಕ್ಕೆ 8–10 ಅಡಿಗಳ ದೂರದಲ್ಲಿಯೇ ಶಿವಲಿಂಗ, ಹನುಮಂತ, ವೀರಭದ್ರರ ವಿಗ್ರಹಗಳು ಈಗಲೂ ಪೂಜೆಗೊಳ್ಳುತ್ತಿರುವುದರಿಂದಲೂ, ಶ್ರೀನಗರದಲ್ಲಿ ಪಂಚಮುಖಿ ಹನುಮಂತನ ಶಿರಸ್ಸಿನಲ್ಲಿ ಲಿಂಗವಿರುವುದು, ಕೇದಾರಕ್ಷೇತ್ರ, ಹಂಪೆ, ಉಜ್ಜಯಿನೀಕ್ಷೇತ್ರ, ರಂಭಾಪುರೀ ಕ್ಷೇತ್ರ, ಶಿವಸಮುದ್ರ, ಸಾವನದುರ್ಗ, ನಿಜಗಲ್, ಲೇಪಾಕ್ಷಿ, ಚಿಕ್ಕಮಗಳೂರು ನಂದಿಬೆಟ್ಟ, ಹುಬ್ಬಳ್ಳಿ, ಮುಂತಾದ ಅನೇಕ ಶಿವ, ಹಾಗೂ ಶಿವೇತರಕ್ಷೇತ್ರಗಳಲ್ಲಿ ಒಂದೇಕಡೆ ವೀರಭದ್ರನ ಹಾಗೂ, ಹನುಮಂತನ ವಿಗ್ರಹಗಳು ಪೂಜೆಗೊಳ್ಳುತ್ತಿರುವುದು ಗಮನಾರ್ಹ ವಿಚಾರ. ಇದರಿಂದ ಶ್ರೀವೀರಭದ್ರನು ಆದಿ ಸೃಷ್ಟಿಯಿಂದಲೂ, ವ್ಯಾಪಕವಾಗಿ ಪೂಜೆಗೊಳ್ಳುತ್ತಾ ಅಪಾರವಾದ ಶಿಷ್ಯಸಂಪತ್ತುಳ್ಳವನಾಗಿರುವುದು ನಿರ್ವಿವಾದ ವಿಷಯ. ಅಲ್ಲದೆ ಶ್ರೀ ವೀರಭದ್ರನ ಹೆಸರು ಈಗಾಗಲೇ ತಿಳಿಸಿರುವಂತೆ ವೇದ, ಆಗಮ, ಉಪನಿಷತ್ತು, ಶ್ರುತಿ, ಸ್ಮೃತಿ ಪುರಾಣಗಳಲ್ಲಿ ಅಖಂಡವಾಗಿ ಉಲ್ಲೇಖಿಸಲ್ಪಟ್ಟಿದೆ.

ಉತ್ತರಕರ್ನಾಟಕದಲ್ಲಿ "ಹನುಮಂತನಿಗೆ ಲಿಂಗಧಾರಣೆ" ಎಂಬ ನಾಟಕವೂ, ಬೈಲು ನಾಟಕಗಳೂ ಬಹು ವ್ಯಾಪಕವಾಗಿ ಪ್ರದರ್ಶಿಸಲ್ಪಡುತ್ತಿವೆ.

ಆದುದರಿಂದ, ಹನುಮಂತನಿಗೆ ಲಿಂಗಧಾರಣವು ವೀರೇಶನಿಂದ ಅನುಗ್ರಹಿಸಲ್ಪಟ್ಟ ವಿಚಾರವು ಉತ್ತರಕರ್ಣಾಟಕದವರಿಗೆಲ್ಲಾ ಮನೆಮಾತಾಗಿ ಅತ್ಯಂತ ಪ್ರಚಾರದಲ್ಲಿರುವ ವಿಷಯವೇ ಆಗಿದೆ. ಆದರೆ, ಹಳೆಯ ಕರ್ಣಾಟಕಲ್ಲಿ ಈ ವಿಚಾರವು ಹೆಚ್ಚು ಪ್ರಚಾರದಲ್ಲಿಲ್ಲದಿರುವುದು ವಿಷಾದದ ಸಂಗತಿ.

"ವಜ್ರದಂಷ್ಟ್ರೋ ವಜ್ರನಖಃ ರುದ್ರವೀರ್ಯ ಸಮುದ್ಭವಃ". ಎಂಬ ಆಂಜನೇಯಾಷ್ಟೋತ್ತರ ಶತನಾಮಾವಳಿಯಂತೆಯೂ, "ಹನೂಮಾನ್ ರುದ್ರ ಸಂಭವಃ" ಎಂಬ ಅಗಸ್ತ್ಯಪುರಾಣವಾಕ್ಯದಂತೆಯೂ, ತೆಲುಗು 'ರಾಘವ ಪಾಂಡವೀಯ'ದ ಕಿಷ್ಕಿಂಧಾಕಾಂಡದಲ್ಲಿನ "ಪರಶಿವುನಿ ಅಂಶಮುತೋ ಜನಿಂಚಿನ ಹನುಮಂತುನಿ" "ಶಂಕರುನಿ ಶಕ್ತಿವಲುತೋ ಅವತರಿಂಚಿನ ಆಂಜನೇಯುನಿ" "ತಾರಾಧಿಪತಿಸುತುಡನು" ಎಂಬ ವಾಕ್ಯಗಳಂತೆಯೂ, ಅಲ್ಲದೆ ಉತ್ತರ ಭಾರತದಲ್ಲೆಲ್ಲಾ ಪ್ರಸಿದ್ಧಿ ಪಡೆದಿರುವ ಹಿಂದಿಯ 'ಹನುಮಾನ್' ಎಂಬ ಪುಸ್ತಿಕೆಯಲ್ಲಿ, ರುದ್ರಶಬ್ದಕ್ಕೆ, ಪರಶಿವನೆಂದು ಅರ್ಥಮಾಡಿ, "ರುದ್ರ ವೀರ್ಯಸಮುದ್ಭವಃ" ವಾಕ್ಯಕ್ಕೆ ಕೊಟ್ಟಿರುವ ವಾಕ್ಯ ವಿವರಣೆಯಿಂದಲೂ, ಮತ್ತು ಕುಮಾರವ್ಯಾಸ ಭಾರತದ ದಿಗ್ವಿಜಯ ಪರ್ವದಲ್ಲಿ ಉಲ್ಲೇಖಿಸಿರುವಂತೆ, ಧೌಮ್ಯರ ಸಲಹೆಯಂತೆ, ಕೃಷ್ಣನು ಭೀಮನನ್ನು ಪುರುಷಾಮೃಗವನ್ನು ಕರೆತರಲು, ಭೀಮನನ್ನು ಕಳುಹಿಸಿದಾಗ ಮಾರುತಿಯು "ತನ್ನ ಬಾಲದ ಕೂದಲೊಳಗೇಳೆಂಟು ರೋಮವ ಕಿತ್ತು ನೀಡೆ" ಎನ್ನುವಿವೇ ಮೊದವಾದ ಈ ಎಲ್ಲಾ ಪ್ರಮಾಣ ವಾಕ್ಯಗಳಿಂದಲೂ, ವಾಯುದೇವನು ಶಿವ ಶಕ್ತಿಯನ್ನು ಆವಾಹನೆ ಮಾಡಿ (ತನ್ನ ರಕ್ಷಣೆಯಲ್ಲಿಯೇ ಭಸ್ಮಾಸುರ ಸಂಹಾರ ಕಾಲದಿಂದಲೂ ಇದ್ದ ಎಂದು ಭಾವ) ತಚ್ಛಕ್ತಿಯನ್ನು ಅಂಜನಾದೇವಿಯ ಗರ್ಭದಲ್ಲಿ ಪ್ರತಿಷ್ಠಿಸಿದನೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಅಲ್ಲದೆ ಮಾರುತಿಯ ರೋಮ ರೋಮದಿಂದ ಪವಿತ್ರವಾದ ಶಿವಲಿಂಗಗಳು ಉದ್ಭವಿಸಿರುವುದನ್ನು ಪರಿಭಾವಿಸಿದರೆ, ಆಂಜನೇಯನಲ್ಲಿ ರುದ್ರಾಂಶವಿರಲೇಬೇಕೆಂಬುದು ಸುಸ್ಪಷ್ಟ ಹಾಗೂ ನಿರ್ವಿವಾದ ವಿಚಾರ. ಆಧಾರ, (ಕೆ. ರಾಮಸ್ವಾಮಿ ಐಯ್ಯಂಗಾರ್ ವಿರಚಿತ 'ಮಾರುತಿ ಭಕ್ತಿ ದರ್ಪಣ')

ಇಷ್ಟೇ ಅಲ್ಲದೆ, ಪುರಾಣಾಂತರ್ಗತವಾದ ಹನುಮಂತ ಮಹಿಮಾತಿಶಯಗಳು ಅನೇಕವಾಗಿವೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಉದಾಹರಿಸಲಾಗಿದೆ.

ಆನಂದರಾಮಾಯಣದಲ್ಲಿ ಉಲ್ಲೇಖಿಸಿರುವಂತೆ, ಇಂದ್ರಜಿತುವಿನ ವಧೆಯ ನಂತರ, ರಾವಣನ ಇಚ್ಛೆಯಂತೆ ರಾವಣನ ಬಂಧುವಾದ ಅಹಿರಾವಣನು ರಾಮಲಕ್ಷ್ಮಣರನ್ನು ಮಾಯೆಯಿಂದ ಪಾತಾಳಕ್ಕೆ ಕೊಂಡೊಯ್ದನು. ವಿಭೀಷಣನ ಸಲಹೆಯಂತೆ ಹನುಮಂತನು ಪಾತಾಳಕ್ಕೆ ಹೋಗಿ, ಅಹಿರಾವಣನ ಪಟ್ಟಣದ ಮಹಾದ್ವಾರವನ್ನು ಕಾಯುತ್ತಿದ್ದ (ಲಂಕಾದಹನ ಕಾಲದಲ್ಲಿ ಮಾರುತಿಯ ಮೈಬೆವರ ಹನಿ ಸಮುದ್ರದಲ್ಲಿ ಬೀಳಲು, ಅದನ್ನು ಒಂದು ಮತ್ಸ್ಯ ನುಂಗಿತು. ಅದರ ಗರ್ಭದಲ್ಲಿ ಮಕರಧ್ವಜನೆಂಬ ಈ ವೀರನು ಹುಟ್ಟಿದನು) ಮಕರಧ್ವಜನನ್ನು ಯುದ್ಧದಲ್ಲಿ ಸೋಲಿಸಿ, ಪುರಪ್ರವೇಶ ಮಾಡಿದನು. ಅಹಿರಾವಣನು ದೇವಿಯ ಆರಾಧನೆ ಮಾಡಿ ರಾಮ-ಲಕ್ಷ್ಮಣರನ್ನು ದೇವಿಗೆ ಬಲಿಕೊಡಲು ತಂದು ನಿಲ್ಲಿಸಿರಲು, ರಾಮನು ದುಃಖದಿಂದ ಹನುಮಂತನನ್ನು ಸ್ಮರಿಸಿದನು. ಆ ವೇಳೆಗೆ ಆಗಲೇ ರಾಮಲಕ್ಷ್ಮಣರನ್ನರಸುತ್ತ ಹನುಮಂತನು ಆ ದೇವಿಯ ವಿಗ್ರಹದ ಹಿಂದೆ ಅವಿತು ಕೊಂಡಿದ್ದನು. ರಾಮಲಕ್ಷ್ಮಣರ ಮರಣಾವಸ್ಥೆಯನ್ನು ಕಂಡು ಅತ್ಯಂತ ದುಃಖಿತನಾಗಿ, ಕೂಡಲೇ ಹೊರಬಂದು ರಾಮ-ಲಕ್ಷ್ಮಣರನ್ನು ತನ್ನ ಭುಜದ ಮೇಲೇರಿಸಿ ಕೊಂಡು, ಎದುರಾದ ದಾನವಸೇನೆಯನ್ನು ಧ್ವಂಸ ಮಾಡಿ ರಾಮ-ಲಕ್ಷ್ಮಣರನ್ನು ರಕ್ಷಿಸಿ, ಮತ್ತೆ ರಣಾಂಗಣಕ್ಕೆ ಕರೆತಂದನು.

ಪದ್ಮಪುರಾಣದಲ್ಲಿ ಹೇಳಿರುವಂತೆ, ಹನುಮಂತನು ಬಂಡೆಗಳ ಮೇಲೆ ರಾಮಾಯಣವನ್ನು ಬರೆಯಲು ಅದು ಎಲ್ಲರ ಪ್ರಶಂಸೆಗೂ ಪಾತ್ರವಾಯಿತು. ರಾಮಾಯಣವನ್ನು ಬರೆಯುತ್ತಿದ್ದ ವಾಲ್ಮೀಕಿಯು ಇದನ್ನು ತಿಳಿದು ಹನುಮಂತನ ಸ್ವಾನುಭವ ಕಾವ್ಯದ ಮುಂದೆ ನನ್ನ ಮಾನಸಿಕ ಕಾವ್ಯವು ನೀರಸವಾಯಿತು. ನನ್ನ ಪ್ರಯತ್ನವೆಲ್ಲಾ ನಿಷ್ಫಲವಾಯಿತೆಂದು ದುಃಖಿಸುತ್ತಿದ್ದನು. ಆ ವೇಳೆಗೆ ಹನುಮಂತನು ಅಲ್ಲಿಗೆ ಬಂದು ವಾಲ್ಮೀಕಿಯ ದುಃಖದ ಕಾರಣವನ್ನು ತಿಳಿದು, ವೈರಾಗ್ಯ ಶೀಲನೂ, ತ್ಯಾಗಮೂರ್ತಿಯೂ,ಆದ ಹನುಮಂತನು ಕೂಡಲೇ ತಾನು ಬರೆದಿದ್ದ ರಾಮಾಯಣದ ಬಂಡೆಗಳನ್ನೆಲ್ಲಾ ಸಮುದ್ರಕ್ಕೆ ಎಸೆದನು. ಆಗ ವಿಸ್ಮಯದಿಂದ ಕುಡಿದ ವಾಲ್ಮೀಕಿಯು, ಎಲೈ, ತ್ಯಾಗಶೀಲನಾದ ಮಾರುತಿಯೇ, ನನ್ನ ಯಶಃಕಾಮನೆಯನ್ನು ಮನ್ನಿಸಿ, ನೀನು ಆತ್ಮಾನುಭವದಿಂದ ರಚಿಸಿದ್ದ ಸತ್ಯವೂ, ಅನರ್ಘ್ಯವೂ ಆದ ರಾಮಾಯಣವನ್ನು ನೀರು

ಪಾಲು ಮಾಡಿದೆ. ನಿನ್ನಂತಹ ಉದಾರಚರಿತರೂ, ನಿಸ್ವಾರ್ಥಪರರೂ, ಮಹಾತ್ಯಾಗಿಗಳೂ, ಮೂರು ಲೋಕಗಳಲ್ಲಿಯೇ ಯಾರೂ ಇಲ್ಲ. ಈ ನಿನ್ನ ತ್ಯಾಗವು ನನ್ನ ರಾಮಾಯಣದ ಕೀರ್ತಿಗಿಂತಲೂ ನೂರ್ಮಡಿಯಾಗಿ ಅಧಿಕವಾದುದು ಎಂದು ಪ್ರಶಂಸಿಸಿದರು.

ದ್ವಾಪರದಲ್ಲಿ ಒಮ್ಮೆ ಹನುಮಂತನು, ದ್ವಾರಕಿಯ ಉಪವನವನ್ನು ಪ್ರವೇಶಿಸಿ, ಫಲಗಳನ್ನು ತಿನ್ನುತ್ತಿದ್ದನು. ಆಗ ಕೃಷ್ಣನು ಗರುಡನನ್ನು ಕರೆದು, ಆ ಕಪಿಯನ್ನು ಹಿಡಿದು ತಾರೆಂದು ಆಜ್ಞಾಪಿಸಿದನು. ಅದರಂತೆ ಗರುಡನು ಹನುಮಂತನನ್ನು ಹಿಡಿಯ ಬರಲು ಅವರೀರ್ವರ ಮಧ್ಯೆ ಘೋರಯುದ್ಧ ನಡೆಯಿತು. ಹನುಮಂತನ ಏಟನ್ನು ಸಹಿಸಲಾರದೆ ಗರುಡನು ನಿಶ್ಚೇಷ್ಟಿತನಾಗಲು, ಅವನನ್ನು ಮಾರುತಿಯು, ತನ್ನ ಬಾಲದಿಂದ ಸುತ್ತಿ ಸಮುದ್ರಕ್ಕೆ ಎಸೆದು, ಗರುಡನ ಗರ್ವಭಂಗ ಮಾಡಿ, ಮಲಯ ಪರ್ವತಕ್ಕೆ ಹೋದನು. (ಆಧಾರ–ತುಲಸೀರಾಮಾಯಣ).

ದ್ವಾಪರದಲ್ಲಿ ಒಮ್ಮೆ ಅರ್ಜುನನು ಕೃಷ್ಣನೊಡನೆ ದಕ್ಷಿಣ ಸಮುದ್ರದ ಬಳಿಗೆ ಯಾತ್ರಾರ್ಥಿಯಾಗಿ ಬಂದು, ಕೃಷ್ಣನನ್ನು ಕುರಿತು ಎಲೈ ಕೃಷ್ಣನೇ, ಸಮುದ್ರಕ್ಕೆ ಸೇತುವೆಯನ್ನು ವಾನರ ಸೈನ್ಯವು ನಿರ್ಮಾಣ ಮಾಡಿತೆಂದು ಕೇಳಿರುವೆನು. ಸಾಕ್ಷಾತ್ ಪರಮೇಶ್ವರನೇ ರಾಮನ ತಪಸ್ಸಿಗೆ ಮೆಚ್ಚಿ, ಅಕ್ಷಯ ಬಾಣಗಳನ್ನೂ ಪಾಶುಪತವನ್ನೂ ಕೊಟ್ಟನೆಂದೂ, ಕೇಳಿರುವೆನು. ಆ ರಾಮನು ಇಂಥಾ ಪ್ರಬಲವಾದ ಅಕ್ಷಯಬಾಣಗಳನ್ನು ಪಡೆದಿದ್ದರೂ, ಸಮುದ್ರಕ್ಕೆ ಸೇತುವೆಯನ್ನು ಕಟ್ಟಲು ಏಕೆ ಸಮರ್ಥನಾಗಲಿಲ್ಲ? ಎಂದು ಕೇಳಿದನು. ಆಗ ಕೃಷ್ಣನು ಆ ವಿಷಯ ನನಗೆ ತಿಳಿಯದು. ಇಲ್ಲೇ ಸಮೀಪದಲ್ಲಿರುವ ಶಿವಲಿಂಗದ ಬಳಿ ಸದಾ ಧ್ಯಾನಮಗ್ನನಾಗಿರುವ ಹನುಮಂತನನ್ನೇ ಕೇಳಿ ತಿಳಿಯೋಣವೆಂದು ಹೇಳಿ, ಸಮೀಪದಲ್ಲಿಯೇ ಶಿವಲಿಂಗದ ಬಳಿಯಲ್ಲಿ ಧ್ಯಾನಮಗ್ನನಾಗಿದ್ದ ಹನುಮಂತನನ್ನು ದರ್ಶನ ಮಾಡಿ ಇಬ್ಬರೂ ಅವನಿಂದ ಅರ್ಜುನನ ಸಂದೇಹಕ್ಕೆ ಸಮರ್ಥವಾದ ಉತ್ತರ ಪಡೆಯುತ್ತಾರೆ.

ಹನುಮಂತನು ಸದಾ ಶಿವಲಿಂಗದ ಬಳಿಯಲ್ಲಿ ಧ್ಯಾನನಿರತನಾಗಿರುವನೆಂಬ ವಿಚಾರವು ಈ ಮೇಲಿನ ಸತ್ಯಾಂಶದಿಂದ ದೃಢವಾಗುವುದು. ಅಲ್ಲದೆ ಸಹಸ್ರಾರು ವರ್ಷ ತಪಸ್ಸನ್ನಾಚರಿಸಿ, ನಂದಿಯು, ಶಿವನ ವಾಹನವಾಗುವ ಭಾಗ್ಯ

ಪಡೆದನು. ಎರಡನೆಯವನಾಗಿ ಮಹಾವಿಷ್ಣುವು, ಶಿವನ ತಪಸ್ಸಿನ ಫಲವಾಗಿ, ಒಮ್ಮೆ ತ್ರಿಪುರ ಸಂಹಾರದ ಕಾಲದಲ್ಲಿ ಶಿವನ ವಾಹನವಾಗುವನು. ಮಾರುತಿಯಾದರೋ ಕೇವಲ ತನ್ನ ಭಕ್ತಿಯಿಂದಲೇ, ಏಕಕಾಲದಲ್ಲಿಯೇ ಪಾರ್ವತಿ ಪರಮೇಶ್ವರರೀರ್ವರಿಗೂ ವಾಹನವಾಗುವ ಭಾಗ್ಯವನ್ನು ಪಡೆಯುವನು. ಈ ಪವಿತ್ರ, ಹಾಗೂ ತ್ರಿಮೂರ್ತಿಗಳಿಗೂ ದುರ್ಲಭವಾದ ಭಾಗ್ಯ ಲಭಿಸಿದ್ದು, ಮಾರುತಿಯು ಮಹೋನ್ನತವ್ಯಕ್ತಿತ್ವಕ್ಕೆ ಕಿರೀಟ ಪ್ರಾಯವಾಗಿದೆ. (ಮಹಾಭಾರತದ ಆಧಾರ).

ಇದರಿಂದ ಬೆಳಕಿಗೆ ಬರುವ ಮತ್ತೊಂದು ಅತಿ ಮುಖ್ಯ ವಿಷಯವೆಂದರೆ, ವೀರ ಹನುಮಂತನದು ಮಹೋನ್ನತವಾದ ವ್ಯಕ್ತಿತ್ವ. ಹನುಮಂತನು ಬಾಲ್ಯದಲ್ಲಿಯೇ ತನ್ನ ಬಲಪ್ರದರ್ಶನಮಾಡಿ, ಅದರ ಫಲವಾಗಿ. ಶಿವ ಮತ್ತು ಇತರ ಎಲ್ಲಾ ದೇವತೆಗಳಿಂದಲೂ, ಅನೇಕ ಶ್ರೇಷ್ಠ ವರಗಳನ್ನು ಪಡೆಯುವನು. ತನ್ನ ಶೌರ್ಯ ಹಾಗೂ ಪ್ರತಿಭೆಗಳಿಂದ, ಸುಗ್ರೀವನ ಮಂತ್ರಿಮಂಡಲದಲ್ಲಿ ಗಣ್ಯ ಸ್ಥಾನ ಪಡೆದನು. ನಂತರ ಸುಗ್ರೀವ ಮತ್ತು ರಾಮನ ರಾಯಭಾರಿಯಾಗಿ ರಾವಣನ ಗರ್ವಭಂಗ ಮಾಡಿದನು. ನಂತರ ತನ್ನ ಅಪ್ರತಿಮ ಶೌರ್ಯ ಸಾಹಸಗಳಿಂದ ರಾಮನ ವಿಜಯಕ್ಕೆ ಮುಖ್ಯ ಕಾರಣನಾದನು ಅಲ್ಲದೆ ಇವನ ಅಧ್ಯಾತ್ಮ ಜ್ಞಾನದ ಹಿರಿಮೆಯನ್ನು ರಾಮನೇ ಪ್ರಶಂಸಿಸಿದನು. ಕೊನೆಯವರೆವಿಗೂ ಬ್ರಹ್ಮಚರ್ಯವನ್ನು ಪಾಲಿಸಿ, ವೈರಾಗ್ಯಮೂರ್ತಿಯಾಗಿ ಕೀರ್ತಿಪಡೆದನು. ನಂತರ, ತನ್ನ ಗುರುಭಕ್ತಿಯನ್ನೂ, ಲಿಂಗಪೂಜಾನಿಷ್ಠೆಯನ್ನೂ ತ್ರಿಮೂರ್ತಿಗಳೂ ಮೆಚ್ಚುವಂತೆ ಪ್ರದರ್ಶಿಸಿ, ಪ್ರಪಂಚಕ್ಕೇ ಮಾರ್ಗದರ್ಶನ ನೀಡಿದನು. ಇದೆಲ್ಲಕ್ಕೂ ಕಲಶವಿಟ್ಟಂತೆ, ಅಗಸ್ತ್ಯ, ನಾರದ, ಗೌತಮರೇ ಮೊದಲಾದ ಋಷಿಶ್ರೇಷ್ಠರಿಂದ, ಹರಿ–ಬ್ರಹ್ಮರನ್ನೂ ಮೀರಿಸುವ ಪರಾಕ್ರಮ, ತತ್ವಜ್ಞಾನ, ವೈರಾಗ್ಯ, ಸೌಜನ್ಯ, ಬ್ರಹ್ಮಚರ್ಯ, ಇತ್ಯಾದಿ ಶ್ರೇಷ್ಠ ಗುಣಗಳನ್ನು ಹೊಂದಿದವನೆಂದು ಪ್ರಶಂಸೆಗೊಂಡಿರುವನು. ಗೌತಮರ ಹಾಗೂ, ಶಿವನ ಸಾನ್ನಿಧ್ಯದಲ್ಲಿ ಸಾಕ್ಷಾತ್ ನಾರಾಯಣನೇ, ಮಾರುತಿಯು ಶಿವಭಕ್ತರಲ್ಲಿ ಶ್ರೇಷ್ಠನೆಂದೂ, ವೈರಾಗ್ಯಮೂರ್ತಿಯೆಂದೂ, ತನ್ನ ಪವಿತ್ರವಾದ ಭಕ್ತಿಯಿಂದ ತನ್ನನ್ನೂ ರಾಮನನ್ನೂ, ಶಿವನನ್ನೂ, ವೀರೇಶನನ್ನೂ ಪ್ರಸನ್ನೀಕರಿಸಿಕೊಂಡನೆಂದೂ ಹೊಗಳಿರುವನು.

ಇಂಥಾ ಅಸದೃಶ ಹಾಗೂ, ಮೂರು ಲೋಕಗಳ ಇತಿಹಾಸದಲ್ಲಿಯೇ ಯಾರಿಗೂ ಲಭಿಸಿಲ್ಲದ ವ್ಯಕ್ತಿತ್ವಹೊಂದಿರುವ ವೀರ ಹನುಮಂತನ ಬಗ್ಗೆಯೂ, ಕೆಲ ವಲಯಗಳಲ್ಲಿ, ಅಪಪ್ರಚಾರವಾಗದೆ ಇಲ್ಲ. ಅವನ ಹಿರಿಮೆಯನ್ನು ತಗ್ಗಿಸುವ ಪ್ರಯತ್ನಗಳು ನಡೆಯುತ್ತಿರುವುದು ಶೋಚನೀಯ ಮತ್ತು ದುರದೃಷ್ಟಕರ. ಈ ಎಲ್ಲಾ ಪ್ರಮಾಣಗಳಿಂದಲೂ, ಹನುಮಂತನು ಯಾವ ದೇವತೆಗಳಿಗೂ, ಯಾವ ವಿಧದಲ್ಲಿಯೂ, ಕಡಿಮೆಯಿಲ್ಲವೆಂಬ ಸತ್ಯವು ದೃಢವಾಗುವುದು. ಶ್ರೀರಾಮ, ಲಕ್ಷ್ಮಣ, ಸೀತೆ, ಅಗಸ್ತ್ಯ, ನಾರದರೇ ಮೊದಲಾದವರು ಮಾರುತಿಯ ವ್ಯಕ್ತಿತ್ವವನ್ನು ಮನಸಾ ಪ್ರಶಂಸಿಸಿ, ಮೇರು ಗಿರಿಯ ಅತ್ಯುನ್ನತ ಶಿಖರಕ್ಕೆ ಏರಿಸಿರುವಾಗ, ಕೆಲ ದುರಭಿಮಾನಿಗಳು ಬಹುಶಃ ಶ್ರೀಹನುಮಂತನಿಗೆ ಯೋಗ್ಯ ಸ್ಥಾನವನ್ನು ನೀಡುವುದರಿಂದ, ರಾಮನ ಕೀರ್ತಿಗೆ ಚ್ಯುತಿಯಾಗಬಹುದೆಂಬ ದುರ್ಭಾವನೆಯಿಂದಲೋ ಅಥವಾ ಮತ್ತಾವಕಾರಣದಿಂದಲೋ, ಇಂಥಾ ಮಾರುತಿಯನ್ನು, ತನಗೆ ಅತ್ಯಂತ ಋಣಿಯೂ, ಕೃತಜ್ಞನೂ, ಆತ್ಮಬಂಧುವೂ, ಆದ ರಾಮನ ಪಾದದಡಿಯಲ್ಲಿ, ಕೂಡಿಸಿ ಅವನನ್ನು, ರಾಮಭಂಟ, ರಾಮದಾಸ, ರಾಮನ ಪಾದಸೇವಕ ಇತ್ಯಾದಿ, ಅನಾಗರಿಕ ಮತ್ತು ಕೃತಘ್ನತಾಸೂಚಕವಾದ ಹೆಸರುಗಳಿಂದ ಕರೆಯುತ್ತಿರುವುದು ಸರ್ವವೇದ್ಯವೇ ಆಗಿದೆ. ಮಾರುತಿಯ ಪವಿತ್ರ ವ್ಯಕ್ತಿತ್ವವನ್ನು ತಿಳಿದ ಯಾವ ಸುಸಂಸ್ಕೃತ ಜನಾಂಗವೇ ಆಗಲೀ, ನಿಷ್ಪಕ್ಷಪಾತ ವಿಮರ್ಶಕರೇ ಆಗಲಿ, ಇಂಥಾ ಹೀನ ಕೃತ್ಯವನ್ನು ಮನ್ನಿಸುವುದಂತಿರಲಿ, ಸೈರಿಸುವುದೂ ಇಲ್ಲ. ಮಾರುತಿಯು, ಮೇಲಾಗಿ ಭಾರತೀಯ ಮತ್ತು ಕನ್ನಡಿಗನೆಂಬುದು ಗಮನಾರ್ಹ ಮತ್ತು ಹೆಮ್ಮೆಯ ವಿಷಯ. ಇಂಥಾ ಶ್ರೀಮಾರುತಿಯ ಮಹೋನ್ನತ ವ್ಯಕ್ತಿತ್ವವನ್ನು ವ್ಯಾಪಕವಾಗಿ ಪ್ರಚಾರಮಾಡುವುದರ ಮೂಲಕ ಅವನ ಬಗ್ಗೆ ಆಗಿರುವ ಅಪಪ್ರಚಾರವನ್ನು ತಡೆಗಟ್ಟುವುದು ಪ್ರತಿ ಭಾರತೀಯ ಹಾಗೂ, ಆಸ್ತಿಕನ ಪವಿತ್ರ ಕರ್ತವ್ಯವೆಂದು ಕಳಕಳಿಯಿಂದ ಮನವಿ ಮಾಡ ಬಯಸುತ್ತೇನೆ.

ಇತಿ ಗ್ರಂಥಕರ್ತ.

ಶ್ರೀಗುರುವೀರಭದ್ರಾಷ್ಟೋತ್ತರಶತನಾಮಾವಲಿಃ

ಓಂ ಶ್ರೀ ವೀರಭದ್ರಾಯ ನಮಃ
ಮಹಾಶೂರಾಯ ನಮಃ
ರೌದ್ರಾಯ ನಮಃ
ರುದ್ರಾವತಾರಾಯ ನಮಃ
ಶ್ಯಾಮಾಂಗಾಯ ನಮಃ
ಉಗ್ರದಂಷ್ಟ್ರಾಯ ನಮಃ
ಭೀಮನೇತ್ರಾಯ ನಮಃ
ಜಿತೇಂದ್ರಿಯಾಯ ನಮಃ
ಊರ್ಧ್ವಕೇಶಾಯ ನಮಃ
ಭೂತನಾಥಾಯ ನಮಃ ||೧೦||
ಖಡ್ಗಹಸ್ತಾಯ ನಮಃ
ತ್ರಿವಿಕ್ರಮಾಯ ನಮಃ
ವಿಶ್ವವ್ಯಾಪಿನೇ ನಮಃ
ವೀರೇಶಾಯ ನಮಃ
ವಿಷ್ಣುನಾಥಾಯ ನಮಃ
ವಿಷ್ಣುಚಕ್ರವಿಭಂಜನಾಯ ನಮಃ
ಭದ್ರಕಾಳೀಪತಯೇ ನಮಃ
ಭದ್ರಾಯ ನಮಃ
ಭದ್ರಾಕ್ಷಾಭರಣಾನ್ವಿತಾಯ ನಮಃ
ಭಾನುದಂತಿಭಿದೇ ನಮಃ ||೨೦||
ಉಗ್ರಾಯ ನಮಃ
ಭಗವತೇ ನಮಃ
ಭಾವಗೋಚರಾಯ ನಮಃ
ಚಂಡಮೂರ್ತಯೇ ನಮಃ
ಚತುರ್ಬಾಹುಚತುರಾಯ ನಮಃ
ಚಂದ್ರಶೇಖರಾಯ ನಮಃ
ಸತ್ಯಪ್ರತಿಜ್ಞಾಯ ನಮಃ
ಸರ್ವಾತ್ಮನೇ ನಮಃ
ಸರ್ವಸಾಕ್ಷಿಣೇ ನಮಃ
ನಿರಾಮಯಾಯ ನಮಃ ||೩೦||
ನಿತ್ಯಾಯ ನಮಃ
ನಿರ್ಧೂತಪಾಪೌಘಾಯ ನಮಃ
ನಿರ್ವಿಕಲ್ಪಾಯ ನಮಃ
ನಿರಂಜನಾಯ ನಮಃ
ಭಾರತೀನಾಸಿಕಾಚ್ಛೇದಾಯ ನಮಃ
ಭವರೋಗಮಹಾಭಿಷಜೇ ನಮಃ
ಭಕ್ತೈಕರಕ್ಷಾಯ ನಮಃ
ಬಲವತೇ ನಮಃ
ಭಸ್ಮೋದ್ಧೂಲಿತವಿಗ್ರಹಾಯ ನಮಃ
ದಕ್ಷಾರಯೇ ನಮಃ ||೪೦||
ಧರ್ಮಮೂರ್ತಯೇ ನಮಃ
ದೈತ್ಯಸಂಘಭಯಂಕರಾಯ ನಮಃ
ಪಾತ್ರಹಸ್ತಾಯ ನಮಃ
ಪಾವಕಾಕ್ಷಾಯ ನಮಃ
ಪದ್ಮಾಕ್ಷಾದಿನಮಸ್ಕೃತಾಯ ನಮಃ
ಮಖಾಂತಕಾಯ ನಮಃ
ಮಹಾತೇಜಸೇ ನಮಃ
ಮಹಾಭಯನಿವಾರಣಾಯ ನಮಃ
ಮಹಾವೀರಗಣಾಧ್ಯಕ್ಷಾಯ ನಮಃ
ಮಹಾಘೋರನೃಸಿಂಹಜಿತೇ ನಮಃ

ನಿಶ್ವಾಸ ಮಾರುತೋದ್ಧೂತ-
ಕುಲಪರ್ವತಸಂಚಯಾಯ ನಮಃ
ದಂತನಿಷ್ಪೇಷಣಾರಾವಮುಖರೀಕೃತ
ದಿಕ್ತಟಾಯ ನಮಃ
ಪಾದಸಂಘಟ್ಟನೋದ್ಭ್ರಾಂತಶೇಷ
ಶೀರ್ಷ ಸಹಸ್ರಕಾಯ ನಮಃ
ಭಾನುಕೋಟಿಪ್ರಭಾಭಾಸ್ವನ್ಮಣಿ
ಕುಂಡಲಮಂಡಿತಾಯ ನಮಃ
ಶೇಷಭೂಷಿತಾಯ ನಮಃ
ಚರ್ಮವಾಸಸೇ ನಮಃ
ಚಾರುಹಸ್ತಾಯ ಜ್ವಲತ್ತನವೇ ನಮಃ
ಉಪೇಂದ್ರೇಂದ್ರಯಮಾದೀನಾಂ
ದೇವಾನಾಮಂ ಗತಕ್ಷಕಾಯ ನಮಃ
ಪಟ್ಟಿಸಪ್ರಾಸಪರಶುಗದಾದ್ಯಾಯುಧ
ಶೋಭಿತಾಯ ನಮಃ
ಬ್ರಹ್ಮಾದಿದೇವದುಷ್ಪ್ರೇಕ್ಷ್ಯಪ್ರಭಾ
ಶುಂಭತ್ಕಿರೀಟಧೃತೇ ನಮಃ
ಕೂಷ್ಮಾಂಡಗ್ರಹಭೇತಾಳ
ಮಾರೀಗಣವಿಭಂಜನಾಯ ನಮಃ
ಕ್ರೀಡಾಕಂದುಕಿತಾಜಾಂಡ
ಕೋಟಿವಿರಾಜಿತಾಯ ನಮಃ
ಶರಣಾಗತವೈಕುಂಠ
ಬ್ರಹ್ಮೇಂದ್ರಾಮರರಕ್ಷಕಾಯ ನಮಃ
ಯೋಗೀಂದ್ರಹೃತ್ಪಯೋಜಾತ
ಮಹಾಭಾಸ್ಕರಮಂಡಲಾಯ ನಮಃ
ಸರ್ವದೇವಶಿರೋರತ್ನ ಸಂಘೃಷ್ಟ
ಮಣಿಪಾದುಕಾಯ ನಮಃ

ಗ್ರೈವೇಯಹಾರಕೇಯೂರ ಕಾಂಚೀ
ಕಟಕಭೂಷಿತಾಯ ನಮಃ
ವಾಗತೀತಾಯ ನಮಃ
ದಕ್ಷಹರಾಯ ನಮಃ
ವಹ್ನಿಜಿಹ್ವಾನಿಕೃಂತನಾಯ ನಮಃ
ಸಹಸ್ರಬಾಹವೇ ನಮಃ ॥೨೦॥
ಸರ್ವಜ್ಞಾಯ ನಮಃ
ಸಚ್ಚಿದಾನಂದವಿಗ್ರಹಾಯ ನಮಃ
ಭಯಾಪಹಾಯ ನಮಃ
ಭಕ್ತಲೋಕಾರಾತಿ-
ತೀಕ್ಷ್ಣವಿಲೋಚನಾಯ ನಮಃ
ಕಾರುಣ್ಯಾಕ್ಷಾಯ ನಮಃ
ಗಣಾಧ್ಯಕ್ಷಾಯ ನಮಃ
ಗರ್ವಿತಾಸುರದರ್ಪಹೃತೇ ನಮಃ
ಸಂಪತ್ಕರಾಯ ನಮಃ
ಸದಾನಂದಾಯ ನಮಃ
ಸರ್ವಾಭೀಷ್ಟಫಲಪ್ರದಾಯ ನಮಃ
ನೂಪುರಾಲಂಕೃತಪದಾಯ ನಮಃ
ವ್ಯಾಲಯಜ್ಞೋಪವೀತಕಾಯನಮಃ
ಭಗನೇತ್ರಹರಾಯ ನಮಃ
ದೀರ್ಘಬಾಹವೇ ನಮಃ
ಬಂಧವಿಮೋಚನಾಯ ನಮಃ
ತೇಜೋಮಯಾಯ ನಮಃ
ಕವಚಿನೇ ನಮಃ
ಭೃಗುಶ್ಮಶ್ರುವಿಲುಂಪಕಾಯ ನಮಃ
ಯಜ್ಞಪುರುಷಶೀರ್ಷಘ್ನಾಯ ನಮಃ
ಯಜ್ಞಾರಣ್ಯದವಾನಲಾಯ ನಮಃ

ಭಗ್ತ್ರೃಕವತ್ಸಲಾಯ ನಮಃ
ಭಗವತೇ ನಮಃ ||೯೦||
ಸುಲಭಾಯ ನಮಃ
ಶಾಶ್ವತಾಯ ನಮಃ
ನಿಧಯೇ ನಮಃ
ಸರ್ವಸಿದ್ಧಿಕರಾಯ ನಮಃ
ದಾಂತಾಯ ನಮಃ
ಸಕಲಾಗಮಶೋಭಿತಾಯ ನಮಃ
ಭುಕ್ತಿಮುಕ್ತಿಪ್ರದಾಯ ನಮಃ
ಸರ್ವವ್ಯಾಧಿನಿವಾರಕಾಯ ನಮಃ
ಅಕಾಲಮೃತ್ಯುಸಂಹರ್ತ್ರೇ ನಮಃ

ಅಕಾಲಮೃತ್ಯು-
ಭಯಂಕರಾಯ ನಮಃ
ಗ್ರಹಾಕರ್ಷಣನಿರ್ಬಂಧಮಾರಣೋ-
ಚ್ಚಾಟನಪ್ರಿಯಾಯ ನಮಃ
ಪರತಂತ್ರನಿರ್ಬಂಧಾಯ ನಮಃ
ಪರಮಾತ್ಮನೇ ನಮಃ
ಪರಾತ್ಪರಾಯ ನಮಃ
ಸ್ವಮಂತ್ರಯಂತ್ರತಂತ್ರೌಘ
ಪರಿಪಾಲನತತ್ಪರಾಯ ನಮಃ
ಹನೂಮತ್ಪೂಜಿತಪದಾಯ ನಮಃ
ಶ್ರೀಹನೂಮಂತಶೈವದೀಕ್ಷಾ-
ಪ್ರದಾಯ ನಮಃ

ಇತಿ ಶ್ರೀ ವೀರಭದ್ರಾಷ್ಟೋತ್ತರ ಶತನಾಮಾವಲಿಃ
ಸಂಪೂರ್ಣಾ

ಚತುರ್ಥತರಂಗ

ಕದಂಬಾಸುರ ಸಂಹಾರ

ವರಬಲದಿ ಗರ್ವಿಸಿ ಮೂಲೋಕಂಗಳಂ
ಪೀಡಿಸುತಿರ್ದ ಕದಂಬಾಸುರನಂ
ಕೊಂದು ಲೋಕಂಗಳಂ ಪೊರೆದ ವೀರೇಶನು ||

ಬ್ರಹ್ಮನಿಂದ ವರಪ್ರದಾನ :

ಬಹುಹಿಂದೆ, ಕದಂಬಾಸುರನೆಂಬ ರಕ್ಕಸನು ಬ್ರಹ್ಮನನ್ನು ತಪಸ್ಸಿನಿಂದ ಮೆಚ್ಚಿಸಿ, ಮರಣವಿಲ್ಲದಂತೆ ಅನುಗ್ರಹಿಸೆಂದು ಬೇಡಿದನು. ಆಗ ಬ್ರಹ್ಮನು ಎಲೈ ಕದಂಬನೇ "ಜಾತಸ್ಯ ಮರಣಂ ಧೃವಂ" ಎಂಬಂತೆ ಹುಟ್ಟಿದವರೆಲ್ಲಾ ಒಂದು ದಿನ ಸಾಯಲೇಬೇಕು. ಆದುದರಿಂದ ಬೇರೆ ವರವನ್ನು ಕೇಳೆಂದು ಹೇಳಿದನು. ಆಗ ಕದಂಬನು, ಎಲೈ ಬ್ರಹ್ಮದೇವನೆ, ಹಾಗೆ ಮರಣವಾಗುವುದಾದರೆ, ಪ್ರಕೃತಿಸಂಬಂಧವಿಲ್ಲದೆ ಹುಟ್ಟಿದವನಿಂದ ಮರಣವಾಗುವಂತೆ ಕರುಣಿಸೆಂದು ಬೇಡಿದನು. ಅದಕ್ಕೆ ಬ್ರಹ್ಮನು 'ತಥಾಸ್ತು' ಎಂದು ಹೇಳಿ ಅದೃಶ್ಯನಾದನು.

ಕದಂಬನ ಹಾವಳಿ :

ಇತ್ತ ವರಬಲದಿಂದ ಗರ್ವಿತನಾದ ಕದಂಬನು, ದೇವ ಮಾನವರನ್ನೆಲ್ಲಾ ಜಯಿಸಿ ಹಿಂಸಿಸತೊಡಗಿದನು. ವನಪ್ರದೇಶದಲ್ಲಿ, ತಪೋಽನುಷ್ಠಾನಪರರಾದ ಋಷಿ ಸಮೂಹವನ್ನೆಲ್ಲಾ ಪೀಡಿಸಿ, ಅವರ ಆಶ್ರಮಗಳನ್ನೆಲ್ಲಾ ನಾಶಪಡಿಸುತ್ತಿದ್ದನು. ದೇವತಾರಾಧನೆ ಮುಂತಾದ ಧರ್ಮಕಾರ್ಯಗಳನ್ನು ನಿಷೇಧಿಸಿದನು. ಧನಿಕರನ್ನೂ, ನೀತಿವಂತರನ್ನೂ ನಾನಾ ವಿಧದಿಂದ ಪೀಡಿಸ ತೊಡಗಿದನು. ಅವನ ಹಿಂಸೆಯನ್ನು ತಾಳಲಾರದೆ ಎಲ್ಲ ದೇವತೆಗಳೂ ಒಂದುಗೂಡಿ ಬ್ರಹ್ಮನ ಬಳಿಗೆ ಹೋದರು. ಬ್ರಹ್ಮನು ತಾನೇ ವರಗಳನ್ನು ನೀಡಿದ್ದುದರಿಂದ, ಏನನ್ನೂ ಮಾಡಲಾರದೆ ನಿಸ್ಸಹಾಯಕನಾಗಿ, ಅವರೊಡನೆ ವಿಷ್ಣುವಿನ ಮರೆಹೊಕ್ಕನು. ವಿಷ್ಣುವು ಅವರ ಮೊರೆಯನ್ನು ಕೇಳಿ ನಸುನಗುತ್ತಾ, ಎಲೈ ದೇವತೆಗಳಿರಾ, ! ಬ್ರಹ್ಮದೇವನು, ಕದಂಬಾಸುರನಿಗೆ, ಅತಿ ವಿಚಿತ್ರವಾದ ವರವನ್ನು ಅನುಗ್ರಹಿ

ಸ್ಸಿರುವನು. ಆದರಂತೆ, ಆ ದೈತ್ಯಾಧಮನನ್ನು, ಪ್ರಕೃತಿ ಸಂಬಂಧವಿಲ್ಲದೆ ಹುಟ್ಟಿದವನು ಮಾತ್ರ ಕೊಲ್ಲಲು ಸಮರ್ಥನಾಗುವನು. ನಾನೇ ಆದಿಯಾಗಿ ಎಲ್ಲಾ ದೇವತೆಗಳೂ ಪ್ರಕೃತಿಗೆ ಅಧೀನರಾದವರು. ನಮ್ಮೆಲ್ಲರಿಗೂ, ಕರ್ತೃವಾದ ಮಹೇಶ್ವರನೊಬ್ಬನೇ, ಪ್ರಕೃತಿಯ ಸಂಬಂಧರಹಿತನು ಮತ್ತು ಅವಿನಾಶಿಯು. ಆದುದರಿಂದ ನಾವೆಲ್ಲಾ ಅವನನ್ನು ಮರೆಹೊಕ್ಕು ಪ್ರಾರ್ಥಿಸೋಣ. ದಯಾಮಯನೂ, ಭಕ್ತವತ್ಸಲನೂ, ಆಪದ್ಬಾಂಧವನೂ, ದುಷ್ಟಶಿಕ್ಷಕನೂ, ಆದ ಶಂಕರನು ನಮ್ಮ ಸಂಕಟವನ್ನು ಪರಿಹರಿಸುವುದರಲ್ಲಿ ಯಾವ ಸಂಶಯವೂ ಇಲ್ಲ. ಎಂದು ಹೇಳಿ, ಅವರೊಡನೆ ಕೈಲಾಸಕ್ಕೆ ತೆರಳಿದನು.

ದೇವತೆಗಳ ಮೊರೆ :

ಕೈಲಾಸದಲ್ಲಿ, ಗಿರಿಜಾಸಮೇತನಾದ ಪರಮೇಶ್ವರನು ಗಣಸಭೆಯನ್ನು ಅನುಗ್ರಹಿಸಲೋಸುಗ, ರತ್ನಖಚಿತಸಿಂಹಾಸನದಲ್ಲಿ ಉಪಸ್ಥಿತನಾಗಿದ್ದನು. ಹರಿವಿಧಿಗಳು ನಂದೀಶ್ವರನ ಅನುಮತಿ ಪಡೆದು, ಶಿವಸಭೆಯನ್ನು ಪ್ರವೇಶಿಸಿ, ಶಂಕರನನ್ನು ಅನನ್ಯ ಭಕ್ತಿ ಭಾವದಿಂದ, ಹೇ ಶಂಕರಾ, ಕೈಲಾಸವಾಸ, ಅನಾಥರಕ್ಷಕ, ಸರ್ವೇಶ್ವರ, ತ್ರಿಶೂಲಧರನೇ ಕಾಪಾಡು, ಕಾಪಾಡು. ಬ್ರಹ್ಮನ ವರಮದೋನ್ಮತ್ತನಾದ ಕದಂಬಾಸುರನು, ಮೂರುಲೋಕಗಳನ್ನೂ ಪೀಡಿಸುತ್ತಾ ಧರ್ಮವನ್ನು ಸಂಪೂರ್ಣವಾಗಿ ನಾಶಗೊಳಿಸುತ್ತಿರುವನು ಎಂದು ಪ್ರಾರ್ಥಿಸಿದರು.

ಆಗ ದಯಾಮಯನಾದ ಶಂಭುವು ಪ್ರಸನ್ನವದನನಾಗಿ, ದೇವತೆಗಳನ್ನು ಕುರಿತು, ಎಲೈ ದೇವತೆಗಳಿರಾ ! ಹೆದರಬೇಡಿ ಆ ದುರುಳ ರಕ್ಕಸನನ್ನು ಈಗಲೇ ನಿಗ್ರಹಿಸಿ, ಲೋಕವನ್ನು ರಕ್ಷಿಸುವೆನು. ನಿಶ್ಚಿಂತೆಯಿಂದ ನಿಮ್ಮ ನಿಮ್ಮ ಲೋಕಗಳಿಗೆ ತೆರಳಿರಿ. ಎಂದು ಅಭಯ ನೀಡಿ ಕಳುಹಿಸಿದನು.

ವೀರೇಶನ ಆಗಮನ :

ನಂತರ ಶಂಕರನು ಮನದಲ್ಲಿ ವೀರೇಶನನ್ನು ನೆನೆದನು. ಕ್ಷಣಾರ್ಧದಲ್ಲಿಯೇ ದಿವ್ಯ ತೇಜಸ್ವಿಯೂ, ಪ್ರಳಯಾಗ್ನಿಯಂತೆ ಕಿಡಿಕಾರುತ್ತಿದ್ದ ಮೂರು ಕಣ್ಣುಗಳುಳ್ಳವನೂ, ತ್ರಿಶೂಲಧರನೂ, ಆದ ವೀರೇಶನು ಶಿವನ ಮುಂದೆ ಪ್ರಕಟವಾಗಿ, ನಮ್ರತೆಯಿಂದ ತಲೆ ಬಾಗಿ ವಂದಿಸಿ, ಎಲೈ ತಂದೆಯೇ ! ಯಾವ ದುರಾತ್ಮರು ಮತ್ತೆ ನಿನ್ನ ಶಾಂತಿಗೆ ಭಂಗ ತಂದಿರುವರು ? ಅಪ್ಪಣೆ ಕೊಡು.

ನಿಮಿಷಾರ್ಧದಲ್ಲಿ ಆ ದುರುಳರನ್ನು ಸಂಹರಿಸುವೆನು ಎಂದು ಪ್ರಾರ್ಥಿಸಿದನು. ಆಗ ಶಂಕರನು, ನಸುನಗುತ್ತಾ, ಎಲೈ ವೀರೇಶಕುಮಾರನೇ! ಲೋಕಕ್ಕೆ ಎಂದೆಂದಿಗೆ ವಿಪತ್ತು ಸಂಭವಿಸುವುದೋ ಅಂದಂದಿಗೆ, ನಿನ್ನ ವೀರಶ್ರೀಯ ಅವಶ್ಯಕತೆ ಅನಿವಾರ್ಯವಾಗುವುದು. ಈಗ ಭೂಲೋಕದಲ್ಲಿ, ಕದಂಬಾಸುರನೆಂಬ ದೈತ್ಯನು ವರಬಲದಿಂದ ಮದಿಸಿ, ಮೂರುಲೋಕಗಳನ್ನೂ ಪೀಡಿಸುತ್ತಾ ಧರ್ಮವನ್ನು ಲಯಗೊಳಿಸುತ್ತಿರುವನು. ನೀನು ಕೂಡಲೇ ತೆರಳಿ, ಆ ಮದಾಂಧನಾದ ಕದಂಬನನ್ನು ಸಂಹರಿಸಿ ಧರ್ಮವನ್ನು ಉಳಿಸಿ ಕೀರ್ತಿಶಾಲಿಯಾಗಿ ಬಾಯೆಂದು ಹರಸಿ ಕಳುಹಿಸಿದನು.

ವೀರೇಶ-ಕದಂಬರ ಸಂವಾದ :

ನಂತರ ವೀರೇಶನು ಶಿವನಿಂದ ಬೀಳ್ಕೊಂಡು, ತನಗೆ ಸಮಾನವಾದ ಪರಾಕ್ರಮ ಉಳ್ಳವರೂ, ಭಯಂಕರಾಕಾರ ಉಳ್ಳವರೂ; ಶಸ್ತ್ರಾಸ್ತ್ರಾಯುಧಗಳನ್ನು ಧರಿಸಿದವರೂ ಆದ ಗಣಸೇನೆಯನ್ನು ಸೃಜಿಸಿ, ಸಿಂಹಗರ್ಜನೆ ಮಾಡುತ್ತಾ, ಕದಂಬನ ಬಳಿಗೈದಿ, ಎಲವೋ ದೈತ್ಯಾಧಮನೇ! ತಪಸ್ಸಿನ ಫಲದಿಂದುಂಟಾದ ಶಕ್ತಿಯನ್ನು ಧರ್ಮ ರಕ್ಷಣೆಗಾಗಿಯೂ, ಪರೋಪಕಾರಕ್ಕಾಗಿಯೂ, ಬಳಸದೆ, ಹೀಗೆ ಅಧರ್ಮವೂ, ಹಿಂಸಾತ್ಮಕವೂ ಆದ ಪಾಪಕಾರ್ಯಗಳಲ್ಲಿ ನಿರತನಾಗಿ, ನಿರಪರಾಧಿಗಳೂ, ದೈವ ಭಕ್ತರೂ ಆದ ಋಷಿಗಳನ್ನೂ, ದೇವತೆಗಳನ್ನೂ ಹೀಗೇಕೆ ಹಿಂಸಿಸುತ್ತಿರುವೆ? ಇದು ವಿಹಿತವಲ್ಲ. ಕೂಡಲೇ ನಿನ್ನ ನೀಚಕೃತ್ಯಗಳನ್ನು ನಿಲ್ಲಿಸಿ, ಶರಣಾಗು. ಇಲ್ಲದಿದ್ದರೆ ನಿನ್ನನ್ನು ಶಿಕ್ಷಿಸಬೇಕಾಗುವುದು ಎಂದು ಎಚ್ಚರಿಸಿದನು.

ಕದಂಬನ ದರ್ಪ :

ಅದನ್ನು ಕೇಳಿದ ಕದಂಬನು ಕೆಂಪಡರಿದ ಕಣ್ಣುಗಳಿಂದ ಎಲೈ ಬಾಲಕನೇ, ಮೂರು ಲೋಕಗಳಲ್ಲಿಯೂ, ಯಾರ ಹೆಸರನ್ನು ಕೇಳಿದ ಮಾತ್ರಕ್ಕೇ ಕಂಪಿಸುವರೋ ಅಂಥಾ ಕದಂಬಾಸುರನೇ ನಾನು. ಹರಿಬ್ರಹ್ಮಾದಿಗಳೇ ನನ್ನ ಎದುರಿಗೆ ನಿಲ್ಲಲಾರದೆ ಓಡುವರು. ಬ್ರಹ್ಮನಿಂದ ಮರಣವಿಲ್ಲದಂತಹ ವರವನ್ನು ಪಡೆದಿರುವೆನು. ನೀನೇ ಅಲ್ಲ, ನಿನ್ನಂತಹ ಸಹಸ್ರ ವೈರಿಗಳು ಏಕಕಾಲದಲ್ಲಿ ನನ್ನನ್ನು ಮುತ್ತಿದರೂ, ಕ್ಷಣಾರ್ಧದಲ್ಲಿ ಅವರನ್ನೆಲ್ಲಾ ಯಮಸದನಕ್ಕೆ ಕಳುಹಿಸಬಲ್ಲೆನು. ವೃಥಾ ಯುದ್ಧರಂಗದಲ್ಲಿ ಪ್ರಾಣನೀಗುವ ಬದಲು, ಸುಮ್ಮನೆ

ಬಂದ ದಾರಿಯಿಂದ ಹಿಂದಿರುಗು. ನಿನ್ನಂಥ ಬಾಲಕರ ಮೇಲೆ ಕೈ ಮಾಡುವುದು ನನ್ನ ಶೌರ್ಯಕ್ಕೆ ಕಳಂಕಪ್ರಾಯವಾದುದು ಎಂದು ಹೇಳಿದನು.

ಯುದ್ಧಾರಂಭ :

ಇದನ್ನು ಕೇಳುತ್ತಿದ್ದಂತೆಯೇ ವೀರೇಶನ ಕಣ್ಣಿನಿಂದ ಕಿಡಿಗಳು ಹಾರಿ ಮೂರುಲೋಕಗಳನ್ನೂ ಆವರಿಸಿದವು. ಧನುಸ್ಸು ಠೇಂಕರಿಸಿತು, ಕತ್ತಿಯು ಝಳುಪಿಸಹತ್ತಿತು. ಭೂಮಿಯು ಕಂಪಿಸಿತು. ಆಗ ವೀರೇಶನು, ತಾನೊಬ್ಬನೇ ಕದಂಬನ ಮೇಲೆರಗಿದನು. ಇತ್ತ ಕದಂಬನಾದರೋ ತನ್ನ ಮಾಯೆಯಿಂದ, ಮುನ್ನೂರು ಶಿರಸ್ಸುಗಳುಳ್ಳದ್ದೂ, ವಿವಿಧವಾದ ಭಯಂಕರ ಆಯುಧಗಳನ್ನು ಹಿಡಿದ ಎರಡು ಸಾವಿರ ಭುಜಗಳಿಂದ ಕೂಡಿದ್ದೂ, ಅಗ್ನಿವೃಷ್ಟಿಯನ್ನೂ ಸುರಿಸುತ್ತಿರುವುದೂ ಆದ ಒಂದು ಭಯಂಕರಾಕಾರವನ್ನು ಧರಿಸಿ, ಗಣಸೇನೆಯ ಮೇಲೆ ಎರಗಿದನು. ಇದನ್ನು ಕಂಡ ವೀರೇಶನು, ಅತಿ ಭಯಂಕರವಾದ ರೂಪವನ್ನು ಧರಿಸಿ, ಪ್ರಳಯಕಾಲದ ರುದ್ರನೋ ಎಂಬಂತೆ, ವಿಧವಿಧವಾದ ಶಸ್ತ್ರಾಸ್ತ್ರಯುಧಗಳನ್ನು ಧರಿಸಿ, ಘೋರಯುದ್ಧ ಮಾಡುತ್ತಾ, ಕದಂಬನ ಅನೇಕ ಕೈಗಳನ್ನು ಖಂಡಿಸಿ, ಅವನ ತಲೆಗಳನ್ನೆಲ್ಲಾ ಒಂದೊಂದಾಗಿ ಕತ್ತರಿಸತೊಡಗಿದನು. ಕದಂಬನು, ಶಕ್ತಿಗುಂದಿ, ಗರುಡನನ್ನು ಕಂಡ ಸರ್ಪದಂತೆ ಸ್ತಬ್ಧನಾಗಿ ನಿಂತಿರಲು, ವೀರೇಶನು ತನ್ನ ಅಸಂಖ್ಯವಾದ ಬಾಹುಗಳಿಂದ ಕದಂಬನನ್ನು ಹಿಡಿದು ನಿಶ್ಚೇಷ್ಟಿತನನ್ನಾಗಿ ಮಾಡಿದನು. ವೀರೇಶನ ವಜ್ರಮುಷ್ಟಿಯಿಂದ ಬಿಡಿಸಿಕೊಳ್ಳಲಾರದೆ, ಮರಣಾವಸ್ಥೆ ಹೊಂದಿ, ತನ್ನ ಅವಸಾನಕಾಲವೊದಗಿರಬಹುದೆಂದು ಚಿಂತಿಸಿ, ಈಗಣಾಧೀಶನು ಸಾಮಾನ್ಯನಂತೆ ಕಾಣುವುದಿಲ್ಲ. ಇವನು ನನ್ನ ಆರಾಧ್ಯದೈವವಾದ ಶಿವನ ಕಿಡಿಗಣ್ಣಿನಿಂದ ಹುಟ್ಟಿದ ವೀರಭದ್ರನೇ ಆಗಿರಬೇಕು. ಹಾಗಲ್ಲದಿದ್ದರೆ ನನ್ನನ್ನು ಈ ರೀತಿ ಮರಣಾವಸ್ಥೆಗೀಡುಮಾಡುವ ಶಕ್ತಿ ಈ ಬಾಲಕನಿಗೆ ಎಲ್ಲಿಂದ ಬರಬೇಕು? ಎಂದು ಯೋಚಿಸಿ, ಎಲೈ ವೀರನೇ! ನೀನಾರು? ನನ್ನ ಮೇಲೆ ಯುದ್ಧ ಮಾಡಲು, ನಿನ್ನನ್ನು ಪ್ರೇರೇಪಿಸಿದವರಾರು? ನನ್ನ ಮೇಲೆ ನಿನಗೇಕೆ ಈ ವೈರ? ಎಂದು ಕೇಳಿದನು. ಕದಂಬನ ದುಃಸ್ಥಿತಿಯನ್ನು ಕಂಡು ಕನಿಕರ ಹೊಂದಿದ ವೀರೇಶನು, ಶಾಂತತೆಯಿಂದ, ಎಲೈ ಕದಂಬನೇ! ನಾನು ಶಿವನ ಫಾಲಾಕ್ಷದಿಂದ ಹುಟ್ಟಿದ ವೀರಭದ್ರನು. ನೀನು ಲೋಕಗಳನ್ನೆಲ್ಲಾ ಹಿಂಸಿಸಿ ಧರ್ಮ

ವನ್ನು ನಾಶಗೊಳಿಸಿದೆ. ಧರ್ಮರಕ್ಷಣೆಗಾಗಿಯೂ, ಭಕ್ತರ ಉದ್ಧಾರಕ್ಕಾಗಿಯೂ ನಿನ್ನನ್ನು ಸಂಹರಿಸಬೇಕೆಂದು ಈ ಯುದ್ಧದಲ್ಲಿ ತೊಡಗಬೇಕಾಯಿತು. ಎಂದು ಸಮಾಧಾನದಿಂದ ಹೇಳಿದನು.

ಕದಂಬನ ಶರಣಾಗತಿ:

ಇದನ್ನು ಕೇಳುತ್ತಿದ್ದಂತೆಯೇ ಕದಂಬನು ಕಂಪಿಸುವ ಕೈಗಳಿಂದ ವೀರೇಶನ ಚರಣಗಳನ್ನು ಹಿಡಿದು, ಹೇ ದೇವದೇವನೇ! ನೀನು ಮಹೇಶನ ಪುತ್ರ ವೀರಭದ್ರನೆಂದು ತಿಳಿಯದೆ ನನ್ನ ಸ್ವಾಮಿಯ ಕುಮಾರನಾದ ನಿನ್ನೊಡನೆ ಯುದ್ಧಮಾಡಿ ಮಹಾಪರಾಧ ಮಾಡಿದೆನು. ಅರಿಯದೆ ಮಾಡಿದ ಈ ಅಪರಾಧವನ್ನು ಮನ್ನಿಸಿ, ಕಾಪಾಡು. ಇಗೋ ನಿನಗೆ ಶರಣಾಗಿ ಯುದ್ಧವನ್ನು ನಿಲ್ಲಿಸಿರುವೆನು. ಆದುದರಿಂದ, ದಯಾನಿಧಿಯಾದ ವೀರೇಶನೇ ನನ್ನನ್ನು ಮನ್ನಿಸಿ, ಅನುಗ್ರಹಿಸು. ನಿನ್ನ ದರ್ಶನ ಭಾಗ್ಯದಿಂದಲೂ, ನಿನ್ನ ಪವಿತ್ರ ಶರೀರದ ಸ್ಪರ್ಶದಿಂದಲೂ, ನಾನು ಪುನೀತನಾದೆನು ಎಂದು ಪ್ರಾರ್ಥಿಸಿದನು.

ವೀರೇಶನ ಅನುಗ್ರಹ :

ಕರುಣಾಳುವಾದ ವೀರೇಶನು, ಕದಂಬನನ್ನು ಹಿಡಿದೆತ್ತಿ, ನೀನು ಶರಣಾಗಿರುವುದರಿಂದಲೂ, ಶಿವಾರಾಧಕನಾಗಿರುವುದರಿಂದಲೂ, ಮನ್ನಿಸಿರುವೆನು. ಇನ್ನು ನಿರ್ಭಯದಿಂದಿರು. ಇತಃಪರ ಹಿಂಸಾಕೃತ್ಯಗಳಲ್ಲಿ ತೊಡಗದೆ, ಸಾತ್ವಿಕ ಮಾರ್ಗದಿಂದಿರುತ್ತಾ, ಶಿವಾರಾಧನೆ ಮಾಡಿ, ಜ್ಞಾನಾರ್ಜನೆ ಮಾಡಿ, ಶಿವಾನುಗ್ರಹಕ್ಕೆ ಪಾತ್ರನಾಗೆಂದು ಹರಸುತ್ತಿರಲು, ದೇವತೆಗಳು ಪೂಮಳೆಗರೆದರು. ದುಂದುಭಿಗಳು ಮೊಳಗಿದವು. ಜಯಕಾರವು ನಭೋಮಂಡಲವನ್ನೆಲ್ಲಾ ಆವರಿಸಿತು. ನಂತರ ವೀರೇಶನು ಎಲ್ಲರನ್ನೂ ಹರಸುತ್ತಾ ಅಂತರ್ಧಾನನಾದನು.

ಪಂಚಮತರಂಗ

ಜ್ವಾಲವ್ಯಾಳಾಸುರ ಸಂಹಾರ :

ಈಶನಾಗ್ನೆಯಿಂ ವೀರೇಶ ರೌದ್ರರೂಪಾಂತು
ಜ್ವಾಲವ್ಯಾಳನಂ ಭಕ್ಷಿಸುತ ನಿಗ್ರಹಿಸಿ ।
ದುರುಳದೈತ್ಯನ ಕುಕ್ಷಿಯೊಳ್ ಮಡಿದಿರ್ದ
ಸುರಮುನಿವೃಂದಕಸುವಿತ್ತುಪೊರೆದಂ ॥

ಕರುಣಿಯ ಶಾಪವಿಮೋಚನೆ :

ಹಿಂದೊಮ್ಮೆ ಕರುಣಿ ಎಂಬ ಮುನಿಕುಮಾರನಿಗೆ ಗುರುಶಾಪದಿಂದ ನೊಣದ ಜನ್ಮ ಸಂಭವಿಸಿತು. ಆಗ ತರುಣಿಯು ಗುರುವಿನ ಪಾದಗಳನ್ನು ಹಿಡಿದು ವಿಶಾಪವನ್ನು ಬೇಡಲು, ಆಗ ಗುರುವು ಶತವರ್ಷಗಳ ನೊಣದ ಜನ್ಮ ಕಳೆದನಂತರ ಒಮ್ಮೆ ನಿನಗೆ ತಪೋಧನರಾದ ದಧೀಚಿಗಳ ದರ್ಶನಭಾಗ್ಯ ಲಭಿಸುವುದು. ಆಗ ನಿನ್ನ ನಿಜರೂಪ ಲಭಿಸುವುದೆಂದು ಹೇಳಿದನು. ಹೀಗೆ ಕರುಣಿಯು ಶತವರ್ಷಗಳಾದ ಮೇಲೆ ದಧೀಚಿಗಳ ದರ್ಶನಭಾಗ್ಯದಿಂದ ನಿಜ ರೂಪವನ್ನು ಪಡೆದನು. ನಂತರ ಅವನು ತನ್ನ ಪತ್ನಿಯಾದ 'ಶುಚಿಸ್ಮಿತೆ' ಯೊಡನೆ ದಧೀಚಿಗಳ ಪಾದಾರವಿಂದಗಳನ್ನು ಪೂಜಿಸಿ ನಾನಾವಿಧವಾಗಿ ಸ್ತೋತ್ರಮಾಡಿ, ಎಲೈ ಮುನಿಪುಂಗವನೇ, ಶಂಕರನ ಭಕ್ತನಾದ ನೀನೇ ನಮ್ಮ ಭಾಗಕ್ಕೆ ಸಾಕ್ಷಾತ್ ಶಿವನು. ಆದುದರಿಂದ ನೀನು ಕೃಪೆಮಾಡಿ ನಮ್ಮ ಆಹ್ವಾನ ವನ್ನು ಮನ್ನಿಸಿ, ನಮ್ಮ ಮನೆಯಲ್ಲಿ ಒಂದುದಿನ ಆನಂದವಾಗಿ ಶಿವಪೂಜೆ ಮಾಡಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡಬೇಕೆಂದು ಪ್ರಾರ್ಥಿಸಿದನು.

ದಧೀಚಿಗಳ ಶಿವಪೂಜೆ :

ಅದರಂತೆಯೇ ದಧೀಚಿಗಳು ಅವನ ಮನೆಯಲ್ಲಿ ಆನಂದದಿಂದ ಶಿವಾರ್ಚನೆ ಗೈದು ಅವರನ್ನು ಹರಸಿದರು. ಆಗ ಆ ದಂಪತಿಗಳು ಮುನಿಯನ್ನು ಕುರಿತು, ಭಸ್ಮದ ಮಹಿಮೆಯನ್ನು ವಿವರಿಸಬೇಕೆಂದು ಪ್ರಾರ್ಥಿಸಿದರು. ಆಗ ದಧೀಚಿಗಳು ಪ್ರಸನ್ನವದನರಾಗಿ, ಎಲೈ ದಂಪತಿಗಳಿರಾ! ವಿಭೂತಿಯ ಮಹಿಮೆಯನ್ನು ವರ್ಣಿಸಲು, ಆದಿಶೇಷನಿಗೂ ಅಳವಲ್ಲ. ಆದರೂ, ಈ ವಿಭೂತಿಯ ಮಹಿಮೆ

ಯಿಂದ ಶ್ರೀ ವೀರೇಶನು, ಖೂಳ ದೈತ್ಯರನ್ನು ಸಂಹರಿಸಿ ರಣದಲ್ಲಿ ಮಡಿದ. ದೇವಸಮೂಹವನ್ನು ಅನುಗ್ರಹಿಸಿದ ಕಥೆಯನ್ನು ಹೇಳುವೆನು ಕೇಳಿರಿ ಎಂದು. ಜ್ವಾಲವ್ಯಾಳಾಸುರ–ಕಾಶಾಸುರರ ಸಂಹಾರದ ಕಥೆಯನ್ನು ಹೇಳಿದನು.

ಋಷಿಸಮೂಹದ ದುಃಸ್ಥಿತಿ:

ಈ ಕಥೆಯನ್ನು ಹಿಂದೆ, ಶಿವನು ನಂದೀಶ್ವರನಿಗೂ, ನಂದಿಯು ಸನತ್ಕುಮಾರನಿಗೂ, ಸನತ್ಕುಮಾರನು, ವ್ಯಾಸರಿಗೂ, ವ್ಯಾಸರು ಸೂತನಿಗೂ, ಸೂತನು ನಮ್ಮ ಋಷಿಸಮೂಹಕ್ಕೂ ಹೇಳಿರುವನು. ಅದರಂತೆ, ಹಿಂದೊಮ್ಮೆ ನಾನು, ಕಶ್ಯಪ ಜಮದಗ್ನಿ ಮೊದಲಾದ ಮುನಿವೃಂದದೊಡನೆಯೂ, ಸುರಸಮೂಹದೊಡನೆಯೂ, ಶ್ರೀ ವೀರೇಶನನ್ನು ದರ್ಶನ ಮಾಡುವ ಉದ್ದೇಶದಿಂದ ಪಾರಿಜಾತಗಿರಿಗೆ ಹೋದೆನು. ಆ ಗಿರಿಯನ್ನು ಹತ್ತುತ್ತಿರುವಲ್ಲಿ, ಆ ಗಿರಿಯ ದಶದಿಕ್ಕುಗಳಲ್ಲಿಯೂ, ಛಿಟಛಿಟಲೆನುತ್ತಾ ರೌದ್ರಾರ್ಭಟದಿಂದ ಕಾಡ್ಗಿಚ್ಚು, ಭೂಮಿಯಿಂದ ಗಗನದಾದ್ಯಂತ ವ್ಯಾಪಿಸಿ, ನಮ್ಮ ಶರೀರಗಳನ್ನೆಲ್ಲಾ ಸುಡಲಾರಂಭಿಸಿತು. ಆಗ ನಾವು ದಿಕ್ಕುತೋಚದೆ, ಹೇ ಶಂಕರನೇ ! ಈ ದಾವಾನಲದಿಂದ ನಮ್ಮನ್ನು ರಕ್ಷಿಸಿ ಕಾಪಾಡು ಎಂದು ಪ್ರಾರ್ಥಿಸಿದೆವು.

ವೀರೇಶನ ದರ್ಶನ:

ನಮ್ಮ ಆರ್ತನಾದವನ್ನು ಕೇಳುತ್ತಲೇ ಆ ಗಿರಿಯಲ್ಲಿ ಜ್ಞಾನಯೋಗದಲ್ಲಿದ್ದ ವೀರೇಶನು, ನಮಗೆ ದರ್ಶನ ನೀಡಿ, ನಮ್ಮ ಸುಟ್ಟ ಶರೀರಗಳನ್ನು ಕಂಡು, ರೌದ್ರಾವತಾರದಿಂದ ಆ ಜ್ವಾಲೆಯನ್ನು ನುಂಗುವುದಾಗಿ ಹೇಳಿ ಮುಂದೆ ನುಗ್ಗಿದನು. ಕೂಡಲೇ ಪುಂಡರೀಕನರಸಿ ಭಾರತಿಯು ಬಂದು, ಎಲೈ ವೀರೇಶನೇ ಇದು ಮಹಾ ಜ್ವಾಲೆಯು. ಇದನ್ನು ಪರಿಹರಿಸಲು ಪ್ರಯತ್ನಪಟ್ಟ ಶತಯೋಜನನೇ ಮೊದಲಾದ ಅನೇಕ ಶೂರರು ತಮ್ಮ ಚದುರಂಗಬಲ ಸಮೇತರಾಗಿ ಮೃತಿಹೊಂದಿರುವರು. ಆದುದರಿಂದ, ನೀನು ಈ ವಿನಾಶ ಕಾರ್ಯಕ್ಕೆ ಕೈಹಾಕಬೇಡವೆಂದು ವೀರೇಶನನ್ನು ತಡೆದಳು. ಆಗ ವೀರೇಶನು, ಭಾರತಿಯೇ ನಿರಪರಾಧಿಗಳೂ ಹಾಗೂ ಧರ್ಮಾತ್ಮರೂ ಆದ ಋಷಿಸಮೂಹವನ್ನು ನಿಷ್ಕಾರಣವಾಗಿ ಭಕ್ಷಿಸಿರುವ ಈ ದೈತ್ಯನನ್ನು ಸಂಹರಿಸದಿದ್ದರೆ, ಲೋಕಕ್ಕೆ ಇನ್ನು ರಕ್ಷಣೆಯೆಲ್ಲಿ ?

ಜ್ವಾಲಾವ್ಯಾಳನ ವಧೆ :

ಆದ್ದುದರಿಂದ ಇವನನ್ನು ನಿಗ್ರಹಿಸಲೇಬೇಕೆಂದು ಹೇಳಿ, ಕೂಡಲೇ ವೀರೇಶನು, ಜ್ವಾಲವ್ಯಾಳನ ರೂಪಕ್ಕಿಂತ ಹತ್ತುಪಾಲು ಮಿಗಿಲಾದ ಭಯಂಕರ ರೂಪವನ್ನು ಧರಿಸಿ ಅವನನ್ನು ಮುತ್ತಿ, ಛಿದ್ರಗೊಳಿಸಿ, ಅವನನ್ನು ಸಂಪೂರ್ಣ ವಾಗಿ ನುಂಗಿ ಲೋಕವನ್ನು ಉದ್ಧರಿಸಿದನು. ದೇವದುಂದುಭಿಗಳು ಮೊಳಗಿ ದವು. ದೇವತೆಗಳು ಪುಷ್ಪವೃಷ್ಟಿಗರೆದು ಜಯಕಾರಮಾಡಿದರು. ನಂತರ ವೀರೇಶನು ತನ್ನ ಮುನ್ನಿನ ಮಂಗಳರೂಪದಿಂದ ದರ್ಶನ ನೀಡಿ ದೇವತೆಗಳ ಪ್ರಾರ್ಥನೆಯಂತೆ, ಜ್ವಾಲವ್ಯಾಳನ ಕುಕ್ಷಿಯಲ್ಲಿಯೇ ಮಡಿದಿದ್ದ ಸುರ ಮುನಿವೃಂದವನ್ನು ಚಿದ್ಭಸ್ಮವನ್ನು ಸಿಂಪಡಿಸುವುದರ ಮೂಲಕ ಬದುಕಿಸಿ ಅಂತರ್ಧಾನನಾದನು.

ಕಾಕೋದರನ ಹಾವಳಿ

ಮತ್ತೆ ಕಾಕಾಸುರಂ ಸುರಮುನಿಗಳಂ ಭಕ್ಷಿಸಲ್
ಕರುಣಾಳು ವಿರೇಶ ಘೋರರೂಪಂಗಳಿಂ ।
ದುರುಳದೈತ್ಯನಂ ಕಾಳಗದಿ ಸಂಹರಿಸುತ್ತೆ
ಮರಳಿ ಮುನಿಸುರರ್ಗಸುವಿತ್ತು ಪೊರೆದಂ ॥

ಅನಂತರ ಹಾಗೆಯೇ ನಾವುಗಳು ಮುಂದೆ ನಡೆದೆವು. ಆ ಗಿರಿಯಲ್ಲಿ ಭೂತಾಕಾರದ ಕಾಕೋದರವು ತನ್ನ ಬಾಯನ್ನು ಗಗನಪರ್ಯಂತ ತೆರೆದು ಕುಳಿತಿದ್ದಿತು. ಅದನ್ನರಿಯದೆ ಸಂಚಾರಮಾರ್ಗವಿರಬಹುದೆಂದು ನಾವೆಲ್ಲಾ ಅವರ ಬಾಯೊಳಗೆ ಪ್ರವೇಶಿಸಿದಕೂಡಲೇ, ಅದು ತನ್ನ ಬಾಯನ್ನು ಮುಚ್ಚಿ ನಮ್ಮನ್ನೆಲ್ಲಾ ಕಬಳಿಸಿತು. ಆಗ ಮತ್ತೆ ನಾವೆಲ್ಲಾ ವೀರೇಶನನ್ನು ನೆನೆದು ಪ್ರಾಣಭಿಕ್ಷೆ ಬೇಡಿದೆವು.

ವೀರೇಶ–ಕಾಕೋದರರ ಯುದ್ಧ :

ಮತ್ತೆ ನಮ್ಮ ಆರ್ತನಾದ ಕೇಳಿದ ವೀರೇಶನು, ತೂರ್ಯದಿಂದ ಬಂದು ನಮ್ಮ ದೈನ್ಯಾವಸ್ಥೆಗೆ ಮನನೊಂದು, ದೈತ್ಯನನ್ನು ಕುರಿತು, ಎಲೈ ಪಾಪಿ ರಕ್ಕಸನೇ! ಈ ಧರ್ಮಾತ್ಮರನ್ನು ಏಕೆ ಭಕ್ಷಿಸಿದೆ? ಕೂಡಲೇ ಬಾಯ್ದೆರೆದು

ಅವರನ್ನು ಬಿಡು ಎಂದು ಘರ್ಜಿಸಿದನು. ದೈತ್ಯನು ಕೂಡಲೇ ಮೇಘರೂಪ ತಾಳಲು, ವೀರೇಶನು ಪವನನಾಗಿ ಮರ್ದಿಸಿದನು. ಆಗ ದೈತ್ಯನು ಗಜರೂಪ ತಾಳಲು, ಅದನ್ನು ಸಿಂಹರೂಪದಿಂದ ನಿಗ್ರಹಿಸಿದನು. ನಂತರ ದೈತ್ಯನು ಮಹಿಷನಾಗಲು, ವ್ಯಾಘ್ರರೂಪದಿಂದ ಸಂಹರಿಸಿದನು. ದೈತ್ಯನು ಪರ್ವತ ವಾಗಲು, ವಜ್ರಾಯುಧವಾದನು. ಮತ್ತೆ ಕೇಸರಿಯಾಗಲು, ಶರಭನಾದನು. ನಂತರ ದೈತ್ಯನು ಭಯಂಕರ ರೂಪದಿಂದ ಖಡ್ಗವಿಡಿದು ವೀರೇಶನ ಮೇಲೆರಗಿದನು.

ಕಾಕಾಸುರ ವಧೆ:

ಕೂಡಲೇ ವೀರೇಶನು ರೌದ್ರರೂಪವನ್ನು ಧರಿಸಿ, ತನ್ನ ವಜ್ರಮುಷ್ಟಿ ಗಳಿಂದ ಆ ಕಾಕೋದರನ ಎರಡು ಕೊಕ್ಕುಗಳನ್ನೂ ಹಿಡಿದು, ದರ್ಭೆಯನ್ನು ಸೀಳುವಂತೆ ಸೀಳಿ ಸಂಹರಿಸಿದನು. ನಂತರ ಭಕ್ತವತ್ಸಲನಾದ ವೀರೇಶನು, ದೈತ್ಯನ ಜಠರದಲ್ಲಿಯೇ ಮರಣಿಸಿದ್ದ ನಮ್ಮನ್ನು ಚಿದ್ಭಸ್ಮದಿಂದ ಚೇತನಗೊಳಿಸಿ ಕಾಪಾಡಿದನು. ನಾವೆಲ್ಲಾ ದೇವತೆಗಳೊಡನೆ ವೀರೇಶನನ್ನು ಭಕ್ತಿಯಿಂದ ವಂದಿಸಿ, ಎಲೈ ದಯಾನಿಧಿಯೇ, ಭಕ್ತವತ್ಸಲನೇ, ದಕ್ಷಾರಿಯೇ, ದುಷ್ಟ ಶಿಕ್ಷಕನೇ ನೀನಲ್ಲದೆ ನಮ್ಮನ್ನು ಸಂರಕ್ಷಿಸುವವರಾರೂ ಇಲ್ಲ. ನಿನ್ನಿಂದಲೇ ನಾವು ಎರಡುಬಾರಿ ಪ್ರಾಣರಕ್ಷೆ ಪಡೆದೆವು ಎಂದು ನಾನಾ ವಿಧವಾಗಿ ಪ್ರಾರ್ಥಿಸು ತ್ತಿರಲು, ದೇವತೆಗಳು ಆನಂದದಿಂದ ಪುಷ್ಪವೃಷ್ಟಿಗರೆದು ಜಯಕಾರ ಮಾಡು ತ್ತಿರಲು, ವೀರೇಶನು ನಮ್ಮನ್ನೆಲ್ಲಾ ಹರಸುತ್ತಾ ಅಂತರ್ಧಾನನಾದನು.

ಷಷ್ಠ ತರಂಗೆ

ಪಂಚವೋಢ್ರಾಸುರಸಂಹಾರ

ಇಂದ್ರಾದಿದೇವರ್ಕಳೆನಾ ಮುನಿವೃಂದವಮಂ
ಗರ್ವಿ ಪೋಢ್ರಾಸುರಂ ಪಿಡಿದು ಭಕ್ಷಿಸುತಿರಲ್ ।
ಮೊರೆಕೇಳ್ದ ವೀರೇಶ ರೌದ್ರರೂಪಾಂತು
ಪೋಢ್ರನಂ ಕೊಂದುಳುಪಿದಂ ಸುರಮುನಿವೃಂದವಮಂ ॥

ಪಂಚಪೋಢ್ರನ ಬಾಲ್ಯ :

ನಂತರ ದಧೀಚಿಯು ಆ ದಂಪತಿಗಳನ್ನು ಕುರಿತು, ಇಂತೆಂದನು : ಹಿಂದೆ ವಾಮನದರಸು ವಿಜುಮ್ಮಾಯನರಾಣಿ ಜುಮ್ಮೆಗೆ ಶಿವಕೃಪೆಯಿಂದ ಪಂಚ ಪೋಢ್ರಾಸುರನೆಂಬ ಪರಾಕ್ರಮಶಾಲಿಯಾದ ಓರ್ವ ಪುತ್ರ ಜನಿಸಿದನು. ಅವನು ಹುಟ್ಟುವಾಗಲೇ ಹನ್ನೆರಡು ಕೈಗಳೂ, ಹದಿನಾರು ಕಿವಿಗಳೂ, ಎಂಟು ಮುಖಗಳೂ, ಹದಿನಾರು ನೇತ್ರಗಳೂ, ಆರು ಕಾಲುಗಳೂ ಉಳ್ಳ ಭೀಮಪರಾಕ್ರಮಶಾಲಿಯಾಗಿದ್ದನು. ಇವನು ಗರ್ವಿತನಾಗಿ ಮೂರು ಲೋಕಗಳನ್ನೂ ಪೀಡಿಸುತ್ತಾ, ಇಂದ್ರನನ್ನು ಪರಾಭವಗೊಳಿಸಿ, ಅವನನ್ನು ಐರಾವತದೊಡನೆ ನುಂಗಿದನು. ಆದರೆ ಇಂದ್ರನು ತನ್ನ ಮಂತ್ರಬಲದಿಂದ ದೈತ್ಯನ ಹೊಟ್ಟೆಯನ್ನು ಭೇದಿಸಿ ಹೊರಬಂದು ಶಿವದರ್ಶನಕ್ಕಾಗಿ ಕೈಲಾಸಕ್ಕೆ ತೆರಳಿದನು.

ಶುಕ್ರನ ಸಲಹೆ :

ಇತ್ತ ದೈತ್ಯನು ಹೆದರಿ, ಈ ದೇವತೆಗಳಿಂದ ತನಗೆ ಮೃತ್ಯು ತಪ್ಪದೆಂದು ಚಿಂತಿಸಿ ತನ್ನ ಗುರುವಾದ ಶುಕ್ರಾಚಾರ್ಯರನ್ನು ನೆನೆದನು. ದೈತ್ಯಗುರುವು ದರ್ಶನನೀಡಿ, ಅವನ ಪ್ರಾರ್ಥನೆಯನ್ನು ಮನ್ನಿಸಿ, ಎಲೈ ಪೋಢ್ರನೆ! ಸರ್ವೇಶ್ವರನೂ, ದೇವದೇವನೂ ಆದ ಶಂಕರನನ್ನು ಕುರಿತು ತಪಸ್ಸನ್ನಾಚರಿಸಿ, ಮರಣವಿಲ್ಲದಂತೆ ವರವನ್ನು ಪಡೆದು ಬಂದರೆ ಈ ದೇವತೆಗಳನ್ನು ನೀನು ಜಯಿಸಿ ಇಂದ್ರಪದವಿಯನ್ನು ಪಡೆದು ಸುಖದಿಂದಿರಬಹುದು. ಇಲ್ಲವಾದರೆ ಈ ಅಮರರಾದ ದೇವತೆಗಳಿಂದ ನನಗೆ ಉಳಿಗಾಲವಿಲ್ಲವೆಂದು ಉಪದೇಶಿಸಿದನು.

ಪಂಚಮೇಢ್ರನ ತಪಸ್ಸು-ಶಿವಾನುಗ್ರಹ :

ಹೀಗೆ ಶುಕ್ರಾಚಾರ್ಯರ ಸಲಹೆಯಂತೆ ಮೇಢ್ರನು ಶಿವನನ್ನು ಕುರಿತು ಅನೇಕ ಕಾಲ ಅನ್ನ-ಆಹಾರಾದಿಗಳನ್ನೂ ತ್ಯಜಿಸಿ ಪಂಚಾಗ್ನಿಯ ಮಧ್ಯೆ ತಪಸ್ಸುಮಾಡಿದನು. ಅವನ ತಪೋಜ್ವಾಲೆಯು ಲೋಕವನ್ನೆಲ್ಲಾ ಸುಡುತ್ತಿರಲು ದೇವತೆಗಳ ಪ್ರಾರ್ಥನೆಯಂತೆ ಶಂಕರನು ಪಂಚಮೇಢ್ರನಿಗೆ ನಿಜರೂಪ ತೋರಿ, ಎಲೈ ದೈತ್ಯನೇ! ನಿನಗೆ ಬೇಕಾದ ವರವನ್ನು ಕೇಳು, ಅನುಗ್ರಹಿಸುವೆನು ಎಂದು ನುಡಿದನು. ಶಿವದರ್ಶನದಿಂದ ಆನಂದಪೊಂದಿದ ದೈತ್ಯನು ಹೇ ಪರಮೇಶ್ವರನೇ, ದಯಾನಿಧಿಯೇ, ಭಕ್ತವತ್ಸಲನೇ, ಅಮೃತಪಾನದಿಂದ ಅಮರರಾದ ದೇವತೆಗಳು ನಮ್ಮನ್ನು ಜೀವಸಹಿತ ಬಿಡುವುದಿಲ್ಲ. ಆದುದರಿಂದ ಹೇ ಮಹೇಶಾ! ನನಗೆ ಯಾರಿಂದಲೂ ಮರಣವಿಲ್ಲದಂತೆ ವರವನ್ನು ಅನುಗ್ರಹಿಸಬೇಕೆಂದು ಅತಿ ದೈನ್ಯದಿಂದ ಪ್ರಾರ್ಥಿಸಿದನು. ಆಗ ಭಕ್ತಪರಾಧೀನನಾದ ಶಂಕರನು, ಎಲೈ ದೈತ್ಯನೇ, ಹುಟ್ಟಿದವರೆಲ್ಲಾ ಸಾಯಲೇಬೇಕು. ಆದುದರಿಂದ ನಿನಗೆ ನನ್ನ ಕಣ್ಣಿನಿಂದ ಹುಟ್ಟಿದವನಿಂದಲ್ಲದೆ ಮತ್ತಾರಿಂದಲೂ ಮರಣ ಸಂಭವಿಸದಿರಲಿ ಎಂದು ಅನುಗ್ರಹಿಸಿ ಅಂತರ್ಧಾನನಾದನು.

ಮೇಢ್ರನ ಗರ್ವ :

ಇತ್ತ ಪಂಚಮೇಢ್ರನು ವರಬಲದಿಂದ ಗರ್ವಿತನಾಗಿ, ಶಿವನ ಕಣ್ಣಿನಿಂದ ಮನುಷ್ಯನು ಹುಟ್ಟುವುದು ಸಾಧ್ಯವಿಲ್ಲವಾದುದರಿಂದ ನನಗೆ ಈ ಹದಿನಾಲ್ಕು ಲೋಕಗಳಲ್ಲಿ ಯಾರಿಂದಲೂ ಮರಣವಿಲ್ಲವಾಗಿ ಬ್ರಹ್ಮಾಂಡವನ್ನೆಲ್ಲಾ ಗೆದ್ದು ತಾನೇ ಸರ್ವೇಶ್ವರನಾಗಬೇಕೆಂಬ ಹಂಬಲದಿಂದ ಲೋಕಗಳನ್ನೆಲ್ಲಾ ಪೀಡಿಸ ತೊಡಗಿದನು.

ಹೀಗೆ ಅವನು ವಾಲಿಸುಗ್ರೀವರೊಡನೆ ಕಾಳಗ ಮಾಡಿ ಸುಗ್ರೀವಾದಿಗಳನ್ನು ಬೆಣ್ಣೆಯನ್ನು ನುಂಗುವಂತೆ ನುಂಗಿ ಬಿಟ್ಟನು. ಅದೇ ಸಮಯಕ್ಕೆ ನಾವು ಮುನಿಸಮೂಹದೊಡಗೂಡಿ, ಶಿವದರ್ಶನ ಮಾಡುವ ಆತುರದಿಂದ, ಕೈಲಾಸಕ್ಕೆ ಹೋಗುವ ದಾರಿಯಲ್ಲಿ, ಈ ಯುದ್ಧವನ್ನು ಕಂಡು ಭೀತರಾದೆವು. ಅಸಮಪರಾಕ್ರಮಶಾಲಿಯಾದ ವಾಲಿಯು ಯುದ್ಧದಲ್ಲಿ ಈ ದುಷ್ಟಪಂಚಮೇಢ್ರನನ್ನು ಕೊಲ್ಲಲಾಗದಿರಲು, ಅವನು ನಮ್ಮನ್ನು ಉಳಿಸುವುದಿಲ್ಲವೆಂದು

ನಾವು ಭಯದಿಂದ ಓಡುತ್ತಾ, ಕೈಲಾಸಪತೇ, ಗಿರಿಜಾರಮಣ, ಆಪದ್ಬಾಂಧವ, ಅನಾಥರಕ್ಷಕ, ಭಕ್ತವತ್ಸಲಾ, ಕಾಪಾಡು, ಕಾಪಾಡು ಎಂದು ಮೊರೆ ಇಡುತ್ತಿರಲು, ಆ ದುಷ್ಟ ಪಂಚಮೇಢ್ರನು, ನಮ್ಮನ್ನೆಲ್ಲಾ ತನ್ನ ಎಂಟು ಕೈಗಳಿಂದಲೂ ಹಿಡಿದು ಭಕ್ಷಿಸಿ ಬಿಟ್ಟನು.

ವೀರೇಶನಾಗಮನ ಮತ್ತು ಯುದ್ಧ :

ವೀರೇಶನು ನಮ್ಮ ಆರ್ತನಾದವನ್ನು ಕೇಳಿ ಬರುವಷ್ಟರಲ್ಲಿ, ಆದೈತ್ಯನು, ಶರಧಿಯ ಜಲವನ್ನೆಲ್ಲಾ ಕುಡಿದು ಮದದಿಂದ ಮೈಮರೆತು ನಿದ್ರಿಸುತ್ತಿದ್ದನು. ಅದನ್ನು ಕಂಡ ವೀರೇಶನು, ಐವತ್ತು ಗಾವುದ ವಿಸ್ತಾರವುಳ್ಳ ಪರ್ವತವನ್ನು ಅವನ ಮೇಲೆಸೆದನು. ಆಗ ಆ ದೈತ್ಯನು ಪಕ್ಕಕ್ಕೆ ತಿರುಗಿದ ರಭಸಕ್ಕೆ ಆ ಗಿರಿಯು, ತರಗೆಲೆಯು ಹಾರಿಹೋಗುವಂತೆ ಗಗನಕ್ಕೆ ಹಾರಿತು. ಇದನ್ನು ನೋಡಿದ ವೀರೇಶನು ವಿಸ್ಮಯ ಗೊಂಡು, ಭಲೇ ! ಭಲೇ ! ದುರುಳ ರಕ್ಕಸ, ತಾಳು ಎಂದು ಮತ್ತೊಂದು ಹಿರಿದಾದ ಪರ್ವತವನ್ನು ಎತ್ತಿ ತನ್ನ ಶಕ್ತಿಯನ್ನೆಲ್ಲಾ ಪ್ರಯೋಗಿಸಿ ಅವನ ಮೇಲೆಸೆಯಲು, ಅಪರ್ವತವು ಅವನ ಒಂದು ತಲೆಯನ್ನು ಕತ್ತರಿಸಿತು. ಹಾಗೂ ಆ ದೈತ್ಯನು ತನ್ನ ಏಳು ತಲೆಗಳಿಂದಲೇ ಮೇಲೇಳುವಷ್ಟರಲ್ಲಿ ಅವನ ಶಿರಸ್ಸಿನಿಂದ ಸೋರುತ್ತಿದ್ದ ರಕ್ತವು ಧರೆಗೆ ಬಿದ್ದರೆ ಅವನಿಗೆ ಸಮಾನ ಬಲವುಳ್ಳ ರಾಕ್ಷಸರು ಹುಟ್ಟುವರೆಂದು ಗ್ರಹಿಸಿದ್ದ ವೀರೇಶನು ಕೂಡಲೇ ಅವನ ಶಿರವನ್ನು ತನ್ನ ರುಂಡದಲ್ಲಿ ಧರಿಸಿದನು. ವೀರೇಶನ ರುಂಡ ಮಾಲೆಯಲ್ಲಿದ್ದ ತನ್ನ ತಲೆಯನ್ನು ಕಂಡ ಪಂಚಮೇಢ್ರನು ಭಯದಿಂದ ಚಕಿತನಾಗಿ, ಎಲೈ ನನ್ನ ಶಿರವನ್ನು ಕತ್ತರಿಸಿದ ವೀರ ನೀನಾರು ? ಎಂದು ಕೇಳಿದನು. ಆಗ ವೀರೇಶನು, ಎಲೈ ದುಷ್ಟರಕ್ಕಸನೇ ! ಎಲ್ಲಿ, ಆ ಮುನಿವರ್ಯರನ್ನು ನುಂಗಿದ ನಿನ್ನ ಶೌರ್ಯವನ್ನು ಈಗ ತೋರಿಸು ; ನಾನು ರುದ್ರಾಂಶನಾದ ವೀರೇಶನು ಎಂದು ಹೇಳಲು, ಆಗ ಆ ದೈತ್ಯನು ಅತ್ಯಂತ ಸಂತೋಷದಿಂದ ಕೇಕೆ ಹಾಕುತ್ತಾ, ಲೇಸಾಯ್ತು ವೀರೇಶಾ, ನನಗೆ ಸಮಾನವಾದ ಬಲವುಳ್ಳ ವೈರಿಯೊಡನೆ ಹೋರಾಡಬೇಕೆಂಬ ನನ್ನ ಆಸೆ ಇಂದಿಗೆ ಕೈಗೂಡಿತು. ನನ್ನೊಡನೆ ಕಾದುವ ಶಕ್ತಿಯಿದ್ದೊಡೆ ಬೇಗ ಸಿದ್ಧನಾಗು, ಎಂದು ಹೇಳಿ ತನ್ನಲ್ಲಿದ್ದ ಎರಡು ಖಡ್ಗಗಳಲ್ಲಿ ಒಂದನ್ನು ವೀರೇಶನಿಗೆ ಕೊಟ್ಟು ಸಿಂಹನಾದ ಮಾಡಿದನು. ಆ ಖಡ್ಗವು ಒಂದು ಗಾವುದದಗಲವೂ, ಐವತ್ತುಗಾವುದ ಉದ್ದವೂ ಇದ್ದಿತು.

ವೀರೇಶನು ದೈತ್ಯನ ಶರೀರದ ನಾಲ್ಕರಷ್ಟು ಗಾತ್ರದ ಶರೀರವನ್ನು ಹೊಂದಿ, ಆ ಖಡ್ಗದಿಂದ ಅವನೊಡನೆ ಕಾದಾಡಲಾರಂಭಿಸಿದನು.

ಘನಘೋರ ಯುದ್ಧ :

ಹೀಗೆ ಈರ್ವರ ಮಧ್ಯೆ ಭಯಂಕರವಾದ ಯುದ್ಧವು ನಡೆಯಿತು. ಒಂದು ವರ್ಷಕಾಲ ಖಡ್ಗಗಳಿಂದಲೂ, ಇನ್ನೊಂದು ವರ್ಷಕಾಲ ಗದೆಗಳಿಂದಲೂ, ಮತ್ತೊಂದು ವರ್ಷಕಾಲ ಧನುರ್ಬಾಣಗಳಿಂದಲೂ, ಮಗುದೊಂದು ವರ್ಷ ಕಾಲ ಮುಷ್ಟಿಯುದ್ಧದಿಂದಲೂ ಕಾದಿ, ಹೀಗೆ ನಾಲ್ಕು ವರ್ಷ ಕಳೆದ ಮೇಲೆ ಮತ್ತೆ ಖಡ್ಗವನ್ನು ಪಿಡಿದು ಕಾದ ತೊಡಗಿದರು.

ಸುದೀರ್ಘವಾದ ಆ ಯುದ್ಧದಲ್ಲಿ ಆ ಅತಿಬಲರ ಕಾಲುಗಳ ತುಳಿತವನ್ನು ತಾಳಲಾರದೆ, ಭೂಮಿ ಕುಗ್ಗಿತು, ದಿಗ್ಗಜಗಳು ಒದರಿದವು, ಆದಿಶೇಷನು ಬಗ್ಗಿದನು, ಕೂರ್ಮನು ಕುಗ್ಗಿದನು. ದೇವತೆಗಳೆಲ್ಲಾ ಕುತೂಹಲದಿಂದ ವೀರೇಶನ ಶೌರ್ಯವನ್ನು ಕೊಂಡಾಡುತ್ತಾ,ವಿಜಯಿಯಾಗೆಂದು ಹರಸುತ್ತಿದ್ದರು. ನಂತರ ವೀರೇಶನು ಆರ್ಭಟಿಸುತ್ತಾ ನುಗ್ಗಿ ದೈತ್ಯನ ಮತ್ತೆರಡು ತಲೆಗಳನ್ನು ಕಡಿದು, ಅವು ನೆಲಕ್ಕೆ ಬೀಳದಂತೆ, ಅಡಗಿಸಿದನು. ಆಗ ನೂರು ಶಿರಗಳನ್ನು ಕಳೆದುಕೊಂಡು, ಇನ್ನುಳಿದ ಐದು ಶಿರಗಳಿಂದಲೇ ದೈತ್ಯನು ಕಾದುತ್ತಾ ತನ್ನ ಐದು ತಲೆಗಳಿಂದಲೂ ವೀರೇಶನನ್ನು ಘಾತಿಸಿದನು.

ಪಂಚವೋಢ್ರನ ಸಂಹಾರ :

ಆದರಿಂದ ನೊಂದು, ಕಿಡಿಗಳನ್ನು ಕಾರುತ್ತಾ ವೀರೇಶನು, ಪ್ರಳಯ ಕಾಲದ ರೌದ್ರಾವತಾರ ತಾಳಿ, ಭೂವ್ಯೋಮಾಕಾಶಗಳೆರಡನ್ನೂ ವ್ಯಾಪಿಸಿ, ಎಲೈ ಭ್ರಷ್ಟರಕ್ಕಸನೇ ! ಈವರಿವಿಗೂ ನಿನ್ನೊಡನೆ ವಿನೋದದಿಂದ ಯುದ್ಧ ಮಾಡು ತ್ತಿದ್ದುದರಿಂದ ನನ್ನನ್ನು ದಂಡಿಸಬಂದೆಯಾ, ಎಲ್ಲಿ ! ಈಗ ನಿನ್ನ ಪ್ರತಾಪದ ಪ್ರದರ್ಶನವಾಗಲಿ, ಎಂದು ಕೋಪಾನ್ವಿತನಾಗಿ ರಭಸದಿಂದ ಆ ಪಂಚವೋಢ್ರ ನನ್ನು ತನ್ನ ವಜ್ರಸಮಾನವಾದ ಬಾಹುಗಳಿಂದ ಹಿಡಿದು, ತನ್ನ ಕಂಕುಳಿನ ಮಧ್ಯೆ ಸಿಕ್ಕಿಸಿ, ಜೈ ಶಂಕರ, ಜೈಜಗದಂಬ, ಎಂದು ಜಯಕಾರ ಮಾಡುತ್ತಾ ರಕ್ಕಸನ ಐದು ತಲೆಗಳನ್ನೂ ಒಂದೇ ಏಟಿಗೆ ಕತ್ತರಿಸಿ ದೈತ್ಯನನ್ನು ಸಂಹರಿಸಿ ಸಿಂಹನಾದ ಮಾಡಿದನು. ಜಯಕಾರಗಳ ರವವು ಮುಗಿಲನ್ನೆಲ್ಲಾ ಆವರಿಸಿತು.

ನಂತರ ವೀರೇಶನು ಋಷಿಗಳಿಗೂ, ದೇವ ಸಮೂಹಕ್ಕೂ ಭಸ್ಮದಿಂದ ಜೀವದಾನಮಾಡಿ ಕಾಪಾಡಿದನು.

ಶಿವದರ್ಶನ :

ಕೂಡಲೇ ವೃಷಭಾರೂಢನೂ ಉಮಾಸಹಿತನೂ ಆದ ಶಂಕರನು ಹರಿವಿಧಿಗಳೊಡಗೂಡಿ ವೀರೇಶನಲ್ಲಿಗೆ ಬಂದು, ವೀರಶ್ರೀಯಾದ ಕುಮಾರನನ್ನು ತೆಗೆದಪ್ಪಿ, ಚುಂಬಿಸಿ, ಭಾಪು! ಭಾಪು! ಕುಮಾರಾ! ನಿನ್ನ ಶೌರ್ಯಕ್ಕೆ ನಾನೇ ಮಾರುಹೋದೆನು. ನಿನ್ನ ಕೀರ್ತಿ ಅಮರವಾಗಲಿ, ಎಂದು ಹರಸುತ್ತಿರಲು, ದೇವದುಂದುಭಿಗಳು ಮೊಳಗಿದವು. ಸುರರು ಪುಷ್ಪವೃಷ್ಟಿಗರೆದರು. ಅಮರಗಣದ ಹಾಗೂ ರುದ್ರಗಣದ ಜಯಕಾರವು ಲೋಕವನ್ನೆಲ್ಲಾ ವ್ಯಾಪಿಸಿ ಪ್ರತಿಧ್ವನಿಗೈಯುತ್ತಿತ್ತು. ಆಗ ಹರಿಬ್ರಹ್ಮರು ಜಯ ರೌದ್ರರೂಪನೇ, ಜಯ ದುರ್ಭೇದ್ಯದೈತ್ಯಾಂತಕನೆ, ಜಯ ಭೀಕರಾಕಾರನೆ, ಜಯ ದಕ್ಷಾಧ್ವರಹರ, ಜಯ ನೃಸಿಂಹ ಗರ್ವಭಂಗ, ಜಯ ಮಂಗಳಾಂಗ, ಜಯ ಕರುಣಾಸಮುದ್ರ, ಜಯ ಮುನಿಕುಲಪ್ರಾಣದಾತ ಎಂದು ನಾನಾ ಬಗೆಯಿಂದ ಸ್ತೋತ್ರ ಮಾಡಿದರು. ನಂತರ ಋಷಿಶ್ರೇಷ್ಠರಾದ, ವಸಿಷ್ಠ, ಗೌತಮ, ಅಗಸ್ತ್ಯ, ಕಶ್ಯಪ ಮೊದಲಾದವರಿಂದೊಡಗೂಡಿದ ನಮ್ಮ ಮುನಿವೃಂದವೆಲ್ಲ ವೀರೇಶನನ್ನು ನಾನಾ ಬಗೆಯಿಂದ ಸ್ತೋತ್ರಮಾಡಿ, ಮುಕ್ತಕಂಠದಿಂದ ಹರಸಿತು.

ನಂತರ ವೀರೇಶನು, ಅತ್ಯಂತ ಭಕ್ತಿಭಾವದಿಂದ ಶಿವಶಿವೆಯರಿಗೆ ವಂದಿಸಲು ಎಲ್ಲರೂ ತಮ್ಮ ತಮ್ಮ ಲೋಕಗಳಿಗೆ ತೆರಳಿದರು.

ಹೀಗೆ, ಭಸ್ಮದ ಹಿರಿಮೆ ಅಗಾಧವಾದುದು ಎಂದು ವಿವರಿಸಿ, ಆ ಕರುಣಿ-ಶುಚಿಸ್ಮಿತೆ ದಂಪತಿಗಳಿಗೆ ಆನಂದವನ್ನು ನೀಡಿ, ಅವರಿಂದ ಬೀಳ್ಕೊಂಡು ದಧೀಚಿಗಳು ತಮ್ಮ ತಪೋಭೂಮಿಗೆ ಹೋದರು.

ಫಲಶ್ರುತಿ

ವೀರೇಶಷಡ್‌ಲೀಲಾಕಥಾಂ ಯಃ ಪಠೇಚ್ಛೃಣುಯಾದಪಿ ।
ಮುಚ್ಯತೇ ಸರ್ವಪಾಪೇಭ್ಯೋ ಭುಕ್ತಿಂ ಮುಕ್ತಿಂ ಚ ವಿಂದತಿ ॥

ಈ ಶ್ರೀವೀರೇಶನ ದಕ್ಷಯಜ್ಞ, ಶರಭಲೀಲೆ, ಹನುಮಂತನಿಗೆ ಶಿವದೀಕ್ಷೆ, ಕದಂಬಾಸುರಸಂಹಾರ, ಜ್ವಾಲವ್ಯಾಳಾಸುರ–ಕಾಕೋ

ದರಾಸುರಸಂಹಾರ, ಪಂಚವಕ್ತ್ರಾಸುರಸಂಹಾರ ಎಂಬ ಪವಿತ್ರವಾದ ಷಡ್ಲೀಲೆಗಳನ್ನು ಯಾರು ಭಕ್ತಿಯಿಂದ ಓದುವರೋ, ಅಥವಾ ಓದಿಸಿ ಕೇಳುವರೋ, ಅಂಥವರ ಸಕಲ ಪಾಪಗಳೂ ನಾಶವಾಗಿ, ಶ್ರೀ ವೀರೇಶನ ಕೃಪೆಯಿಂದ, ಅವರಿಗೆ ಭುಕ್ತಿಮುಕ್ತಿಗಳು ಸಿದ್ಧಿಸುವುದರಲ್ಲಿ ಯಾವ ಸಂಶಯವೂ ಇಲ್ಲ.

ಇತಿ,

ಧರ್ಮ ಸಾಹಿತ್ಯಭೂಷಣ,

ಎಂ. ಚಂದ್ರಶೇಖರ ಆರಾಧ್ಯ.

ಕಡೆಯ ಮಾತು

ಸರ್ವತೋಭುವನವ್ಯಾಪ್ತಿಶಕ್ತಿಮವ್ಯಾಹತಾಂ ಕ್ವಚಿತ್ ।
ಜ್ಞಾನಮಪ್ರತಿಮಂ ಶಶ್ವದೈಶ್ವರ್ಯಂ ಚಾಣಿಮಾದಿಕಂ ॥ (ಶಿ.ಪು. 11-10-3)

ಸೃಷ್ಟಿಸ್ಥಿತಿಲಯಾಖ್ಯೇಷು ಕರ್ಮಸು ತ್ರಿಷು ಹೇತುತಾಂ ।
ಪ್ರಭುತ್ವೇನ ಸಹೈತೇಷಾಂ ಪ್ರಸೀದತಿ ಮಹೇಶ್ವರಃ ॥ (11-10-4)

ಏತೇ ಪರಸ್ಪರೋತ್ಪನ್ನಾ ಧಾರಯಂತಿ ಪರಸ್ಪರಂ ।
ಪರಸ್ಪರೇಣ ವರ್ಧಂತೇ ಪರಸ್ಪರಮನುವ್ರತಾಃ ॥ (11-10-6)

ಕ್ವಚಿದ್ಬ್ರಹ್ಮಾ ಕ್ವಚಿದ್ವಿಷ್ಣುಃ ಕ್ವಚಿದ್ರುದ್ರಃ ಪ್ರಶಸ್ಯತೇ ।
ನಾನೇನ ತೇಷಾಮಾಧಿಕ್ಯಮೈಶ್ವರಂ ಚಾತಿರಿಚ್ಯತೇ ॥ (11-10-7)

ಮೂರ್ಖಾ ನಿಂದಂತಿ ತಾನ್ವಾಗ್ಭಿಃ ಸಂರಂಭಾಭಿನಿವೇಶಿನಃ ।
ಯಾತುಧಾನಾ ಭವಂತ್ಯೇವ ಪಿಶಾಚಾಶ್ಚ ನ ಸಂಶಯಃ ॥ (11-10-8)

ಸೋಽಯಮಾತ್ಮಾ ತ್ರಯಸ್ಯಾಸ್ಯ ಪ್ರಕೃತೇಃ ಪುರುಷಸ್ಯ ಚ ।
ಲೀಲಾಕೃತಜಗತ್ಸೃಷ್ಟಿರೀಶ್ವರತ್ವೇ ವ್ಯವಸ್ಥಿತಃ ॥ (11-10-10)

ಯಸ್ಸರ್ವಸ್ಮಾತ್ಪರೋ ನಿತ್ಯೋ ನಿಷ್ಕಲಃ ಪರಮೇಶ್ವರಃ ।
ಸ ಏವ ಚ ತದಾಧಾರಸ್ತದಾತ್ಮಾ ತದಧಿಷ್ಠಿತಃ ॥ (11-10-11)

ತಸ್ಮಾನ್ಮಹೇಶ್ವರಶ್ಚೈವ ಪ್ರಕೃತಿಃ ಪುರುಷಸ್ತಥಾ ।
ಸದಾಶಿವೋ ಭವೋ ವಿಷ್ಣುರ್ಬ್ರಹ್ಮಾ ಸರ್ವಂ ಶಿವಾತ್ಮಕಂ ॥ (11-10-12)

ಪ್ರಭುವಾದ ಮಹೇಶ್ವರನು, ಪ್ರಪಂಚದಲ್ಲಿ ಎಲ್ಲಾ ಕಡೆಯಲ್ಲಿಯೂ, ವ್ಯಾಪಿಸಿಕೊಂಡು, ಬ್ರಹ್ಮ-ವಿಷ್ಣು-ಮಹೇಶ್ವರರಿಗೆ, ಯಾರಿಂದಲೂ ಎಲ್ಲಿಯೂ ತಡೆಯಿಲ್ಲದ ಸಾಮರ್ಥ್ಯವನ್ನೂ, ಅಸದೃಶವಾದ ಜ್ಞಾನ, ಅಣಿಮಾದ್ಯಷ್ಟೈಶ್ವರ್ಯಗಳನ್ನೂ ದಯಪಾಲಿಸಿರುವನು. ಸೃಷ್ಟಿ-ಸ್ಥಿತಿ-ಲಯಗಳೆಂಬ ಮೂರು ವಿಧವಾದ ಕಾರ್ಯಗಳನ್ನೂ, ಧರ್ಮಕ್ಕೆ ಚ್ಯುತಿಬಾರದಂತೆ ನಿರ್ವಹಿಸಲು, ಅವರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನೂ, ಅನುಗ್ರಹಿಸಿರುವನು.

ಈ ತ್ರಿಮೂರ್ತಿಗಳೂ, ಒಬ್ಬರನ್ನೊಬ್ಬರು ಅನುಸರಿಸಿ ಹುಟ್ಟಿದವರು; ಒಬ್ಬರನ್ನೊಬ್ಬರು ಅನುಸರಿಸಿ, ಕೆಲಸ ಮಾಡತಕ್ಕವರು. ಅಲ್ಲದೆ ಒಬ್ಬರ

ಮೇಲೆ ಮತ್ತೊಬ್ಬರು, ಅಸೂಯೆ ಪಡದೆ, ಪ್ರತಿಯೊಬ್ಬರೂ, ತಮ್ಮ ತಮ್ಮ ಕರ್ತವ್ಯಗಳನ್ನು ಮಾಡುತ್ತಿರುವರು. ಕೆಲವು ಸಂದರ್ಭಗಳಲ್ಲಿ, ಬ್ರಹ್ಮನಿಗೂ, ಕೆಲವು ಸಂದರ್ಭಗಳಲ್ಲಿ ವಿಷ್ಣುವಿಗೂ, ಮತ್ತೆ ಕೆಲವು ಸಂದರ್ಭಗಳಲ್ಲಿ ರುದ್ರನಿಗೂ ಪ್ರಾಶಸ್ತ್ಯ ದೊರೆಯಬಹುದು. ಹೀಗಿದ್ದರೂ, ಇವರಲ್ಲಿ ಯಾವ ತಾರತಮ್ಯಕ್ಕೂ ಎಡೆಯಿಲ್ಲ.

ಆದರೂ, ಕೆಲವು ಅಜ್ಞಾನಿಗಳು, ತಮ್ಮ ತಮ್ಮ ಮತಗಳನ್ನು ಹೆಚ್ಚೆಂದು ಸಾಧಿಸಬೇಕೆಂಬ ಹಠದಿಂದ, ಇವರಲ್ಲಿ ಒಬ್ಬರು ಹೆಚ್ಚೆಂದೂ, ಮತ್ತೊಬ್ಬರು, ಕಡಿಮೆಯೆಂದೂ, ವಾದ ವಿವಾದಗಳನ್ನು ಮಾಡುತ್ತಾ, ತಾರತಮ್ಯ ಭಾವನೆಯನ್ನು ಕಲ್ಪಿಸಿ, ನಿಂದಿಸುವರು. ಇಂಥಾ ಜನರು, ಮುಂದೆ ರಾಕ್ಷಸರಾಗಿಯೂ, ಪಿಶಾಚಿಗಳಾಗಿಯೂ, ಹುಟ್ಟುವುದರಲ್ಲಿ ಯಾವ ಸಂದೇಹವೂ ಇಲ್ಲ. ಪರಬ್ರಹ್ಮ ಪರಮೇಶ್ವರನು ಈ ಮೂರು ದೇವತೆಗಳಿಗೂ, ಪ್ರಕೃತಿಪುರುಷರಿಬ್ಬರಿಗೂ. ಕಾರಣನಾಗಿ, ಈಶ್ವರನೆನಿಸಿಕೊಂಡು. ತನ್ನ ಸಂಕಲ್ಪಮಾತ್ರದಿಂದ, ಸೃಷ್ಟ್ಯಾದಿ ಕಾರ್ಯಗಳನ್ನು ನಡೆಯಿಸುವನು.

ಪರಮೇಶ್ವರನು, ಎಲ್ಲಕ್ಕಿಂತಲೂ, ಬೇರೆಯಾಗಿಯೂ, ಶ್ರೇಷ್ಠನಾಗಿಯೂ ಇರುವನು. ಇವನು ನಿತ್ಯನು. ಎಂದರೆ ಇವನಿಗೆ ಸಾವಿಲ್ಲ. ಕಲಾಸಂಬಂಧಗಳಾವುವೂ ಇವನಿಗಿಲ್ಲ. ಇವನೇ ಎಲ್ಲಕ್ಕೂ ಆಶ್ರಯನು. ಇವನೇ ಆಯಾ ರೂಪದಿಂದ ಆಯಾ ಪದಾರ್ಥಗಳಲ್ಲಿರುವನು. ಆದ್ದರಿಂದ ಮಹೇಶ್ವರ, ಪ್ರಕೃತಿ ಪುರುಷ, ಸದಾಶಿವ, ಭವ, ವಿಷ್ಣು, ಬ್ರಹ್ಮ, ಇವೆಲ್ಲವೂ, ಶಿವನ ರೂಪಾಂತರಗಳೇ ಆಗಿವೆ.

ಈ ತ್ರಿಮೂರ್ತಿಗಳು ಮಾಯಾರಹಿತರಲ್ಲ. ಕೆಲವೊಮ್ಮೆ ಇವರು, ಶಿವಮಾಯೆಯಿಂದ, ಭ್ರಾಂತರಾಗಿ ಮೇಲಿನ ನಿಯಮಗಳನ್ನು ಉಲ್ಲಂಘಿಸುವರು. ಆಗ ಸದಾಶಿವನೂ ಪರಬ್ರಹ್ಮನೂ ಆದ ಶಂಕರನು, ಅವರನ್ನು ರಕ್ಷಿಸಿ, ಅವರನ್ನು ಮಾಯೆಯಿಂದ ನಿವೃತ್ತಿಮಾಡುವನು.

ಎಲ್ಲಾ ಮತಾಚಾರ್ಯರೂ, ಗೀತಾಚಾರ್ಯರೂ, ಹೇಳಿರುವಂತೆ,

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ॥ (ಗೀತೆ)

ತಮ್ಮ ತಮ್ಮ ಧರ್ಮದಲ್ಲಿ ನಿಷ್ಠೆಯುಳ್ಳವರಾಗಿಯೂ, ಪರಧರ್ಮ ಸಹಿಷ್ಣು

ಗಳಾಗಿಯೂ, ಇರಬೇಕಲ್ಲದೆ, ಪರದೈವವನ್ನಾಗಲೀ, ಪರಧರ್ಮವನ್ನಾಗಲೀ ನಿಂದಿಸಬಾರದು. ಹಾಗೆ ಮಾಡುವುದು ಸ್ವನಾಶಕ್ಕೆ ಹೇತುವಾಗುವುದು. ಆದುದರಿಂದ, ಈ ದಕ್ಷಯಜ್ಞ ಹಾಗೂ, ಶರಭಲೀಲೆಗಳಲ್ಲಿ ಕೆಲದೇವತೆಗಳಿಗೆ ಆಗುವ ಪರಾಭವ, ಹಾನಿ, ಇತ್ಯಾದಿಗಳಿಂದ ಅವರ ದೇವತ್ವಕ್ಕೆ ಎಂದೂ ಚ್ಯುತಿ ಸಂಭವಿಸಿರುವುದಿಲ್ಲ. ಅದೆಲ್ಲಾ ಪ್ರಾಯಶ್ಚಿತ್ತ ರೂಪವಾದ, ಶಿವಾನುಗ್ರಹವೇ ಅಲ್ಲದೆ ಶಿವನ ಅಗ್ರಹವಲ್ಲವೆಂದು ಸಹೃದಯರು ಗ್ರಹಿಸಬೇಕು.

ವಿಶೇಷ ವಿಷಯ :

ಗ್ರಂಥಪುಟದಲ್ಲಿ ಹೆಸರಿಸಿರುವ ಗ್ರಂಥಗಳೆಲ್ಲಾ ಬಹುತೇಕ ವಿಷ್ಣುವಿನ ಅವತಾರರೆಂದು ಹೇಳಲಾಟ ಭಗವಾನ್ ವೇದವ್ಯಾಸರು ರಚಿಸಿರುವ ಪವಿತ್ರ ಗ್ರಂಥಗಳೇ. ಹೀಗಿದ್ದರೂ ಅನೇಕ ಗಹನವಾದ ವಿಚಾರಗಳ ಬಗ್ಗೆ ಅಂದರೆ ದಕ್ಷಯಜ್ಞದ ಸ್ಥಳ, ವೀರೇಶನ ಅವತಾರದ ರೀತಿ, ಭದ್ರಕಾಳಿಯ ಜನನ ಮತ್ತು ವಿವಾಹ, ರುದ್ರ–ದಕ್ಷರ ವಿರೋಧದ ಕಾರಣ, ಯುದ್ಧದಲ್ಲಿ ಹರಿಯು ನಿಗ್ರಹದ ವಿಚಾರ, ಸತಿಯ ದೇಹತ್ಯಾಗದ ವಿಧಾನ, ಯಜ್ಞದಲ್ಲಿ ಹರಿ–ವಿಧಿಗಳು ಪಾಲ್ಗೊಳ್ಳುವ ವಿಚಾರ, ಯಜ್ಞದ ಪರಿಸಮಾಪ್ತಿ, ಅಂಜನಿಯ ವಿವಾಹ, ಅಂಜನಿಯ ತಪಸ್ಸಿನ ಫಲ, ಗೌತಮರ ಪ್ರಾಣತ್ಯಾಗದ ಕಾರಣ, ನೃಸಿಂಹನ ಮರ್ದನ, ಶರಭದ ರೂಪ, ರಾಮನಿಂದ ಹನುಮಂತನಿಗೆ ರತ್ನಹಾರ ಪ್ರದಾನ, ರಾಮ–ಹನುಮರ ಸಂವಾದ, ಹನುಮಂತನ ಮೋಕ್ಷ ಇತ್ಯಾದಿ ವಿಷಯಗಳಲ್ಲಿ ಇವರ ಒಮ್ಮತದ ಅಭಿಪ್ರಾಯವಿಲ್ಲ.

ವೇದವ್ಯಾಸರು ಮಹಾಜ್ಞಾನಿಗಳು, ವಿಷ್ಣುವಿನ ಅವತಾರರು, ಅಲ್ಲದೆ ಮಹಾಶಿವಭಕ್ತರು. ಆದುದರಿಂದ ಅವರ ಮೂಲಕೃತಿಗಳಲ್ಲಿ ಒಂದೇ ವಿಷಯದ ಬಗ್ಗೆ ವಿರೋಧಾಭಾಸವಿರಲು ಸಾಧ್ಯವೇ ಇಲ್ಲ. ಅಂದಮೇಲೆ ಇಂಥಾ ಗಹನ ವಿಷಯಗಳ ಬಗ್ಗೆ ವಿರೋಧಾಭಾಸಕ್ಕೆ ಕಾರಣವೇನಿರಬಹುದೆಂಬ ಪ್ರಶ್ನೆ ಪಂಡಿತರನ್ನು ಅನೇಕ ಕಾಲದಿಂದ ಕಾಡಿಸುತ್ತಲೇ ಬಂದಿದೆ.

ವೇದವ್ಯಾಸರ ಸಂಸ್ಕೃತ ಮೂಲಪ್ರತಿಗಳಲ್ಲಿ ಬಹುಭಾಗ ಗ್ರಂಥಗಳು ಕನ್ನಡ ಮತ್ತಿತರ ಭಾಷೆಗಳಿಗೆ ತರ್ಜುಮೆಯಾಗಿರುವುದು ಸರ್ವವೇದ್ಯವೇ ಆಗಿದೆ.

ಇಂಥಾ ತರ್ಜುಮೆಯ ಕಾಲದಲ್ಲಿ ಸಂಭವಿಸಿರಬಹುದಾದ ಹಸ್ತಕ್ಷೇಪಗಳೇ ಬಹುಶಃ ಇಂಥಾ ವಿರೋಧಾಭಾಸಗಳಿಗೆ ಎಡೆಕೊಟ್ಟಿರಬಹುದೆಂದು ಪ್ರಾಜ್ಞರ

ಅಭಿಮತ ಮತ್ತು ಶಂಕೆ. ಅಲ್ಲದೆ ಈ ಪೌರಾಣಿಕ ಘಟನೆಗಳು ಸಂಭವಿಸಿ ಸಹಸ್ರ, ದಶಸಹಸ್ರ ವರ್ಷಗಳು ಗತಿಸಿರುವುದರಿಂದಲೂ, ಮೂಲಕೃತಿಗಳು ಅಲಭ್ಯವಾಗಿರುವುದರಿಂದಲೂ, ಇಂಥಾ ಅಭಿಪ್ರಾಯವೇ ಸರಿಯೆಂದು ಹೇಳುವುದು ಕಷ್ಟದ ವಿಷಯ.

ಅನೇಕ ಮೂಲಕೃತಿಗಳೂ ಮತ್ತು ವೇದಭಾಗಗಳೂ, ಪರದೇಶೀಯರ ಅಂದರೆ ಬಹುಶಃ ಇಂಗ್ಲೀಷರ ಮತ್ತು ಜರ್ಮನರ ಕೈಸೇರಿರುವುದರಿಂದಲೂ, ಕೆಲ ದುರ್ಭಾವನೆ ಹಾಗೂ ಸ್ವಮತಾಭಿಮಾನವುಳ್ಳ ಕೆಲ ದೇಶೀಯರಿಂದಲೂ ನಾಶಪಡಿಸಲ್ಪಟ್ಟ ವಿಚಾರ ಜನಜನಿತವಾದುದೇ ಆಗಿದೆ.

ಇಂಥಾ ಸಂದಿಗ್ಧ ಪರಿಸ್ಥಿತಿಯಲ್ಲಿ ವಿರೋಧಭಾಸದಿಂದ ಕೂಡಿದ ವಿಚಾರಗಳನ್ನು ಓದುಗರ ನಿಷ್ಠೆ, ಧರ್ಮ ಇತ್ಯಾದಿಗಳ ದೃಷ್ಟಿಕೋನಕ್ಕೆ ಸರಿತೋರಿದ ಅಭಿಪ್ರಾಯಗಳನ್ನೇ ಅಂಗೀಕರಿಸುವುದೇ ಸೂಕ್ತಪರಿಹಾರೋಪಾಯವೆಂದು ಪಂಡಿತರ ಅಭಿಮತ. ಆದುದರಿಂದ ಇಂಥಾ ಗಹನವಿಚಾರಗಳ ಸೂಕ್ತಾಸೂಕ್ತ ನಿರ್ಧಾರಮಾಡುವ ಹೊಣೆಯನ್ನು ವಿದ್ವಾಂಸರ ಹಾಗೂ ವಿಮರ್ಶಕರ ತೀರ್ಮಾನಕ್ಕೇ ಬಿಡಲಾಗಿದೆ.

ಇತಿ ಶಿವಂ

ಗ್ರಂಥಕರ್ತಾ.

ಗ್ರಂಥ ಋಣ

ದಕ್ಷಯಜ್ಞ :

ಸ್ಕಾಂದಪುರಾಣ ಭಾ 1-4-5-6-7. ಲಿಂಗಪುರಾಣ ಭಾ-4 ಶಿವ ರಹಸ್ಯ ಭಾ 6-30 ಸುಪ್ರಭೇಧಾಗಮ, ಕೂರ್ಮಪುರಾಣ. ಶಿವಪುರಾಣ ಭಾ 2-3-6-7-11. ಗಣೇಶಪುರಾಣ, ಪದ್ಮಪುರಾಣ (ಶಿವಗೀತೆ), ವಾಯು ಪುರಾಣ, ಕಾಳಿಕಾ ಪುರಾಣ, ಶ್ರೀ ಮದ್ಭಾಗವತ, ಚತುರ್ಥಸ್ಕಂದ, ಹರಿಹರನ ವೀರಭದ್ರರಗಳೆ, ರಾಘವಾಂಕನ ವೀರೇಶಚರಿತ್ರೆ, ನಿಶ್ಚಿಂತಾತ್ಮನ ವೀರಭದ್ರ ವಿಜಯ, ಶ್ರೀ ವೀರಭದ್ರ ಸ್ವಾಮಿಯ ಪುರಾಣ.

ಶರಭಲೀಲೆ :

ಶಿವಪುರಾಣ, ಭಾ-3, ಲಿಂಗಪುರಾಣ, ಭಾ-4, ಅಧ್ಯಾಯ, 96 ಪದ್ಮ ಪುರಾಣ-ಶಂಕರ ಸಂಹಿತೆ, ಕಾಳಿಕಾಖಂಡ, ಶ್ರಿ.ಡಾ.ಜ.ಚ.ನಿ. ಯವರ ಅಚ್ಚಾಳು ವೀರಭದ್ರ, ವೀರಜ್ಯೋತಿ ವೀರಭದ್ರ, ವೀರೇಶಚರಿತೆ.

ಹನುಮಂತನಿಗೆ ಶಿವದೀಕ್ಷೆ :

ಗಣೇಶ ಪುರಾಣ, ಭಾ-4. ಶಿವರಹಸ್ಯ-ತೃತೀಯಾಂಶ, ಸ್ಕಾಂದಪುರಾಣ, ಭಾ-2-3-5, ಶಿವಪುರಾಣ, ಭಾ-7 ಮಾರುತಿ ಪುರಾಣ, ಶತರುದ್ರಸಂಹಿತಾ -8 ಕೋಟಿ ರುದ್ರಸಂಹಿತಾ, ಪದ್ಮಪುರಾಣ-ಶಿವಗೀತೆ, ಮಹಾಭಾರತ, ರಾಮಾಯಣ, ಲಿಂಗಧಾರಣಚಂದ್ರಿಕೆ, ಮಾರುತಿಪುರಾಣ, ವೀರಭದ್ರನಿಂದ ಲಿಂಗಧಾರಣೆ ಎಂಬ ನಾಟಕಗ್ರಂಥ, ವೀರಭದ್ರವಚನಗಳು, ವೀರಭದ್ರನ ವಡ ಪುಗಳು, ವಾಯುಪುರಾಣ, ಕಾಳಿಕಾ ಪುರಾಣ, ಕೇಸರಿ, ಶ್ರೀ. ಡಾ ಜ.ಚ.ನಿ. ಯವರ ಅಚ್ಚಾಳು ವೀರಭದ್ರ, ಹಮ್ಮೀರ ಕಾವ್ಯ ಮುಂತಾದ ಗ್ರಂಥಗಳು.

ಕಬಂಧಾಸುರ ಸಂಹಾರ :

ಕಾಳಿಕಾಪುರಾಣ, ಶಿವರಹಸ್ಯ, ವೀರಭದ್ರದೇವನ ವಚನಸಂಗ್ರಹ, ಪದ್ಮಪುರಾಣ, ಶಂಕರಸಂಹಿತೆ, ವೀರಭದ್ರನ ವಡಪುಗಳು ಇತ್ಯಾದಿಗ್ರಂಥಗಳು.

ಜ್ವಾಲವ್ಯಾಳಾಸುರ-ಕಾಕೋದರಾಸುರ ಸಂಹಾರ :

ಕಾಳಿಕಾಪುರಾಣ, ಶಿವರಹಸ್ಯ, ವೀರಭದ್ರದೇವರ ವಚನಗಳು, ವೀರಭದ್ರದೇವರ ಪುರಾಣ, ಶಂಕರಸಂಹಿತೆ, ವೀರಭದ್ರನ ಪಡಪುಗಳು ಇತ್ಯಾದಿ ಗ್ರಂಥಗಳು.

ಪಂಚಮೋಢ್ರಾಸುರ ಸಂಹಾರ :

ಶಂಕರಸಂಹಿತೆ, ಶಿವರಹಸ್ಯ, ಕಾಳಿಕಾಪುರಾಣ, ವೀರಭದ್ರದೇವರ ಪುರಾಣ, ವೀರಭದ್ರನ ಪಡಪುಗಳು, ಇತ್ಯಾದಿ ಗ್ರಂಥಗಳು.

ಶ್ರೀಚಂದ್ರಶೇಖರಗ್ರಂಥಮಾಲೆಯ ಪ್ರಕಟಣೆಗಳು

ಕುಸುಮ—೧

ಶ್ರೀ ಚನ್ನಸೋಮೇಶ್ವರ ಸುಪ್ರಭಾತ ಸ್ತೋತ್ರ

ಕುಸುಮ—೨

ಸಂಕ್ಷಿಪ್ತ ಇಷ್ಟಲಿಂಗಪೂಜಾವಿಧಿ (೨ನೆಯ ಮುದ್ರಣ)

ಕುಸುಮ—೩

ಸುಜ್ಞಾನಪ್ರಭೆಯ ದಿವ್ಯಾನುಭವ

ಕುಸುಮ—೪

ದ್ವಾದಶ ಜ್ಯೋತಿರ್ಲಿಂಗ ದರ್ಶನ (ಸುಂದರ ಚಿತ್ರಗಳ ಸಹಿತ)

ಕುಸುಮ—೫

ಶಿವ–ಜೀವೈಕ್ಯಸಾರ

ಕುಸುಮ—೬

ಶ್ರೀ ಜಗದ್ಗುರು ರೇಣುಕಾಚಾರ್ಯ ಸುಪ್ರಭಾತ

ಕುಸುಮ—೭

ಶ್ರೀವೀರೇಶಷಡ್‌ಲೀಲಾದರ್ಶನ (ಸುಂದರ ಚಿತ್ರಗಳ ಸಹಿತ)

ಇವು ದೊರೆಯುವ ಸ್ಥಳ—

ಧರ್ಮಸಾಹಿತ್ಯ-ಭೂಷಣ ಎಂ. ಚಂದ್ರಶೇಖರ ಆರಾಧ್ಯ
" ಗುರುಕೃಪಾ "–6, ಅಣ್ಣಯ್ಯಪ್ಪ ಬ್ಲಾಕ್, 4 ನೇ ಕ್ರಾಸ್,
K.P.W. ಬೆಂಗಳೂರು–20

ಹಾರೈಕೆ

ವೀರೇಶನ ಷಡ್‌ಲೀಲೆಗಳ ಸಂಗ್ರಹದಲ್ಲಿ ಮುಖ್ಯವಾಗಿ, ರುದ್ರಾಂಶ ಸಂಭೂತನಾದ ಹನುಮಂತನಿಗೆ ಲಿಂಗದೀಕ್ಷೆ ನೀಡಿರುವ ವಿಶೇಷಸಂಗತಿಯೇ ಕುತೂಹಲಕಾರಿಯಾಗಿರುವುದರಿಂದ, ಈ ಕೃತಿ ಅಭೂತಪೂರ್ವ; ಶ್ರೀವೀರೇಶ-ಹನುಮಂತರ ಗುರು-ಶಿಷ್ಯ ಸಂಬಂಧವನ್ನು ವಿವರಿಸುವ ಪ್ರಪ್ರಥಮ ಗ್ರಂಥ.

ಗ್ರಂಥಕರ್ತೃ



ಶ್ರೀ ಎಂ. ಸಿ. ಆರಾಧ್ಯರು

ಸತ್ಯ ಸಂಗತಿಯನ್ನು ನೈಜಾಧಾರಗಳ ಮುಖಾಂತರ ಒರೆಹಚ್ಚಿ ನೋಡಿ, ಆ ಸತ್ಯದ ಹೊಳಪನ್ನು ಹೆಚ್ಚಿಸಿರುವ ಪ್ರಯತ್ನ ಇಲ್ಲಿರುವುದರಿಂದ ಸರ್ವಗ್ರಾಹ್ಯವಾಗಿದೆ ಈ ಕೃತಿ. ಇವರಲ್ಲಿ ವೀರಶೈವ ಧರ್ಮ–ಸಾಹಿತ್ಯ–ಸಂಸ್ಕೃತಿಗಳ ತ್ರಿವೇಣೀ ಸಂಗಮವನ್ನು ಕಾಣಬಹುದಾಗಿದೆ.. ಅಂದರೆ, ಇದೊಂದು ಆತ್ಮದರ್ಶನದ ಕೃತಿರತ್ನ. ವ್ಯಾಸರ ಹೇಳಿಕೆಗಳಲ್ಲಿರುವ ಅನೇಕ ವಿರೋಧ ಸಂಗತಿಗಳನ್ನು ನೇರ ವಿಮರ್ಶೆಗೆ ಒಳಪಡಿಸಿ ಸತ್ಯಸಿದ್ಧಾಂತವನ್ನು ನಿರೂಪಿಸಿರುವ ಹೆಗ್ಗಳಿಕೆ ಶ್ರೀ ಎಂ ಸಿ ಆರಾಧ್ಯರದಾಗಿದೆ.

ಶರಭಗರ್ವಭಂಗ ಮತ್ತು ಹನುಮಂತನಿಗೆ ಶಿವದೀಕ್ಷೆ ನೀಡಿ ಧರ್ಮೋಪದೇಶಮಾಡಿದ ಪ್ರಸಂಗಗಳು ವೀರಶೈವ ಧರ್ಮದ ಹಿರಿಮೆಯ ಗೌರೀಶಂಕರಗಳು. ಇವುಗಳನ್ನು ಸಾಧಾರವಾಗಿ, ಸವಿಸ್ತಾರವಾಗಿ ಸರಸ–ಸುಂದರಶೈಲಿಯಲ್ಲಿ ನಿರೂಪಿಸಿ ಗೌರವಾರ್ಹರಾಗಿರುತ್ತಾರೆ ಶ್ರೀ ಆರಾಧ್ಯರು.

ಇವರ ಮೊನಚಾದ ನ್ಯಾಯ ನಿಷ್ಠುರವಾದ ಪ್ರತಿಭಾಕುಂಚದಿಂದ ಇಂತಹ ಸತ್ಯದ ಪತಾಕೆಯನ್ನು ಏರಿಸುವ ಕೃತಿರತ್ನಗಳು ಹೊರಬರುತ್ತಿದ್ದು ಸಮಾಜವನ್ನು ಜಾಗ್ರತಗೊಳಿಸಲಿ; ಅಂತಹ ಸಾಮರ್ಥ್ಯ–ಆಯುರಾರೋಗ್ಯಾದಿಗಳನ್ನೂ ಮೇಲಾಗಿ ಸಾಮಾಜಿಕ ಬೆಂಬಲವನ್ನೂ ಪರಮಾತ್ಮನು ಶ್ರೀಯುತರಿಗೆ ಕರುಣಿಸಲೆಂದು ಹಾರೈಸುತ್ತೇನೆ.

ವಿದ್ವಾನ್ ಬಿ. ರಾಜಶೇಖರಯ್ಯ, ಎಂ.ಎ.,

ಮಹಾರಾಜಾ ಸಂಸ್ಕೃತ ಕಾಲೇಜು, ಅಸಿಸ್ಟೆಂಟ್ ಪ್ರೊಫೆಸರ್
ಮೈಸೂರು.